ಭಾನುವಾರ, ಅಕ್ಟೋಬರ್ 23, 2022 | ₹ 6.00
• www.prajavani.net
/prajavani.net @prajavani /+prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಜಗತ್ತನ್ನು ಆವರಿಸಿರುವ ಕತ್ತಲೆಯಿಂದ ಬಿಡುಗಡೆ ಹೊಂದುವ ದಾರಿ ಯಾವುದು? ದೀಪಾವಳಿಯ ಹೊತ್ತಿನಲ್ಲಿ ಬೆಳಕಿನ ಚಿಂತನೆ



ಹೊಸೂರಿನ ಪಟಾಕಿ ಸಂತೆಯಲ್ಲಿ ವಹಿವಾಟು ಮಂಕು • ಕಚ್ಚಾ ವಸ್ತುಗಳ ಬೆಲೆ ಹೆಚ್ಚಳ ಪರಿಣಾಮ

ಬೆಲೆ ಏರಿಕೆ ಬಿಸಿ: ಕೈ ಸುಡುವ ಪಟಾಕಿ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ

ಬೆಂಗಳೂರು: ಕಚ್ಚಾ ವಸ್ತುಗಳ ಬೆಲೆ ಏರಿಕೆ, ನಿರಂತರವಾಗಿ ಸುರಿದ ಮಳೆ ಈ ಬಾರಿಯ ಪಟಾಕಿ ಸದ್ದನ್ನು ಕೊಂಚ ಕಡಿಮೆಯಾಗಿಸುವ ಸಾಧ್ಯತೆ ಇದೆ. ಪಟಾಕಿಗಳ ಬೆಲೆ ಶೇ 70ರಷ್ಟು ಹೆಚ್ಚಾಗಿದ್ದು, ವರ್ಷವಿಡೀ ಪಟಾಕಿ ಸಂತೆ ನಡೆಯುವ ಹೊಸೂರಿನಲ್ಲೂ ವಹಿವಾಟು ಕುಸಿಯುವಂತಾಗಿದೆ.

ದೀಪಾವಳಿ ಪಟಾಕಿ ಎಂದ ಕೂಡಲೇ ಹೊಸೂರು ಮತ್ತು ಅತ್ತಿಬೆಲೆ ಸುತ್ತಮುತ್ತಲ ಪಟಾಕಿ ಅಂಗಡಿಗಳು ನೆನಪಾಗುತ್ತವೆ. ಈ ಬಾರಿಯೂ ಹೊಸೂರು ರಸ್ತೆಯುದ್ದಕ್ಕೂ ಪಟಾಕಿ ಅಂಗಡಿಗಳು ತಲೆ ಎತ್ತಿವೆ. ಬೆಂಗಳೂರಿನಿಂದ ಹೊಸೂರು ಕಡೆಗೆ ಹೊರಟರೆ ಹೆಬ್ಬಗೋಡಿಯಿಂದಲೇ ಪಟಾಕಿ ಅಂಗಡಿಗಳು ಕಣ್ಣಿಗೆ ರಾಚುತ್ತವೆ. ಅತ್ತಿಬೆಲೆ ಬಳಿ ಇರುವ ಕರ್ನಾಟಕ ಮತ್ತು ತಮಿಳುನಾಡು ಗಡಿಯ ಬಳಿ ನೂರಾರು ತಾತ್ಕಾಲಿಕ ಅಂಗಡಿ ಮಳಿಗೆಗಳು ತೆರೆದುಕೊಂಡಿವೆ.

ಅತ್ತಿಬೆಲೆ ಬಳಿಯ ಕರ್ನಾಟಕದ ಗಡಿಯಲ್ಲಿ ಹಬ್ಬದ ಸಂದರ್ಭದಲ್ಲಷ್ಟೇ ವ್ಯಾಪಾರ ನಡೆಸುವ ತಾತ್ಕಾಲಿಕ ಅಂಗಡಿಗಳು ತಲೆ ಎತ್ತಿದ್ದರೆ, ತಮಿಳುನಾಡು ಭಾಗದಲ್ಲಿ ವರ್ಷವಿಡೀ ವಹಿವಾಟು ನಡೆಸುವ ಶಾಶ್ವತ ಅಂಗಡಿಗಳಿವೆ. ಒಟ್ಟಾರೆ 300ಕ್ಕೂ ಹೆಚ್ಚು ಅಂಗಡಿಗಳಿದ್ದು, ಎಲ್ಲಾ ಅಂಗಡಿಗಳಿಗೂ ಶಿವಕಾಶಿಯಿಂದಲೇ ಪಟಾಕಿ ಸರಬರಾಜಾಗುತ್ತಿದೆ. ಶಿವಕಾಶಿಯಲ್ಲಿ ಪಟಾಕಿ ತಯಾರಿಕಾ ಘಟಕ ಹೊಂದಿದವರೂ ಇಲ್ಲಿ ಮಾರಾಟ ಮಳಿಗೆಗಳನ್ನು ಹೊಂದಿದ್ದಾರೆ.

ಬೆಲೆ ಏರಿಕೆ ವಹಿವಾಟನ್ನು ಮಂಕಾಗಿಸಿದ್ದರೂ, ಶೇ 90ರಷ್ಟು ರಿಯಾಯಿತಿ ದರದಲ್ಲಿ ಪಟಾಕಿ ಮಾರಾಟ ಹೊಸೂರಿನಲ್ಲಿ ನಡೆಯುತ್ತಿದೆ. ಸ್ಟ್ಯಾಂಡರ್ಡ್ ಮತ್ತು ಫೈರ್ ವರ್ಕ್ಸ್ ರೀತಿಯ ಕೆಲವು ಕಂಪನಿಗಳ ಪಟಾಕಿಗಳಿಗೆ ಮಾತ್ರ ಶೇ 80ರಷ್ಟು ರಿಯಾಯಿತಿ ಇದ್ದರೆ, ಉಳಿದೆಲ್ಲಾ ಪಟಾಕಿಗಳಿಗೂ ಶೇ 90ರಷ್ಟು ರಿಯಾಯಿತಿ ಸಿಗುತ್ತಿದೆ. ಇದೇ ಕಾರಣಕ್ಕೆ ಬೆಂಗಳೂರು, ಮಾಲೂರು, ಹೊಸಕೋಟೆ, ಕೋಲಾರ, ಮಂಡ್ಯ, ಚನ್ನಪಟ್ಟಣ, ರಾಮನಗರ ಸೇರಿದಂತೆ ರಾಜ್ಯದ ವಿವಿಧೆಡೆಯಿಂದ ಗ್ರಾಹಕರು ಪಟಾಕಿ ಖರೀದಿಸಲು ಇಲ್ಲಿಗೆ ಬರುತ್ತಿದ್ದಾರೆ. ಗ್ರಾಹಕರನ್ನು ಆಕರ್ಷಿಸಲು ಬಹುತೇಕ ಪಟಾಕಿ ಅಂಗಡಿಗಳ ಬಳಿ ಪುನೀತ್ ರಾಜ್‌ಕುಮಾರ್ ಭಾವಚಿತ್ರಗಳನ್ನು ದೊಡ್ಡದಾಗಿ ಅಂಟಿಸಲಾಗಿದೆ.

‘ಶೇ 90ರಷ್ಟು ರಿಯಾಯಿತಿ, ನೂರಾರು ರೀತಿಯ ಪಟಾಕಿಗಳನ್ನು ಆಯ್ಕೆ ಮಾಡಿಕೊಳ್ಳಲು ಇಲ್ಲಿ ಅವಕಾಶ ಇದೆ. ವಾಹನ ನಿಲುಗಡೆಗೂ ಸ್ಥಳಾವಕಾಶ ಇದೆ. ಆದ್ದರಿಂದ ಬೆಂಗಳೂರಿನಿಂದ ಹೊಸೂರಿಗೆ ಬಂದು ಪಟಾಕಿ ಖರೀದಿಸುತ್ತಿದ್ದೇವೆ’ ಎಂದು ಬೆಂಗಳೂರಿನ ತ್ರಿವೇಣಿ ಹೇಳಿದರು.



ಹೊಸೂರು ಬಳಿಯ ಅಂಗಡಿಯಲ್ಲಿ ಪಟಾಕಿ ಖರೀದಿ ಮಾಡುತ್ತಿದ್ದ ಗ್ರಾಹಕರು
–ಪ್ರಜಾವಾಣಿ ಚಿತ್ರ/ಕೃಷ್ಣಕುಮಾರ್ ಪಿ.ಎಸ್

ನಗರದಲ್ಲೂ ವ್ಯಾಪಾರಕ್ಕೆ ನಿರುತ್ಸಾಹ

ಬೆಂಗಳೂರಿನಲ್ಲಿ ಪ್ರತಿವರ್ಷ 250ಕ್ಕೂ ಹೆಚ್ಚು ಕಡೆ ನಡೆಯುತ್ತಿದ್ದ ಪಟಾಕಿ ವಹಿವಾಟು, ಈ ಬಾರಿ 60 ಕಡೆಗಷ್ಟೇ ಸೀಮಿತವಾಗಿದೆ.

ಪಟಾಕಿ ಬೆಲೆ ದುಬಾರಿ ಆಗಿರುವುದು ವ್ಯಾಪಾರಿಗಳಲ್ಲೂ ಆಸಕ್ತಿ ಕುಂದಿಸಿದ್ದು, ಪರವಾನಗಿ ಪಡೆಯಲು ಹಿಂದೇಟು ಹಾಕುತ್ತಿದ್ದಾರೆ. ಅ.26ರ ತನಕ ವ್ಯಾಪಾರ ನಡೆಸಲು ಪೊಲೀಸರಿಂದ ಅನುಮತಿ ಸಿಕ್ಕಿದೆ, ಶನಿವಾರದಿಂದ ವ್ಯಾಪಾರ ಆರಂಭವಾಗಿದೆ ಎಂದು ಪಟಾಕಿ ವ್ಯಾಪಾರಿಗಳ ಸಂಘದ ಚಂದ್ರಶೇಖರ್ ತಿಳಿಸಿದರು.

‘60 ಕಡೆ ಪಟಾಕಿ ಅಂಗಡಿ ತೆರೆಯಲು ಅವಕಾಶ ಸಿಕ್ಕರೂ ಅಲ್ಲಿಯೂ ಪರಿಪೂರ್ಣವಾಗಿ ವಹಿವಾಟು ನಡೆಯುವುದಿಲ್ಲ. ಕಳೆದ ಬಾರಿಗೆ ಹೋಲಿಸಿದರೆ ಶೇ 40ರಷ್ಟು ವ್ಯಾಪಾರಿಗಳಷ್ಟೇ ಮುಂದೆ ಬಂದಿದ್ದಾರೆ. ಬೆಲೆ ಏರಿಕೆ, ಸಾರಿಗೆ ವೆಚ್ಚ, ಕಾರ್ಮಿಕರ ವೆಚ್ಚ ಎಲ್ಲವೂ ದುಬಾರಿಯಾಗಿದೆ. ಇದರ ನಡುವೆ ಮಳೆ ಕೂಡ ಕಾಡುತ್ತಿದೆ. ಬಂಡವಾಳ ಹಾಕಿ ಕೈಸುಟ್ಟುಕೊಳ್ಳುವ ಭಯದಲ್ಲಿ ವ್ಯಾಪಾರಿಗಳು ಹಿಂದೇಟು ಹಾಕುತ್ತಿದ್ದಾರೆ’ ಎಂದು ಅವರು ವಿವರಿಸಿದರು.

ಶೇ 60ರಷ್ಟು ವಹಿವಾಟು ಕುಸಿತ

ಈ ಬಾರಿ ಪಟಾಕಿ ವಹಿವಾಟಿನಲ್ಲಿ ಶೇ 50ರಿಂದ 60ರಷ್ಟು ಕಡಿಮೆಯಾಗಿದೆ ಎನ್ನುತ್ತಾರೆ ನಗರದ ಗಣಪತಿ ಭಂಡಾರಕರ್ ಪಟಾಕಿ ಮಳಿಗೆಯ ಮಾಲೀಕ ಜಯರಾಂ.

ಬೆಲೆ ಏರಿಕೆಯಿಂದಾಗಿ ಒಂದೆಡೆ ಕೊಳ್ಳುವವರ ಸಂಖ್ಯೆ ಕಡಿಮೆಯಾಗಿದ್ದರೆ, ಮತ್ತೊಂದೆಡೆ ಶಿವಕಾಶಿಯಿಂದ ಪಟಾಕಿ ಪೂರೈಕೆ ಕಡಿಮೆಯಾಗಿದೆ. ಅಲ್ಲದೆ ಜನರಲ್ಲಿ ಪಟಾಕಿ ಖರೀದಿಯ ಉತ್ಸಾಹವೂ ಕಡಿಮೆಯಾಗಿದೆ. ನಿರೀಕ್ಷೆಗೆ ತಕ್ಕಂತೆ ವಹಿವಾಟು ನಡೆಯುತ್ತಿಲ್ಲ ಎಂದು ಅವರು ಅಭಿಪ್ರಾಯಪಟ್ಟರು.

ಶಿವಕಾಶಿಯಲ್ಲೂ ಪಟಾಕಿ ಉತ್ಪಾದನೆ ಕುಂಠಿತ

ಕಚ್ಚಾ ವಸ್ತುಗಳ ಬೆಲೆ ಏರಿಕೆ ಆಗಿರುವುದರಿಂದ ಶಿವಕಾಶಿಯಲ್ಲೂ ಪಟಾಕಿ ಉತ್ಪಾದನೆ ಕಡಿಮೆಯಾಗಿದೆ ಎಂದು ವ್ಯಾಪಾರಿಗಳು ಹೇಳುತ್ತಾರೆ. ‘ಪಟಾಕಿ ತಯಾರಿಕೆಗೆ ಬಳಸುವ ರಾಸಾಯನಿಕ ವಸ್ತುಗಳು, ಕಬ್ಬಿಣ, ಪ್ಯಾಕ್ ಮಾಡಲು ಬಳುಸವ ರಟ್ಟಿನ ಬಾಕ್ಸ್‌ಗಳ ಬೆಲೆಯೂ ಶೇ 70ರಷ್ಟು ಹೆಚ್ಚಾಗಿದೆ. ಆದ್ದರಿಂದ ಉತ್ಪಾದನೆಯೇ ಕಡಿಮೆಯಾಗಿದೆ. ಇದೂ ಕೂಡ ಪಟಾಕಿ ಬೆಲೆ ಏರಿಕೆಗೆ ಕಾರಣವಾಗಿದೆ’ ಎನ್ನುತ್ತಾರೆ ಹೊಸೂರಿನ ವ್ಯಾಪಾರಿಗಳು.

ಮಳೆ: ಕುಸಿದ ವಹಿವಾಟು

ಕಳೆದ ವರ್ಷಗಳ ಪಟಾಕಿ ವಹಿವಾಟಿಗೆ ಹೋಲಿಸಿದರೆ ಈ ಬಾರಿ ಕಡಿಮೆಯಾಗಿದೆ. ನಿಂತರವಾಗಿ ಸುರಿದ ಮಳೆ ಪಟಾಕಿ ವಹಿವಾಟಿನ ಮೇಲೆ ತಣ್ಣೀರು ಎರಚಿದ್ದರೆ, ಬೆಲೆ ಏರಿಕೆ ಬಿಸಿ ಕೂಡ ಪಟಾಕಿ ಸದ್ದನ್ನು ಕಡಿಮೆಯಾಗಿಸಿದೆ.

‘ಈಗ ಮಳೆಯೂ ಕಡಿಮೆಯಾಗಿದೆ. ಆದ್ದರಿಂದ, ದೀಪಾವಳಿ ಹಬ್ಬಕ್ಕೆ ಪಟಾಕಿ ಖರೀದಿಗೆ ಜನ ಬರುವ ನಿರೀಕ್ಷೆಯಲ್ಲಿದ್ದೇವೆ’ ಎಂದು ಪಟಾಕಿ ಅಂಗಡಿಯ ಸ್ವಾತಿ ಮನೋಹರ್ ಹೇಳಿದರು.

ಸುದ್ದಿ 2 ನಿಮಿಷ

ಅವಹೇಳನಕಾರಿ ಹೇಳಿಕೆ: ನಟ ಚೇತನ್ ವಿರುದ್ಧ ಎಫ್‌ಐಆರ್

ಬೆಂಗಳೂರು: 'ಕಾಂತಾರ ಸಿನಿಮಾ ಕುರಿತು ಮಾತನಾಡುವ ವೇಳೆ ದೈವಾರಾಧನೆ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದ' ಆರೋಪದಡಿ ನಟ ಚೇತನ್ ವಿರುದ್ಧ ಶೇಷಾದ್ರಿಪುರ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಶಿವಕುಮಾರ್ ಎಂಬುವರು ನೀಡಿದ್ದ ದೂರು ಆಧರಿಸಿ ಆರೋಪಿ ಚೇತನ್ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು’ ಎಂದು ಪೊಲೀಸರು ಹೇಳಿದರು.

‘ಜಾತಿ-ಧರ್ಮಗಳ ನಡುವೆ ವೈಷಮ್ಯ ಮೂಡಿಸುವ ಉದ್ದೇಶದಿಂದ ಇತ್ತೀಚೆಗೆ ಅವರು ಹೇಳಿಕೆ ನೀಡಿದ್ದಾರೆ. ಧಾರ್ಮಿಕ ನಂಬಿಕೆಗೆ ಧಕ್ಕೆ ತಂದಿದ್ದಾರೆ’ ಎಂದು ದೂರಿನಲ್ಲಿ ಶಿವಕುಮಾರ್ ಆರೋಪಿಸಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

ಪ್ರತಿಭಟನೆ ನಡೆಸಿದ್ದವರ ಬಂಧನ: ಹೇಳಿಕೆ ಖಂಡಿಸಿ ಚೇತನ್ ಮನೆ ಎದುರು ಹಿಂದೂ ಸಂಘಟನೆಯೊಂದರ ಕಾರ್ಯಕರ್ತರು ಶುಕ್ರವಾರ ಪ್ರತಿಭಟನೆ ನಡೆಸಿದ್ದರು. ಅವರನ್ನು ಪೊಲೀಸರು ವಶಕ್ಕೆ ಪಡೆದು, ಬಿಡುಗಡೆ ಮಾಡಿದ್ದರು.



ಕೋಟಿ ಕಂಠ ಗೀತ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸಲು ಸೂಚನೆ

ಬೆಂಗಳೂರು: ಕೋಟಿ ಕಂಠ ಗಾಯನ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಬೆಂಗಳೂರು ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಎಲ್ಲಾ ಕಾಲೇಜುಗಳು, ಸ್ನಾತಕೋತ್ತರ ವಿಭಾಗಗಳು ಮತ್ತು ಕಚೇರಿಗಳಿಗೆ ಸೂಚಿಸಲಾಗಿದೆ.

ಕನ್ನಡ ರಾಜ್ಯೋತ್ಸವ ಪ್ರಯುಕ್ತ ಅ.28 ರಂದು ಬೆಳಿಗ್ಗೆ 11 ಗಂಟೆಗೆ ‘ಕೋಟಿ ಕಂಠ ಗೀತ ಗಾಯನ’ ಕಾರ್ಯಕ್ರಮವನ್ನು ಸರ್ಕಾರದಿಂದ ಆಯೋಜಿಸಿ ಒಂದು ಕೋಟಿಗೂ ಹೆಚ್ಚು ಜನರನ್ನು ಸೇರಿಸಲು ವ್ಯವಸ್ಥೆ ಮಾಡಲಾಗುತ್ತಿದೆ. ಈ ಕಾರ್ಯಕ್ರಮದಲ್ಲಿ ಒಂದು ಕೋಟಿ ಜನರನ್ನು ಭಾಗಿಯಾಗಿಸಲು ಉದ್ದೇಶಿಸಲಾಗಿದೆ. ಕಾಲೇಜುಗಳ ಪ್ರಾಂಶುಪಾಲರು, ವಿಭಾಗಗಳ ಕಚೇರಿಯ ಮುಖ್ಯಸ್ಥರಿಗೆ ಸೂಚಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಅಕ್ಟೋಬರ್ 28ರೊಳಗೆ https://kannadasiri.karnataka.gov.in/kkg/public/ ಲಿಂಕ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು ಎಂದು ತಿಳಿಸಿದೆ.

‘ಜಿಲ್ಲಾಧಿಕಾರಿಯ ವರ್ಗ ಸಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅಗತ್ಯ ಸಿದ್ಧತೆ ಮಾಡಿಕೊಳ್ಳುತ್ತಿರುವಾಗ ಸರ್ಕಾರವು ಅಲ್ಲಿನ ಜಿಲ್ಲಾಧಿಕಾರಿ ಎಸ್.ಬಿ. ಶೆಟ್ಟಣ್ಣನವರ ಅವರನ್ನು ವರ್ಗಾವಣೆ ಮಾಡಿದ್ದು ಸರಿಯಲ್ಲ. ಇದೊಂದು ಶಾಪಗ್ರಸ್ತ ಸಮ್ಮೇಳನವಾಗುತ್ತದ್ದೆಯೇ ಎನ್ನುವ ಅನುಮಾನ ವ್ಯಕ್ತವಾಗುತ್ತಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಮ್ಮೇಳನಕ್ಕೆ ಒಂದಾದ ಮೇಲೊಂದು ಸಮಸ್ಯೆಗಳು ಸೃಷ್ಟಿಯಾಗುತ್ತಿವೆ. ಆಡಳಿತ ಸುಧಾರಣೆಯ ಹೆಸರಿನಲ್ಲಿ ಕೆಲವು ಐಎಎಸ್ ಅಧಿಕಾರಿಗಳನ್ನು ಸರ್ಕಾರವು ಶುಕ್ರವಾರ ವರ್ಗಾವಣೆ ಮಾಡಿದೆ. ಕಾಲಕಾಲಕ್ಕೆ ಆಡಳಿತದ ಹಿತದೃಷ್ಟಿಯಿಂದ ಅಧಿಕಾರಿಗಳು ಅಥವಾ ಸಿಬ್ಬಂದಿಯ ವರ್ಗಾವಣೆ ಮಾಡುವ ಬಗ್ಗೆ ಆಕ್ಷೇಪ ಇಲ್ಲ. ಆದರೆ, ಮಹತ್ವದ ಯೋಜನೆಗಳು ಅಥವಾ ಕಾರ್ಯಗಳು ಜಾರಿಯಲ್ಲಿ ಇರುವಾಗ, ಆ ಭಾಗದ ಅಧಿಕಾರಿಗಳು ಸಮರ್ಥವಾಗಿ ಕೆಲಸ ಮಾಡುತ್ತಿರುವಾಗ ಏಕಾಏಕಿ ವರ್ಗಾವಣೆ ಮಾಡುವುದು ಎಷ್ಟರ ಮಟ್ಟಿಗೆ ಸೂಕ್ತ’ ಎಂದು ಪ್ರಶ್ನಿಸಿದ್ದಾರೆ.

ಸಮಸ್ತಕನ್ನಡಿಗರ ಅಭಿಮಾನ ಹಾಗೂ ಅಸ್ಮಿತೆಯ ಪ್ರತೀಕವಾಗಿರುವ ಹಾವೇರಿ ಸಾಹಿತ್ಯ ಸಮ್ಮೇಳನದ ಮೇಲೆ ಒಂದಿಲ್ಲೊಂದು ಕರಿನೆರಳು ಆವರಿಸುತ್ತಿದೆ. ಇದನ್ನು ಪರಿಷತ್ತು ಸಹಿಸುವುದಿಲ್ಲ’ ಎಂದು ಅವರು ಎಚ್ಚರಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಅ.29, 30ರಂದು ‘ಕಾಫಿ ಸಂತೆ’

ಬೆಂಗಳೂರು: ಮಹಿಳಾ ಕಾಫಿ ಒಕ್ಕೂಟ-ಭಾರತ ಆವೃತ್ತಿ ಸಂಸ್ಥೆ ಅ.29. 30ರಂದು ಜಯಮಹಲ್ ಪ್ಯಾಲೇಸ್ ಹೋಟೆಲ್‌ನಲ್ಲಿ ವಾರ್ಷಿಕ ಕಾಫಿ ಸಂತೆ ಹಮ್ಮಿಕೊಂಡಿದೆ.

ಭಾರತದ ಕಾಫಿ ಬೆಳೆಯುವ ಪ್ರದೇಶಗಳಲ್ಲಿ ಕೆಲಸ ಮಾಡುವ ಮಹಿಳೆಯರು ಮತ್ತು ಅವರ ಮಕ್ಕಳ ಆರೋಗ್ಯ, ಶಿಕ್ಷಣದ ಯೋಜನೆಗಳನ್ನು ಬೆಂಬಲಿಸಲು ನಿಧಿ ಸಂಗ್ರಹಣೆ, ಕಾಫಿ ಆಧಾರಿತ ವಿವಿಧ ಚಟುವಟಿಕೆಗಳನ್ನು ಸಮನ್ವಯಗೊಳಿಸಲು, ಅವರ ಸಬಲೀಕರಣ, ಮಾನಸಿಕ ಹಾಗೂ ದೈಹಿಕ ಆರೋಗ್ಯ ವೃದ್ಧಿಸಲು, ಅರಿವನ್ನು ವಿಸ್ತರಿಸಲು ಸಂತೆ ಆಯೋಜಿಸಲಾಗಿದೆ. ಕಾಫಿ ಸಂತೆಯಲ್ಲಿ ವಿವಿಧ ಮನರಂಜನಾ ಕಾರ್ಯಕ್ರಮಗಳೂ ಇರಲಿವೆ ಎಂದು ಸಂಸ್ಥೆಯ ಅಧ್ಯಕ್ಷೆ ಸುನಾಲಿನಿ ಮೆನನ್, ಕಾಫಿ ಬೆಳೆಗಾರ್ತಿ ಪೂರ್ಣಿಮಾ ಜೈರಾಜ್ ಮಾಹಿತಿ ನೀಡಿದ್ದಾರೆ.

ತೈಲಾಭ್ಯಂಜನ ಸಪ್ತಾಹ ಇಂದಿನಿಂದ

ಬೆಂಗಳೂರು: ದೀಪಾವಳಿ ಅಂಗವಾಗಿ ರಾಜಾಜಿನಗರದಲ್ಲಿರುವ ಕ್ಷೇಮ ಆರೋಗ್ಯ ಧಾಮದಿಂದ (ಹೋಲಿಸ್ಟಿಕ್ ಹೆಲ್ತ್ ಸೆಂಟರ್) ಇದೇ 23ರಿಂದ 26ರ ವರೆಗೆ ‘ತೈಲಾಭ್ಯಂಜನ ಸಪ್ತಾಹ’ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ.

‘ಹಿಂದೂ ಸಂಸ್ಕೃತಿಗೆ ಹೆಗ್ಗುರುತಾಗಿರುವ ದೀಪಾವಳಿಯ ವೈಭವವನ್ನು ಮರಳಿ ತರುವಲ್ಲಿ ತೈಲಾಭ್ಯಂಜನ ಸಹಕಾರಿಯಾಗಲಿದೆ’ ಎಂದು ಕ್ಷೇಮ ಆರೋಗ್ಯಧಾಮದ ಡಾ. ಟಿ. ಅನುಸೂಯಮ್ಮ ತಿಳಿಸಿದ್ದಾರೆ.

ಪ್ರತಿದಿನ ಬೆಳಿಗ್ಗೆ 7 ರಿಂದ ರಾತ್ರಿ 8 ಗಂಟೆಯವರೆಗೂ ತೈಲಾಭ್ಯಂಜನ ನಡೆಯಲಿದೆ. ಮಾಹಿತಿಗಾಗಿ 9845572955/08023577635

ಅಪ್ಪಕಾರನಹಳ್ಳಿ: 70 ಕುರಿಗಳ ಸಾವು

ದೊಡ್ಡಬೆಳವಂಗಲ (ದೊಡ್ಡಬಳ್ಳಾಪುರ): ತಾಲ್ಲೂಕಿನ ಅಪ್ಪಕಾರನಹಳ್ಳಿಯಲ್ಲಿ ಮೈಕೊ ಪ್ಲಾಸ್ಮೋಸಿಸ್ ರೋಗ ಕಾಣಿಸಿಕೊಂಡಿದ್ದು, ಐದು ದಿನಗಳಿಂದ ಕುರಿಗಳ ಸರಣಿ ಸಾವು ಸಂಭವಿಸಿದೆ. ಇದರಿಂದ ಸಾಕಾಣಿಕೆದಾರರು ಕಂಗಾಲಾಗಿದ್ದಾರೆ.

ಗ್ರಾಮದ ಗೋವಿಂದರಾಜು ಎಂಬುವರಿಗೆ ಸೇರಿದ ಶೆಡ್ಡಿನಲ್ಲಿ ಒಟ್ಟು 70 ಕುರಿಗಳಿಗೆ ಮೈಕೊ ಪ್ಲಾಸ್ಮೋಸಿಸ್ ರೋಗ ಕಾಣಿಸಿಕೊಂಡಿದೆ. ಅವರ ಶೆಡ್ಡಿನಲ್ಲಿ ಮರಿಗಳು ಸೇರಿದಂತೆ ಒಟ್ಟು 150 ಕುರಿಗಳಿದ್ದವು. ಅ. 16ರಿಂದ ನಿತ್ಯ ಒಂದು, ಎರಡು ಕುರಿಗಳು ಸಾಯಲಾರಂಭಿಸಿದವು. ಅ. 18ರಂದು ಇಪ್ಪತ್ತು ಕುರಿಗಳು ಮೃತಪಟ್ಟಿವೆ.

ಭಾನುವಾರ, ಅಕ್ಟೋಬರ್ 23, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 293 | ಪುಟ 24
www.prajavani.net
/prajavani.net @prajavani +prajavani

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಹೂಳು ನಂದಿ ಬೆಟ್ಟವಾಗಲಿಲ್ಲ..

ಒಳನೋಟ
ಹೂಳಿನಲ್ಲಿ ಭ್ರಷ್ಟಾಚಾರ
ಪ್ರತಿಕ್ರಿಯಿಸಿ: 9606038256
feedback@prajavani.co.in


• ಆರ್. ಮಂಜುನಾಥ್

ಬೆಂಗಳೂರು: ಬೆಂಗಳೂರಿನ ರಾಜಕಾಲುವೆಗಳಲ್ಲಿ ಹೂಳು ತೆಗೆಯಲು ನೂರಾರು ಕೋಟಿ ರೂಪಾಯಿ ವೆಚ್ಚ ಮಾಡಲಾಗಿದೆ. ಲಕ್ಷಾಂತರ ಟನ್ ಹೂಳು ತೆಗೆಯಲಾಗಿದೆ ಎಂದು ಹೇಳಲಾಗಿದೆ. ಅಷ್ಟು ಹೂಳು ತೆಗೆದಿದ್ದರೆ, ನಂದಿ ಬೆಟ್ಟದಷ್ಟು ಎತ್ತರದ ನಾಲ್ಕೈದು ದೊಡ್ಡ ಬೆಟ್ಟಗಳನ್ನು ನಗರದ ಸುತ್ತಮುತ್ತ ಕಾಣಬೇಕಿತ್ತು. ಆದರೆ, ಖಾಲಿಯಾದ ಕ್ವಾರಿಗಳೇ ಕಾಣುತ್ತಿವೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರಾಜಕಾಲುವೆಯ ಹೂಳು ತೆಗೆಯಲು 2009ರಿಂದ ಈವರೆಗೆ ₹509 ಕೋಟಿ ವೆಚ್ಚ ಮಾಡಿದೆ. ಇದನ್ನು 'ಮಳೆನೀರಿನ ಚರಂಡಿಯ ಹೂಳೆತ್ತುವಿಕೆ' ಎಂದು ತೋರಿಸಲಾಗಿದೆ. ಆದರೆ, ಎಷ್ಟು ಹೂಳು ತೆಗೆಯಲಾಗಿದೆ, ಅದನ್ನು ಎಲ್ಲಿ ಹಾಕಲಾಗಿದೆ ಎಂಬ ಮಾಹಿತಿ ಇಲ್ಲ. ಈ ಬಗ್ಗೆ ಮುಖ್ಯ ಆಯುಕ್ತರಿಂದ ಹಿಡಿದು ಹೂಳೆತ್ತುವ ಕಾಮಗಾರಿ ನಿರ್ವಹಿಸುವ ರಾಜಕಾಲುವೆ ವಿಭಾಗದ ಎಲ್ಲ ಮಟ್ಟದ ಎಂಜಿನಿಯರ್ ಹಾಗೂ ಗುತ್ತಿಗೆದಾರರನ್ನು ಕೇಳಿದರೆ ಯಾರೂ ಆ ಬಗ್ಗೆ 'ಆ ಮಾಹಿತಿ' ಇಲ್ಲ ಎಂದೇ ಉತ್ತರಿಸುತ್ತಾರೆ. ಹೂಳು ತೆಗೆಯಲು ವೆಚ್ಚ ಮಾಡಿರುವ ಬಿಲ್‌ಗೆ ಅನುಮೋದನೆ ನೀಡಿರುವ ಎಂಜಿನಿಯರ್, ಅಧಿಕಾರಿಗಳಿಗೂ ಈ ಮಾಹಿತಿ ಇಲ್ಲ ಎಂದರೆ, ಎತ್ತಿದ ಹೂಳು ಹೋಗಿದ್ದಾದರೂ ಎಲ್ಲಿಗೆ ಎಂಬ ಪ್ರಶ್ನೆಗೆ ಉತ್ತರವೇ ಇಲ್ಲ.

ಮಳೆಗಾಲದಲ್ಲಿ ರಾಜಕಾಲುವೆಗಳಲ್ಲಿ ಹೂಳು ತೆಗೆಯುವ ಕಾಮಗಾರಿ ನಡೆಸುವಂತಿಲ್ಲ ಎಂಬ ಸ್ಪಷ್ಟ ಮಾರ್ಗಸೂಚಿ ಇದ್ದರೂ, ಮಳೆಗಾಲದಲ್ಲೇ ಬಿಬಿಎಂಪಿ ಹೂಳು ತೆಗೆದಿದೆ. 2013ರಿಂದ 2017ರ ಅವಧಿಯಲ್ಲಿ 175 ಸ್ಥಳಗಳಲ್ಲಿ ಮಳೆಗಾಲದಲ್ಲೇ ಹೂಳು ತೆಗೆಯಲಾಗಿದೆ. ಇದಕ್ಕಾಗಿ ₹173.29 ಕೋಟಿ ವೆಚ್ಚ ಮಾಡಲಾಗಿದೆ ಎಂದು 2021ರಲ್ಲಿ ಬಿಡುಗಡೆ ಮಾಡಲಾಗಿರುವ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಸಿಎಜಿ) ವರದಿಯಲ್ಲಿ ಸ್ಪಷ್ಟವಾಗಿ ತಿಳಿಸಲಾಗಿದೆ. ಮಳೆಯಲ್ಲೇ ಹೂಳು ಮತ್ತು ಹಣ ಎರಡೂ ಕೊಚ್ಚಿಕೊಂಡು ಹೋಗಿದೆ.

ಬಿಬಿಎಂಪಿ ವೆಚ್ಚ ಮಾಡಿರುವ ₹177.29 ಕೋಟಿಯ ಪೈಕಿ ₹17.56 ಕೋಟಿ ವೆಚ್ಚದ 14 ಕಾಮಗಾರಿಗಳ ದಾಖಲೆಯನ್ನು ಮಾತ್ರ ಲೆಕ್ಕಪರಿಶೋಧನೆಗೆ ಒದಗಿಸಲಾಗಿದೆ. ಹೂಳು ತೆಗೆಯುವ ಕಾಮಗಾರಿಗೆ ಮಳೆಗಾಲವೂ ಸೇರಿದಂತೆ 24 ತಿಂಗಳ ಅವಧಿ ನೀಡಲಾಗಿದೆ.


ಬೆಂಗಳೂರಿನ ಮೈಸೂರು ರಸ್ತೆ ಬಳಿ ವೃಷಭಾವತಿ ಕಣಿವೆಯಲ್ಲಿ ಹೂಳು ತುಂಬಿರುವುದು ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್.ಜಿ.

'ಕಮಿಷನ್: ನಾವೂ ಬದುಕಬೇಕಲ್ಲ?'

'ರಾಜಕಾಲುವೆಯಲ್ಲಿ ಹೂಳು ತೆಗೆಯುವ ಕೆಲಸ ನೈಜವಾಗಿ ನಡೆಯುವುದು ಕೊಂಚ ಪ್ರಮಾಣದಲ್ಲಿ ಮಾತ್ರ. ಹತ್ತಾರು ವರ್ಷಗಳ ಅವಧಿಯಲ್ಲಿ ಸಾಕಷ್ಟು ಗುತ್ತಿಗೆದಾರರು ರಾಜಕಾಲುವೆ ನಿರ್ವಹಣೆ ಅಥವಾ ಹೂಳು ತೆಗೆಯುವ ಕಾಮಗಾರಿಯನ್ನು ನಿರ್ವಹಿಸಿದ್ದಾರೆ.

'ಹೂಳು ತೆಗೆಯಬೇಕು ಎಂದು ಹೇಳುತ್ತಾರೆ, ಎಲ್ಲಿ ಹಾಕಬೇಕು ಎಂದು ಜಾಗ ತೋರಿಸುವುದಿಲ್ಲ. ವರ್ಷದ ಬಹುತೇಕ ತಿಂಗಳು ರಾಜಕಾಲುವೆ ಬಗ್ಗೆ ಯಾರೂ ಪ್ರಶ್ನಿಸುವುದಿಲ್ಲ. ಮಳೆ ಬಂದಾಗ ಮಾತ್ರ ರಾಜಕಾರಣಿಗಳು ಸೇರಿದಂತೆ ಎಲ್ಲರೂ ಎದ್ದುಕೂರುತ್ತಾರೆ. ಹೂಳು ತೆಗೆಯುವುದು ದೊಡ್ಡ ಕೆಲಸವೇ ಸರಿ. ಗುತ್ತಿಗೆದಾರರೂ ಒಂದಷ್ಟು ತೆಗೆದು ಕ್ವಾರಿಗಳನ್ನು ತುಂಬಿರುತ್ತಾರೆ. ಅಷ್ಟೊಂದು ಹೂಳು ತೆಗೆಯುವುದು ಕಷ್ಟ. ಗುತ್ತಿಗೆದಾರರೂ ಬದುಕಬೇಕಲ್ಲ? ಎಲ್ಲರಿಗೂ ಸಾಕಷ್ಟು ಕಮಿಷನ್ ನೀಡಿ ಕೆಲಸ ಮಾಡಬೇಕು. ಎಲ್ಲರಿಗೂ ನೀಡಿದ ಮೇಲೆ ಉಳಿಯುವುದು ಕಡಿಮೆ. ಹೀಗಾಗಿ ಅಲ್ಲೊಂದಷ್ಟು ಕೆಲಸ ಮಳೆಗಾಲದಲ್ಲೇ ನಡೆಯುತ್ತದೆ. ಹೂಳು ಮಳೆ ನೀರಿನಲ್ಲಿ ಕೊಚ್ಚಿಹೋಗುತ್ತದೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಗುತ್ತಿಗೆದಾರರು ಅಳಲು ತೋಡಿಕೊಂಡರು.

4ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 4



ಜನ ಸಾಗರ
ರಾಯಚೂರಿನಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಶನಿವಾರ ನಡೆದ ಭಾರತ್ ಜೋಡೊ ಯಾತ್ರೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಸುದ್ದಿ 5

₹ 100 ದೇಣಿಗೆ ಸುತ್ತೋಲೆ ವಾಪಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳ ಖರ್ಚುವೆಚ್ಚಕ್ಕೆ ಮಕ್ಕಳ ಪೋಷಕರಿಂದ ಪ್ರತಿ ತಿಂಗಳು ₹ 100 ದೇಣಿಗೆ ಸಂಗ್ರಹಿಸಲು ಹೊರಡಿಸಿದ್ದ ಸುತ್ತೋಲೆಗೆ ರಾಜ್ಯದಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ, ಈ ಸುತ್ತೋಲೆಯನ್ನು ಸರ್ಕಾರ ವಾಪಸ್ ಪಡೆದಿದೆ.

ದೇಣಿಗೆ ಸಂಗ್ರಹದ ಸುತ್ತೋಲೆ ಕುರಿತು 'ಪ್ರಜಾವಾಣಿ' ಅ.21ರ ಸಂಚಿಕೆಯ ಮುಖಪುಟದಲ್ಲಿ ವಿಶೇಷ ವರದಿ ಪ್ರಕಟಿಸಿತ್ತು.

ನನ್ನ ಪಾತ್ರವಿಲ್ಲ: ನಾಗೇಶ್

'ದೇಣಿಗೆ ಸಂಗ್ರಹಿಸುವ ಕುರಿತು ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಇದರಲ್ಲಿ ನನ್ನದಾಗಲಿ ಅಥವಾ ಮುಖ್ಯಮಂತ್ರಿಯದ್ದಾಗಲಿ ಪಾತ್ರವಿಲ್ಲ. ಆದರೆ, 'ದೇಣಿಗೆ ಸಂಗ್ರಹಿಸಲು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಡಿ (ಆರ್‌ಟಿಇ) ಅವಕಾಶವಿದೆ. ಎಲ್ಲ ಸುತ್ತೋಲೆಗಳನ್ನು ಸರ್ಕಾರದ ಗಮನಕ್ಕೆ ತರಬೇಕು ಎಂದೇನಿಲ್ಲ' ಎಂದು ಶಾಲಾ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಗುರುವಾರ ಬೆಳಿಗ್ಗೆ ಹೇಳಿಕೆ ನೀಡಿದ್ದರು.

5ನೇ ಪುಟ ನೋಡಿ

ಜಿ.ಪಂ, ತಾ.ಪಂ: ಮೀಸಲಾತಿ ಪ್ರಮಾಣ ಶೇ 50ಕ್ಕೆ ಸೀಮಿತ

ಮೀಸಲಾತಿ ನಿಗದಿಗೆ ಹೊಸ ನಿಯಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿಗಳ ಚುನಾವಣೆಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ಪಂಗಡ (ಎಸ್‌ಟಿ) ಮತ್ತು ಹಿಂದುಳಿದ ವರ್ಗಗಳಿಗೆ ಒಟ್ಟು ಮೀಸಲಾತಿ ಪ್ರಮಾಣ ಶೇಕಡ 50ರ ಮಿತಿಯನ್ನು ಮೀರದಂತೆ ರೋಸ್ಟರ್ (ಆವರ್ತನ) ಪ್ರಕಾರ ಮೀಸಲಾತಿ ನಿಗದಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಕರಡು ನಿಯಮಗಳನ್ನು ಪ್ರಕಟಿಸಿದೆ.

ನಿವೃತ್ತ ಐಎಎಸ್ ಅಧಿಕಾರಿ ಎಂ. ಲಕ್ಷ್ಮೀನಾರಾಯಣ ನೇತೃತ್ವದ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗ ಮತ್ತು ಹಿಂದುಳಿದ ವರ್ಗಗಳಿಗೆ ಸ್ಥಳೀಯ ಸಂಸ್ಥೆಗಳಲ್ಲಿ ಮೀಸಲಾತಿ ಖಾತರಿಪಡಿಸಲು ನೇಮಿಸಿರುವ ನ್ಯಾಯಮೂರ್ತಿ ಕೆ. ಭಕ್ತವತ್ಸಲ ಆಯೋಗದ ಶಿಫಾರಸಿನಂತೆ ಹೊಸ ನಿಯಮಗಳನ್ನು ರೂಪಿಸಲಾಗಿದೆ. ಕರಡು ನಿಯಮಗಳನ್ನು ಗುರುವಾರ ಪ್ರಕಟಿಸಲಾಗಿದೆ.

ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಕ್ಷೇತ್ರಗಳ ಮೀಸಲಾತಿ ನಿಗದಿಯಲ್ಲಿ ಎಸ್‌ಸಿ ಹಾಗೂ ಎಸ್‌ಟಿ ಜನಸಂಖ್ಯೆ ಹೆಚ್ಚಾಗಿರುವ ಕ್ಷೇತ್ರಗಳನ್ನು ಅವರೋಹಣ ರೂಪದಲ್ಲಿ ಪಟ್ಟಿ ಮಾಡಿಕೊಂಡು, ಅದರ ಆಧಾರದಲ್ಲೇ ರೋಸ್ಟರ್ ನಿಗದಿಪಡಿಸಬೇಕು ಎಂಬ ಅಂಶ 'ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಗಳಲ್ಲಿ ಸ್ಥಾನಗಳನ್ನು ಆವರ್ತನೆ ಮೇಲೆ ಮೀಸಲಿಡುವ) ನಿಯಮಗಳು-2022'ರಲ್ಲಿದೆ.

5ನೇ ಪುಟ ನೋಡಿ

ಟಿ20 ವಿಶ್ವಕಪ್: ಭಾರತ–ಪಾಕ್ ಹಣಾಹಣಿ ಇಂದು

ಮೆಲ್ಬರ್ನ್: ಭಾರತ ಹಾಗೂ ಪಾಕಿಸ್ತಾನ ತಂಡಗಳು ಭಾನುವಾರ ನಡೆಯಲಿರುವ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಉಭಯ ತಂಡಗಳಿಗೂ ಈ ಟೂರ್ನಿಯಲ್ಲಿ ಇದು ಮೊದಲ ಪಂದ್ಯವಾಗಿದೆ. ಪಂದ್ಯದ ವೇಳೆ ಮಳೆ ಸುರಿಯುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. 12

ವಿಮಾನಕ್ಕಿಂತ ಬಸ್ ಪ್ರಯಾಣ ದುಬಾರಿ!

ಬೆಂಗಳೂರು: ದೀಪಾವಳಿ ಹಬ್ಬದ ಸಾಲು ಸಾಲು ರಜೆಗಳಲ್ಲಿ ಬಸ್‌ನಲ್ಲಿ ಪ್ರಯಾಣ ಮಾಡುವವರಿಗೆ ಟಿಕೆಟ್ ದರ ಏರಿಕೆಯ ಬಿಸಿ ತಟ್ಟಿದೆ. ಸಾಮಾನ್ಯ ದಿನಗಳ ದರಕ್ಕೆ ಹೋಲಿಸಿದರೆ ಮೂರರಿಂದ ನಾಲ್ಕು ಪಟ್ಟು ಹೆಚ್ಚಿಸಲಾಗಿದ್ದು, ವಿಮಾನ ಪ್ರಯಾಣ ದರಕ್ಕಿಂತಲೂ ದುಬಾರಿಯಾಗಿದೆ. 4

75,000 ಜನರಿಗೆ ನೇಮಕಾತಿ ಪತ್ರ ಹಸ್ತಾಂತರ

ನವದೆಹಲಿ (ಪಿಟಿಐ): 10 ಲಕ್ಷ ಜನರಿಗೆ ಉದ್ಯೋಗ ನೀಡುವ ಉದ್ದೇಶದ 'ರೋಜ್‌ಗಾರ್ ಮೇಳ'ಕ್ಕೆ (ಉದ್ಯೋಗ ಮೇಳ) ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಶನಿವಾರ ಚಾಲನೆ ನೀಡಿದರು. 7

ಜಿನ್‌ಪಿಂಗ್‌ಗೆ ಮತ್ತೊಂದು ಅವಧಿ ಖಚಿತ

ಬೀಜಿಂಗ್: ಚೀನಾ ಕಮ್ಯುನಿಸ್ಟ್ ಪಕ್ಷವು ಐದು ವರ್ಷಕ್ಕೊಮ್ಮೆ ನಡೆಸುವ ಸಮಾವೇಶವು ಶನಿವಾರ ಸಮಾರೋಪಗೊಂಡಿದ್ದು, ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಮೂರನೇ ಅವಧಿಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ದೇಶದ ಅಧ್ಯಕ್ಷರಾಗಿ ಮುಂದುವರಿಯುವುದು ಖಚಿತವಾಗಿದೆ. 8

ಅಂತರರಾಜ್ಯ ಜಲ ವಿವಾದ ಕಾಯ್ದೆ ಅಪ್ರಸ್ತುತ: ಸಿಎಂ

ಹೊಸದುರ್ಗ (ಚಿತ್ರದುರ್ಗ): 'ಅಂತರ ರಾಜ್ಯ ಜಲ ವಿವಾದ ಕಾಯ್ದೆ ಅಪ್ರಸ್ತುತವಾಗಿದೆ. ಇದು ಸಮಸ್ಯೆ ಇತ್ಯರ್ಥಪಡಿಸುವ ಬದಲು ಹಲವು ಪ್ರಕರಣಗಳಿಗೆ ಕಾರಣವಾಗಿದೆ. ನ್ಯಾಯಾಧೀಕರಣ ರಚನೆ ಮಾಡಿ ಜಲವಿವಾದವನ್ನು ಇನ್ನಷ್ಟು ಕಗ್ಗಂಟು ಮಾಡಲಾಗುತ್ತಿದೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಭಿಪ್ರಾಯಪಟ್ಟರು.

ನ್ಯಾಯಾಂಗ ಇಲಾಖೆ ಹಾಗೂ ವಕೀಲರ ಸಂಘದಿಂದ ಶನಿವಾರ ಏರ್ಪಡಿಸಿದ್ದ ಹೊಸದುರ್ಗ ನ್ಯಾಯಾಲಯದ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಅವರು ಮಾತನಾಡಿದರು.

'ಕಾಲ ಬದಲಾದಂತೆ ಹಲವು ಕಾನೂನುಗಳು ಅಪ್ರಸ್ತುತವಾಗಿವೆ. ಇಂತಹ ಕಾನೂನುಗಳನ್ನು ಗುರುತಿಸಿ ಬದಲಾವಣೆ ತರುವ ಅಗತ್ಯವಿದೆ. ಕ್ಲಿಷ್ಟಕರ ವ್ಯವಸ್ಥೆಯ ನಡುವೆ ನ್ಯಾಯಾಂಗದ ಮೇಲೆ ಜನರಿಗೆ ನಂಬಿಕೆ ಇದೆ. ಈ ವ್ಯವಸ್ಥೆಯನ್ನು ಗಟ್ಟಿಗೊಳಿಸಲು ಕಾನೂನುಗಳಲ್ಲಿ ಬದಲಾವಣೆ ಆಗಬೇಕಿದೆ. ಈ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನಿಸಲಿದೆ' ಎಂದರು.

ಅತ್ಯಾಚಾರ ಯತ್ನ ಆರೋಪ ಯುವಕರಿಬ್ಬರ ಮೇಲೆ ಗುಂಪು ಹಲ್ಲೆ

ಮಂಗಳೂರು: ಮನೆಯಲ್ಲಿದ್ದ ಮಹಿಳೆಯ ಅತ್ಯಾಚಾರಕ್ಕೆ ಯತ್ನಿಸಿದ ಆರೋಪದ ಮೇರೆಗೆ ಯುವಕರಿಬ್ಬರ ಮೇಲೆ ಜನರ ಗುಂಪು ಕಡಬ ತಾಲ್ಲೂಕಿನ ಕಾಣಿಯೂರು ಗ್ರಾಮದ ಬೆದ್ರಾಜೆ ಎಂಬಲ್ಲಿ ಗುರುವಾರ ಮಧ್ಯಾಹ್ನ ಹಲ್ಲೆ ನಡೆಸಿದ್ದು, ಏಟು ತಿಂದ ಯುವಕರ ಸ್ಥಿತಿ ಗಂಭೀರವಾಗಿದೆ.

ಹಲ್ಲೆಗೊಳಗಾದ ಮಂಗಳೂರು ತಾಲ್ಲೂಕಿನ ಅಡ್ಡೂರು ಗ್ರಾಮದ ರಮೀಜುದ್ದೀನ್ ಹಾಗೂ ಆತನ ಸಂಬಂಧಿ ಮಹಮ್ಮದ್ ರಫೀಕ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಲ್ಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಯುವಕರು ನೀಡಿದ ದೂರಿನ ಆಧಾರದಲ್ಲಿ ಬೆಳ್ಳಾರೆ ಪೊಲೀಸರು 17 ಜನರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

'ಹಲ್ಲೆ ನಡೆಸಿದ ಆರೋಪಿಗಳ ಕುರಿತ ಮಾಹಿತಿ ಹಾಗೂ ಸಾಕ್ಷ್ಯ ಕಲೆ ಹಾಕುತ್ತಿದ್ದೇವೆ. ಶೀಘ್ರವೇ ಆರೋಪಿಗಳನ್ನು ಬಂಧಿಸುತ್ತೇವೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹೃಷಿಕೇಶ್ ಸೋನಾವಣೆ ಅವರು 'ಪ್ರಜಾವಾಣಿ'ಗೆ ತಿಳಿಸಿದರು.

ಆರೋಪ: 'ಬೆಡ್‌ಶೀಟ್ ಮಾರಾಟದ ನೆಪದಲ್ಲಿ ಮನೆಗೆ ಬಂದಿದ್ದ ಇಬ್ಬರು ಯುವಕರು ಮನೆಯಲ್ಲಿ ಒಬ್ಬಳೇ ಇದ್ದ ನನ್ನ ಅತ್ಯಾಚಾರಕ್ಕೆ ಯತ್ನಿಸಿದರು' ಎಂದು ಆರೋಪಿಸಿ ಪರಿಶಿಷ್ಟ ಜಾತಿಯ ಮಹಿಳೆಯೊಬ್ಬರು ಕಡಬ ಠಾಣೆಗೆ ದೂರು ನೀಡಿದ್ದಾರೆ. ರಮೀಜುದ್ದೀನ್ ಹಾಗೂ ಮಹಮ್ಮದ್ ರಫೀಕ್ ವಿರುದ್ಧ ಮನೆಗೆ ಅಕ್ರಮ ಪ್ರವೇಶ, ಅತ್ಯಾಚಾರ ಯತ್ನ, ದುರುದ್ದೇಶಪೂರಿತ ಹಲ್ಲೆ ಹಾಗೂ ಪರಿಶಿಷ್ಟರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಪ್ರಕರಣಗಳು ದಾಖಲಾಗಿವೆ.

ಆಗ್ರಹ: 'ಜವಳಿ ವ್ಯಾಪಾರಕ್ಕೆ ತೆರಳಿದ್ದ ರಮೀಜುದ್ದೀನ್ ಮತ್ತು ಮೊಹಮ್ಮದ್ ರಫೀಕ್ ಮುಸ್ಲಿಮರು ಎಂಬ ಒಂದೇ ಕಾರಣಕ್ಕೆ 50ಕ್ಕೂ ಹೆಚ್ಚು ಮಂದಿ ಹಲ್ಲೆ ಮಾಡಿ ಇಬ್ಬರ ಮೇಲೆ ಬೈಕ್ ಹತ್ತಿಸಿದ್ದಾರೆ' ಎಂದು ದಕ್ಷಿಣ ಕನ್ನಡ ಜಿಲ್ಲಾ ಕಾಂಗ್ರೆಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಶಾಹುಲ್ ಹಮೀದ್ ಕೆ.ಕೆ ಪತ್ರಿಕಾಗೋಷ್ಠಿಯಲ್ಲಿ ದೂರಿದರು.

ನಗರಸಭೆ ಸದಸ್ಯರಿಗೆ ಲಕ್ಷ ನಗದು ಆನಂದ್ ಸಿಂಗ್ ಕೊಡುಗೆ

ಹೊಸಪೇಟೆ (ವಿಜಯನಗರ): ಪ್ರವಾಸೋದ್ಯಮ ಸಚಿವ ಆನಂದ್ ಸಿಂಗ್ ಅವರು ಹೊಸಪೇಟೆ ನಗರಸಭೆ ಸದಸ್ಯರು, ವಿಜಯನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲ ಗ್ರಾಮ ಪಂಚಾಯಿತಿ ಸದಸ್ಯರಿಗೆ ದೀಪಾವಳಿಯ ಬಂಪರ್ ಕೊಡುಗೆ ನೀಡಿದ್ದಾರೆ.

ನಗರಸಭೆ ಸದಸ್ಯರಿಗೆ ₹1 ಲಕ್ಷ ನಗದು, 1 ಕೆ.ಜಿ ಬೆಳ್ಳಿ, ರೇಷ್ಮೆ ಸೀರೆ, ಪಂಚೆ, ಅಂಗಿ, ಮುತ್ತಿನ ಹಾರ ಹಾಗೂ ಡ್ರೈ ಫ್ರೂಟ್ಸ್ ಡಬ್ಬಿ ಒಳಗೊಂಡ ಕಿಟ್ ಕೊಟ್ಟಿದ್ದಾರೆ. ಪಂಚಾಯಿತಿಯ ಒಬ್ಬ ಸದಸ್ಯರಿಗೆ ತಲಾ ₹27 ಸಾವಿರ ನಗದು, 500 ಗ್ರಾಂ ಬೆಳ್ಳಿ, ಅದರೊಂದಿಗೆ ದೀಪಾವಳಿ ಹಬ್ಬದ ಶ್ರೀ ಲಕ್ಷ್ಮಿ ಪೂಜಾ ಆಮಂತ್ರಣ ಪತ್ರಿಕೆ ಎಂದು ಬರೆದ ಆಹ್ವಾನ ಪತ್ರಿಕೆಯೂ ನೀಡಿದ್ದಾರೆ.

ಸಚಿವರ ಬೆಂಬಲಿಗರು ಎಲ್ಲ ಸದಸ್ಯರಿಗೆ ಕೊಡುಗೆ ತಲುಪಿಸುತ್ತಿದ್ದಾರೆ ಎಂದು ಗೊತ್ತಾಗಿದೆ. ಹೆಸರು ಹೇಳಲಿಚ್ಛಿಸದ ಕೆಲ ನಗರಸಭೆ, ಪಂಚಾಯಿತಿ ಸದಸ್ಯರು ಈ ವಿಷಯವನ್ನು ಶನಿವಾರ 'ಪ್ರಜಾವಾಣಿ'ಗೆ ದೃಢಪಡಿಸಿದರು. ಈ ಕುರಿತು ಸಚಿವ ಆನಂದ್ ಸಿಂಗ್ ಅವರನ್ನು ಸಂಪರ್ಕಿಸಿದಾಗ ಅವರು ಮಾಹಿತಿಗೆ ಲಭ್ಯರಾಗಲಿಲ್ಲ.

ಹೊಸಪೇಟೆ ನಗರಸಭೆಯಲ್ಲಿ 35 ಸದಸ್ಯರು, 5 ಜನ ನಾಮನಿರ್ದೇಶಿತ ಸದಸ್ಯರಿದ್ದಾರೆ. ತಾಲ್ಲೂಕಿನಲ್ಲಿ ಒಟ್ಟು 14 ಗ್ರಾಮ ಪಂಚಾಯಿತಿಗಳಿದ್ದು 282 ಸದಸ್ಯರಿದ್ದಾರೆ. ವಿಜಯನಗರ ಕ್ಷೇತ್ರ ವ್ಯಾಪ್ತಿಯಲ್ಲಿ 10 ಗ್ರಾಮ ಪಂಚಾಯಿತಿಯ 182 ಸದಸ್ಯರಿದ್ದಾರೆ.


ನಗರಸಭೆ, ಗ್ರಾಮ ಪಂಚಾಯಿತಿ ಸದಸ್ಯರಿಗೆ ನೀಡಿರುವ ನಗದು, ಬೆಳ್ಳಿ, ರೇಷ್ಮೆ ಬಟ್ಟೆ ಹಾಗೂ ಮುತ್ತಿನ ಹಾರ

ಚಿನಕುರಳಿ
ಪ್ರಕಾಶ್ ಶೆಟ್ಟಿ



ಮೊದಲ ಬಾರಿಗೆ ರಾಜ್ಯಮಟ್ಟದಲ್ಲಿ ಆಚರಣೆ

ಇಂದಿನಿಂದ ಕಿತ್ತೂರು 'ವಿಜಯ ಉತ್ಸವ'

ಪ್ರಜಾವಾಣಿ ವಾರ್ತೆ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಇದೇ ಮೊದಲ ಬಾರಿಗೆ ರಾಜ್ಯಮಟ್ಟದಲ್ಲಿ ಆಚರಿಸಲು ನಿರ್ಧರಿಸಿರುವ ಕಿತ್ತೂರು ಉತ್ಸವಕ್ಕೆ ಭರದ ಸಿದ್ಧತೆಗಳು ನಡೆದಿವೆ. ಅ. 23, 24 ಹಾಗೂ 25ರಂದು ರಾಣಿ ಚನ್ನಮ್ಮನ ಕರ್ಮಭೂಮಿಯಲ್ಲಿ 'ವಿಜಯ ವೈಭವ' ಮನೆ ಮಾಡಲಿದೆ.

1824ರ ಅಕ್ಟೋಬರ್ 23ರಂದು ಕಿತ್ತೂರು ಸೈನ್ಯವು ಬ್ರಿಟಿಷ್ ಸೈನ್ಯದ ವಿರುದ್ಧ ಸಾಧಿಸಿದ ವಿಜಯದ ನೆನಪಿನ ಉತ್ಸವವಿದು. 198 ವರ್ಷಗಳ ನಂತರ ಇದಕ್ಕೆ ರಾಜ್ಯಮಟ್ಟದ ಮಾನ್ಯತೆ ಸಿಕ್ಕಿದೆ. ಕಿತ್ತೂರು ಕರ್ನಾಟಕ ಭಾಗದ ಜನರ ಭಾವನಾತ್ಮಕ, ಸ್ವಾಭಿಮಾನದ ಪ್ರತೀಕವಾದ ಉತ್ಸವ ನಡೆಯುತ್ತಿದೆ.

ರಾಣಿ ಚನ್ನಮ್ಮ ವೇದಿಕೆಯಲ್ಲಿ ಮುಖ್ಯ ಕಾರ್ಯಕ್ರಮ, ರಾಜಾ ಮಲ್ಲಸರ್ಜ ವೇದಿಕೆ ಹಾಗೂ ಸಂಗೊಳ್ಳಿ ರಾಯಣ್ಣ ವೇದಿಕೆಯಲ್ಲಿ ಗೋಷ್ಠಿ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸಿದ್ಧತೆ ಮಾಡಲಾಗಿದೆ. ಮಳೆಯಿಂದ ತೊಂದರೆಯಾಗದಂತೆ ಶಾಮಿಯಾನ ಹಾಕಲಾಗಿದೆ.

ಭಾನುವಾರ ಬೆಳಿಗ್ಗೆ 10.30ಕ್ಕೆ ಆನೆಯ ಮೇಲೆ ಚನ್ನಮ್ಮನ ವೀರಜ್ಯೋತಿ ಯಾತ್ರೆ, ಕುದುರೆಗಳ ಸಾಲು, ವಾದ್ಯಮೇಳಗಳ ಸಮೇತ ರೂಪಕಗಳ ಮೆರವಣಿಗೆ ನಡೆಯಲಿದೆ. ಶನಿವಾರವೇ ಹಲವು ಕಲಾತಂಡಗಳು ಮೇಳೈಸಿವೆ. ಫಲ–ಪುಷ್ಪ ಪ್ರದರ್ಶನ, ಕೈಗಾರಿಕಾ ವಸ್ತು ಪ್ರದರ್ಶನ, ಐತಿಹಾಸಿಕ ವಸ್ತು ಪ್ರದರ್ಶನ, ಶ್ವಾನಗಳ ಪ್ರದರ್ಶನ ಈ ಬಾರಿಯ ಆಕರ್ಷಣೆ. ಸಂಜೆ 7ಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವೇದಿಕೆ ಕಾರ್ಯಕ್ರಮ ಉದ್ಘಾಟಿಸುವರು. ಅ.24ರಂದು 'ಮಹಿಳಾ ಉತ್ಸವ' ಆಚರಿಸಲಾಗುವುದು. ಸಮಾನಾಂತರ ವೇದಿಕೆಗಳಲ್ಲಿ ಪ್ರತಿ ದಿನ 40 ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.


ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನಲ್ಲಿ 'ಕಿತ್ತೂರು ಉತ್ಸವ' ಅಂಗವಾಗಿ ಶನಿವಾರ ವಿದ್ಯುದ್ದೀಪಾಲಂಕಾರ ಮಾಡಲಾಗಿದೆ

17.68 ಲಕ್ಷ ಇಲೆಕ್ಟ್ರೊ ಮೆಕ್ಯಾನಿಕಲ್ ಮೀಟರ್ ಬದಲಾವಣೆ: 2024ಕ್ಕೆ ಪೂರ್ಣ

2.85 ಲಕ್ಷ ಡಿಜಿಟಲ್ ಮೀಟರ್ ಅಳವಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಮೆಟ್ರೋ ಪಾಲಿಟನ್ ಪ್ರದೇಶ ವಲಯದಲ್ಲಿನ ಡಿಜಿಟಲ್ ಮೀಟರ್ ಅಳವಡಿಕೆ ಕಾರ್ಯ ಭರದಿಂದ ಸಾಗಿದ್ದು, ಇದುವರೆಗೆ 2,85,941 ಲಕ್ಷ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಾಗಿದೆ.

ಡಿಎಲ್‌ಎಂಎಸ್ ಸ್ಟ್ಯಾಟಿಕ್ (ಡಿವೈಸ್ ಲ್ಯಾಂಗ್ವೇಜ್ ಮೆಸೇಜ್ ಸ್ಪೆಸಿಫಿಕೇಷನ್) ಡಿಜಿಟಲ್ ಮಾಪನಗಳನ್ನು ಅಳವಡಿಸಲು ಎರಡು ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ.

ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ವಲಯದಲ್ಲಿ ಬರುವ ಬೆಸ್ಕಾಂನ ಉತ್ತರ, ಪಶ್ಚಿಮ ಮತ್ತು ಪೂರ್ವ ವೃತ್ತಗಳಲ್ಲಿ ಡಿಜಿಟಲ್ ಮೀಟರ್ ಅಳವಡಿಸಲಾಗುತ್ತಿದ್ದು, ದಕ್ಷಿಣ ವೃತ್ತದಲ್ಲಿ ಕಾರ್ಯ ಇನ್ನೂ ಆರಂಭಗೊಳ್ಳಬೇಕಾಗಿದೆ.

2022ರ ಅ.17ರ ವೇಳೆಗೆ ಉತ್ತರ ವೃತ್ತದಲ್ಲಿ 61,333, ಪಶ್ಚಿಮ ವೃತ್ತದಲ್ಲಿ 1,10,909, ದಕ್ಷಿಣ ವೃತ್ತದಲ್ಲಿ 2095 ಮತ್ತು ಪೂರ್ವ ವೃತ್ತದ ವ್ಯಾಪ್ತಿಯಲ್ಲಿನ ಗ್ರಾಹಕರಿಗೆ 1,11,604 ಸೇರಿ ಒಟ್ಟು 2,85,941 'ಡಿಎಲ್‌ಎಮ್ ಎಸ್ ಸ್ಟ್ಯಾಟಿಕ್' ಸಿಂಗಲ್ ಫೇಸ್ ಮೀಟರ್‌ಗಳನ್ನು ಅಳವಡಿಸಲಾಗಿದೆ.

ಮೀಟರ್ ಅಳವಡಿಕೆ ಕಾರ್ಯವನ್ನು ಎರಡು ಎಲೆಕ್ಟ್ರಿಕ್ ಕಂಪನಿಗಳಾದ ರಾಜೇಶ್ವರಿ ಇಲೆಕ್ಟ್ರಿಕಲ್ಸ್ ಮತ್ತು ವಿ.ಆರ್. ಪಾಟೀಲ್ ಎಲೆಕ್ಟ್ರಿಕಲ್ಸ್ ಕಂಪನಿಗಳಿಗೆ ಗುತ್ತಿಗೆ ನೀಡಲಾಗಿದೆ.

ರಾಜಶ್ರೀ ಎಲೆಕ್ಟ್ರಿಕಲ್ಸ್ ದಿನಕ್ಕೆ ಸರಾಸರಿ 3500ರಿಂದ 3800 ಡಿಜಿಟಲ್ ಮೀಟರ್ ಅಳವಡಿಸುತ್ತಿದೆ. ಹಾಗೆಯೇ ವಿ.ಆರ್. ಪಾಟೀಲ್ ಎಲೆಕ್ಟ್ರಿಕಲ್ಸ್ ಕಂಪನಿ ದಿನಕ್ಕೆ ಸರಾಸರಿ 2000ರಿಂದ 5000 ಮೀಟರ್‌ಗಳನ್ನು ಅಳವಡಿಸುತ್ತಿದೆ. ಇದೀಗ ಸಿಂಗಲ್ ಫೇಸ್ ಡಿಜಿಟಲ್ ಮೀಟರ್ ಅಳವಡಿಸಲಾಗುತ್ತಿದ್ದು, 3 ಫೇಸ್ ಮಿಟರ್ ಅಳವಡಿಕೆ ಕಾರ್ಯವನ್ನು ಇನ್ನೂ ಕೈಗೆತ್ತಿಕೊಳ್ಳಬೇಕಾಗಿದೆ ಎಂದು ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಡಿಜಿಟಲ್ ಮೀಟರ್ ಅಳವಡಿಕೆ ಕಾರ್ಯದ ಪ್ರಗತಿಯನ್ನು ಪರಿಶೀಲಿಸಲಾಗುತ್ತಿದ್ದು, ಎರಡೂ ಕಂಪನಿಗಳಿಗೆ ದಿನಕ್ಕೆ ಸರಾಸರಿ 12,000 ಸಿಂಗಲ್ ಫೇಸ್ ಮೀಟರ್‌ಗಳನ್ನು ಅಳವಡಿಸಲು ಸೂಚಿಸಲಾಗಿದೆ ಎಂದು ತಿಳಿಸಿದ್ದಾರೆ.

ಬೆಂಗಳೂರು ಮೆಟ್ರೋಪಾಲಿಟನ್ ಪ್ರದೇಶ ವ್ಯಾಪ್ತಿಯಲ್ಲಿರುವ 17.68 ಲಕ್ಷ ಎಲೆಕ್ಟ್ರೊ ಮೆಕ್ಯಾನಿಕಲ್ ಮೀಟರ್‌ಗಳನ್ನು ಡಿಎಲ್‌ಎಮ್‌ಎಸ್ ಸ್ಟ್ಯಾಟಿಕ್ ಡಿಜಿಟಲ್ ಮೀಟರ್‌ಗೆ ಬದಲಾವಣೆ ಮಾಡುವ ಕಾರ್ಯ ಜುಲೈ ತಿಂಗಳಲ್ಲಿ ಆರಂಭಗೊಂಡಿತ್ತು. 2024ರ ವೇಳೆಗೆ ಎಲೆಕ್ಟ್ರೋ ಮೆಕ್ಯಾನಿಕಲ್ ಮೀಟರ್‌ಗಳನ್ನು ಡಿಜಿಟಲ್ ಮೀಟರ್‌ಗೆ ಬದಲಿಸುವ ಕಾರ್ಯ ಪೂರ್ಣಗೊಳ್ಳಲಿದೆ ಎಂದು ತಿಳಿಸಿದ್ದಾರೆ.

ಗ್ರಾಹಕರಿಗೆ ತಾವು ಬಳಸುವ ವಿದ್ಯುತ್ ಪ್ರಮಾಣದ ನಿಖರ ಮಾಹಿತಿ ತಿಳಿದುಕೊಳ್ಳಲು ಅನುಕೂಲವಾಗುವಂತೆ ಡಿಎಲ್‌ಎಮ್‌ಎಸ್ ಸ್ಟ್ಯಾಟಿಕ್ ಡಿಜಿಟಲ್ ಮಾಪನಗಳನ್ನು ಅಳವಡಿಲಾಗುತ್ತಿದೆ.

ಡಿಎಲ್‌ಎಮ್‌ಎಸ್ ಸ್ಟ್ಯಾಟಿಕ್ ಮೀಟರ್ ಗ್ರಾಹಕಸ್ನೇಹಿಯಾಗಿದ್ದು ಸಿಂಗಲ್ ಫೇಸ್ ಅಥವಾ 3 ಫೇಸ್ ಮೀಟರ್ ಅಳವಡಿಸಿಕೊಂಡಿರುವ ಗ್ರಾಹಕರು ವಿದ್ಯುತ್ ವೋಲ್ಟೇಜ್ ಮತ್ತು ಬಳಕೆ ಕುರಿತು ಮಾಹಿತಿ ಪಡೆಯಬಹುದಾಗಿದೆ. ಈ ಡಿಜಿಟಲ್ ಮೀಟರ್‌ಗಳನ್ನು ಉಚಿತವಾಗಿ ಅಳವಡಿಸಲಾಗುತ್ತಿದ್ದು, ಗ್ರಾಹಕರಿಂದ ಯಾವುದೇ ಶುಲ್ಕವನ್ನು ಪಡೆಯುವುದಿಲ್ಲವೆಂದು ಮಹಾಂತೇಶ ಬೀಳಗಿ ತಿಳಿಸಿದ್ದಾರೆ.

ಈ ಡಿಜಿಟಲ್ ಮೀಟರ್‌ನ ಇನ್ನೊಂದು ಉಪಯೋಗವೇನೆಂದರೆ, ಗ್ರಾಹಕರು ತಾವು ಎರಡು ವರ್ಷಗಳ ಹಿಂದಿನ ಅವಧಿಯವರೆಗೂ ಬಳಸಿದ ವಿದ್ಯುತ್ ಪ್ರಮಾಣದ ವಿವರಗಳನ್ನು ಬೆಸ್ಕಾಂ ಕಚೇರಿಯಿಂದ ಪಡೆದು, ಅದನ್ನು ವಿದ್ಯುತ್ ಬಿಲ್ ಜತೆ ಹೋಲಿಕೆ ಮಾಡಿ ತಾವು ಈಗ ಬಳಸಿರುವ ವಿದ್ಯುತ್ ಪ್ರಮಾಣ ಸರಿಯಾಗಿದೆಯೇ ಎನ್ನುವುದನ್ನು ತಿಳಿದುಕೊಳ್ಳಬಹುದು ಎಂದು ವಿವರಿಸಿದ್ದಾರೆ.



ಮಹಾಂತೇಶ ಬೀಳಗಿ

ಒಟ್ಟು ₹116.69 ಕೋಟಿ ವೆಚ್ಚ

ಬೆಸ್ಕಾಂ ವ್ಯಾಪ್ತಿಯ ಎಲ್ಲ ವಿಭಾಗಳಲ್ಲಿ ಹಂತ ಹಂತವಾಗಿ ಡಿಜಿಟಲ್ ಮೀಟರ್‌ಗಳನ್ನು ಅಳವಡಿಸಲಾಗುವುದು. ಈ ಯೋಜನೆಯ ಒಟ್ಟು ಮೊತ್ತ ₹116.69 ಕೋಟಿಯಾಗಿದೆ. ಸಿಂಗಲ್ ಫೇಸ್ ಡಿಜಿಟಲ್ ಮೀಟರ್‌ಗೆ ತೆರಿಗೆ, ವೈರಿಂಗ್ ಮತ್ತು ಅಳವಡಿಕೆ ವೆಚ್ಚ ಸೇರಿ ₹1497ರಿಂದ ₹1507 ಮತ್ತು 3 ಫೇಸ್ ಮೀಟರ್‌ಗೆ ₹3612ರಿಂದ ₹3652 ಆಗಲಿದೆ. ಈ ವೆಚ್ಚವನ್ನು ಬೆಸ್ಕಾಂ ಭರಿಸಲಿದೆ ಎಂದು ವ್ಯವಸ್ಥಾಪಕ ನಿರ್ದೇಶಕರು ತಿಳಿಸಿದ್ದಾರೆ.

9 ಲಕ್ಷ ಮೀಟರ್ ಅಳವಡಿಕೆಗೆ ಟೆಂಡರ್ ಪ್ರಕ್ರಿಯೆ

ಬೆಸ್ಕಾಂನ ಬೆಂಗಳೂರು ಗ್ರಾಮಾಂತರ ಪ್ರದೇಶ ಮತ್ತು ಚಿತ್ರದುರ್ಗ ಪ್ರದೇಶ ವಲಯಗಳಲ್ಲಿ ಸುಮಾರು 9 ಲಕ್ಷ ಡಿಜಿಟಲ್ ಮೀಟರ್ ಅಳವಡಿಸಲು ಟೆಂಡರ್ ಪ್ರಕ್ರಿಯೆ ಆರಂಭಗೊಂಡಿದೆ ಎಂದು ಮಹಾಂತೇಶ ಬೀಳಗಿ ತಿಳಿಸಿದ್ದಾರೆ.



ಎಂ.ಜಿ. ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿ, ಅಪಘಾತವನ್ನುಂಟುಮಾಡಿ ಪರಾರಿಯಾಗುತ್ತಿದ್ದ ಚಾಲಕನನ್ನು ಸಚಿವ ಮುನಿರತ್ನ ಹಿಡಿದು ಪೊಲೀಸರಿಗೆ ಒಪ್ಪಿಸಿದರು —ಪ್ರಜಾವಾಣಿ ಚಿತ್ರ/ರಂಜು.ಪಿ

ಅಡ್ಡಾದಿಡ್ಡಿ ಚಾಲನೆ: ಚಾಲಕನನ್ನು ಪೊಲೀಸರಿಗೆ ಒಪ್ಪಿಸಿದ ಸಚಿವ ಮುನಿರತ್ನ

ಬೆಂಗಳೂರು: ನಗರದ ಎಂ.ಜಿ. ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ಕಾರು ಚಲಾಯಿಸಿ ನಾಲ್ಕು ಕಾರುಗಳಿಗೆ ಡಿಕ್ಕಿ ಹೊಡೆದು ಅಪಘಾತವನ್ನುಂಟು ಮಾಡಿ ಪರಾರಿಯಾಗುತ್ತಿದ್ದ ಚಾಲಕನನ್ನು ಸಚಿವ ಮುನಿರತ್ನ ಅವರು ಹಿಡಿದು ಪೊಲೀಸರಿಗೆ ಒಪ್ಪಿಸಿದ್ದಾರೆ.

'ಸೇನೆಯ ಅಧಿಕಾರಿ ಎನ್ನಲಾದ ವ್ಯಕ್ತಿ, ಕಾರನ್ನು ಅಡ್ಡಾದಿಡ್ಡಿಯಾಗಿ ಚಲಾಯಿಸಿದ್ದ. ಕರ್ತವ್ಯ ನಿರತ ಸಂಚಾರ ಪೊಲೀಸರು ತಡೆಯಲು ಯತ್ನಿಸಿದರೂ ಕಾರು ನಿಲ್ಲಿಸದೇ ಚಾಲಕ ಪರಾರಿಯಾಗುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಚರ್ಚ್ ಸ್ಟ್ರೀಟ್‌ನಲ್ಲಿ ಕಾರು ಹೊರಟಿತ್ತು. ಅದೇ ರಸ್ತೆಯಲ್ಲಿ ಮತ್ತೊಂದು ಕಾರಿನಲ್ಲಿ ಮುನಿರತ್ನ ಕುಟುಂಬದ ಜೊತೆ ತೆರಳುತ್ತಿದ್ದರು. ಪೊಲೀಸರು ಬೆನ್ನಟ್ಟಿದ್ದನ್ನು ಕಂಡ ಮುನಿರತ್ನ, ಆರೋಪಿ ಚಾಲಕನ ಕಾರು ಅಡ್ಡಗಟ್ಟಿ ನಿಲ್ಲಿಸಿದ್ದರು. ಅಪಘಾತ ಮಾಡಿದ್ದನ್ನು ಪ್ರಶ್ನಿಸಿ, ಸ್ಥಳದಲ್ಲಿದ್ದ ಪೊಲೀಸರಿಗೆ ಒಪ್ಪಿಸಿದರು' ಎಂದು ಪೊಲೀಸರು ತಿಳಿಸಿದರು.

ಇಸ್ರೊ: 36 ಉಪಗ್ರಹಗಳ ಉಡಾವಣೆ

ಶ್ರೀಹರಿಕೋಟಾ (ಪಿಟಿಐ): ಭಾರತದ ಬಾಹ್ಯಾಕಾಶ ಸಂಸ್ಥೆ ಇಸ್ರೊ ಭಾನುವಾರ ನಸುಕಿನಲ್ಲಿ ಭಾರವಾದ ರಾಕೆಟ್ ಎಲ್‌ವಿಎಂ 3–ಎಂ2/ ಒನ್ ವೆಬ್ ಇಂಡಿಯಾ –1 ಬಳಸಿ 36 ಬ್ರಾಡ್‌ಬ್ಯಾಂಡ್ ಉಪಗ್ರಹಗಳನ್ನು ಇಲ್ಲಿನ ಬಾಹ್ಯಾಕಾಶ ನಿಲ್ದಾಣದಿಂದ ಉಡಾವಣೆ ಮಾಡಿತು.

ನ್ಯೂಸ್ಪೇಸ್ ಇಂಡಿಯಾ ಲಿಮಿಟೆಡ್ (ಎನ್‌ಎಸ್‌ಐಎಲ್), ಬಾಹ್ಯಾಕಾಶ ಇಲಾಖೆ ಅಡಿಯಲ್ಲಿ ಕೇಂದ್ರೀಯ ಸಾರ್ವಜನಿಕ ವಲಯದ ಉದ್ಯಮವಾಗಿದ್ದು, ಇಸ್ರೊದ ಎಲ್‌ವಿಎಂ3ನಲ್ಲಿ ಒನ್‌ವೆಬ್ ಲಿಯೊ ಉಪಗ್ರಹಗಳನ್ನು ಉಡಾವಣೆ ಮಾಡಲು ಲಂಡನ್-ಪ್ರಧಾನ ಕಚೇರಿಯ ನೆಟ್‌ವರ್ಕ್ ಆಕ್ಸೆಸ್ ಅಸೋಸಿಯೇಟೆಡ್ ಲಿಮಿಟೆಡ್ (ಒನ್ ವೆಬ್) ನೊಂದಿಗೆ ಎರಡು ಉಡಾವಣಾ ಸೇವಾ ಒಪ್ಪಂದಗಳಿಗೆ ಸಹಿ ಹಾಕಿತ್ತು.

ಒನ್ ವೆಬ್ ಒಂದು ಖಾಸಗಿ ಉಪಗ್ರಹ ಸಂವಹನ ಕಂಪನಿಯಾಗಿದ್ದು, ಇದರಲ್ಲಿ ಭಾರತದ ಭಾರ್ತಿ ಎಂಟರ್‌ಪ್ರೈಸಸ್ ಪ್ರಮುಖ ಹೂಡಿಕೆದಾರ ಮತ್ತು ಷೇರುದಾರ.

43.5 ಮೀಟರ್ ಎತ್ತರದ ರಾಕೆಟ್ ಇಲ್ಲಿನ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದ ಎರಡನೇ ಉಡಾವಣಾ ಕೇಂದ್ರದಿಂದ ಉಡಾವಣೆ ಮಾಡಲಾಯಿತು. ಇದು 8,000 ಕೆ.ಜಿ.ವರೆಗಿನ ಉಪಗ್ರಹ ಸಾಗಿಸುವ ಸಾಮರ್ಥ್ಯ ಹೊಂದಿದೆ.

ಎಲ್‌ವಿಎಂ 3ನ ಚೊಚ್ಚಲ ವಾಣಿಜ್ಯ ಮಿಷನ್ ಮತ್ತು ಎನ್‌ಎಸ್‌ಐಎಲ್‌ನ ಮೊದಲ ಉಡಾವಣಾ ವಾಹನ ಆಗಿರುವುದರಿಂದ ಈ ಕಾರ್ಯಾಚರಣೆ ಮಹತ್ವ ಪಡೆದಿದೆ.



ಇಸ್ರೊದ 36 ಬ್ರಾಡ್‌ಬ್ಯಾಂಡ್ ಉಪಗ್ರಹಗಳನ್ನು ಭಾನುವಾರ ನಸುಕಿನಲ್ಲಿ ಉಡಾವಣೆ ಮಾಡಲಾಯಿತು —ಪಿಟಿಐ ಚಿತ್ರ

ಕುಲಶಾಸ್ತ್ರೀಯ ಅಧ್ಯಯನ: ಆಗ್ರಹ

ಬೆಂಗಳೂರು: 'ಕೊರಚ ಸಮಾಜವನ್ನು ಅಲೆಮಾರಿ, ಅಲೆ ಅಲೆಮಾರಿ ಜನಾಂಗದಲ್ಲಿ ಮುಂದುವರೆಸಬೇಕು. ಸಮಾಜದ ಕುಲಶಾಸ್ತ್ರೀಯ ಅಧ್ಯಯನ ನಡೆಸಬೇಕು' ಎಂದು ಅಖಿಲ ಕರ್ನಾಟಕ ಕೊರಚ ಮಹಾಸಂಘದ ರಾಜ್ಯಾಧ್ಯಕ್ಷ ಎಚ್.ಎನ್ ರಾಮಚಂದ್ರಪ್ಪ ಒತ್ತಾಯಿಸಿದರು.

'ಕೊರಚ, ಕುಂಚಿಕೊರಚ, ಕೊರವ ಮತ್ತು ಯರಕುಲ ಜನಾಂಗದವರು ಅಲೆಮಾರಿ, ಅಲೆ ಅಲೆಮಾರಿ ಜನಾಂಗದವರಾಗಿದ್ದು, ಈಗಲೂ ರಸ್ತೆಯ ಪಕ್ಕದಲ್ಲಿರುವ ಖಾಸಿ ಜಾಗದಲ್ಲಿ ಗುಡಿಸಿಲು, ಟೆಂಟ್‌ಗಳನ್ನು ಹಾಕಿಕೊಂಡು ವಾಸಿಸುತ್ತಿದ್ದಾರೆ. ಇದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೂ ತೊಂದರೆಯಾಗುತ್ತಿದೆ. ಹಂದಿ ಸಾಕಾಣಿಕೆ ಮತ್ತು ಹಗ್ಗಗಳನ್ನು ತಯಾರಿಸುವುದು ಇವರ ಮೂಲ ಕಸುಬಾಗಿದೆ. ನಮ್ಮ ಸಮುದಾಯಕ್ಕೆ ಇದುವರೆಗೂ ಯಾವುದೇ ರಾಜಕೀಯ ಸ್ಥಾನಮಾನ ದೊರೆತ್ತಿಲ್ಲ. ಆದ್ದರಿಂದ ಅಭಿವೃದ್ಧಿ ಎಂಬುದು ಮರೀಚಿಕೆಯಾಗಿದೆ' ಎಂದು ಶುಕ್ರವಾರ ನಡೆದ ಸುದ್ದಿಗೋಷ್ಠಿಯಲ್ಲಿ ಬೇಸರ ವ್ಯಕ್ತಪಡಿಸಿದರು.

ಬಂಧನದ ಆದೇಶ ಅಸ್ಪಷ್ಟ: ಆರೋಪಿ ಬಿಡುಗಡೆ

ಬೆಂಗಳೂರು: 'ಪೊಲೀಸರ ಬಂಧನದ ಆದೇಶ ಮಾಸಿದ ಅಕ್ಷರಗಳಿಂದ ಕೂಡಿದೆ ಮತ್ತು ಆರೋಪಿಗೆ ಇಂಗ್ಲಿಷ್ ಭಾಷೆ ಗೊತ್ತಿಲ್ಲದ ಕಾರಣ ಅದರಲ್ಲಿ ನಮೂದಿಸಲಾದ ವಿವರಗಳನ್ನು ಸ್ಪಷ್ಟವಾಗಿ ಅರ್ಥ ಮಾಡಿಕೊಳ್ಳಲು ಸಾಧ್ಯವಾಗಿಲ್ಲ' ಎಂಬ ವಾದಾಂಶವನ್ನು ಪುರಸ್ಕರಿಸಿರುವ ಹೈಕೋರ್ಟ್, ರೌಡಿ ಶೀಟರ್ ಬಿಡುಗಡೆಗೆ ಆದೇಶಿಸಿದೆ.

ನಗರದ ಪಾರ್ವತಮ್ಮ ಎಂಬುವರು, 'ನನ್ನ ಪುತ್ರನನ್ನು ಅಕ್ರಮವಾಗಿ ಬಂಧನದಲ್ಲಿ ಇರಿಸಲಾಗಿದೆ' ಎಂದು ಆರೋಪಿಸಿ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಲೇವಾರಿ ಮಾಡಿದೆ.

'ಬಂಧನ ಪ್ರಾಧಿಕಾರವು ಅರ್ಜಿದಾರರಿಗೆ ಒದಗಿಸಿದ ದಾಖಲೆಯ ಹೆಚ್ಚಿನ ಪುಟಗಳು ಮಾಸಿದ ಅಕ್ಷರಗಳಿಂದ ಕೂಡಿವೆ. ಅರ್ಜಿದಾರ 10ನೇ ತರಗತಿವರೆಗೆ ಕನ್ನಡ ಮಾಧ್ಯಮದಲ್ಲಿ ಓದಿರುವ ಕಾರಣದಿಂದಾಗಿ ಸಲಹಾ ಮಂಡಳಿಯ ಮುಂದೆ ಇಂಗ್ಲಿಷ್ ಭಾಷೆಯಲ್ಲಿದ್ದ ಆದೇಶವನ್ನು ಸರಿಯಾಗಿ ಅರ್ಥಮಾಡಿಕೊಂಡು ವಿವರಣೆ ನೀಡಲು ಸಾಧ್ಯವಾಗಿಲ್ಲ. ಹಾಗಾಗಿ, ಇದು ಸಂವಿಧಾನದ 22 (5) ನೇ ವಿಧಿಯ ಸಂಪೂರ್ಣ ಉಲ್ಲಂಘನೆಯಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿದೆ.

ರಾಘವೇಂದ್ರ (37) ಅಲಿಯಾಸ್ ಬೇಕರಿ ರಘು ಬೇರೆ ಯಾವುದೇ ಪ್ರಕರಣದಲ್ಲಿ ಅಗತ್ಯವಿಲ್ಲ ಎಂದಾದರೆ, ತಕ್ಷಣ ಬಿಡುಗಡೆ ಮಾಡಿ ಎಂದು ಬೆಂಗಳೂರು ಕೇಂದ್ರ ಕಾರಾಗೃಹದ ಹಿರಿಯ ಅಧೀಕ್ಷಕರಿಗೆ ನಿರ್ದೇಶಿಸಿದೆ.

ಪ್ರಕರಣವೇನು?: ಬೆಂಗಳೂರು ನಗರ ಪೊಲೀಸ್ ಆಯುಕ್ತರು ರಾಘವೇಂದ್ರ ವಿರುದ್ಧ 2022ರ ಫೆಬ್ರುವರಿ 7 ರಂದು ಕಪ್ಪುಹಣ, ಮಾದಕವಸ್ತು, ಜೂಜು, ಗೂಂಡಾ ಮತ್ತು ಅಪಾಯಕಾರಿ ಚಟುವಟಿಕೆಗಳ ತಡೆ ಕಾಯ್ದೆ ಅಡಿಯಲ್ಲಿ ಬಂಧನದ ಆದೇಶ ಹೊರಡಿಸಿದ್ದರು. ಮಾರ್ಚ್ 25 ರಂದು ಗೃಹ ಇಲಾಖೆ ಈ ಆದೇಶವನ್ನು ದೃಢಪಡಿಸಿತ್ತು.

ಬೆಂಗಳೂರು ಪೊಲೀಸ್ ಆಯುಕ್ತರು, ಗೃಹ ಇಲಾಖೆ ಹಾಗೂ ಕೇಂದ್ರ ಕಾರಾಗೃಹದ ಹಿರಿಯ ಅಧೀಕ್ಷಕರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿತ್ತು.



ಎಲೆಕ್ಟ್ರಾನಿಕ್ ಹಾಗೂ ಗೃಹೋಪಯೋಗಿ ಉಪಕರಣಗಳ ಮಾರಾಟ ಕಂಪನಿ ಗಿರಿಯಾಸ್, ಬೆಂಗಳೂರಿನ ಆಂಧ್ರಹಳ್ಳಿ ಮುಖ್ಯರಸ್ತೆಯ ಬಳಿ 117ನೇ ಮೆಗಾ ಸ್ಟೋರ್ ಆರಂಭಿಸಿದೆ. ಈ ಸಂದರ್ಭದಲ್ಲಿ ಗಿರಿಯಾಸ್ ನಿರ್ದೇಶಕರಾದ ಪಿ.ಎಲ್. ಗಿರಿಯಾ, ಎಚ್.ಆರ್. ಗಿರಿಯಾ, ಮನಿಷ್ ಗಿರಿಯಾ ಮತ್ತು ಎಚ್. ನರೇಶ್ ಗೌಡ ಇದ್ದರು.

ಅತ್ಯಾಚಾರ ಆರೋಪ: ಶಾಸಕ ಅಮಾನತು

ತಿರುವನಂತಪುರ: ಅತ್ಯಾಚಾರದ ಆರೋಪ ಎದುರಿಸುತ್ತಿರುವ ಇಲ್ಲಿನ ಕಾಂಗ್ರೆಸ್ ಪಕ್ಷದ ಶಾಸಕ ಎಲ್ಡೋಸ್ ಪಿ. ಕುನ್ನಪಿಲ್ಲಿಲ್ ಅವರನ್ನು ಆರು ತಿಂಗಳ ಕಾಲ ಪಕ್ಷದಿಂದ ಅಮಾನತುಗೊಳಿಸಲಾಗಿದೆ.

'ಅತ್ಯಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಕುನ್ನಪಿಲ್ಲಿಲ್ ನೀಡಿರುವ ಹೇಳಿಕೆಯು ತೃಪ್ತಿಕರವಾಗಿಲ್ಲ. ಹೀಗಾಗಿ ಪಕ್ಷದಿಂದ ಅವರನ್ನು ಆರು ತಿಂಗಳ ಕಾಲ ಅಮಾನತುಗೊಳಿಸಲಾಗಿದೆ ಎಂದು ಕೆಪಿಸಿಸಿ ಅಧ್ಯಕ್ಷ ಕೆ. ಸುಧಾಕರನ್ ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. 'ಪ್ರಕರಣದ ಸಂಬಂಧ ನ್ಯಾಯಾಲಯದಿಂದ ನಿರೀಕ್ಷಣಾ ಜಾಮೀನು ಪಡೆದಿರುವುದರಿಂದ ಅವರು ಶಾಸಕರಾಗಿ ಕರ್ತವ್ಯ ನಿರ್ವಹಿಸಬಹುದು' ಎಂದೂ ಹೇಳಿಕೆಯಲ್ಲಿ ಅವರು ಮಾಹಿತಿ ನೀಡಿದ್ದಾರೆ.

‘ಕೋವಿಡ್ ಚಿಕಿತ್ಸೆ: ಆಸ್ಪತ್ರೆಗಳ ವಿರುದ್ಧ ತನಿಖೆ ನಡೆಸಿ’

ಬೆಂಗಳೂರು: ‘ಕೋವಿಡ್ ಚಿಕಿತ್ಸೆಗೆ ಸಂಬಂಧಿಸಿದಂತೆ ಆಯುಷ್ಮಾನ್ ಭಾರತ-ಆರೋಗ್ಯ ಕರ್ನಾಟಕ ಯೋಜನೆಯಡಿ ಆಕಾಶ್ ಸೇರಿ ಕೆಲ ಖಾಸಗಿ ಆಸ್ಪತ್ರೆಗಳಿಗೆ ಅಧಿಕ ಹಣ ಪಾವತಿಸಿರುವ ಬಗ್ಗೆ ತನಿಖೆ ನಡೆಸಬೇಕು. ಹಣ ದುರುಪಯೋಗ ಮಾಡಿದ ಆಸ್ಪತ್ರೆಗಳನ್ನು ಕಪ್ಪು ಪಟ್ಟಿಗೆ ಸೇರಿಸಬೇಕು’ ಎಂದು ಸರ್ಕಾರಕ್ಕೆ ಕಾಂಗ್ರೆಸ್ ಮುಖಂಡ ರಮೇಶ್ ಬಾಬು ಆಗ್ರಹಿಸಿದ್ದಾರೆ.

ಈ ಬಗ್ಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪತ್ರ ಬರೆದಿದ್ದಾರೆ. ‘ಆಕಾಶ್ ಆಸ್ಪತ್ರೆಗೆ ₹ 41.57 ಕೋಟಿ’ ಎಂಬ ಶೀರ್ಷಿಕೆಯಡಿ ‘ಪ್ರಜಾವಾಣಿ’ ಶನಿವಾರ ವಿಶೇಷ ವರದಿ ಪ್ರಕಟಿಸಿತ್ತು. ಈ ವರದಿಯನ್ನು ಉಲ್ಲೇಖಿಸಿರುವ ಅವರು, ‘ಕೋವಿಡ್ ಚಿಕಿತ್ಸೆಗೆ ದೇವನಹಳ್ಳಿಯಲ್ಲಿರುವ ಆಕಾಶ್ ಆಸ್ಪತ್ರೆಗೆ ಗರಿಷ್ಠ ಮೊತ್ತ ಪಾವತಿಯಾಗಿದೆ. ಸಚಿವರೇ ಈ ಆಸ್ಪತ್ರೆಯ ಒಡೆತನವನ್ನು ಬೇನಾಮಿಯಾಗಿ ಹೊಂದಿರುವ ಬಗ್ಗೆಯೂ ವರದಿಯಲ್ಲಿ ಉಲ್ಲೇಖಿಸಲ್ಪಟ್ಟಿದೆ. ಬೇನಾಮಿ ವ್ಯವಹಾರನ್ನು ತಡೆಯುವುದು ಮತ್ತು ಭ್ರಷ್ಟಾಚಾರ ಕೊನೆಗಾಣಿಸುವುದು ನಿಮ್ಮ ಕರ್ತವ್ಯ. ಈ ಬಗ್ಗೆ ಸರ್ಕಾರ ತಟಸ್ಥ ಆಗಿರುವುದು ಹಲವಾರು ಅನುಮಾನಗಳಿಗೆ ಅವಕಾಶ ಕೊಡುತ್ತದೆ’ ಎಂದು ತಿಳಿಸಿದ್ದಾರೆ.

‘ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರ ಪಾವತಿಸಿದ ಹಣದ ದುರುಪಯೋಗದ ಬಗ್ಗೆ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದ್ದಾರೆ.

ನವೆಂಬರ್ 11ಕ್ಕೆ ಮೋದಿಯಿಂದ ಉದ್ಘಾಟನೆ

‘ಪ್ರಗತಿ ಪ್ರತಿಮೆ’ ಅನಾವರಣಕ್ಕೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಇಲ್ಲಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ನ. 11ರಂದು ನಾಡಪ್ರಭು ಕೆಂಪೇಗೌಡರ 108 ಅಡಿ ಎತ್ತರದ ‘ಪ್ರಗತಿಯ ಪ್ರತಿಮೆ’ಯನ್ನು ಪ್ರಧಾನಿ ನರೇಂದ್ರ ಮೋದಿ ಲೋಕಾರ್ಪಣೆಗೊಳಿಸಲಿದ್ದು, ಶನಿವಾರ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ, ಡಾ.ಕೆ. ಸುಧಾಕರ್ ಸ್ಥಳ ಪರಿಶೀಲನೆ ನಡೆಸಿದರು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಸೂಚನೆ ಅನ್ವಯ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿದ್ದ ಸಚಿವರು, ಪ್ರತಿಮೆಯನ್ನು ಪ್ರತಿಷ್ಠಾಪಿಸಲ್ಪಟ್ಟಿರುವ ಜಾಗವನ್ನು ಪರಿಶೀಲಿಸಿದರು. ಪ್ರತಿಮೆಯ 18 ಅಡಿ ಪೀಠದ ನಾಲ್ಕು ದಿಕ್ಕಿನಲ್ಲಿಯೂ ನಾಡಪ್ರಭುವಿನ ಆಡಳಿತ ವೈಖರಿ ನೆನಪು ಮಾಡುವ ಕಲಾಕೃತಿ ಕುರಿತು ಅಧಿಕಾರಿಗಳಿಂದ ಮಾಹಿತಿ ಪಡೆದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಕೆಂಪೇಗೌಡ ಪಾರಂಪರಿಕ ತಾಣಗಳ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ಡಾ.ಸಿ.ಎನ್. ಅಶ್ವತ್ಥನಾರಾಯಣ, ‘ಇಲ್ಲಿನ ವಿಮಾನ ನಿಲ್ದಾಣಕ್ಕೆ ನಾಡಪ್ರಭುವಿನ ಹೆಸರು ಇಡಲಾಗಿದೆ. ಪ್ರತಿಯೊಬ್ಬ ಪ್ರಯಾಣಿಕರಿಗೂ ಈ ಮಹಾನಾಯಕ ಯಾರು ಎಂಬ ಕುತೂಹಲಕಾರಿ ಪ್ರಶ್ನೆಗಳಿಗೆ ಪ್ರಗತಿಯ ಪ್ರತಿಮೆ ಉತ್ತರ ನೀಡಲಿದೆ’ ಎಂದರು.



ದೇವನಹಳ್ಳಿಯ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಆವರಣದಲ್ಲಿ ಸ್ಥಾಪನೆಯಾಗಲಿರುವ ಕೆಂಪೇಗೌಡರ ಪ್ರತಿಮೆಯ ಪೀಠದಲ್ಲಿನ ಕಲಾಕೃತಿಗಳನ್ನು ಶನಿವಾರ ಸಚಿವರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಆರ್. ಅಶೋಕ, ಡಾ.ಕೆ. ಸುಧಾಕರ್ ವೀಕ್ಷಿಸಿದರು

‘ಕೆಂಪೇಗೌಡರು ಎಲ್ಲಾ ಸಮುದಾಯದ ಏಳಿಗೆಗಾಗಿ ಪೇಟೆಗಳನ್ನು ನಿರ್ಮಿಸಿದ್ದ ಜಾತ್ಯತೀತ ನಾಯಕ. ಅವರಿಗೆ ನಮ್ಮ ಸರ್ಕಾರ ಗೌರವ ನೀಡುವಂತಹ ಕಾರ್ಯ ಮಾಡುತ್ತಿದೆ. ಪ್ರತಿಮೆ ಉದ್ಘಾಟನಾ ಕಾರ್ಯಕ್ರಮಕ್ಕೆ ರಾಜ್ಯದಾದ್ಯಂತ ಲಕ್ಷಾಂತರ ಜನರು ಆಗಮಿಸಲಿದ್ದಾರೆ’ ಎಂದು ಕಂದಾಯ ಸಚಿವ ಆರ್. ಅಶೋಕ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಸುಧಾಕರ್ ಮಾತನಾಡಿ, ‘ತಾಯಿಯ ಮಾತಿನಂತೆ ಕೆರೆಗಳನ್ನು ನಿರ್ಮಿಸಿದ್ದು ಕೆಂಪೇಗೌಡರ ಹಿರಿಮೆ. ಭವ್ಯ ನಗರದ ನಿರ್ಮಾತೃವಿನ ಇತಿಹಾಸವನ್ನು ಜಗತ್ತಿಗೆ ಸಾರುವ ಕೆಲಸ ನಡೆಯುತ್ತಿದೆ. ಕೆಂಪೇಗೌಡರು ಹಾಗೂ ಬಸವಣ್ಣ ಅವರ ಸ್ಮಾರಕಗಳನ್ನು ವಿಧಾನಸೌಧದ ಮುಂಭಾಗ ನಿರ್ಮಿಸಲಾಗುವುದು. ಕಾಗಿನೆಲೆಯಲ್ಲಿ ಕನಕದಾಸರ ತಾಣದ ಅಭಿವೃದ್ಧಿ ಕಾರ್ಯ ನಡೆಯುತ್ತಿದೆ’ ಎಂದು ತಿಳಿಸಿದರು.

ನಗರದ ಇನ್ನಷ್ಟು ಸುದ್ದಿಗಳು 9B

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ಅಭಿಮತ

‘ವಿವಾಹಪೂರ್ವ ಕೌನ್ಸೆಲಿಂಗ್ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐಟಿ–ಬಿಟಿ ಉದ್ಯೋಗಿಗಳಲ್ಲಿ ವೈವಾಹಿಕ ಸಂಬಂಧಗಳು ಮಹತ್ವ ಕಳೆದುಕೊಳ್ಳುತ್ತಿವೆ. ಹನಿಮೂನ್ ಮುಗಿಸಿ ಮರಳುತ್ತಿದ್ದಂತೆಯೇ ವಿಚ್ಛೇದನಕ್ಕೆ ಅರ್ಜಿ ಸಲ್ಲಿಸುತ್ತಿದ್ದಾರೆ. ಆದ್ದರಿಂದ ನಗರದಲ್ಲಿ ವಿವಾಹಪೂರ್ವ ಕೌನ್ಸೆಲಿಂಗ್ ಕೇಂದ್ರ ಪ್ರಾರಂಭಿಸಬೇಕು’ ಎಂದು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್. ಕುಮಾರ್ ತಿಳಿಸಿದರು.

ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆ ನಗರದಲ್ಲಿ ಶನಿವಾರ ಹಮ್ಮಿಕೊಂಡ ವಿಶ್ವ ಮಾನಸಿಕ ಆರೋಗ್ಯ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು. ‘ಪ್ರತಿಯೊಬ್ಬರಿಗೂ ಒಂದಲ್ಲ ಒಂದು ಮಾನಸಿಕ ಸಮಸ್ಯೆ ಕಾಡುತ್ತಿದೆ. ಆಪ್ತ ಸಮಾಲೋಚನೆ ಸರಿಯಾದ ರೀತಿಯಲ್ಲಿ ನಡೆದರೆ ಸಮಾಜ ಬದಲಾಯಿಸಲು ಸಾಧ್ಯ. ಆದ್ದರಿಂದ ಆಪ್ತ ಸಮಾಲೋಚನೆ ಬಗ್ಗೆ ಅರಿವಿನ ಕಾರ್ಯ ದೊಡ್ಡ ರೀತಿಯಲ್ಲಿ ಆಗಬೇಕು. ಶಾಲಾ ಹಂತದಲ್ಲಿಯೇ ಆಪ್ತ ಸಮಾಲೋಚನೆ ನಡೆಯಬೇಕು. ನಗರದ ಕೇಂದ್ರ ಭಾಗದಲ್ಲಿ ಸಮಾಲೋಚನೆ ಕೇಂದ್ರ ಇದ್ದರೆ ಜನರಿಗೆ ಅನುಕೂಲ ಆಗಲಿದೆ’ ಎಂದು ಹೇಳಿದರು.



ಕಾರ್ಯಕ್ರಮದಲ್ಲಿ ನ್ಯಾ.ಎನ್. ಕುಮಾರ್ ಅವರು (ಎಡದಿಂದ ಮೂರನೆಯವರು) ಡಾ.ಸಿ.ಆರ್. ಚಂದ್ರಶೇಖರ್ ಅವರನ್ನು ಸನ್ಮಾನಿಸಿದರು. ಕರ್ನಾಟಕ ಹವ್ಯಾಸಿ ಆಪ್ತ ಸಮಾಲೋಚಕರ ವೇದಿಕೆಯ ಪ್ರಧಾನ ಕಾರ್ಯದರ್ಶಿ ಬಿ.ಎಂ. ಬಸವರಾಜ ಮತ್ತು ಅಧ್ಯಕ್ಷೆ ಸುವರ್ಣ ಅಮರನಾಥ್ ಇದ್ದಾರೆ —ಪ್ರಜಾವಾಣಿ ಚಿತ್ರ

‘ನಗರ ಪ್ರದೇಶದಲ್ಲಿ ಕೆಲಸದ ಒತ್ತಡದಿಂದ ಮಾನಸಿಕ ಸಮಸ್ಯೆಗಳು ಹೆಚ್ಚುತ್ತಿವೆ. ಸಣ್ಣ ಸಣ್ಣ ವಿಚಾರಕ್ಕೂ ಜಗಳಗಳಾಗುತ್ತಿವೆ. ಇಂದಿನ ಶಿಕ್ಷಣ ವ್ಯವಸ್ಥೆ, ಮನೆಯ ವಾತಾವರಣವೂ ಮಾನಸಿಕ ಒತ್ತಡ ಹೆಚ್ಚಳಕ್ಕೆ ಕಾರಣ’ ಎಂದು ಬೇಸರ ವ್ಯಕ್ತಪಡಿಸಿದರು.

ಹೆಚ್ಚಿದ ಆತ್ಮಹತ್ಯೆ: ಮನೋವೈದ್ಯ ಡಾ.ಸಿ.ಆರ್. ಚಂದ್ರಶೇಖರ್, ‘ನಮ್ಮಲ್ಲಿ ಸಾಂಕ್ರಾಮಿಕ ಕಾಯಿಲೆಗಳ ಜತೆಗೆ ಜೀವನಶೈಲಿ ಸಂಬಂಧಿ ಕಾಯಿಲೆ ಹೆಚ್ಚುತ್ತಿವೆ. ಬೆಂಗಳೂರಿನಲ್ಲಿ ಶೇ 40ರಷ್ಟು ಮಂದಿ ಮಧುಮೇಹ ಸಮಸ್ಯೆ ಎದುರಿಸುತ್ತಿದ್ದಾರೆ. ಹೃದಯ ಸಂಬಂಧಿ ಸಮಸ್ಯೆ, ಅಧಿಕ ರಕ್ತದೊತ್ತಡ, ಬೊಜ್ಜು, ಮಾನಸಿಕ ಅನಾರೋಗ್ಯ, ಕ್ಯಾನ್ಸರ್ ಸೇರಿ ವಿವಿಧ ಸಾಂಕ್ರಾಮಿಕವಲ್ಲದ ಕಾಯಿಲೆಗಳು ಜನರನ್ನು ಕಾಡುತ್ತಿವೆ. ಕೋವಿಡ್ ಕಾಣಿಸಿಕೊಂಡ ಬಳಿಕ ಬಹುತೇಕ ಎಲ್ಲರ ಶ್ವಾಸಕೋಶಕ್ಕೆ ಹಾನಿಯಾಗಿದೆ. ನಗರದ ಜನರಲ್ಲಿ ಶೇ 50 ರಷ್ಟು ಮಂದಿ ಮಾನಸಿಕ ಒತ್ತಡ ಎದುರಿಸುತ್ತಿದ್ದಾರೆ’ ಎಂದು ಹೇಳಿದರು.

‘ಇತ್ತೀಚಿನ ದಿನಗಳಲ್ಲಿ ಯುವಜನರು ಹೆಚ್ಚಿನ ಸಂಖ್ಯೆಯಲ್ಲಿ ಆತ್ಮಹತ್ಯೆಗೆ ಒಳಗಾಗುತ್ತಿದ್ದಾರೆ. ಆತ್ಮಹತ್ಯೆಯಲ್ಲಿ ರಾಜ್ಯ ಐದನೇ ಸ್ಥಾನದಲ್ಲಿದೆ. ಶೇ 35ರಷ್ಟು ಆತ್ಮಹತ್ಯೆಗಳು 15ರಿಂದ 30 ವರ್ಷದೊಳಗಿನವರಾಗಿದ್ದಾರೆ. ದುಃಖ, ಭಯ, ಕೋಪ, ಅಸಹಾಯಕತೆ, ಹತಾಶೆಯಿಂದ ಮರಣಕ್ಕೆ ಶರಣಾಗುತ್ತಿದ್ದಾರೆ’ ಎಂದರು.

ಲಂಚಕ್ಕೆ ಕೈಯೊಡ್ಡಿದ ಎಂಜಿನಿಯರ್ ಬಂಧನ



ಗುರುಶಂಕರ್

ಕೋಲಾರ: ಗುತ್ತಿಗೆದಾರರಿಗೆ ಬಿಲ್ ಮಂಜೂರಾತಿಗಾಗಿ ₹40 ಸಾವಿರ ಲಂಚಕ್ಕೆ ಕೈಯೊಡ್ಡಿದ ಜಿಲ್ಲೆಯ ಸಣ್ಣ ನೀರಾವರಿ ಹಾಗೂ ಅಂತರ್ಜಲ ಅಭಿವೃದ್ಧಿ ಉಪವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಎಸ್.ಗುರುಶಂಕರ್ ಅವರನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.

ಎನ್‌ಎಚ್ 75ರ ನರಸಾಪುರ ಕಾಫಿ ಡೇ ಬಳಿಯ ಫ್ಲೈಓವರ್ ಬಳಿ ಶುಕ್ರವಾರ ಸಂಜೆ ಅಧಿಕಾರಿಯು ಲಂಚ ಪಡೆಯುತ್ತಿದ್ದಾಗ ಕೋಲಾರ ಲೋಕಾಯುಕ್ತ ಪೊಲೀಸ್ ಅಧೀಕ್ಷಕ ಬಿ.ಕೆ.ಉಮೇಶ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಚೈತ್ರಾ ನೇತೃತ್ವದ ತಂಡ ದಾಳಿ ನಡೆಸಿದೆ.

‘ಕಾಮಗಾರಿಯ ಬಿಲ್ ಹಣದಲ್ಲಿ ಒಟ್ಟು ₹ 40 ಸಾವಿರಕ್ಕೆ ಗುರುಶಂಕರ್ ಬೇಡಿಕೆ ಇಟ್ಟಿದ್ದರು’ ಎಂದು ಮಾಲೂರು ತಾಲ್ಲೂಕಿನ ಪ್ರಥಮದರ್ಜೆ ಗುತ್ತಿಗೆದಾರ ರಾಘವೇಂದ್ರ ದೂರು ನೀಡಿದ್ದರು.

ಈಡೇರುತ್ತಿದೆ ಉದ್ಯೋಗದ ಆಶಯ: ಪ್ರಲ್ಹಾದ ಜೋಶಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಪ್ರತಿ ತಿಂಗಳು 75 ಸಾವಿರ ಯುವಕರಿಗೆ ಉದ್ಯೋಗ ನೀಡುವ ಯೋಜನೆ ಆರಂಭಿಸಿದ್ದಾರೆ. ದೇಶದ ಯುವ ಸಮೂಹದ ಉದ್ಯೋಗದ ಆಶಯ ಈಡೇರಿಸುತ್ತಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಧಾನಮಂತ್ರಿ ಅವರು ವಿಡಿಯೊ ಕಾನ್ಫರೆನ್ಸ್ ಮೂಲಕ 10 ಲಕ್ಷ ಸಿಬ್ಬಂದಿ ನೇಮಕಾತಿ ಅಭಿಯಾನ ‘ರೋಜ್‌ಗಾರ್ ಮೇಳ’ಕ್ಕೆ ಶನಿವಾರ ಚಾಲನೆ ನೀಡಿದ ನಂತರ ಅವರು ಮಾತನಾಡಿದರು.

10 ಲಕ್ಷ ಉದ್ಯೋಗ ನೀಡುವ ಭರವಸೆ ನೀಡಲಾಗಿದೆ. ವಿದ್ಯಾವಂತರಿಗೆ ಸರ್ಕಾರಿ ಉದ್ಯೋಗ ನೀಡುವುದಷ್ಟೇ ಅಲ್ಲ, ಶಿಕ್ಷಣ ವಂಚಿತ ಕಾರ್ಮಿಕರು, ಬೀದಿಬದಿ ವ್ಯಾಪಾರಿಗಳು ಸೇರಿದಂತೆ ಶ್ರಮಿಕ ವರ್ಗದ ಜನರು ಸಮರ್ಪಕವಾಗಿ ಕೆಲಸ ಮಾಡುವ ವಾತಾವರಣ ಕಲ್ಪಿಸುವುದು, ಬಡ್ಡಿ ರಹಿತ, ಸುಲಭ ಸಾಲದ ವ್ಯವಸ್ಥೆಯನ್ನೂ ಮಾಡಲಾಗಿದೆ ಎಂದರು.

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ಉಪಸ್ಥಿತರಿದ್ದರು.



ಗುಜರಾತ್‌ನ ಗಾಂಧಿನಗರದಲ್ಲಿ ನಡೆದ 'ಡೆಫ್‌ಎಕ್ಸ್‌ಪೊ'ದಲ್ಲಿ ಬಿಇಎಂಎಲ್‌ಗೆ 2021 2022ರ 'ರಕ್ಷಾ ಮಂತ್ರಿ' ಪ್ರಶಸ್ತಿಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ಬಿಇಎಂಎಲ್ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಅಮಿತ್ ಬ್ಯಾನರ್ಜಿ ಅವರಿಗೆ ಪ್ರದಾನ ಮಾಡಿದರು.

ಜೈಲಿಗೂ ಹೋಗಿ ಜಾಮೀನು ಮೇಲೆ ಹೊರ ಬಂದಿದ್ದ ಆರೋಪಿ

ಕಳ್ಳತನಕ್ಕೆ ಹೋಗಿದ್ದ ಮನೆಯಲ್ಲೇ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಂದಿರಾನಗರದ ಸಾಫ್ಟ್‌ವೇರ್ ಎಂಜಿನಿಯರೊಬ್ಬರ ಮನೆಗೆ ಕಳ್ಳತನಕ್ಕೆಂದು ನುಗ್ಗಿದ್ದ ಆರೋಪಿ ದಿಲೀಪ್‌ಕುಮಾರ್ ಬಹದ್ದೂರ್ (30) ಎಂಬಾತ ಅದೇ ಮನೆಯ ದೇವರ ಕೋಣೆಯಲ್ಲಿ ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

'ಅಸ್ಸಾಂನ ದಿಲೀಪ್‌ಕುಮಾರ್, ಅಪರಾಧ ಹಿನ್ನೆಲೆಯುಳ್ಳವ. ಹಲವು ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಜೈಲಿಗೂ ಹೋಗಿ ಜಾಮೀನು ಮೇಲೆ ಹೊರಬಂದಿದ್ದ. ಬೀಗ ಹಾಕಿದ್ದ ಎಂಜಿನಿಯರ್ ಅವರ ಮನೆ ಗಮನಿಸಿ ಕಳ್ಳತನಕ್ಕೆಂದು ನುಗ್ಗಿದ್ದ. ಆದರೆ, ಅದೇ ಮನೆಯ ದೇವರ ಕೋಣೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ' ಎಂದು ಇಂದಿರಾನಗರ ಠಾಣೆ ಪೊಲೀಸರು ಹೇಳಿದರು.

'ದಿಲೀಪ್‌ಕುಮಾರ್ ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ. ಈತನ ಸಂಬಂಧಿಕರಿಗೂ ವಿಷಯ ತಿಳಿಸಲಾಗಿದೆ' ಎಂದು ವಿವರಿಸಿದರು.

ಪ್ರವಾಸಕ್ಕೆ ಹೋಗಿದ್ದ ಉದ್ಯಮಿ ಕುಟುಂಬ: 'ಇಂದಿರಾನಗರದಲ್ಲಿ ಜಪಾರಾಮಿ ಮನೆಯಲ್ಲಿ ನೆಲೆಸಿರುವ ಎಂಜಿನಿಯರ್ ಕುಟುಂಬ, ಪ್ರವಾಸಕ್ಕೆಂದು ಇತ್ತೀಚೆಗೆ ಬೇರೆ ಊರಿಗೆ ಹೋಗಿತ್ತು. ಹೀಗಾಗಿ, ಮನೆಗೆ ಬೀಗ ಹಾಕಲಾಗಿತ್ತು. ಇಂದಿರಾನಗರದಲ್ಲಿ ಸುತ್ತಾಡುತ್ತಿದ್ದ ದಿಲೀಪ್‌ಕುಮಾರ್, ಬೀಗ ಹಾಕಿದ್ದ ಎಂಜಿನಿಯರ್ ಮನೆ ಗುರುತಿಸಿ ಕಳ್ಳತನಕ್ಕೆ ಸಂಚು ರೂಪಿಸಿದ್ದನೆಂಬ ಮಾಹಿತಿ ಲಭ್ಯವಾಗಿದೆ' ಎಂದು ಪೊಲೀಸರು ಹೇಳಿದರು.

'ಯಾರೂ ಇಲ್ಲದ್ದನ್ನು ಖಚಿತಪಡಿಸಿಕೊಂಡು ಶುಕ್ರವಾರ ಬೆಳಿಗ್ಗೆ ಮನೆಯೊಳಗೆ ನುಗ್ಗಿದ್ದ ದಿಲೀಪ್ ಕುಮಾರ್, ಅಲ್ಲಿಯೇ ಸ್ನಾನ ಮಾಡಿದ್ದ. ಮನೆಯಲ್ಲಿದ್ದ ಮದ್ಯ ಕುಡಿದಿದ್ದ. ನಂತರ, ಕೊಠಡಿಯಲ್ಲೆಲ್ಲ ಹುಡುಕಾಡಿದ್ದ. ಇದಕ್ಕೆ ಪುರಾವೆ ಎಂಬಂತೆ ಬಟ್ಟೆ ಹಾಗೂ ಇತರ ವಸ್ತುಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದವು' ಎಂದು ತಿಳಿಸಿದರು.

'ಶುಕ್ರವಾರ ರಾತ್ರಿ ಮನೆಗೆ ಬಂದಿದ್ದ ಎಂಜಿನಿಯರ್ ಕುಟುಂಬ, ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದ ವಸ್ತುಗಳನ್ನು ಕಂಡಿದ್ದರು. ದೇವರ ಕೋಣೆಯಲ್ಲಿ ಗಮನಿಸಿದಾಗ, ದಿಲೀಪ್‌ಕುಮಾರ್ ಮೃತದೇಹ ನೋಡಿದ್ದರು. ಗಾಬರಿಗೊಂಡು ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಸಹಚರರ ಪತ್ತೆಗೆ ತನಿಖೆ'

'ಕಳ್ಳತನ ಮಾಡಲು ನುಗ್ಗಿದ್ದ ಮನೆಯಲ್ಲಿ ದಿಲೀಪ್‌ಕುಮಾರ್ ಆತ್ಮಹತ್ಯೆ ಮಾಡಿಕೊಂಡಿರುವುದು ಹಲವು ಅನುಮಾನಗಳಿಗೆ ಕಾರಣವಾಗಿದೆ. ಜೊತೆಗೆ, ಸಾವಿನಲ್ಲಿ ನಿಗೂಢತೆ ಇದೆ. ಕೃತ್ಯದಲ್ಲಿ ಸಹಕರಿಸುತ್ತಿದ್ದ ಈತನ ಕೆಲ ಸಹಚರರು ತಲೆಮರೆಸಿಕೊಂಡಿದ್ದು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಕಳ್ಳತನವನ್ನೇ ವೃತ್ತಿ ಮಾಡಿಕೊಂಡಿದ್ದ ದಿಲೀಪ್‌ಕುಮಾರ್, ಪಶ್ಚಾತ್ತಾಪದಿಂದ ಆತ್ಮಹತ್ಯೆ ಮಾಡಿಕೊಂಡಿರಬಹುದು. ಎಲ್ಲ ಆಯಾಮದಲ್ಲಿ ಮಾಹಿತಿ ಕಲೆಹಾಕಲಾಗುತ್ತಿದೆ' ಎಂದು ತಿಳಿಸಿದರು.

ಸುದ್ದಿ 2 ನಿಮಿಷ

ವಿದ್ಯಾರ್ಥಿನಿಲಯ: 'ಅನಧಿಕೃತ ವಿದ್ಯಾರ್ಥಿಗಳನ್ನು ಹೊರ ಹಾಕಿ'

ಬೆಂಗಳೂರು: ವಿದ್ಯಾರ್ಥಿನಿಲಯಗಳಲ್ಲಿ ಅನಧಿಕೃತವಾಗಿ ವಾಸಿಸುತ್ತಿರುವ ವಿದ್ಯಾರ್ಥಿಗಳು ಮತ್ತು ವ್ಯಕ್ತಿಗಳನ್ನು ಹೊರ ಹಾಕಬೇಕು ಎಂದು ಬೆಂಗಳೂರು ವಿಶ್ವವಿದ್ಯಾಲಯ ಸುತ್ತೋಲೆ ಹೊರಡಿಸಿದೆ.

ಪದವಿ ಪೂರ್ವ ವಿದ್ಯಾರ್ಥಿಗಳ ನಡುವೆ ಸಂಘರ್ಷ ನಡೆಯುತ್ತಿರುವ ಬಗ್ಗೆ ದೂರುಗಳು ಸಲ್ಲಿಕೆಯಾಗುತ್ತಿವೆ. ಕೆಲ ವಿದ್ಯಾರ್ಥಿಗಳು ರಕ್ಷಣೆ ನೀಡಬೇಕು ಎಂದು ವಿಶ್ವವಿದ್ಯಾಲಯಕ್ಕೆ ಹಾಗೂ ಜ್ಞಾನ ಭಾರತಿ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ್ದಾರೆ. ಇಂತಹ ಘಟನೆ ವಿಶ್ವವಿದ್ಯಾಲಯಕ್ಕೆ ಶೋಭೆ ತರುವುದಿಲ್ಲ. ಇದರಿಂದ, ವಿಶ್ವವಿದ್ಯಾಲಯದ ಆವರಣದ ಒಳಗೆ ಶೈಕ್ಷಣಿಕ ವಾತಾ ವರಣಕ್ಕೆ ಪೂರಕವಾಗಿರುವುದಿಲ್ಲ ಎಂದು ಕುಲಸಚಿವರು ತಿಳಿಸಿದ್ದಾರೆ.

ಅನಧಿಕೃತವಾಗಿ ವಿದ್ಯಾರ್ಥಿನಿಲಯಗಳಲ್ಲಿ ವಾಸಿಸುತ್ತಿರುವ ವ್ಯಕ್ತಿಗಳ ಪ್ರಚೋದನೆಯಿಂದ ಇಂತಹ ಅಹಿತಕರ ಘಟನೆಗಳು ಸಂಭವಿಸುತ್ತಿವೆ. ಜತೆಗೆ ಅನಧಿಕೃತ ವ್ಯಕ್ತಿಗಳಿಂದ ಅಧಿಕೃತ ವಿದ್ಯಾರ್ಥಿಗಳಿಗೆ ಮೂಲಸೌಕರ್ಯದ ಕೊರತೆ ಮತ್ತು ಭದ್ರತೆಗೆ ಕೊರತೆ ಉಂಟಾಗುತ್ತಿದೆ. ಆದ್ದರಿಂದ, ವಿಶ್ವವಿದ್ಯಾಲಯದಲ್ಲಿ ಸೌಹಾರ್ದತೆ, ಶಿಸ್ತು ಹಾಗೂ ಶೈಕ್ಷಣಿಕ ವಾತಾವರಣ ಕಾಪಾಡುವ ಹಿತದೃಷ್ಟಿಯಿಂದ ಅನಧಿಕೃತ ವ್ಯಕ್ತಿಗಳು ಮತ್ತು ವಿದ್ಯಾರ್ಥಿಗಳನ್ನು ಕೂಡಲೇ ಗುರುತಿಸಿ ಹೊರ ಹಾಕಬೇಕು ಹಾಗೂ ಅವರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಕುಲಸಚಿವರು ವಿದ್ಯಾರ್ಥಿನಿಲಯದ ಕ್ಷೇಮ-ಪಾಲಕರಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ.

ಕಾಂಗ್ರೆಸ್ ದಲಿತ ವಿರೋಧಿ: ಬಿಜೆಪಿ ಟೀಕೆ

ಬೆಂಗಳೂರು: 'ಡಾ.ಬಿ.ಆರ್. ಅಂಬೇಡ್ಕರ್ ಅವರಿಗೆ ಗೌರವ ಸಲ್ಲಿಸುವುದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹೆಚ್ಚಿಸುವುದು ಸೇರಿದಂತೆ ಎಲ್ಲ ವಿಚಾರಗಳಲ್ಲೂ ಕಾಂಗ್ರೆಸ್ ಪಕ್ಷ ದಲಿತ ವಿರೋಧಿ' ಎಂದು ಬಿಜೆಪಿ ವಾಗ್ದಾಳಿ ನಡೆಸಿದೆ.

ಬಿಜೆಪಿ ರಾಜ್ಯ ಘಟಕದ ಅಧಿಕೃತ ಟ್ವಿಟರ್ ಖಾತೆಯಿಂದ ಶನಿವಾರ ಸರಣಿ ಟ್ವೀಟ್ ಮಾಡಿದ್ದು, 'ಕಾಂಗ್ರೆಸ್ ಪಕ್ಷವು ಬಾಬಾ ಸಾಹೇಬರನ್ನು ಚುನಾವಣೆಯಲ್ಲಿ ಕುತಂತ್ರದಿಂದ ಸೋಲಿಸಿತು. ಆದರೆ, ಬಿಜೆಪಿಯು ಅತಿ ಹೆಚ್ಚಿನ ಸಂಖ್ಯೆಯ ದಲಿತರನ್ನು ಗೆಲ್ಲಿಸಿಕೊಂಡು ಕೇಂದ್ರ ಸಂಪುಟದಲ್ಲಿ ಸಚಿವರನ್ನಾಗಿ ಮಾಡಿದೆ' ಎಂದು ಹೇಳಿದೆ.

'ಅಂಬೇಡ್ಕರ್ ಅವರಿಗೆ ಭಾರತ ರತ್ನ ಗೌರವ ನೀಡಲು ಕಾಂಗ್ರೆಸ್ ಹಿಂದೆ ಮುಂದೆ ನೋಡಿತು. ಇಂದಿರಾ ಗಾಂಧಿ ತಾನೇ ಭಾರತ ರತ್ನಕ್ಕೆ ಕೊರಳೊಡ್ಡಿದ್ದರು. ಅಂಬೇಡ್ಕರ್ ಅವರಿಗೆ ಭಾರತ ರತ್ನದ ಗೌರವ ಲಭಿಸಲು ಬಿಜೆಪಿ ಬೆಂಬಲಿತ ಸರ್ಕಾರ ಬರಬೇಕಾಯಿತು' ಎಂದು ವಾಗ್ದಾಳಿ ನಡೆಸಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೀಸಲಾತಿ ಹೆಚ್ಚಿಸಬೇಕೆಂಬ ಬೇಡಿಕೆಯನ್ನು ದಶಕಗಳ ಕಾಲದಿಂದ ಕಾಂಗ್ರೆಸ್ ನಿರಾಕರಿಸುತ್ತಲೇ ಬಂದಿತ್ತು. ಅಧಿಕಾರ ಹಿಡಿದ ಮೂರು ವರ್ಷದೊಳಗೆ ಬಿಜೆಪಿ ಸರ್ಕಾರ ಈ ಸಮುದಾಯಗಳ ಮೀಸಲಾತಿ ಹೆಚ್ಚಳಕ್ಕೆ ಸುಗ್ರೀವಾಜ್ಞೆ ಹೊರಡಿಸಿದೆ ಎಂದು ಹೇಳಿದೆ.

ಮನೆಯ ಚಾವಣಿಗೆ ಹೋಗಿದ್ದವನ ಕೊಲೆ

ಬೆಂಗಳೂರು: ಯಲಹಂಕ ಠಾಣೆ ವ್ಯಾಪ್ತಿಯಲ್ಲಿ ಚಂದ್ರಶೇಖರ್ (33) ಎಂಬುವವರನ್ನು ಮಚ್ಚಿನಿಂದ ಹೊಡೆದು ಕೊಲೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

'ಆಂಧ್ರಪ್ರದೇಶದ ಚಂದ್ರಶೇಖರ್, 8 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಯಲಹಂಕ ಬಳಿಯ ಕೊಂಡಪ್ಪ ಬಡಾವಣೆಯಲ್ಲಿ ಪತ್ನಿ ಜತೆ ನೆಲೆಸಿದ್ದರು. ಮಗ್ಗಗಳನ್ನು ಇಟ್ಟುಕೊಂಡು ನೇಕಾರಿಕೆ ಕೆಲಸ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಮನೆಯ ಚಾವಣಿಗೆ ಶುಕ್ರವಾರ ರಾತ್ರಿ ಹೋಗಿದ್ದ ಚಂದ್ರಶೇಖರ್ ಕೆಳಗೆ ಬಂದಿರಲಿಲ್ಲ. ಅನುಮಾನಗೊಂಡ ಪತ್ನಿ, ಚಾವಣಿಗೆ ಹೋಗಿದ್ದರು. ರಕ್ತದ ಮಡುವಿನಲ್ಲಿ ಬಿದ್ದಿದ್ದ ಚಂದ್ರಶೇಖರ್ ಅವರನ್ನು ಕಂಡಿದ್ದರು. ಸ್ಥಳೀಯರ ಸಹಾಯದಿಂದ ಯಲಹಂಕ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ದಿದ್ದರು. ಮಾರ್ಗಮಧ್ಯೆಯೇ ಅವರು ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದರು' ಎಂದು ವಿವರಿಸಿದರು.

'ಸ್ಥಳ ಪರಿಶೀಲನೆ ನಡೆಸಿ, ಪತ್ನಿ, ಇತರರ ಹೇಳಿಕೆ ಪಡೆದು ಪ್ರಕರಣ ದಾಖಲಿಸಿಕೊಳ್ಳಲಾಯಿತು' ಎಂದು ಪೊಲೀಸರು ಹೇಳಿದರು.

ಪರಿಚಯಸ್ಥರಿಂದ ಕೃತ್ಯ ಶಂಕೆ: 'ಚಂದ್ರಶೇಖರ್ ಚಾವಣಿಗೆ ಹೋಗಿದ್ದ ವೇಳೆ ಪರಿಚಯಸ್ಥರೇ ಮಚ್ಚಿನಿಂದ ಹೊಡೆದು ಪರಾರಿಯಾಗಿರುವ ಅನುಮಾನವಿದೆ. ಎರಡೂವರೆ ವರ್ಷಗಳ ಹಿಂದೆಯಷ್ಟೇ ಚಂದ್ರಶೇಖರ್ ಮದುವೆ ಯಾಗಿತ್ತು. ಆದರೆ, ಮಕ್ಕಳು ಆಗಿರಲಿಲ್ಲ. ಸ್ನಾತಕೋತ್ತರ ಪದವೀಧರರಾದ ಪತ್ನಿ ಮೇಲೆಯೂ ಅನುಮಾನವಿದೆ' ಎಂದು ಪೊಲೀಸರು ಹೇಳಿದರು.

ಸಾಲದ ಜಗಳ: ಬೀದಿ ವ್ಯಾಪಾರಿ ಕೊಲೆ

ಬೆಂಗಳೂರು: ಪುಟ್ಟೇನಹಳ್ಳಿ ಠಾಣೆ ವ್ಯಾಪ್ತಿಯಲ್ಲಿ ಬೀದಿ ವ್ಯಾಪಾರಿ ಸೆಲ್ವರಾಜು (47) ಎಂಬುವರನ್ನು ಕೊಲೆ ಮಾಡಲಾಗಿದೆ.

'ಸ್ಥಳೀಯ ನಿವಾಸಿ ಸೆಲ್ವರಾಜು, ಜೆ.ಪಿ.ನಗರ 7ನೇ ಹಂತದ ಕೊತ್ತನೂರು ಮುಖ್ಯ ರಸ್ತೆಯ ಬದಿಯಲ್ಲಿ ಹಣ್ಣು ಮಾರಾಟ ಮಾಡುತ್ತಿದ್ದರು. ಆರೋಪಿ ಸೆಲ್ವರಾಜು ಬಳಿ ತಿಂಗಳ ಹಿಂದೆಯಷ್ಟೇ ₹10 ಸಾವಿರ ಸಾಲ ಪಡೆದಿದ್ದರು' ಎಂದು ಪೊಲೀಸರು ಹೇಳಿದರು.

'ಸಾಲ ವಾಪಸು ನೀಡುವಂತೆ ಸರವಣ ಹಲವು ದಿನಗಳಿಂದ ಒತ್ತಾಯಿಸುತ್ತಿದ್ದ. ಆರ್ಥಿಕ ಕಷ್ಟದಲ್ಲಿದ್ದ ಸೆಲ್ವರಾಜು, ಸಾಲ ಮರು ಪಾವತಿಗೆ ಸಮಯ ಕೇಳಿದ್ದರು. ಇದೇ ವಿಚಾರವಾಗಿ ಎರಡು ಬಾರಿ ಗಲಾಟೆ ನಡೆದಿತ್ತು.'

'ಅ. 21ರಂದು ರಾತ್ರಿ ಇಬ್ಬರ ನಡುವೆ ಪುನಃ ಗಲಾಟೆ ಆಗಿತ್ತು. ಇದೇ ವೇಳೆಯೇ ಆರೋಪಿ ಸರವಣ, ಸೆಲ್ವರಾಜು ಮೇಲೆ ಹಲ್ಲೆ ಮಾಡಿದ್ದರು. ತೀವ್ರ ಗಾಯಗೊಂಡಿದ್ದ ಸೆಲ್ವರಾಜು ಅವರನ್ನು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆಗೆ ಸ್ಪಂದಿಸದೇ ಶನಿವಾರ ಅವರು ಮೃತಪಟ್ಟಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಕೊಲೆ ಆರೋಪದಡಿ ಸರವಣ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಆತ ತಲೆಮರೆಸಿಕೊಂಡಿದ್ದಾನೆ' ಎಂದು ಹೇಳಿದರು

ಐಎಸ್‌ಐ ಗುರುತಿನ ಹೆಲ್ಮೆಟ್ ಕಡ್ಡಾಯ ಮಾಡಲು ತಯಾರಿ

ಅರ್ಧ ಹೆಲ್ಮೆಟ್: ಪೊಲೀಸರಿಗೆ ದಂಡ

ಪ್ರಜಾವಾಣಿ ವಾರ್ತೆ



ಅರ್ಧ ಹೆಲ್ಮೆಟ್ ಧರಿಸಿ ಸ್ಕೂಟಿಯಲ್ಲಿ ತೆರಳುತ್ತಿದ್ದ ಪೊಲೀಸ್ ಸಿಬ್ಬಂದಿಗೆ ದಂಡ ವಿಧಿಸಿದ ಆರ್‌.ಟಿ. ನಗರ ಸಂಚಾರ ಪೊಲೀಸರು ರಶೀದಿ ನೀಡಿದರು

ಬೆಂಗಳೂರು: ದ್ವಿಚಕ್ರ ವಾಹನದಲ್ಲಿ ತೆರಳುವಾಗ ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸುವಂತೆ ಜನರಲ್ಲಿ ಜಾಗೃತಿ ಮೂಡಿಸುತ್ತಿರುವ ಸಂಚಾರ ಪೊಲೀಸರು, ನಿಷೇಧಿತ ಅರ್ಧ ಹೆಲ್ಮೆಟ್ ಧರಿಸುವ ತಮ್ಮ ಸಿಬ್ಬಂದಿಗೆ ಪ್ರಾಯೋಗಿಕವಾಗಿ ದಂಡ ವಿಧಿಸುತ್ತಿದ್ದಾರೆ.

ನಗರದಲ್ಲಿ ಸಂಭವಿಸುತ್ತಿರುವ ಅಪಘಾತಗಳಲ್ಲಿ ದ್ವಿಚಕ್ರ ವಾಹನ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ಮೃತಪಡುತ್ತಿದ್ದಾರೆ. ಜತೆಗೆ, ಬಹುಪಾಲು ಸವಾರರು ಸುರಕ್ಷಿತ ಹೆಲ್ಮೆಟ್ ಧರಿಸದಿರುವುದು ಕಂಡುಬರುತ್ತಿದೆ. ಇದೇ ಕಾರಣಕ್ಕೆ ಐಎಸ್‌ಐ ಗುರುತಿನ ಹೆಲ್ಮೆಟ್ ಕಡ್ಡಾಯ ಮಾಡಲು ಪೊಲೀಸರು ತಯಾರಿ ನಡೆಸುತ್ತಿದ್ದಾರೆ.

'ಬೆಂಗಳೂರಿನಲ್ಲಿ ದ್ವಿಚಕ್ರ ವಾಹನ ಬಳಸುವವರ ಸಂಖ್ಯೆ ಹೆಚ್ಚಾಗಿದೆ. ಅರ್ಧ ಹೆಲ್ಮೆಟ್‌ಗಳನ್ನು ಏಕಾಏಕಿ ನಿಷೇಧಿಸಿದರೆ, ಜನರಿಗೆ ತೊಂದರೆ ಆಗುತ್ತದೆ. ಹೀಗಾಗಿ, ಅರ್ಧ ಹೆಲ್ಮೆಟ್ ಧರಿಸದಂತೆ ಜಾಗೃತಿ ಮೂಡಿಸಲಾಗುತ್ತಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಕಾನೂನು ರಕ್ಷಿಸುವ ಪೊಲೀಸರು, ಮೊದಲಿಗೆ ಕಾನೂನು ಪಾಲಿಸಬೇಕು. ಹೀಗಾಗಿ, ಅವರೆಲ್ಲರಿಗೂ ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸುವಂತೆ ಸೂಚನೆ ನೀಡಲಾಗಿದೆ. ಅರ್ಧ ಹೆಲ್ಮೆಟ್ ಅಥವಾ ಐಎಸ್‌ಐ ಗುರುತು ಇಲ್ಲದ ಹೆಲ್ಮೆಟ್ ಧರಿಸಿ ಸಿಕ್ಕಿಬೀಳುವ ಪೊಲೀಸರಿಗೆ ದಂಡ ವಿಧಿಸುವ ಪ್ರಕ್ರಿಯೆ ಆರಂಭವಾಗಿದೆ' ಎಂದು ತಿಳಿಸಿದರು.

'ಹಲವು ಠಾಣೆಗಳ ವ್ಯಾಪ್ತಿಯಲ್ಲಿ ಪೊಲೀಸರಿಗೆ ದಂಡ ವಿಧಿಸಲಾಗಿದೆ. ಇದು ಪ್ರಾಯೋಗಿಕ ಮಾತ್ರ. ಮುಂಬರುವ ದಿನಗಳಲ್ಲಿ ಸಾರ್ವಜನಿಕರಿಗೂ ದಂಡ ವಿಧಿಸುವ ಪ್ರಕ್ರಿಯೆ ಆರಂಭವಾಗಲಿದೆ. ಹೀಗಾಗಿ, ಜನರು ಎಚ್ಚೆತ್ತುಕೊಂಡು ಐಎಸ್‌ಐ ಗುರುತಿನ ಹೆಲ್ಮೆಟ್ ಧರಿಸಬೇಕು' ಎಂದು ಅಧಿಕಾರಿ ಕೋರಿದರು.

₹4.50 ಲಕ್ಷ ಮೌಲ್ಯದ ಡ್ರಗ್ಸ್ ಜಪ್ತಿ

'ಮೊಬೈಲ್ ಆ್ಯಪ್ ಮೂಲಕ ಕೇರಳದ ಪೆಡ್ಲರ್‌ನನ್ನು ಆರೋಪಿಗಳು ಪರಿಚಯ ಮಾಡಿಕೊಂಡಿದ್ದರು. ಆ್ಯಪ್ ಮೂಲಕವೇ ಆತನ ಜೊತೆ ವ್ಯವಹರಿಸಿ, ಡ್ರಗ್ಸ್ ಖರೀದಿಸುತ್ತಿದ್ದರು. ಕೋರಿಯರ್ ಮೂಲಕ ನಗರಕ್ಕೆ ಡ್ರಗ್ಸ್ ಬರುತ್ತಿತ್ತು. ಅದನ್ನು ಪರಿಚಯಸ್ಥರಿಗೆ ಮಾರುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಆ್ಯಪ್ ಮೂಲಕ ಡ್ರಗ್ಸ್ ದಂಧೆ: ನಾಲ್ವರ ಬಂಧನ

ಬೆಂಗಳೂರು: ಮೊಬೈಲ್ ಆ್ಯಪ್ ಮೂಲಕ ಕೇರಳದಿಂದ ಡ್ರಗ್ಸ್ ತರಿಸಿ ನಗರದಲ್ಲಿ ಮಾರುತ್ತಿದ್ದ ಜಾಲವನ್ನು ಸಿಸಿಬಿ ಪೊಲೀಸರು ಭೇದಿಸಿದ್ದು, ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

'ಯು. ಯಶವಂತ್, ಕೆ.ಆರ್. ಶಾಲ್ಬೀನ್, ಎಂ.ಎಸ್. ಜಿತಿನ್ ಹಾಗೂ ರೋಹನ್ ಜೋಜೊ ಬಂಧಿತರು. ಇವರಿಂದ ₹ 4.50 ಲಕ್ಷ ಮೌಲ್ಯದ 60 ಗ್ರಾಂ ಎಂಡಿಎಂಎ ಮಾತ್ರೆಗಳು, 2 ಕೆ.ಜಿ ಗಾಂಜಾ ಹಾಗೂ 5 ಮೊಬೈಲ್‌ಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಪೊಲೀಸರು ಹೇಳಿದರು.



ಆರೋಪಿಗಳಿಂದ ಜಪ್ತಿ ಮಾಡಿರುವ ಡ್ರಗ್ಸ್

'ಮೈಕೊ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಸುತ್ತಾಡುತ್ತಿದ್ದ ಆರೋಪಿಗಳು, ಕೆಲ ಕಾಲೇಜು ವಿದ್ಯಾರ್ಥಿಗಳು ಹಾಗೂ ಕೆಲ ಖಾಸಗಿ ಕಂಪನಿ ಉದ್ಯೋಗಿಗಳಿಗೆ ಡ್ರಗ್ಸ್ ಮಾರುತ್ತಿದ್ದರು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಲಾಯಿತು' ಎಂದು ತಿಳಿಸಿದರು.

'ಎನ್‌ಡಿಪಿಎಸ್ ಕಾಯ್ದೆಯಡಿ ಪ್ರಕರಣ ದಾಖಲಿಸಲಾಗಿದೆ. ಹಲವು ತಿಂಗಳಿನಿಂದ ಆರೋಪಿಗಳು ಕೃತ್ಯ ಎಸಗುತ್ತಿರುವ ಮಾಹಿತಿ ಇದೆ. ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿದ್ದು, ಅವರ ಪತ್ತೆಗಾಗಿ ತನಿಖೆ ಮುಂದುವರಿಸಲಾಗಿದೆ' ಎಂದು ಸಿಸಿಬಿ ಪೊಲೀಸರು ತಿಳಿಸಿದರು.

ನಾಯಕ್ ವಿರುದ್ಧದ ಬಿಸಿಐ ಆದೇಶಕ್ಕೆ ಹೈಕೋರ್ಟ್ ತಡೆ

ಬೆಂಗಳೂರು: ವೃತ್ತಿ ದುರ್ನಡತೆ ಆರೋಪಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ವಕೀಲರ ಪರಿಷತ್ (ಕೆಎಸ್‌ಬಿಸಿ) ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಕೆ.ಬಿ. ನಾಯಕ್ ಅವರ ಸನ್ನದು ಅಮಾನತುಗೊಳಿಸಿದ್ದ ಭಾರತೀಯ ವಕೀಲರ ಪರಿಷತ್ (ಬಿಸಿಐ) ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಬಿಸಿಐ ಆದೇಶ ಪ್ರಶ್ನಿಸಿ ಕೆ.ಬಿ. ನಾಯಕ್ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ವಿಚಾರಣೆ ನಡೆಸಿ ಮಧ್ಯಂತರ ಆದೇಶ ನೀಡಿದೆ.

'ಬಿಸಿಐ ತನ್ನ ಆದೇಶ ಹೊರಡಿಸುವ ಮುನ್ನ ವಕೀಲರ ಕಾಯ್ದೆಯ ಕಲಂ 48 ಎ (2)ರ ಪ್ರಕಾರ ಅರ್ಜಿದಾರರಿಗೂ ವಾದ ಮಂಡಿಸಲು ಅವಕಾಶ ನೀಡಬೇಕಿತ್ತು. ಮರು ಪರಿಶೀಲನಾ ಅರ್ಜಿ ಇತ್ಯರ್ಥವಾಗುವವರೆಗೆ ನಾಯಕ್ ಯಾವುದೇ ನ್ಯಾಯಾಲಯದಲ್ಲಿ ವಕೀಲಿಕೆ ಮಾಡದಂತೆ ಆದೇಶಿಸಿರುವುದರಿಂದ ಅವರ ಜೀವನ ನಿರ್ವಹಣೆಗೆ ತೊಂದರೆಯಾಗಲಿದೆ. ಅರ್ಜಿದಾರರ ಆಕ್ಷೇಪಣೆ ಆಲಿಸದೇ ಆದೇಶ ಹೊರಡಿಸಬಾರದಿತ್ತು' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಜಗಳ: ಕಾರ್ಮಿಕನ ಕೊಲೆ

ಬೆಂಗಳೂರು: ಕುಮಾರಸ್ವಾಮಿ ಲೇಔಟ್ ಠಾಣೆ ವ್ಯಾಪ್ತಿಯಲ್ಲಿ ಕುಡಿದ ಅಮಲಿನಲ್ಲಿ ಇಬ್ಬರ ನಡುವೆ ಜಗಳ ನಡೆದಿದ್ದು, ಮುಖೇಶ್ (35) ಎಂಬುವರನ್ನು ಕೊಲೆ ಮಾಡಲಾಗಿದೆ.

'ಬಿಹಾರದ ಮುಖೇಶ್, ಹಲವು ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಟೈಲ್ಸ್ ಜೋಡಣೆ ಕೆಲಸ ಮಾಡುತ್ತಿದ್ದರು. ಯಲಚೇನಹಳ್ಳಿಯ ಕಾಶಿನಗರ ವೃತ್ತ ಸಮೀಪದ ನಿರ್ಮಾಣ ಹಂತದ ಕಟ್ಟಡವೊಂದರಲ್ಲಿ ಸ್ನೇಹಿತ ನಿಖಿಲ್ (25) ಜೊತೆ ಉಳಿದುಕೊಂಡಿದ್ದರು. ನಿಖಿಲ್ ಸಹ ಬಿಹಾರದವ. ಆತನೇ ಕೃತ್ಯ ಎಸಗಿ ಪರಾರಿಯಾಗಿರುವ ಮಾಹಿತಿ ಇದೆ' ಎಂದು ಪೊಲೀಸರು ಹೇಳಿದರು.

'ಮುಖೇಶ್, ನಿಖಿಲ್ ಇಬ್ಬರೂ ಶುಕ್ರವಾರ ರಾತ್ರಿ ಮದ್ಯದ ಪಾರ್ಟಿ ಮಾಡಿದ್ದರು. ವೈಯಕ್ತಿಕ ವಿಚಾರಕ್ಕಾಗಿ ಇಬ್ಬರ ನಡುವೆ ಜಗಳ ಶುರುವಾಗಿತ್ತು. ಸಿಟ್ಟಾದ ಆರೋಪಿ ನಿಖಿಲ್, ಕಟ್ಟಿಗೆಯ ತುಂಡುಗಳಿಂದ ಮುಖೇಶ್ ತಲೆಗೆ ಹೊಡೆದಿದ್ದರು. ತೀವ್ರ ಗಾಯಗೊಂಡು ಮುಖೇಶ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.



'ಹಿಂದೂಗಳು ಮತ್ತು ದಲಿತ ಹಿಂದೂಗಳ ಮೇಲೆ ದೌರ್ಜನ್ಯ ನಡೆಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿ ಚಿತ್ರದುರ್ಗದಿಂದ ಬೆಂಗಳೂರಿನವರೆಗೆ ಪಾದಯಾತ್ರೆ ನಡೆಸಿದ ನವಭಾರತ ಹಿಂದೂ ದಲಿತ ಸಂಘದ ಕಾರ್ಯಕರ್ತರು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು. ಶ್ರೀರಾಮ ಸೇನೆ ಸಂಸ್ಥಾಪಕ ಪ್ರಮೋದ್ ಮುತಾಲಿಕ್ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ನಿಧನ ವಾರ್ತೆ

ಎಂ.ಕೆ.ಸವಿತಾ

ಬೆಂಗಳೂರು: ಉದ್ಯಮಿ ಡಿ. ಪ್ರಸನ್ನ ಕುಮಾರ್ ಅವರ ಪತ್ನಿ, ವಿಜಯನಗರದ ಆರ್.ಪಿ.ಸಿ. ಲೇಔಟ್ ನಿವಾಸಿ ಎಂ.ಕೆ. ಸವಿತಾ (49) ಅನಾರೋಗ್ಯದಿಂದ ಶನಿವಾರ ನಿಧನರಾದರು.

ಅವರಿಗೆ ಒಬ್ಬ ಪುತ್ರಿ, ಅಳಿಯ ಇದ್ದಾರೆ. ದೇವಯ್ಯ ಪಾರ್ಕ್ ಬಳಿಯ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಿತು.

ನಗರದಲ್ಲಿ ಇಂದು

25 ಅಡಿ ವಿಶ್ವಶಾಂತಿ ಬುದ್ಧ ಪ್ರತಿಮೆಯ ಅನಾವರಣ: ಭಿಕ್ಕು ಪನ್ಯಲೋಕ ಥೇರೊ, ಅತಿಥಿಗಳು: ಪಿ.ಸಿ. ಮೋಹನ್, ದಿನೇಶ್ ಗುಂಡೂರಾವ್, ರವಿ ಪ್ರಕಾಶ್, ಆಯೋಜನೆ: ಮಹಾಬೋಧಿ ಸೊಸೈಟಿ, ಸ್ಥಳ: ಕಾಳಿದಾಸ ರಸ್ತೆ, ಗಾಂಧಿನಗರ, ಬೆಳಿಗ್ಗೆ 9.30

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ ಕಾರ್ಯಕ್ರಮಗಳು: ಅತಿಥಿಗಳು: ವಿ.ಎಸ್. ರಾಮಮೂರ್ತಿ, ಅಧ್ಯಕ್ಷತೆ: ಸದಾನಂದ, ಉಪಸ್ಥಿತಿ: ಜಕ್ಕೂರು ಎಸ್. ನಾಗರಾಜ್, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಿಕ್ಯುಎಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ಬಸವೇಶ್ವರ ಜಯಂತಿ, ಶಿವಕುಮಾರ ಸ್ವಾಮೀಜಿ ಅವರ ಸಂಸ್ಮರಣೋತ್ಸವ: ಸಾನ್ನಿಧ್ಯ: ಮಲ್ಲಿಕಾರ್ಜುನ ದೇವರು, ಅಧ್ಯಕ್ಷತೆ: ಬಿ.ಎಸ್. ಪರಮಶಿವಯ್ಯ, ಉಪನ್ಯಾಸ: ರುದ್ರೇಶ್ ಅದರಂಗಿ, ಆಯೋಜನೆ: ಕರ್ನಾಟಕ ವೀರಶೈವ ವಿದ್ಯಾಭಿವೃದ್ಧಿ ಸಂಸ್ಥೆ, ಸ್ಥಳ: ಬಸವೇಶ್ವರ ಸುಜ್ಞಾನ ಮಂಟಪ, ಮಾಗಡಿ ಕಾರ್ಡ್ ರಸ್ತೆ, ವಿಜಯನಗರ, ಬೆಳಿಗ್ಗೆ 10

ಸಿ.ಜಿ. ಅನಂತಸ್ವಾಮಿ ಅವರಿಗೆ ನಾದ ಮತ್ತು ನುಡಿ ನಮನ: ಗಾಯನ: ಭಾರತಿ ಪ್ರತಾಪ್, ಹಾರ್ಮೋನಿಯಂ: ರವಿಂದ್ರ ಕಟೋಟಿ, ತಬಲಾ: ಎಸ್.ಎಸ್. ಕಿರಣ್, ಆಯೋಜನೆ: ಸಪ್ತಕ್, ಸ್ಥಳ: ಸಪ್ತಕ್ ಸಭಾಂಗಣ, ಮಿಲ್ಕ್ ಕಾಲೊನಿ, ಮಲ್ಲೇಶ್ವರ, ಬೆಳಿಗ್ಗೆ 10

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ರಕ್ಷಿತಾ ಆರ್., ಅತಿಥಿಗಳು: ಕೆ.ಎಂ. ಜಾನಕಿ, ಸುಶೀಲ, ಬಾ.ಹ. ರಮಾಕುಮಾರಿ, ವೈ.ಕೆ. ಸಂಧ್ಯಾ ಶರ್ಮಾ, ಆಯೋಜನೆ: ಅಭಿವ್ಯಕ್ತಿ ಕಲ್ಚರಲ್ ಟ್ರಸ್ಟ್, ಸ್ಥಳ: ಕೃಷ್ಣದೇವರಾಯ ಕಲಾಮಂದಿರ, ಸ್ಯಾಂಕಿ ರಸ್ತೆ, ಗಾಯತ್ರಿದೇವಿ ಪಾರ್ಕ್ ಎಕ್ಸಟೆನ್ಶನ್, ಕೋದಂಡರಾಮಪುರ, ಮಲ್ಲೇಶ್ವರ, ಸಂಜೆ 6



ರಕ್ಷಿತಾ ಆರ್

ಫಿಲ್ಮ್ ಥ್ರೂ ವುಮೆನ್ಸ್ ಐಯ್ಸ್ ಪುಸ್ತಕ ಬಿಡುಗಡೆ: ಅರುಣ ರಾಜೇ ಪಾಟೀಲ್, ಅಧ್ಯಕ್ಷತೆ: ಗಿರೀಶ್ ಕಾಸರವಳ್ಳಿ, ಅತಿಥಿಗಳು: ನಂಜುಂಡೇಗೌಡ, ಆಯೋಜನೆ: ಸುಚಿತ್ರಾ ಫಿಲ್ಮ್ ಸೊಸೈಟಿ, ಸ್ಥಳ: ಸುರಾನ ಕಾಲೇಜ ಸಭಾಂಗಣ, ಸೌಥ್‌ಎಂಡ್ ಸರ್ಕಲ್, ಬಸವನಗುಡಿ, ಬೆಳಿಗ್ಗೆ 10

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನ–06: ಕದಳಿ ಮಹಿಳಾ ಸಮಾವೇಶ: ಬೆಳಿಗ್ಗೆ 10.15: ಸಾನ್ನಿಧ್ಯ: ಪ್ರಭುಚೆನ್ನಬಸವ ಸ್ವಾಮೀಜಿ, ಉದ್ಘಾಟನೆ: ವಸುಂಧರಾ ಭೂಪತಿ, ಅಧ್ಯಕ್ಷತೆ: ಲೀಲಾದೇವಿ ಆರ್. ಪ್ರಸಾದ್, ವಚನ ಗಾಯನ: ಸುಶೀಲಾ ಸೋಮಶೇಖರ್, ಸಮಾರೋಪ ಸಮಾರಂಭ: ಸಂಜೆ 5.30: ಸಾನ್ನಿಧ್ಯ: ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮಾರೋಪ ಭಾಷಣ: ನಿಜಗುಣಪ್ರಭು ತೋಂಟದಾರ್ಯ ಸ್ವಾಮೀಜಿ, ಕದಳಿ ಪ್ರಶಸ್ತಿ ಪ್ರದಾನ: ಆರ್. ಅಶೋಕ್, ಪ್ರಶಸ್ತಿ ಪುರಸ್ಕೃತರು: ಡಾ. ಆಶಾ ಬೆನಕಪ್ಪ, ಕೃತಿ ಬಿಡುಗಡೆ: ರಾಮಲಿಂಗಾ ರೆಡ್ಡಿ, ಅತಿಥಿಗಳು: ಯು.ಬಿ. ವೆಂಕಟೇಶ್, ಕೊಂಡಜ್ಜಿ ಬ. ಷಣ್ಮುಖಪ್ಪ, ಆಯೋಜನೆ: ಕದಳಿ ಮಹಿಳಾ ವೇದಿಕೆ, ಸ್ಥಳ: ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಶಿವರಾತ್ರಿ ರಾಜೇಂದ್ರ ಚಿಂತನ ಮಂಟಪ, ಜಯನಗರ 8ನೇ ಬ್ಲಾಕ್

ಬಿ.ಎಸ್. ಜಯಪ್ರಕಾಶ ನಾರಾಯಣ ಅವರ 'ಜೀವ ಜೀವದ ನಂಟು ಮತ್ತು ಗಂಡು ಜೀವ, ಹೆಣ್ಣು ಭಾವ' ಪುಸ್ತಕಗಳ ಬಿಡುಗಡೆ: ಅತಿಥಿಗಳು: ಜಿ.ಬಿ. ಹರೀಶ್, ಕಾರ್ತಿಕ್ ಕಾಮಣ್ಣ, ಚಾಂದಿನಿ, ಆಯೋಜನೆ: ವಂಶಿ ಪಬ್ಲಿಕೇಷನ್ಸ್, ಸ್ಥಳ: ದೇವರಾಜ ಅರಸು ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಶಿವಾನಂದ ವೃತ್ತ, ಬೆಳಿಗ್ಗೆ 10.30

ಜೀಯರ್ ಗೋವಿಂದರಾಜು ಅವರ ಚಿತ್ರಕಲಾ ಪ್ರದರ್ಶನ: ಉದ್ಘಾಟನೆ: ಚಿರಂಜೀವಿ ಸಿಂಗ್, ಅತಿಥಿಗಳು: ಸಿ. ಚಂದ್ರಶೇಖರ್, ವೆಂಕಟಾಚಲಪತಿ, ಸ್ಥಳ: ಕೆ.ಜಿ.ಎಲ್.ಡಿ. ಆರ್ಟ್ ಗ್ಯಾಲರಿ, ಹೊಯ್ಸಳನಗರ, ಪೈಪ್‌ಲೈನ್ ರಸ್ತೆ, ಸುಂಕದಕಟ್ಟೆ, ಬೆಳಿಗ್ಗೆ 11.30

ಆದರ್ಶ ಜೈನ್ ಮಹಿಳಾ ರತ್ನ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ಅಮೋಘಕೀರ್ತಿ, ಅಮರಕೀರ್ತಿ, ಉದ್ಘಾಟನೆ: ಪದ್ಮರಾಜ ದೇಸಾಯಿ, ಅಧ್ಯಕ್ಷತೆ: ಎಸ್. ಜಿತೇಂದ್ರ ಕುಮಾರ್, ಪ್ರಶಸ್ತಿ ಪ್ರದಾನ: ಕಮಲಾ ಹಂಪನಾ, ಪುರಸ್ಕೃತರು: ಅನಿತಾ ಸುರೇಂದ್ರ ಕುಮಾರ್, ಶುಭ ನುಡಿ: ಹಂ.ಪ. ನಾಗರಾಜಯ್ಯ, ಆಯೋಜನೆ: ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್, ಸ್ಥಳ: ಡಿ. ವೀರೇಂದ್ರ ಹೆಗ್ಗಡೆ ಸಭಾಂಗಣ, ಕರ್ನಾಟಕ ಜೈನ್ ಭವನ, ಕೆ.ಆರ್. ರಸ್ತೆ, ಮಧ್ಯಾಹ್ನ 2

ಆರ್. ಆರ್. ಪಾಂಗಳ ವಿರಚಿತ 'ದ್ರೌಪದಿ ಅಪಹರಣ' ಯಕ್ಷಗಾನ: ಪ್ರಸ್ತುತಿ: ಸುವರ್ಣ ಪ್ರಸಾಧನ ಯಕ್ಷರಂಗ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ಸ್ಥಳ: ವಿನಾಯಕ ದೇವಸ್ಥಾನ, ಆರ್.ಟಿ. ನಗರ ಅಂಚೆ ಕಚೇರಿ ಹಿಂಭಾಗ, ಸಂಜೆ 5.30

ಹೂಳು ನಂದಿ ಬೆಟ್ಟವಾಗಲಿಲ್ಲ..

ಒಂದನೇ ಪುಟದಿಂದ..

ಜುಲೈ ಮತ್ತು ನವೆಂಬರ್ ನಡುವೆ ಈ ಕಾಮಗಾರಿಯನ್ನು ಗುತ್ತಿಗೆದಾರರಿಗೆ ವಹಿಸಲಾಗಿದೆ. ಮಳೆಗಾದಲ್ಲೂ ಅವಕಾಶ ಕೊಟ್ಟಿದ್ದರಿಂದ ಹೂಳು ತೆಗೆಯುವ ಉದ್ದೇಶವೇ ವಿಫಲವಾಗಿದೆ. ಮಳೆಗಾಲ ಪ್ರಾರಂಭವಾಗುವ ಮೊದಲೇ ರಾಜಕಾಲುವೆಗಳ ಹೂಳು ತೆಗೆಯಲು ಬಿಬಿಎಂಪಿ ಕಾರ್ಯಯೋಜನೆಯನ್ನು ಸಿದ್ಧಪಡಿಸಿರಲಿಲ್ಲ. ಸ್ವಚ್ಛಗೊಳಿಸುವ ಕಾರ್ಯಗಳ ಸರದಿ ಪಟ್ಟಿಯನ್ನೂ ಅನುಸರಿಸಿಲ್ಲ ಎಂದು ಸಿಎಜಿ ವರದಿಯಲ್ಲಿ ಹೇಳಲಾಗಿದೆ.

ರಾಜಕಾಲುವೆ ಸುಧಾರಣೆಗೆ ಸಿದ್ಧಪಡಿಸಿದ್ದ ಸವಿವರ ಯೋಜನಾ ವರದಿಗಳು (ಡಿಪಿಆರ್) ಬಿಬಿಎಂಪಿಯಲ್ಲಿ ಲಭ್ಯವಿಲ್ಲ ಹಾಗೂ ಇದ್ದ ಏಕೈಕ ಪರಿಷ್ಕೃತ ಡಿಪಿಆರ್ ಕೂಡ ದೋಷಪೂರಿತವಾಗಿದೆ. ಇದರ ಪ್ರಕಾರವೂ ಕಾರ್ಯಗತವಾದ ಕಾಮಗಾರಿಗಳು ಅಪೂರ್ಣವಾಗಿದ್ದವು, ಕಳಪೆ ಕಾರ್ಯಕ್ಷಮತೆಯಿಂದ ಸ್ಥಗಿತಗೊಂಡಿದ್ದವು. ಇದರಿಂದ, 2013–14ರಿಂದ 2017–18ರವರೆಗೆ ಜವಾಹರಲಾಲ್ ನೆಹರೂ ರಾಷ್ಟ್ರೀಯ ನಗರ ನವೀಕರಣ ಮಿಷನ್‌ನಡಿ (ಜೆ-ನರ್ಮ್) ₹83.59 ಕೋಟಿ ಆರ್ಥಿಕ ನೆರವಿನ ನಷ್ಟವಾಗಿದೆ ಎಂದು ವರದಿ ತಿಳಿಸಿದೆ.

ಐದು ನಂದಿ ಬೆಟ್ಟ: ಬಿಬಿಎಂಪಿ ಎಂಜಿನಿಯರ್‌ಗಳು ತೋರಿಸಿರುವ ವೆಚ್ಚದಲ್ಲಿ ಹೂಳು ಎತ್ತಿದ್ದರೆ ಅದು ಬೃಹತ್ ಬೆಟ್ಟಗಳನ್ನೇ ಸೃಷ್ಟಿಸಬೇಕಿತ್ತು. ಹತ್ತಾರು ವರ್ಷಗಳಾದರೂ ಆ ಬೆಟ್ಟಗಳು ಇರಲೇಬೇಕಿತ್ತು. 2019ರಲ್ಲಿ ಬಿಬಿಎಂಪಿ ಎಂಜಿನಿಯರ್‌ಗಳು ನೀಡಿರುವ ಹೇಳಿಕೆಯಂತೆ, ₹34 ಕೋಟಿ ವೆಚ್ಚದಲ್ಲಿ 6.64 ಲಕ್ಷ ಕ್ಯೂಬಿಕ್ ಮೀಟರ್ (2.3 ಲಕ್ಷ ಟನ್) ಹೂಳು ತೆಗೆಯಲಾಗಿದೆ. ಇದರಿಂದ ಒಂದು ಎಕರೆಯಲ್ಲಿ ಸುಮಾರು 538 ಅಡಿ ಎತ್ತರದ ಬೆಟ್ಟ ಸೃಷ್ಟಿಯಾಗಬೇಕಿತ್ತು. ಇದನ್ನು ಆಧಾರವಾಗಿಟ್ಟುಕೊಂಡು 2009ರಿಂದ ವೆಚ್ಚ ಮಾಡಲಾಗಿರುವ ₹509 ಕೋಟಿಗೆ ಲೆಕ್ಕಾಚಾರ ಮಾಡಿದರೆ, 99.6 ಲಕ್ಷ ಕ್ಯೂಬಿಕ್ ಮೀಟರ್ (35 ಲಕ್ಷ ಟನ್) ಹೂಳು ತೆಗೆದಿರಬೇಕು. ಅಂದರೆ ಒಂದು ಎಕರೆಯಲ್ಲಿ 8,070 ಅಡಿ ಎತ್ತರದ ಬೆಟ್ಟವಾಗಬೇಕಿತ್ತು. ಸರಿಸುಮಾರು ಐದು ನಂದಿಬೆಟ್ಟಗಳಷ್ಟು ಎತ್ತರ.

‘ನಾವು ಯೋಜನೆ, ಸಮೀಕ್ಷೆ ಎಂದು ಸಾಕಷ್ಟು ಕಡೆ ಅಲೆದಾಡುತ್ತೇವೆ. ಎಲ್ಲಿಯೂ ಇಂತಹ ಹೂಳಿನ ಬೆಟ್ಟಗಳನ್ನು ಕಂಡಿಲ್ಲ. ನಾಗರಿಕರೊಂದಿಗೆ ಹೆಚ್ಚು ಒಡನಾಟವಿದ್ದು ಅವರ ಸಮಸ್ಯೆಗಳನ್ನು ನಮ್ಮಲ್ಲಿ ಹೇಳಿಕೊಳ್ಳುತ್ತಾರೆ. ಹೂಳು ಹಾಕಿದ್ದರೆ ಅದರ ಸುತ್ತಮುತ್ತಲಿನ ನೂರಾರು ಮೀಟರ್ ವ್ಯಾಪ್ತಿಯಲ್ಲಿ ವಾಸಿಸಲು ಸಾಧ್ಯವಾಗುವುದಿಲ್ಲ. ಮೋರಿ ನೀರಿನ ವಾಸನೆ ಬಂದಕೂಡಲೇ ಬೆಂಗಳೂರಿಗೆ ಬಂದೆವು ಎಂದು ಬಸ್‌ನಲ್ಲಿ ನಿದ್ದೆ ಮಾಡುವ ನಾವು ಎದ್ದು ಕೂರುತ್ತೇವೆ. ಸಂಚಾರ ದಟ್ಟಣೆಯ ಸಂದರ್ಭದಲ್ಲಿ ಒಂದೈದು ನಿಮಿಷ ಹೂಳು ತುಂಬಿರುವ ತೆರೆದ ರಾಜಕಾಲುವೆ ಸಮೀಪ ನಿಂತುಕೊಳ್ಳಲು ಸಾಧ್ಯವಾಗುವುದಿಲ್ಲ. ಇನ್ನು ಅದರ ಹೂಳನ್ನು ಲಕ್ಷಾಂತರ ಟನ್ ಲೆಕ್ಕದಲ್ಲಿ ಸುರಿದಾಗ ಅಲ್ಲಿ ವಾಸಿಸಲು ಸಾಧ್ಯವೇ? ಹೂಳು ಎತ್ತಿ ಹಾಕಿದ್ದೇವೆ ಎಂದು ತೋರಿಸುವುದು ದುಡ್ಡಿಗಾಗಿ. ಹೂಳನ್ನು ತಿಂದಿರುವುದು ಅವರ ಪುಸ್ತಕ, ಅವರ ದಾಖಲೆ. ಹೂಳಿನ ಹಣ ಯಾವ ಯಾವ ಹೊಟ್ಟೆ ತುಂಬಿದೆಯೋ ತಿಂದವರಿಗೇ ಗೊತ್ತು’ ಎಂದು ಪರಿಸರ ಕಾರ್ಯಕರ್ತ ರಾಮ್‌ಪ್ರಸಾದ್ ಅಸಮಾಧಾನ ವ್ಯಕ್ತಪಡಿಸಿದರು.

‘ದಶಕಗಳ ಹಿಂದೆ 15.5 ಲಕ್ಷ ಕ್ಯೂಬಿಕ್ ಅಡಿ ಹೂಳು ತೆಗೆಯಲಾಗಿದೆ ಎಂದು ಅದಕ್ಕೆ ವೆಚ್ಚವನ್ನು ಮಾಡಿದ್ದಾರೆ. ಇದಕ್ಕೆ ಬಿಲ್ ಮಾಡಿಕೊಂಡು ಹಣವನ್ನೂ ತೆಗೆದುಕೊಂಡಿದ್ದಾರೆ. ಅಂದು ಬಿಎಂಪಿ ಆಯುಕ್ತರಾಗಿದ್ದ ಜೈರಾಜ್ ಕಾಲದಲ್ಲಿ ಈ ಬಗ್ಗೆ ಪ್ರಶ್ನೆ ಮಾಡಲಾಗಿತ್ತು. ಅಷ್ಟೊಂದು ಹೂಳು ತೆಗೆದಿದ್ದೀರಲ್ಲಾ ಅದೆನ್ನೆಲ್ಲ ಎಲ್ಲಿ ಹಾಕಿದ್ದೀರಿ ಎಂದು ಕೇಳಲಾಗಿತ್ತು. 15 ಲಕ್ಷ ಕ್ಯೂಬಿಕ್ ಅಡಿ ಎಂದರೆ 1.5 ಲಕ್ಷ ಲಾರಿಗಳ ಹೂಳು. ಇಷ್ಟು ಲಾರಿ ಓಡಾಡಲು ರಸ್ತೆ ಬೇಕು, ಎಲ್ಲಾದರೂ ಹಾಕಿದ್ದರೆ ಅದು ದೊಡ್ಡ ಬೆಟ್ಟವಾಗಿರಬೇಕು. ಅದು ಎಲ್ಲಿದೆ ಎಂದು ಪ್ರಶ್ನಿಸಲಾಗಿತ್ತು. ಈ ಬಗ್ಗೆ ಲೋಕಾಯುಕ್ತಕ್ಕೆ ದೂರು ನೀಡಲಾಯಿತು. ಇವತ್ತಿನವರೆಗೂ ವಿಚಾರಣೆ ನಡೆಯುತ್ತಿದೆ. ಯಾವುದೇ ಅಧಿಕಾರಿ, ನೈಜವಾಗಿ ಎತ್ತಿರುವ ಅಥವಾ ಸಾಗಣೆ ಮಾಡಿರುವ ಹೂಳಿನ ವಿವರ ನೀಡುತ್ತಿಲ್ಲ. ಆದರೆ ಕೋಟ್ಯಂತರ ರೂಪಾಯಿಗಳನ್ನು ವೆಚ್ಚ ಮಾಡಲಾಗುತ್ತಿದೆ’ ಎಂದು ವಿಧಾನ ಪರಿಷತ್ ಸದಸ್ಯ ಪಿ.ಆರ್. ರಮೇಶ್ ಅಸಮಾಧಾನ ವ್ಯಕ್ತಪಡಿಸಿದರು.

‘ಬಿಬಿಎಂಪಿಯ ವ್ಯಾಪ್ತಿಯಲ್ಲಿ ಸುಮಾರು 840 ಕಿ.ಮೀ ರಾಜಕಾಲುವೆ ಇದೆ ಎಂದು ಅಧಿಕಾರಿಗಳು ಹೇಳುತ್ತಾರೆ. ಇದು ಇನ್ನಷ್ಟು ಹೆಚ್ಚು ಇದೆ. ಕೆಲವು ಭಾಗದಲ್ಲಿ ಗಣನೆಗೇ ತೆಗೆದುಕೊಳ್ಳದೆ, ಒತ್ತುವರಿಗೆ ಅಧಿಕಾರಿಗಳೇ ನೆರವಾಗಿದ್ದಾರೆ. ಹೂಳು ತೆಗೆಯುವ ಕಾಮಗಾರಿ ಹಣ ಲೂಟಿ ಮಾಡುವಂತಹದ್ದಾಗಿದೆ. ಹೂಳು ತೆಗೆಯದೆ ಹಣ ಮಾಡಿಕೊಳ್ಳುತ್ತಾರೆ. ಇದರಲ್ಲಿ ರಾಜಕಾರಣಿಗಳು, ಅಧಿಕಾರಿಗಳು, ಗುತ್ತಿಗೆದಾರರೆಲ್ಲರೂ ಶಾಮೀಲು. ಹೈಕೋರ್ಟ್ ಸೂಚನೆ ನೀಡಿದರೂ ಇವರು ಎಚ್ಚೆತ್ತುಕೊಂಡಿಲ್ಲ’ ಎಂದು ರಾಜಕಾಲುವೆ ಒತ್ತುವರಿ ತೆರವಿಗೆ ಹೈಕೋರ್ಟ್‌ನಲ್ಲಿ 2009ರಿಂದ ಪ್ರಕರಣ ದಾಖಲಿಸಿ ಹೋರಾಡುತ್ತಿರುವ ವಕೀಲ ಎಸ್. ಉಮೇಶ್ ಹೇಳಿದರು.

‘ಯಲಹಂಕ ಸಮೀಪದ ಬೆಲ್ಲಹಳ್ಳಿ, ಪೀಣ್ಯ ದಾಸರಹಳ್ಳಿ ಸಮೀಪದ ಮಲ್ಲಸಂದ್ರ, ಗೊಲ್ಲಹಳ್ಳಿ ಕ್ವಾರಿಗಳಲ್ಲಿ ಹೂಳನ್ನು ಹಾಕುತ್ತಿದ್ದೆವು. ಮಲ್ಲಸಂದ್ರ ಕ್ವಾರಿಯಲ್ಲಿ ಹೂಳು ವಿಲೇವಾರಿ ಮಾಡುತ್ತಿದ್ದೆವು. ಆದರೆ, ಆ ಕ್ವಾರಿ ಭರ್ತಿಯಾಗಿದ್ದು, ಅಲ್ಲಿ ಆಟದ ಮೈದಾನ ನಿರ್ಮಿಸಲಾಗಿದೆ. ಬೆಲ್ಲಹಳ್ಳಿ ಕ್ವಾರಿಯಲ್ಲಿ ಕಸ ಹಾಗೂ ಹೂಳನ್ನು ವಿಲೇವಾರಿ ಮಾಡಲು ಸ್ಥಳೀಯರ ವಿರೋಧ ಇದೆ. ನಗರದ 20–30 ಕಿ.ಮೀ. ವ್ಯಾಪ್ತಿಯಲ್ಲಿ ಎಲ್ಲೂ ಕ್ವಾರಿಗಳು ಸಿಗುತ್ತಿಲ್ಲ. ಹೂಳನ್ನು ಎಲ್ಲಿ ಹಾಕಬೇಕು ಎಂಬುದೇ ಸಮಸ್ಯೆಯಾಗಿದೆ’ ಎಂದು ಬಿಬಿಎಂಪಿ ಎಂಜಿನಿಯರ್‌ಗಳೇ ಹಲವು ಬಾರಿ ಅವಲತ್ತುಕೊಂಡಿದ್ದಾರೆ. ಹೀಗಿದ್ದಾಗ, ಲಕ್ಷಾಂತರ ಟನ್ ಹೂಳು ಹಾಕಿರುವುದಾದರೂ ಎಲ್ಲಿ ಎಂಬ ಪ್ರಶ್ನೆಗೆ ಬಿಲ್ ಅನುಮೋದಿಸಿರುವವರು ಸಹ ಉತ್ತರಿಸುವುದಿಲ್ಲ.




ಬೆಂಗಳೂರಿನ ನಾಯಂಡಹಳ್ಳಿ ಬಳಿ ರಾಜಕಾಲುವೆಯಲ್ಲಿ ಹೂಳು ತುಂಬಿರುವುದು. ಪ್ರಜಾವಾಣಿ ಚಿತ್ರ/ ಪ್ರಶಾಂತ್ ಎಚ್‌.ಜಿ.

ಹೂಳು ತೂಕ ಮಾಡೊಲ್ಲ...

‘ಬಿಬಿಎಂಪಿ ವ್ಯಾಪ್ತಿಯ ರಾಜಕಾಲುವೆಗಳ ನಿರ್ವಹಣೆಗೆ ವಾರ್ಷಿಕವಾಗಿ ₹30 ಕೋಟಿ ನೀಡಲಾಗುತ್ತಿದೆ. ಹೂಳು ತೆಗೆಯುವ ಬಗ್ಗೆ ಅಂಕಿ–ಅಂಶ ಅಥವಾ ಎಷ್ಟು ಟನ್ ತೆಗೆದರು, ಎಲ್ಲಿ ಹಾಕಿದರು ಎಂಬ ಮಾಹಿತಿಯನ್ನು ಗುತ್ತಿಗೆದಾರರು ನೀಡಬೇಕಿಲ್ಲ, ಬಿಬಿಎಂಪಿ ಅದರ ನಿರ್ವಹಣೆಯನ್ನೂ ಮಾಡುವುದಿಲ್ಲ. ಎಷ್ಟು ಹೂಳು ಅವರು ತೆಗೆಯಲಿ ಬಿಡಲಿ. ರಾಜಕಾಲುವೆಯಲ್ಲಿ ಸದಾಕಾಲ ನೀರು ಸರಾಗವಾಗಿ ಹರಿಯುವಂತೆ ಇರಬೇಕು. ಹೂಳು ಎಲ್ಲಿಯೂ ಕಾಣಬಾರದು ಅಷ್ಟೇ. ಅದರಂತೆಯೇ ನಿರ್ವಹಣೆ ಮಾಡಲಾಗುತ್ತಿದೆ. ರಾಜಕಾಲುವೆಯಲ್ಲಿ ಹೂಳು ಇರುವುದಿಲ್ಲ’ ಎಂದು ಖಡಾಖಂಡಿತವಾಗಿ ಹೇಳಿದವರು ಬಿಬಿಎಂಪಿಯ ರಾಜಕಾಲುವೆಗಳ ವಿಭಾಗದ ಮುಖ್ಯ ಎಂಜಿನಿಯರ್ ಲೋಕೇಶ್.

‘ಗುತ್ತಿಗೆದಾರರೊಂದಿಗಿನ ಒಪ್ಪಂದದಂತೆ ಇದು ಸೇವಾಮಟ್ಟದ ಕಾಮಗಾರಿ. ಇದರಲ್ಲಿ ಹೂಳಿನ ಪ್ರಮಾಣದ ಲೆಕ್ಕ ಇರಿಸುವುದಿಲ್ಲ. ಆದರೆ, ರಾಜಕಾಲುವೆಗಳು ಕಟ್ಟಡ ತ್ಯಾಜ್ಯ ಸೇರಿದಂತೆ ಎಲ್ಲ ರೀತಿಯ ಕಸ ಹಾಗೂ ಹೂಳಿನಿಂದ ಮುಕ್ತವಾಗಿರಬೇಕು’ ಎನ್ನುವುದು ಬಿಬಿಎಂಪಿ ರಾಜಕಾಲುವೆಗಳ ಕಾರ್ಯಪಾಲಕ ಎಂಜಿನಿಯರ್ ಶಿವಕುಮಾರ್ ಅವರ ಹೇಳಿಕೆ.



ಬೆಂಗಳೂರಿನ ಮೈಸೂರು ರಸ್ತೆಯ ಗಾಳಿ ಆಂಜನೇಯಸ್ವಾಮಿ ದೇವಸ್ಥಾನದ ಪಕ್ಕದಲ್ಲಿ ಇರುವ ರಾಜಕಾಲುವೆಯಲ್ಲಿ ತ್ಯಾಜ್ಯ ತುಂಬಿರುವುದು

ಬಿಬಿಎಂಪಿ ಮಾಡಿದ ವೆಚ್ಚ

ವರ್ಷ	ದುರಸ್ತಿ ಕಾಮಗಾರಿ (ಕೋಟಿ ₹ಗಳಲ್ಲಿ)	ಹೂಳು ಎತ್ತಲು
2009-10	532.35	₹199.80 ಕೋಟಿ
2010-11	199.69	₹62.64 ಕೋಟಿ
2012-13	119.73	₹21.24 ಕೋಟಿ
2013-14	88.90	₹7.59 ಕೋಟಿ
2014-15	60.48	₹3.02 ಕೋಟಿ
2015-16	148.55	₹1.22 ಕೋಟಿ + ₹26 ಕೋಟಿ (ವಾರ್ಡ್‌ವಾರು)
2016-17	195.74	₹5.02 ಕೋಟಿ
2017-18	570.98	₹4.64 ಲಕ್ಷ
2018-19	528.22	₹4.20 ಲಕ್ಷ+ ನಿರ್ವಹಣೆ ₹1.58 ಕೋಟಿ
2019-20	14.62	ಮಾಹಿತಿ ಲಭ್ಯವಿಲ್ಲ
2020-21	13.21	₹12.56 ಲಕ್ಷ+ ನಿರ್ವಹಣೆ ₹20 ಕೋಟಿ
2021-22	59.77	₹49.99 ಲಕ್ಷ
ಒಟ್ಟು	3,275.24	509.74 ಕೋಟಿ

135 ದಿನಗಳಲ್ಲಿ ತೆಗೆದರು 6 ಲಕ್ಷ ಟನ್ ಹೂಳು!

‘2018–19ರಲ್ಲಿ 440 ಕಿ.ಮೀ ಉದ್ದದ ರಾಜಕಾಲುವೆಯಲ್ಲಿ 6.64 ಲಕ್ಷ ಕ್ಯೂಬಿಕ್ ಮೀಟರ್ ಹೂಳನ್ನು 135 ದಿನಗಳಲ್ಲಿ ತೆಗೆಯಲಾಗಿದೆ. ಇದಕ್ಕೆ ₹33.99 ಕೋಟಿ ವೆಚ್ಚ ಮಾಡಲಾಗಿದೆ’ ಎಂದು ಬಿಬಿಎಂಪಿ ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳು ಮಾಹಿತಿ ನೀಡಿದ್ದರು. ಅದರ ನಂತರ ಪ್ರತಿ ವರ್ಷ ರಾಜಕಾಲುವೆಗಳ ನಿರ್ವಹಣೆಗೆ ಅಂದರೆ ಹೂಳು ಇಲ್ಲದಂತೆ ಕಾರ್ಯನಿರ್ವಹಿಸಲು ಯೋಗಾ ಆ್ಯಂಡ್ ಯೋಗಾ ಕಂಪನಿಗೆ ₹38 ಕೋಟಿಗೆ ಗುತ್ತಿಗೆ ನೀಡಲಾಗಿದೆ.

ಎಂಜಿನಿಯರ್‌ಗಳು ಹೇಳುವ ಪ್ರಕಾರ 6.64 ಲಕ್ಷ ಕ್ಯೂಬಿಕ್ ಮೀಟರ್ ಹೂಳನ್ನು, 20 ಟನ್ ಹೊರುವ 10 ಚಕ್ರಗಳ ಟ್ರಕ್‌ನಲ್ಲಿ ಸಾಗಿಸಲಾಗಿದೆ. 11,733 ಟ್ರಕ್‌ಗಳು ಹೂಳು ತುಂಬಿಕೊಂಡು ಹೋಗಿವೆ. ಪ್ರತಿ ನಿತ್ಯ 86ರಿಂದ 87 ಟ್ರಕ್‌ಗಳು ಹೂಳು ಸಾಗಿಸಿವೆ.

‘ಇಷ್ಟೊಂದು ಹೂಳನ್ನು ತೆಗೆದಿದ್ದಾರೆ ಎಂದಾದರೆ ಆ ಹೂಳು ಹಾಕಿದ ಪ್ರದೇಶ ರಾಮನಗರ ಬೆಟ್ಟದಂತಾಗಬೇಕು. ಸುಮಾರು 500 ಅಡಿ ಎತ್ತರದ ಬೆಟ್ಟವಾಗಬೇಕು. ಆ ಬೆಟ್ಟ ಎಲ್ಲೂ ಕಾಣುತ್ತಲೇ ಇಲ್ಲ. 135 ದಿನಗಳಲ್ಲಿ ಇಷ್ಟು ಪ್ರಮಾಣದ ಹೂಳು ತೆಗೆದಿದ್ದರೆ, ಅಷ್ಟೊಂದು ಟಿಪ್ಪರ್‌ಗಳು ಅಥವಾ ಬೃಹತ್ ಟ್ರಕ್‌ಗಳು ಸಂಚರಿಸಿದ್ದರೆ ರಸ್ತೆಗಳು ಹಾಳಾಗಿರುತ್ತವೆ. ಇದೆಲ್ಲ ಸಾರ್ವಜನಿಕರ ಗಮನಕ್ಕೆ ಬಂದಿರಬೇಕು. ಆದರೆ ಇಂತಹ ಪ್ರಕರಣ ಎಲ್ಲೂ ದಾಖಲಾಗಿಲ್ಲ. ಅಂದರೆ ಈ ಹೂಳನ್ನು ಅವರು ತೆಗೆದಿಲ್ಲ. ಕೇವಲ ದಾಖಲೆಯಲ್ಲಿ, ಪುಸ್ತಕದಲ್ಲಿ ಅದನ್ನು ನಮೂದಿಸಿದ್ದಾರೆ ಎಂದೇ ಅರ್ಥ’ ಎಂದು ಮಾಹಿತಿ ಹಕ್ಕು ಅಧ್ಯಯನ ಕೇಂದ್ರದ ಎಸ್. ಅಮರೇಶ್ ದೂರುತ್ತಾರೆ.

‘ಒಂದು ವೇಳೆ ಇಷ್ಟೊಂದು ದೊಡ್ಡ ಪ್ರಮಾಣದ ಹೂಳು ಒಂದು ಪ್ರದೇಶದಲ್ಲಿ ಸುರಿದಿದ್ದರೆ ಅದರಿಂದ ದುರ್ವಾಸನೆ ಬಂದಿರುತ್ತದೆ. ಸುತ್ತಮುತ್ತಲಿನವರು ಆಕ್ಷೇಪ ವ್ಯಕ್ತಪಡಿಸಿರುತ್ತಾರೆ. ಹೂಳು ಸುರಿಯುವ ಮುನ್ನ ಸ್ಥಳೀಯರಿಂದ ನಿರಾಕ್ಷೇಪಣೆ ಪತ್ರ ಪಡೆಯಬೇಕಾಗುತ್ತದೆ. ಅಂತಹ ಪತ್ರದ ಮಾಹಿತಿಯೂ ಇಲ್ಲ. ಹೀಗಾಗಿ ನಾನು 2019ರ ಮೇ 20ರಂದು ಎಸಿಬಿಗೆ ದೂರು ನೀಡಿದ್ದೆ. ಈ ಅವ್ಯವಹಾರದ ಬಗ್ಗೆ ತನಿಖೆ ನಡೆಸುವಂತೆ ಕೋರಲಾಗಿತ್ತು. ನಗರಾಭಿವೃದ್ಧಿ ಇಲಾಖೆಯ ಮುಖ್ಯ ಜಾಗೃತ ಅಧಿಕಾರಿಯಿಂದ ಈ ಪ್ರಕರಣದ ವಿಚಾರಣೆಯೂ ನಡೆದಿತ್ತು. ಆದರೆ ನಂತರ ಪ್ರಕರಣ ಎಸಿಬಿಯಲ್ಲೇ ಉಳಿದಿತ್ತು. ಎಸಿಬಿಯ ಎಲ್ಲ ಪ್ರಕರಣಗಳು ಇದೀಗ ಲೋಕಾಯುಕ್ತಕ್ಕೆ ವರ್ಗಾವಣೆಯಾಗಿದ್ದು, ಅವರು ಮುಂದುವರಿದು ತನಿಖೆ ನಡೆಸುವ ವಿಶ್ವಾಸವಿದೆ’ ಎಂದರು.



ದೀಪಾವಳಿ ಹಬ್ಬದ ಕಾರಣ ಹೊರ ಊರುಗಳಿಗೆ ಹೋಗುವುದಕ್ಕಾಗಿ ಶನಿವಾರ ಬೆಂಗಳೂರಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ ಕಂಡ ಜನಜಂಗುಳಿ – ಪ್ರಜಾವಾಣಿ ಚಿತ್ರ

ವಿಮಾನಕ್ಕಿಂತ ಬಸ್ ಪ್ರಯಾಣ ದುಬಾರಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಸಾಲು ಸಾಲು ರಜೆಗಳಲ್ಲಿ ಬಸ್‌ನಲ್ಲಿ ಪ್ರಯಾಣ ಮಾಡುವರಿಗೆ ಟಿಕೆಟ್ ದರ ಏರಿಕೆಯ ಬಿಸಿ ತಟ್ಟಿದೆ. ಸಾಮಾನ್ಯ ದಿನಗಳ ದರಕ್ಕೆ ಹೋಲಿಸಿದರೆ ಮೂರರಿಂದ ನಾಲ್ಕು ಪಟ್ಟು ಹೆಚ್ಚಿಸಲಾಗಿದ್ದು, ವಿಮಾನ ಪ್ರಯಾಣ ದರಕ್ಕಿಂತಲೂ ಬಸ್ ಪ್ರಯಾಣ ದರ ದುಬಾರಿಯಾಗಿದೆ.

ಹಬ್ಬ ಮತ್ತು ಸರ್ಕಾರಿ ರಜೆಗಳ ಸಂದರ್ಭದಲ್ಲಿ ಪ್ರಯಾಣ ದರ ಹೆಚ್ಚಳವಾಗದಂತೆ ಕ್ರಮ ಕೈಗೊಳ್ಳುವುದಾಗಿ ಸಾರಿಗೆ ಸಚಿವ ಬಿ. ಶ್ರೀರಾಮುಲು ಭರವಸೆ ನೀಡಿದ್ದರು. ಈ ಸಂಬಂಧ ಬಸ್ ಮಾಲೀಕರ ಸಭೆಗಳನ್ನೂ ನಡೆಸಿ ಸಾರಿಗೆ ಅಧಿಕಾರಿಗಳು ಎಚ್ಚರಿಕೆ ನೀಡಿದ್ದರು. ಇದ್ಯಾವುದಕ್ಕೂ ಕಿಮ್ಮತ್ತು ನೀಡದ ಖಾಸಗಿ ಬಸ್ ಆಪರೇಟರ್‌ಗಳು ಮನಸೋಇಚ್ಛೆ ಪ್ರಯಾಣ ದರ ಹೆಚ್ಚಳ ಮಾಡಿದ್ದಾರೆ.

ಬೆಂಗಳೂರಿನಿಂದ ಹುಬ್ಬಳ್ಳಿ ಮತ್ತು ಬೆಳಗಾವಿಗೆ ಶನಿವಾರ ಪ್ರಯಾಣ ಮಾಡುವವರಿಗೆ ಗರಿಷ್ಠ ದರ ₹7,999 ಇತ್ತು. ಕನಿಷ್ಠ ದರ ₹3,500 ದರ ಇತ್ತು. ಮಂಗಳೂರಿಗೆ ಗರಿಷ್ಠ ದರ ₹3 ಸಾವಿರ, ಮೈಸೂರಿಗೆ ₹2 ಸಾವಿರ, ಬಾಗಲಕೋಟೆಗೆ ₹2,500, ಶಿವಮೊಗ್ಗಕ್ಕೆ ₹2,199, ದಾವಣಗೆರೆಗೆ ₹2199, ಶಿರಸಿಗೆ ₹2,250 ದರ ಇತ್ತು.

ಬೆಂಗಳೂರಿನಿಂದ ಮುಂಬೈಗೆ ಸ್ಲೀಪರ್ ಬಸ್‌ನಲ್ಲಿ ಮೇಲ್ಭಾಗದ (ಅಪ್ಪರ್) ಸೀಟುಗಳಿಗೆ ₹7,999 ಇದ್ದರೆ, ಕೆಳ ಭಾಗದ(ಲೋವರ್) ಸೀಟುಗಳಿಗೆ ₹9,999 ದರ ನಿಗದಿ ಮಾಡಲಾಗಿದೆ. ಬೆಂಗಳೂರಿನಿಂದ ಮುಂಬೈಗೆ ನೇರ ತೆರಳುವ ಬಸ್‌ಗಳಲ್ಲಿ ಹುಬ್ಬಳ್ಳಿ ಅಥವಾ ಬೆಳಗಾವಿಗೆ ಪ್ರಯಾಣಿಸುವ ಪ್ರಯಾಣಿಕರಿಂದಲೂ ಅಷ್ಟೇ ದರ ಪಡೆಯಲಾಗುತ್ತಿದೆ. ಈ ದರ ವಿಮಾನ ಪ್ರಯಾಣಕ್ಕಿಂತಲೂ ದುಬಾರಿ ಇದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ ಮುಂಬೈಗೆ ಶನಿವಾರ ರಾತ್ರಿ ಹೊರಡುವ ವಿಮಾನಗಳಲ್ಲಿ ಪ್ರಯಾಣ ದರ ₹5,745 ಇತ್ತು. ಬಸ್ ಪ್ರಯಾಣ ದರ ಇದಕ್ಕಿಂತ ದುಬಾರಿ ಇರುವುದು ಪ್ರಯಾಣಿಕರನ್ನು ಕಂಗಾಲಾಗಿಸಿದೆ.

ಪರವಾನಗಿ ರದ್ದು: ಶ್ರೀರಾಮುಲು ಎಚ್ಚರಿಕೆ

ಬಳ್ಳಾರಿ: ‘ಹಬ್ಬದ ನೆಪದಲ್ಲಿ ಖಾಸಗಿ ಬಸ್‌ಗಳಲ್ಲಿ ಪ್ರಯಾಣಿಕರಿಂದ ಹೆಚ್ಚು ದರ ವಸೂಲಿ ಮಾಡಿದರೆ ಅಂತಹ ಬಸ್‌ಗಳ ಪರವಾನಗಿ ರದ್ದುಪಡಿಸಲಾಗುವುದು’ ಎಂದು ಸಾರಿಗೆ ಸಚಿವ ಬಿ. ಶ್ರೀರಾಮುಲು ಎಚ್ಚರಿಕೆ ನೀಡಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಶನಿವಾರ ಮಾತನಾಡಿದ ಅವರು, ‘ಖಾಸಗಿಯವರು ಯಾವುದೇ ಕಾರಣಕ್ಕೂ ಹೆಚ್ಚಿನ ದರ ಪಡೆಯುವಂತಿಲ್ಲ. ಇದರ ಮೇಲೆ ನಿಗಾ ಇಡಲು ಕಾರ್ಯಪಡೆ ರಚಿಸಲಾಗಿದೆ’ ಎಂದು ತಿಳಿಸಿದರು.

150 ಬಸ್‌ಗಳ ವಿರುದ್ಧ ಪ್ರಕರಣ

ದರ ಏರಿಕೆ ವಿರುದ್ಧ ಕಾರ್ಯಾಚರಣೆ ಆರಂಭಿಸಿರುವ ಸಾರಿಗೆ ಇಲಾಖೆ ಅಧಿಕಾರಿಗಳು, 150 ಬಸ್‌ಗಳ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

‘ಪದೇ ಪದೇ ಎಚ್ಚರಿಕೆ ನೀಡಿದರೂ ಆನ್‌ಲೈನ್‌ನಲ್ಲಿ ದುಬಾರಿ ದರ ನಿಗದಿ ಮಾಡಿಕೊಂಡು ಪ್ರಯಾಣಿಕರಿಂದ ವಸೂಲಿ ಮಾಡಲಾಗುತ್ತಿದೆ. ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದು ದರ ನಿಯಂತ್ರಣ ಸಂಬಂಧ ಮುಂದಿನ ವಾರವೇ ಸೂಕ್ತ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಸಾರಿಗೆ ಆಯುಕ್ತ ಟಿ.ಎಚ್‌.ಎಂ. ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿಗೆ 28,000 ಅರ್ಜಿ 29ಕ್ಕೆ ಪಟ್ಟಿ ಬಿಡುಗಡೆ: ಸಚಿವ ಸುನಿಲ್



ಉಡುಪಿ: ರಾಜ್ಯೋತ್ಸವ ಪ್ರಶಸ್ತಿಗೆ 28 ಸಾವಿರ ಅರ್ಜಿಗಳು ಬಂದಿದ್ದು ತೆರೆ ಮರೆಯ ಸಾಧಕರನ್ನು ಗುರುತಿಸಿ ಪ್ರಶಸ್ತಿ ನೀಡಲಾಗುವುದು ಎಂದು ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ವಿ.ಸುನಿಲ್ ಕುಮಾರ್ ತಿಳಿಸಿದರು.

ಶನಿವಾರ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಗೆ ಸಮಿತಿ ರಚಿಸಲಾಗಿದ್ದು, ಒತ್ತಡಕ್ಕೆ ಮಣಿಯದೆ ಅರ್ಹರನ್ನು ಆಯ್ಕೆ ಮಾಡಲಾಗುವುದು. ಅ.29ಕ್ಕೆ ಪ್ರಶಸ್ತಿ ಪುರಸ್ಕೃತರ ಪಟ್ಟಿ ಪ್ರಕಟವಾಗಲಿದೆ ಎಂದು ತಿಳಿಸಿದರು.

ಗುಂಡಣ್ಣ



25 ವರ್ಷಗಳ ಹಿಂದೆ

ಗುರುವಾರ, 23-10-1997

● ಮೃದು ಧೋರಣೆ ತಾಳಿದರೆ ವೀರಪ್ಪನ್ ಶರಣಾಗಬಹುದು- ಕೃಪಾಕರ, ಸೇನಾನಿ

ಬೆಂಗಳೂರು, ಅಕ್ಟೋಬರ್ 22– ಸರ್ಕಾರವು ದಂತಚೋರ ವೀರಪ್ಪನ್ ಶರಣಾಗತಿ ವಿಷಯದಲ್ಲಿ ಮೃದುಧೋರಣೆ ತೋರಿದರೆ ಆತ ಶರಣಾಗಬಹುದು ಎಂದು ವೀರಪ್ಪನ್ ಹಿಡಿತದಿಂದ ಸುರಕ್ಷಿತವಾಗಿ ಹಿಂತಿರುಗಿದ ಖ್ಯಾತ ಛಾಯಾಚಿತ್ರಗ್ರಾಹಕ ಕೃಪಾಕರ ಅಭಿಪ್ರಾಯಪಟ್ಟಿದ್ದಾರೆ.

‘ಇಳಿ ವಯಸ್ಸಿನಲ್ಲಿರುವ ವೀರಪ್ಪನ್ ತನ್ನ ಜೀವನದ ಸಂದಿಗ್ದ ಕಾಲದಲ್ಲಿದ್ದು, ಸರ್ಕಾರ ಜೀವರಕ್ಷಣೆ ಭರವಸೆ ನೀಡಿದರೆ ನಾಗರಿಕ ಜೀವನ ನಡೆಸಲು ಆಸಕ್ತಿ ತೋರಿದ್ದಾನೆ. ಮುಖ್ಯವಾಹಿನಿಗೆ ಬರಲು ಇಚ್ಛಿಸಿರುವ ಆತ, ಸರ್ಕಾರದಿಂದ ಬರುವ ಆಶಾದಾಯಕ ಉತ್ತರದ ನಿರೀಕ್ಷೆಯಲ್ಲಿದ್ದಾನೆ’ ಎಂದು ಅವರು ಇಲ್ಲಿ ನುಡಿದರು.

50 ವರ್ಷಗಳ ಹಿಂದೆ

ಸೋಮವಾರ, 23-10-1972

● ಜತ್ತಿ: ಒರಿಸ್ಸಾ ರಾಜ್ಯಪಾಲ

ನವದೆಹಲಿ, ಅಕ್ಟೋಬರ್ 22– ಪುದುಚೇರಿಯ ಲೆಫ್ಟಿನೆಂಟ್ ಗೌರ್ನರ್ ಬಿ.ಡಿ. ಜತ್ತಿಯವರು ಒರಿಸ್ಸಾದ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆಂದು ಇಂದು ಇಲ್ಲಿ ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.

ಮಾಜಿ ಸಂಸತ್ ಸದಸ್ಯರಾದ ಆಂಧ್ರಪ್ರದೇಶದ ಅಕ್ಬರ್ ಅಲೀ ಖಾನ್ ಅವರು ಉತ್ತರಪ್ರದೇಶದ ರಾಜ್ಯಪಾಲರಾಗಿ ನೇಮಕಗೊಂಡಿದ್ದಾರೆಂದು ಪ್ರಕಟಣೆ ತಿಳಿಸಿದೆ. ಅಕ್ಬರ್ ಅಲೀ ಖಾನ್ ಅವರು 2 ತಿಂಗಳ ಹಿಂದೆ ನಿವೃತ್ತಿ ಹೊಂದಿದ ಬಿ. ಗೋಪಾಲ್ ರೆಡ್ಡಿಯವರ ಸ್ಥಾನದಲ್ಲಿ ನೇಮಕಗೊಂಡಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಭಾನುವಾರ ಅಕ್ಟೋಬರ್ 23, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ತ್ರಯೋದಶಿ ಗಂ. 18-04 ನಕ್ಷತ್ರ: ಉತ್ತರಫಲ್ಗುನಿ ಗಂ. 14-34 ಯೋಗ: ಐಂದ್ರ ಗಂ. 16-06, ಕರಣ: ಗರಜೆ ಗಂ. 06-08, ತುಲಾ ಮಾಸದ 05 ನೇ ದಿನ.
ರಾಹುಕಾಲ : ಸಾಯಂಕಾಲ 04-30 – 06:00
ಸೂರ್ಯೋದಯ : 06-26 ಸೂರ್ಯಾಸ್ತ : 06-04
ಮುಸ್ಲಿಂ ದಿನಾಂಕ : 26 ರಬಿಉಲ್ಲಾವಲ್
ದಿನ ವಿಶೇಷ : ಧನ ತ್ರಯೋದಶಿ, ಕಲಿ ಚತುರ್ದಶಿ ಅದೃಷ್ಟ ಸಂಖ್ಯೆ : 4, 5

ಮೇಷ: ನಿಮ್ಮ ಹೋರಾಟದ ಬದುಕಿನಲ್ಲಿ ಇಂದು ಹೊಸ ಜವಾಬ್ದಾರಿಯೊಂದನ್ನು ವಹಿಸಿಕೊಳ್ಳಬೇಕಾಗುವುದು. ಸಹೋದರರ ಸಲಹೆಯನ್ನು ಪಡೆದು ನಿಮ್ಮ ಹಳೆಯ ಯೋಜನೆಗಳಿಗೆ ಮರು ಜೀವ ಕೊಡಲು ನಿಶ್ಚಯಿಸಬಹುದು.

ವೃಷಭ: ಕಾಗದದ ಉದ್ಯಮದವರಿಗೆ ಅಧಿಕ ಲಾಭ. ಕೆಲವೊಂದು ಸಾಂಸಾರಿಕ ಸಮಸ್ಯೆಗಳಿಗೆ ನೀವು ಭಾವುಕರಾಗುವಂತಾಗುವುದು. ಸರಿಸಮಾನವಾದ ಮನಸ್ಸನ್ನು ಹೊಂದಿದವರಲ್ಲಿ ಒಪ್ಪಂದದ ವ್ಯವಹಾರಗಳನ್ನು ನಡೆಸಬಹುದು.

ಮಿಥುನ: ಭವಿಷ್ಯದ ಬಗ್ಗೆ ಅನಗತ್ಯ ಚಿಂತಿಸುವುದನ್ನು ಬಿಟ್ಟು ಹಿರಿಯರ ಹೇಳಿಕೆಯಂತೆ ಈ ದಿನದ ಅಗತ್ಯಗಳನ್ನು ಪೂರೈಸುವ ಕಡೆಗೆ ಹೆಚ್ಚಿನ ಗಮನ ಹರಿಸಿ. ಚರ್ಮಕ್ಕೆ ಸಂಬಂಧಿಸಿದ ಅನಾರೋಗ್ಯ ಎದುರಾಗಬಹುದು.

ಕರ್ಕಾಟಕ: ಸ್ನೇಹಿತರೊಡನೆ ಪ್ರವಾಸವನ್ನು ಹಮ್ಮಿಕೊಳ್ಳುವ ಮನಸ್ಸಾಗುವುದು. ಮನೆಯಲ್ಲಿ ನಡೆಯಬೇಕಿರುವ ಮಂಗಳ ಕಾರ್ಯಗಳ ಬಗ್ಗೆ ಕೆಲವು ತೀರ್ಮಾನ ತೆಗೆದುಕೊಳ್ಳಲು ಸುದಿನ. ತರಕಾರಿ ವ್ಯಾಪಾರಿಗಳಿಗೆ ಲಾಭ ಉಂಟಾಗುವುದು.

ಸಿಂಹ: ರಜೆಯ ದಿನವಾದರೂ ಅನಿವಾರ್ಯ ಕಾರಣದಿಂದಾಗಿ ಕಾರ್ಯಪ್ರವೃತ್ತರಾಗಬೇಕಾಗುವುದು. ಎಲೆಕ್ಟ್ರಿಕಲ್ ವಸ್ತುಗಳ ವ್ಯಾಪಾರ ಆರಂಭಿಸುವ ಬಗ್ಗೆ ಯೋಚಿಸಬಹುದು. ವ್ಯವಹಾರ ನಡೆಸುವುದಕ್ಕಾಗಿ ಸಾಲ ತೆಗೆದುಕೊಳ್ಳಬೇಡಿ.

ಕನ್ಯಾ: ಸಂಸಾರದಲ್ಲಿ ಹೆಚ್ಚಿನ ಸಾಮರಸ್ಯವಿದ್ದು ಮನಸ್ಸಿಗೆ ಶಾಂತಿ ನೆಮ್ಮದಿಗಳು ಉಂಟಾಗಲಿದೆ. ಪ್ರೀತಿ ಪಾತ್ರರಲ್ಲಿ ನಿಮ್ಮ ಭಾವನೆಗಳನ್ನು ಹಂಚಿಕೊಳ್ಳಲು ಈ ದಿನ ಸೂಕ್ತ ಸಮಯವಾಗಿದೆ. ಕೇಸರಿ ಬಣ್ಣ ಶುಭವನ್ನು ಉಂಟುಮಾಡುವುದು.

ತುಲಾ: ಧಾರ್ಮಿಕ ಕಾರ್ಯದಿಂದ ದೊರಕುವ ಸತ್ಫಲಗಳು ಅನುಭವಕ್ಕೆ ಬರಲಿದೆ. ಸುದ್ದಿಗೋಷ್ಠಿಗಳಲ್ಲಿ ಭಾಗವಹಿಸುವ ಉತ್ತಮ ಅವಕಾಶ. ಮಗನ ಮುಂದಿನ ಓದಿನ ವಿಷಯ ಮನೆಯಲ್ಲಿ ಚರ್ಚೆಗೆ ಬರುವುದು.

ವೃಶ್ಚಿಕ: ನೂತನ ಸಂಬಂಧ ಬೆಳೆಸುವ ವಿಚಾರವಾಗಿ ಮನಸ್ಸಿನಲ್ಲಿ ಯಾವುದೇ ಗೊಂದಲಗಳಿರುವುದಿಲ್ಲ. ನಿಮ್ಮ ಶ್ರಮಕ್ಕೆ ಅನುಗುಣವಾಗಿ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದು. ಟ್ರಾವೆಲ್ ಏಜೆನ್ಸಿಯವರಿಗೆ ಉತ್ತಮ ದಿನಗಳು.

ಧನು: ರಾಜಕೀಯ ವಲಯದಲ್ಲಿ ಉಂಟಾಗುವ ಸಣ್ಣಪುಟ್ಟ ಬದಲಾವಣೆಯನ್ನೂ ಗಮನಿಸಿ, ನಂತರದಲ್ಲಿ ಬೆಂಬಲಿಸುವ ಕೆಲಸ ಮಾಡಿ. ಪ್ರಯಾಣ ಮತ್ತು ಹೊಸಬರ ಪರಿಚಯ ನಿಮ್ಮ ಮುಂದಿನ ಯೋಜನೆಗಳಿಗೆ ಅನುಕೂಲ.

ಮಕರ: ಮನದಲ್ಲಿ ಸಲ್ಲದ ವಿಚಾರಗಳನ್ನು ತುಂಬಿಕೊಳ್ಳದೇ, ಸಂತೋಷಮಯವಾಗಿ ಇರಲು ಯತ್ನಿಸಿ. ಕೃಷಿ ಪ್ರದೇಶವನ್ನು ವ್ಯವಸ್ಥಿತ ರೀತಿಯಲ್ಲಿ ಇಟ್ಟುಕೊಳ್ಳಲು ತೀರ್ಮಾನಿಸುವುದು ಉತ್ತಮ. ನಿಮ್ಮ ಅದೃಷ್ಟ ಪರೀಕ್ಷೆ ನಡೆಯಲಿದೆ.


ಕುಂಭ: ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಅವಲೋಕಿಸಿಕೊಂಡು ಉಳಿತಾಯದ ತೀರ್ಮಾನ ಕೈಗೊಳ್ಳುವುದು ಉತ್ತಮ. ಸ್ಪರ್ಧಾತ್ಮಕ ವಿಚಾರಗಳಲ್ಲಿ ಪ್ರಬಲರಾದ ಮತ್ತು ಚಾಣಾಕ್ಷರಾದ ಪ್ರತಿಸ್ಪರ್ಧಿಗಳು ಎದುರಾಗುವರು.

ಮೀನ: ಮುಕ್ತ ಮಾತುಕತೆ ಮೂಲಕ ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಿ, ಇರುವ ಅವಕಾಶಗಳನ್ನು ಮುಂದುವರಿಸುವುದು ಬುದ್ಧಿವಂತಿಕೆಯ ಲಕ್ಷಣ. ಈ ದಿನದ ಕೆಲ ಅಂಶಗಳ ಬಗ್ಗೆ ಗಂಭೀರವಾದ ನಿಲುವು ತಾಳ ಬೇಕಾಗುವುದು.

ಪದಬಂಧ 5117 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಯೋಗವಿದ್ದರೆ ಮಾತ್ರ ಪ್ರಯೋಜನಕ್ಕೆ ಬರುವುದು (4)
3.ಓಲಗದ ಸದ್ದಿರುವ ರಾಜ ದರ್ಬಾರು! (4)
5.ಒಲುಮೆಯಿಂದ ಮಾಡಿರುವ ಒತ್ತಾಯ (3)
6.ಕಾರಿದ್ದವನು ಹಿಡಿದುಕೊಡಿರುವ ಅಂಕವಣೆ (3)
8.ಮರುಳು ಮಾಡುತ್ತಿರುವ ನೀಚ! (3)
9.ಒಂದು ಗಂಟೆಯ ಅರವತ್ತನೆ ಒಂದು ಭಾಗದಷ್ಟು ಕಾಲ (3)
10.ನಗ ಖರೀದಿಗಾಗಿ ಕೈಯ್ಯಲ್ಲಿರುವ ದುಡ್ಡು (3)
12.ನಾಲಿಗೆಯು ತಾಲುವಿಗೆ ತಗಲಿ ಉಚ್ಚರಿಸಲ್ಪಡುವ ವರ್ಣ (3)
14.ಈತ ಯುದ್ಧಕ್ಕೆ ಅಂಜುವವನು (4)
15.ಅದೃಷ್ಟವೇ ಇಲ್ಲದವನೀತ (4)

ಮೇಲಿಂದ ಕೆಳಕ್ಕೆ
1. ಬೇರೆಯವರಿಗೆ ಸಹಾಯ ಮಾಡುವವನು (4)
2.ಛೇ!ಜಗಲಿಯ ಆಜುಬಾಜು ಎಲ್ಲಾ ಕೊಳೆಕಸ! (3)
3.ಜುಲುಮೆಯಿಂದ ಮೂಡಬಲ್ಲುದೇ ಪ್ರೀತಿ? (3)
4.ಕುಳ್ಳನಲ್ಲ!ಭಾರೀ ಶ್ರೀಮಂತ! (4)
7.ಹರುಷಪಡುತ್ತಿರುವ ಗಂಡು ವ್ಯಕ್ತಿ! (3)
8.ಸನ್ಮಾನ ಮಾಡಿದರೂ ಸಹ ಈ ದುಗುಡವೇ? (3)
9.ಉತ್ತರವೇ ಇಲ್ಲದ ಮೌನ (4)
11.ಕೆಟ್ಟ ಅದೃಷ್ಟವಿದು (4)
12.ಮಾತಾಡಿ ಎಂದಾಗ ಹೊರಹೊಮ್ಮಿದ ಮಾತೃಭಾಷೆ (3)
13.ವ್ಯವಸಾಯಗಾರ ತೋಡಿಕೊಂಡಿರುವ ದುಃಖ (3)



5116ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಮಪದ 4.ಕಟಾಕ್ಷ
5.ನಿರ್ಗತ 7.ಸರಸ
9.ಸ್ವರ್ಗ 10.ಜೇರಿಗೆ
13.ಸುಜನ 15.ವಲ್ಮೀಕ
17.ಬುದ್ಧದ 18.ವಿಧಾನಸೌಧ

ಮೇಲಿಂದ ಕೆಳಕ್ಕೆ:
1.ಪಕ್ಷ 2.ಮತ್ಸರ
3.ದನಿ 4.ಕಲ್ಲೋಲ
6.ತಕ್ಕಲು 7.ಸವಿಗನಸು
8.ಸಹಜೀವನ 11.ಪ್ರಭವ
12.ಪ್ರಮಾದ 14.ಜವಾನ
16.ಕವಿ 17.ಬುಧ

ಸುಡೊಕು 5503

	9	2		3			6	8
4					7	3		9
		3		9		1		7
		4			9		8	
	2			5				3
8			2				4	
	4			2		8		
			9					5
2		8		7			3	

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5502 ಸುಡೊಕು

7	9	4	3	5	8	6	2	1
3	8	5	2	6	1	7	9	4
2	1	6	4	9	7	8	3	5
5	2	7	8	3	9	1	4	6
4	6	1	7	2	5	3	8	9
9	3	8	6	1	4	5	7	2
1	5	2	9	8	3	4	6	7
8	4	9	5	7	6	2	1	3
6	7	3	1	4	2	9	5	8

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ರಾಯಚೂರಿನಲ್ಲಿ 'ಭಾರತ್ ಜೋಡೊ' ಯಾತ್ರೆಗೆ ಅದ್ಧೂರಿ ಬೀಳ್ಕೊಡುಗೆ

ಕರ್ನಾಟಕದ ಜೊತೆ ಅನ್ಯೋನ್ಯ ಸಂಬಂಧ: ರಾಹುಲ್

ಪ್ರಜಾವಾಣಿ ವಾರ್ತೆ



ಭಾರತ್ ಜೋಡೋ ಯಾತ್ರೆಯಲ್ಲಿ ಅಂಗವಾಗಿ ಮಾಜಿ ಯೋಧರು ರಾಹುಲ್ ಗಾಂಧಿ ಅವರ ಜತೆ ಶನಿವಾರ ಹೆಜ್ಜೆ ಹಾಕಿದರು.

ರಾಯಚೂರು: ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ನೇತೃತ್ವದಲ್ಲಿ ಕರ್ನಾಟಕದಲ್ಲಿ ನಡೆದ ಭಾರತ್ ಜೋಡೊ ಯಾತ್ರೆಯು ಶನಿವಾರ ಕೊನೆಗೊಂಡಿದ್ದು ರಾಯಚೂರಿನಲ್ಲಿ ಲಕ್ಷಾಂತರ ಜನರು ಅವರೊಂದಿಗೆ ಹೆಜ್ಜೆಹಾಕಿ, ಅದ್ಧೂರಿಯಾಗಿ ಬೀಳ್ಕೊಟ್ಟರು.

ನಗರದ ವಾಲ್ಕಟ್ ಮೈದಾನದಲ್ಲಿ ಸಂಜೆ ನಡೆದ ಸಾರ್ವಜನಿಕ ಸಭೆಯಲ್ಲಿ ರಾಹುಲ್‌ಗಾಂಧಿ ಮಾತನಾಡಿ, 'ನನ್ನ ಕುಟುಂಬಕ್ಕೂ ಮತ್ತು ಕರ್ನಾಟಕಕ್ಕೂ ಅನ್ಯೋನ್ಯ ಸಂಬಂಧವಿದೆ. ಮಾಜಿ ಪ್ರಧಾನಿ ಇಂದಿರಾಗಾಂಧಿ ಅವರನ್ನು ಚಿಕ್ಕಮಗಳೂರಿನಿಂದ ಗೆಲ್ಲಿಸಿದ್ದನ್ನು ನಾವು ಎಂದಿಗೂ ಮರೆಯುವುದಿಲ್ಲ. ಅದೇ ರೀತಿ ತಾಯಿ ಸೋನಿಯಾಗಾಂಧಿ ಅವರನ್ನು ಬಳ್ಳಾರಿಯಿಂದ ಗೆಲ್ಲಿಸಿದ್ದನ್ನು ಯಾವುದೇ ಕಾರಣಕ್ಕೂ ಮರೆಯುವುದಿಲ್ಲ' ಎಂದರು. ಬಳಿಕ ದೀಪಾವಳಿ ಹಬ್ಬದ ಶುಭಾಶಯವನ್ನೂ ಕೋರಿದರು.

'ಕರ್ನಾಟಕದಲ್ಲಿ 500 ಕಿ.ಮೀ.ಗಿಂತ ಹೆಚ್ಚು ದೂರ ಯಾತ್ರೆ ಮಾಡಿದ್ದು, ನಾಳೆ ಮುಂದಿನ ರಾಜ್ಯಕ್ಕೆ ಹೋಗುತ್ತೇವೆ. ಪಾದಯಾತ್ರೆಯುದ್ದಕ್ಕೂ ಎಲ್ಲ ಜನರು ಶಕ್ತಿ, ಪ್ರೀತಿ ನೀಡಿದ್ದು, ಆಭಾರಿಯಾಗಿದ್ದೇನೆ. ಬಿಸಿಲು, ಚಳಿ, ಮಳೆ, ಬಿರುಗಾಳಿಯನ್ನು ಲೆಕ್ಕಿಸದೆ ಈ ಪಾದಯಾತ್ರೆ ಮಾಡಿದ್ದೇವೆ. ಯಾವ ಶಕ್ತಿಯಿಂದಲೂ ಪಾದಯಾತ್ರೆ ತಡೆಯಲಾಗದು. ಜಮ್ಮು-ಕಾಶ್ಮೀರದಲ್ಲೇ ಯಾತ್ರೆ ಮುಗಿಯಲಿದೆ' ಎಂದು ಅವರು ಗಟ್ಟಿಧ್ವನಿಯಲ್ಲಿ ಹೇಳಿದಾಗ, ಜನರು ಚಪ್ಪಾಳೆ ಹೊಡೆದು ಕೂಗಿದರು.

'ಬಿಜೆಪಿ, ಆರ್‌ಎಸ್‌ಎಸ್‌ನವರು ದೇಶದಲ್ಲಿ ಕೋಮು-ಅಸೂಯೆ ಮೂಡಿಸುವ ಮತ್ತು ಅಣ್ಣತಮ್ಮಂದಿರಲ್ಲಿ ಜಗಳ ಹಚ್ಚುವ ಕೆಲಸ ಮಾಡುತ್ತಿದ್ದಾರೆ. ದೇಶ ವಿಭಜಿಸುವ ಕೆಲಸ ತಡೆಯಲು ಭಾರತ ಜೋಡೊ ಪಾದಯಾತ್ರೆ ನಡೆದಿದೆ. ಇಡೀ ಮನುಕುಲಕ್ಕೆ ದಾರಿ ತೋರಿದ ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್, ಮಹರ್ಷಿ ವಾಲ್ಮೀಕಿ ಅವರ ವಿಚಾರಧಾರೆಯಲ್ಲಿ ಯಾತ್ರೆ ಸಾಗಿದೆ' ಎಂದರು.

ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಮಾತನಾಡಿ, 'ರಾಹುಲ್‌ಗಾಂಧಿ ಅವರು ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೂ ಪಾದಯಾತ್ರೆ ಕೈಗೊಂಡಿದ್ದು, ಇಂಥ ಸಾಹಸ ಸ್ವತಂತ್ರ ಭಾರತದಲ್ಲಿ ಯಾರೂ ಕೂಡ ಮಾಡಿಲ್ಲ. 150 ದಿನಗಳವರೆಗೆ 3,571 ಕಿ.ಮೀ ದೂರ ನಡೆಯುವುದು ಸಾಮಾನ್ಯ ಸಂಗತಿಯಲ್ಲ. ಪ್ರಧಾನಿ ಆಗಬೇಕು ಎಂಬ ಉದ್ದೇಶದಿಂದ ರಾಹುಲ್‌ಗಾಂಧಿ ಅವರು ಈ ಪಾದಯಾತ್ರೆ ಮಾಡುತ್ತಿಲ್ಲ' ಎಂದು ಹೇಳಿದರು.

ಶಾಸಕರಾದ ಕೃಷ್ಣ ಬೈರೇಗೌಡ, ಡಾ. ಅಜಯ್ ಸಿಂಗ್, ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ರಾಜ್ಯ ಉಸ್ತುವಾರಿ ರಣದೀಪಸಿಂಗ್ ಸುರ್ಜೆವಾಲಾ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್, ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ.ಪಾಟೀಲ, ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಇದ್ದರು.

ನಟಿ ರಮ್ಯಾ ಭಾಗಿ

ಮಂತ್ರಾಲಯ ರಸ್ತೆಯಲ್ಲಿರುವ ಐಬಿ ಕಾಲೊನಿಯಿಂದ ಸಾರ್ವಜನಿಕ ಸಭೆ ಆಯೋಜಿಸಲಾಗಿದ್ದ ವಾಲ್ಕಟ್ ಮೈದಾನದವರೆಗೂ ನಡೆದ ಯಾತ್ರೆಯಲ್ಲಿ ರಾಹುಲ್‌ಗಾಂಧಿ ಅವರೊಂದಿಗೆ ನಟಿ ರಮ್ಯಾ ಮಾತನಾಡುತ್ತ ಹೆಜ್ಜೆ ಹಾಕಿದರು. ರಮ್ಯಾ ಅವರು ಸೇರಿಕೊಳ್ಳುತ್ತಿದ್ದಂತೆ ಜನರು ಗುಂಪಾಗುವುದು ಹೆಚ್ಚಳವಾಯಿತು. ಎಂದಿನಂತೆ ರಾಹುಲ್ ಅವರು ರಸ್ತೆಯ ಎರಡು ಅಂಚಿನಲ್ಲಿ ನಿಂತ ಜನರತ್ತ ಕೈಬೀಸುತ್ತ ಮುನ್ನಡೆದರು.

'ನಾಡದೇವಿಯ ಆಶೀರ್ವಾದ ಸಿಕ್ಕಿದೆ'

'ನಮ್ಮ ರಾಜ್ಯದಲ್ಲಿ ರಾಹುಲ್ ಗಾಂಧಿ ಅವರು ವಿಜಯದಶಮಿ ಆಚರಿಸಿದ್ದು, ನಾಡದೇವಿಯ ಆಶೀರ್ವಾದ ಅವರಿಗೆ ಸಿಕ್ಕಿದೆ. ಈಗ ದೀಪಾವಳಿ ಆಚರಿಸುವ ಹೊಸ್ತಿಲಲ್ಲಿ ಇದ್ದೇವೆ. ದೀಪದಿಂದ ದೀಪ ಹಚ್ಚುವ ಕೆಲಸವನ್ನು ಎಲ್ಲರೂ ಮಾಡೋಣ. ಎಐಸಿಸಿ ಅಧ್ಯಕ್ಷರಾಗಿ ಮಲ್ಲಿಕಾರ್ಜುನ ಖರ್ಗೆ ಅವರು ಆಯ್ಕೆಯಾಗಿದ್ದು ನಮ್ಮ ರಾಜ್ಯಕ್ಕೂ ದೊಡ್ಡ ಶಕ್ತಿ ಸಿಕ್ಕಂತಾಗಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹೇಳಿದರು.

ಹೆಜ್ಜೆ ಹಾಕಿದ ಲಕ್ಷಾಂತರ ಜನ

ರಾಯಚೂರು ನಗರದಲ್ಲಿ ಶನಿವಾರ ನಡೆದ ಪಾದಯಾತ್ರೆಯಲ್ಲಿ ಲಕ್ಷಾಂತರ ಜನರು ಹೆಜ್ಜೆ ಹಾಕಿದ್ದು, ಗಮನಾರ್ಹವಾಗಿತ್ತು. ಮಂತ್ರಾಲಯ ಮಾರ್ಗದ ಬೃಂದಾವನ ಹೋಟೆಲ್‌ನಿಂದ ಪಾದಯಾತ್ರೆ ಆರಂಭವಾಯಿತು.

ವಾಲ್ಕಟ್ ಮೈದಾನದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ 70 ಸಾವಿರ ಆಸನಗಳು ಭರ್ತಿಯಾಗಿ, ಸುತ್ತಮುತ್ತಲೂ ಜನರು ನಿಂತಿದ್ದರು.

ಯಾತ್ರೆಯಲ್ಲಿ ಯಾವುದೇ ದ್ವೇಷ, ಅಸೂಯೆ ಕಾಣಿಸದು. ಯಾತ್ರೆಯಲ್ಲಿ ಯಾರಾದರೂ ಎಡವಿ ಬಿದ್ದರೆ ಎಲ್ಲರೂ ಸೇರಿ ಎತ್ತುವ ಕೆಲಸ ಮಾಡುತ್ತಾರೆ. ಇದನ್ನೇ ಬಸವಣ್ಣನವರು ಕಲಿಸಿದ್ದಾರೆ. ಅದನ್ನೇ ನಾವು ಪಾಲಿಸುತ್ತಿದ್ದೇವೆ

ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕ

'ರಜೆಯಲ್ಲಿ ಸಮಾನತೆಗೆ ಸಿಜೆ ಸ್ಪಂದನೆ'

ಬೆಂಗಳೂರು: 'ರಾಜ್ಯದಾದ್ಯಂತ ಎಲ್ಲ ವಿಚಾರಣಾ ನ್ಯಾಯಾಲಯಗಳಿಗೆ, ಹೈಕೋರ್ಟ್‌ಗೆ ಸಮಾನವಾಗಿ ರಜಾ ದಿನಗಳಲ್ಲಿ ಸಮಾನತೆ ಕಲ್ಪಿಸುವ ವಿಚಾರವನ್ನು ಮುಂಬರುವ ವಾರ್ಷಿಕ ಕ್ಯಾಲೆಂಡರ್ ರೂಪಿಸುವಾಗ ಪರಿಗಣಿಸಲಾಗುವುದು' ಎಂದು ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿಜೆ) ಪಿ.ಬಿ. ವರಾಳೆ ತಿಳಿಸಿದ್ದಾರೆ.

ಈ ಸಂಬಂಧ ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ ಮತ್ತು ಖಜಾಂಚಿ ಎಂ.ಟಿ. ಹರೀಶ್ ಸಲ್ಲಿಸಿದ್ದ ಲಿಖಿತ ಮನವಿಗೆ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಪ್ರತಿಕ್ರಿಯಿಸಿದ್ದಾರೆ.

'ದೀಪಾವಳಿ ಹಬ್ಬಕ್ಕೆ ಹೈಕೋರ್ಟ್‌ಗೆ ಮಾತ್ರ ಹೆಚ್ಚುವರಿ ರಜೆ ಸಿಗುತ್ತಿದೆ. ವಿಚಾರಣಾ ನ್ಯಾಯಾಲಯಗಳಿಗೆ ಸಿಗುತ್ತಿಲ್ಲ. ಈ ಕುರಿತ ಅಸಮಾನತೆ ಸರಿಪಡಿಸಬೇಕು' ಎಂದು ಬೆಂಗಳೂರು ವಕೀಲರ ಸಂಘವು ಮನವಿ ಮಾಡಿತ್ತು.

ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿರುವ ಮುಖ್ಯ ನ್ಯಾಯಮೂರ್ತಿ ಅವರು, ಹೈಕೋರ್ಟ್ ಮತ್ತು ವಿಚಾರಣಾ ನ್ಯಾಯಾಲಯಗಳ ನಡುವೆ ಸಮಾನತೆ ಸಾಧಿಸಬಹುದಾದ ರಜಾ ದಿನಗಳ ವಿವರ ಸಲ್ಲಿಸಿ ಎಂದು ಸೂಚಿಸಿರುವುದಾಗಿ ವಿವೇಕ್ ಸುಬ್ಬಾರೆಡ್ಡಿ ತಿಳಿಸಿದ್ದಾರೆ.

'ಮೆಮೊಗಳನ್ನು (ಜ್ಞಾಪನಾ ಪತ್ರ) ತಕ್ಷಣವೇ ಪೋಸ್ಟ್ ಮಾಡಲು ನಿರ್ದೇಶನ ನೀಡಬೇಕು' ಎಂದೂ ಸಂಘವು ಇದೇ ವೇಳೆ ಮನವಿಯಲ್ಲಿ ವಿವರಿಸಿದೆ.

'ಸಮಯಕ್ಕೆ ಸರಿಯಾಗಿ ಮೆಮೊಗಳನ್ನು ಪೋಸ್ಟ್ ಮಾಡದೆ ಇರುವ ಕಾರಣ ಹೈಕೋರ್ಟ್ ಪ್ರಧಾನ ಪೀಠದ ವಕೀಲರು ಮತ್ತು ದಾವೆದಾರರಿಗೆ ತೊಂದರೆ ಉಂಟಾಗುತ್ತಿದೆ' ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಇಬ್ಬರು ಅರಣ್ಯ ರಕ್ಷಕರ ಬಂಧನ

ಚಿಕ್ಕಮಗಳೂರು: ಅರಣ್ಯ ಸಿಬ್ಬಂದಿ ವಶದಲ್ಲಿದ್ದ ರವಿ ಎಂಬುವವರ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಅರಣ್ಯ ರಕ್ಷಕರಾದ ವಸಂತ, ನಂದೀಶ ಎಂಬುವರನ್ನು ಬಂಧಿಸಲಾಗಿದೆ. ನ್ಯಾಯಾಲಯ ಅವರಿಗೆ ನ್ಯಾಯಾಂಗ ಬಂಧನ ವಿಧಿಸಿದೆ.

ಅರಣ್ಯ ರಕ್ಷಕರಾದ ವಸಂತ, ನಂದೀಶ, ಉಪವಲಯ ಅರಣ್ಯಾಧಿಕಾರಿ ಸುನೀಲ್ ಹಾಗೂ ಅರಣ್ಯ ವೀಕ್ಷಕ (ಪಿಸಿಪಿ) ಚಂದ್ರು ವಿರುದ್ಧ ಸಖರಾಯಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೃತ ರವಿ ಅವರು ಪರಿಶಿಷ್ಟ ಸಮುದಾಯಕ್ಕೆ ಸೇರಿದವರು ಎಂದು ಎಫ್‌ಐಆರ್‌ನಲ್ಲಿ ನಮೂದಿಸಲಾಗಿದೆ.

'ಬಂಧಿತ ವಸಂತ, ನಂದೀಶ್ ಅವರನ್ನು ಚಿಕ್ಕಮಗಳೂರು ಕೋರ್ಟ್‌ಗೆ ಹಾಜರುಪಡಿಸಲಾಗಿದ್ದು, ನ್ಯಾಯಾಂಗ ಬಂಧಕ್ಕೆ ಒಪ್ಪಿಸಿದೆ. ಇನ್ನಿಬ್ಬರು ತಲೆ ಮರೆಸಿಕೊಂಡಿದ್ದಾರೆ. ಪತ್ತೆಗೆ ಬಲೆ ಬೀಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ರವಿಯ ಶವ ಇದ್ದ ಸ್ಥಳಕ್ಕೆ ಕಡೂರಿನ ಜೆಎಂಎಫ್‌ಸಿ ಎರಡನೇ ಹೆಚ್ಚುವರಿ ನ್ಯಾಯಾಧೀಶರು ಹೋಗಿ ಸಾಕ್ಷಿದಾರರ ಹೇಳಿಕೆ, ಮಾಹಿತಿ ಸಂಗ್ರಹಿಸಿದ್ದಾರೆ.

ನೀಟ್ ನೋಂದಣಿ: 25ರವರೆಗೆ ವಿಸ್ತರಣೆ

ಬೆಂಗಳೂರು: ಸರ್ವರ್‌ಗಳು ಡೌನ್ ಆಗಿ ವಿದ್ಯಾರ್ಥಿಗಳಿಗೆ ಸಾಕಷ್ಟು ತೊಂದರೆಯಾದ ಕಾರಣ ಯುಜಿ– ನೀಟ್ 2022ರ ಅಭ್ಯರ್ಥಿಗಳ ಆನ್‌ಲೈನ್ ನೋಂದಣಿ ಮತ್ತು ಅರ್ಜಿ ಸಲ್ಲಿಕೆ ಅವಧಿಯನ್ನು ಮತ್ತೆ ಇದೇ 25ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ.

ಆನ್‌ಲೈನ್‌ನಲ್ಲಿ ನೋಂದಣಿ ಮಾಡಿಕೊಳ್ಳಲು ಹಾಗೂ ಶುಲ್ಕ ಪಾವತಿಸಲು ಇದೇ 23ರವರೆಗೆ ಅವಕಾಶ ನೀಡಲಾಗಿತ್ತು. ಎರಡನೇ ಬಾರಿ ಮತ್ತೆ ಅವಧಿ ವಿಸ್ತರಿಸಲಾಗಿದೆ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ತಿಳಿಸಿದೆ.

ತೆಲಂಗಾಣಕ್ಕೆ ಇಂದು ಭಾರತ್ ಜೋಡೊ ಯಾತ್ರೆ

ಹೈದರಾಬಾದ್ (ಪಿಟಿಐ): ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆ ರಾಯಚೂರಿನಿಂದ ನಿರ್ಗಮಿಸಿದ ಬಳಿಕ ಭಾನುವಾರ ಬೆಳಿಗ್ಗೆ ತೆಲಂಗಾಣದ ಗುಡೆಬೆಳ್ಳೂರು ಪ್ರವೇಶಿಸಲಿದೆ.

ಮಹೆಬೂಬನಗರ ಜಿಲ್ಲೆಯ ಗುಡೆಬೆಳ್ಳೂರಿನಿಂದ ಯಾತ್ರೆ ಆರಂಭವಾಗಲಿದೆ. ಕರ್ನಾಟಕ–ತೆಲಂಗಾಣ ಗಡಿ ಭಾಗದಲ್ಲಿ ಸ್ವಾಗತಕ್ಕೆ ತೆಲಂಗಾಣ ಕಾಂಗ್ರೆಸ್ ಘಟಕ ಅದ್ಧೂರಿ ಸಿದ್ಧತೆ ಮಾಡಿಕೊಂಡಿದೆ.

ಗುಡೆಬೆಳ್ಳೂರಿನಲ್ಲಿ ಬೆಳಗ್ಗಿನ ಉಪಹಾರ ಸೇವಿಸಿದ ಬಳಿಕ, ದೀಪಾವಳಿ ಹಬ್ಬದ ಹಿನ್ನಲೆಯಲ್ಲಿ ಅ.23 ರಿಂದ 26ರವರೆಗೆ ಯಾತ್ರೆಗೆ ವಿರಾಮ ನೀಡಲಾಗಿದೆ ಎಂದು ಟಿಪಿಸಿಸಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದೆ.

ಅ.27ರಂದು ಗುಡೆಬೆಳ್ಳೂರಿನಿಂದ ಯಾತ್ರೆ ಆರಂಭಗೊಂಡು, 16 ದಿನ ತೆಲಂಗಾಣದಲ್ಲಿ ಸಂಚರಿಸಲಿದೆ. ನ.7ರಂದು ಮಹಾರಾಷ್ಟ್ರ ಪ್ರವೇಶಿಸಲಿದೆ.

ವಿಶ್ವಕವಿ ಸಮ್ಮೇಳನದ ಕವನಗಳ ಸಂಕಲನ 'ಸಂಗಂ' ಬಿಡುಗಡೆ

ರೇಣುಕಾ ರಮಾನಂದಗೆ 'ಸಂಗಂ' ಸಾಹಿತ್ಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ



'ಸಂಗಂ' ವಿಶ್ವಕವಿ ಸಮ್ಮೇಳನದಲ್ಲಿ ರೇಣುಕಾ ರಮಾನಂದ ಅವರಿಗೆ ಮೊದಲ 'ಸಂಗಂ' ಸಾಹಿತ್ಯ ಪುರಸ್ಕಾರ ಪ್ರದಾನ ಮಾಡಲಾಯಿತು

ಬಳ್ಳಾರಿ (ಡಾ. ಜೋಳದರಾಶಿ ದೊಡ್ಡನಗೌಡರ ವೇದಿಕೆ): ಉತ್ತರ ಕನ್ನಡ ಜಿಲ್ಲೆಯ ರೇಣುಕಾ ರಮಾನಂದರ 'ಸಂಬಾರ ಬಟ್ಟಲ ಕೊಡಿಸು' ಕೃತಿಯು ಮೊದಲ 'ಸಂಗಂ' ಸಾಹಿತ್ಯ ಪುರಸ್ಕಾರಕ್ಕೆ ಆಯ್ಕೆ ಆಯಿತು.

ಶನಿವಾರ ಬಳ್ಳಾರಿಯಲ್ಲಿ ಜರುಗಿದ ಸಂಗಂ ವಿಶ್ವಕವಿ ಸಮ್ಮೇಳನದಲ್ಲಿ ಪುರಸ್ಕಾರ ಪ್ರದಾನ ಮಾಡಲಾಯಿತು. ಪ್ರಶಸ್ತಿ ಫಲಕ ಹಾಗೂ ₹25 ಸಾವಿರ ನಗದು ಪ್ರಶಸ್ತಿ ನೀಡಲಾಯಿತು.

ಒಟ್ಟು 140 ಕೃತಿಗಳು ಈ ಸ್ಪರ್ಧೆಗೆ ಬಂದಿದ್ದವು. ಅವುಗಳಲ್ಲಿ ಮೊದಲ ಹಂತದಲ್ಲಿ 17 ಪುಸ್ತಕಗಳನ್ನು, ನಂತರ 12 ಕೃತಿಗಳನ್ನು ಅಂತಿಮ ಸುತ್ತಿಗೆ ನಿರ್ಣಾಯಕರಿಗೆ ಕಳುಹಿಸಲಾಯಿತು. ರಾಜೇಂದ್ರ ಚೆನ್ನಿ, ವಿನಯಾ ಒಕ್ಕುಂದ ಅವರೂ ಇರುವ ತಂಡದಿಂದ ಈ ಕೃತಿಯನ್ನು ಆಯ್ಕೆ ಮಾಡಿದ್ದಾಗಿ ನಿರ್ಣಾಯಕರಲ್ಲಿ ಒಬ್ಬರಾದ ಓ.ಎಲ್.ನಾಗಭೂಷಣ ಅವರು ತಿಳಿಸಿದರು.

ಇದಲ್ಲದೆ, ಶನಿವಾರ ಬೆಳಿಗ್ಗೆ ವಿಶ್ವಕವಿ ಸಮ್ಮೇಳನದ ಎರಡನೇ ದಿನದ ಗೋಷ್ಠಿಯಲ್ಲಿ ಓದಿದ ಕವಿತೆಗಳ ಸಂಗ್ರಹ 'ಸಂಗಂ' ಪುಸ್ತಕವನ್ನೂ ಬಿಡುಗಡೆಗೊಳಿಸಲಾಯಿತು.

'ಸಂಕಥನ' ಪ್ರಕಾಶನದಿಂದ ರಾಜೇಂದ್ರ ಪ್ರಸಾದ್ ಅವರು ಈ ಪುಸ್ತಕವನ್ನು ಪ್ರಕಟಿಸಿದ್ದಾರೆ. ವಿಶ್ವದ ವಿವಿಧ ಭಾಗದ, ವಿವಿಧ ಹಿನ್ನೆಲೆಯ, ವೈವಿಧ್ಯಮಯ ಸಾಂಸ್ಕೃತಿಕ ವಾತಾವರಣದಿಂದ ಬಂದ ಕವಿತೆಗಳ ಈ ಸಂಕಲನವು ವಿಶೇಷವಾಗಿದೆ ಎಂದು ಕಮಲಾಕರ್ ಭಟ್ ಅವರು ಪುಸ್ತಕ ಬಿಡುಗಡೆಗೊಳಿಸಿ ಮಾತನಾಡಿದರು.

ಕನ್ನಡ ಅನುವಾದದ ಅವತರಣಿಕೆಯನ್ನು ಸಾಹಿತ್ಯ ಸಮ್ಮೇಳನದಲ್ಲಿ ಬಿಡುಗಡೆ ಮಾಡುವ ಯೋಜನೆ ಇದೆ ಎಂದೂ ತಿಳಿಸಿದರು.


2ನೇ ದಿನದ ಗೋಷ್ಠಿಯಲ್ಲಿ ವಿದೇಶಿ ಕವಿಗಳೊಂದಿಗೆ ಕನ್ನಡಿಗರೂ ಕವನ ವಾಚಿಸಿದರು. ಜೊತೆಗೆ ಬಳ್ಳಾರಿ ಜಿಲ್ಲೆಯ ಕವಿಗಳ ಪ್ರಾತಿನಿಧ್ಯವೂ ಎದ್ದು ಕಂಡಿತು.

ವಿಶ್ವಕವಿ ಸಮ್ಮೇಳನವನ್ನು 'ಡೆಕ್ಕನ್ ಹೆರಾಲ್ಡ್' ಮತ್ತು 'ಪ್ರಜಾವಾಣಿ'ಯ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದೆ.

ಕನ್ನಡ ಉಳಿಸುವ ಹೊಣೆ ಉತ್ತರ ಭಾಗದವರದ್ದು: ಓಎಲ್‌ಎನ್

ಬಳ್ಳಾರಿ, ಜೋಳದರಾಶಿ ದೊಡ್ಡನಗೌಡರ ವೇದಿಕೆ: ಬಹುತೇಕ ಕೃತಿಗಳಲ್ಲಿನ ಗಟ್ಟಿಯಾದ ರಚನೆಗಳು ಉತ್ತರ ಕರ್ನಾಟಕದ ಭಾಗದವರದ್ದೇ ಸಿಂಹಪಾಲು. ಉತ್ತರದವರಿಂದಲೇ ಕನ್ನಡ ಉಳಿಯಬೇಕು, ಕನ್ನಡ ಉಳಿಸುವ ಗುರುತರ ಹೊಣೆ ಈ ಭಾಗದವರದ್ದೇ ಆಗಿದೆ. ಸಾಹಿತ್ಯ ಸಂವೇದನೆಯನ್ನು ನೋಡಿದರೆ, ಕವಿಯತ್ರಿಗಳೇ ನೊಗ ಹೊರಬೇಕಿದೆ ಎಂದು ಅಭಿಪ್ರಾಯ ಪಟ್ಟರು.

ದೇಣಿಗೆ ಆರೋಪ: ಮಾನನಷ್ಟ ದಾವೆ ಎಚ್ಚರಿಕೆ



ಎಚ್‌.ಎಸ್‌. ಶಿವಪ್ರಕಾಶ್

ಬಳ್ಳಾರಿ: 'ಅರಿವು ಮತ್ತು ಸಂಗಂ ಸಂಸ್ಥೆಗಳು ಕಾರ್ಪೊರೇಟ್ ಕಂಪನಿಗಳಿಂದ ಕೋಟ್ಯಂತರ ರೂಪಾಯಿಗಳ ಪ್ರಾಯೋಜಕತ್ವ ಪಡೆದಿದೆ ಎಂದು ದೂರಲಾಗುತ್ತಿದೆ. ಎಲುಬಿಲ್ಲದ ನಾಲಗೆ ಹರಿಬಿಟ್ಟಿರುವವರ ವಿರುದ್ಧ ಕ್ರಮಕೈಗೊಳ್ಳಿ. ಕೋಟ್ಯಂತರ ರೂಪಾಯಿ ಪಡೆದ ಕುರಿತು ಸಾಬೀತು ಪಡಿಸಲಿ, ಇಲ್ಲವೇ ಮಾನನಷ್ಟ ಮೊಕದ್ದಮೆ ಎದುರಿಸಲಿ' ಎಂದು ಎಂದು ಕವಿ ಎಚ್.ಎಸ್.ಶಿವಪ್ರಕಾಶ್ ಎಚ್ಚರಿಸಿದರು.

'ಸಂಗಂ ಕವಿ ಸಮ್ಮೇಳನದ ಎರಡನೇ ದಿನದ ಸಮಾರೋಪದಲ್ಲಿ ಅವರು ಮಾತನಾಡಿದರು.

'ಬಂಗಾಳಕೊಲ್ಲಿಯಲ್ಲಿ ಚಂಡಮಾರುತ ಸಾಧ್ಯತೆ'

ಭುವನೇಶ್ವರ (ಪಿಟಿಐ): ಉತ್ತರ ಅಂಡಮಾನ್‌ನ ಸಮುದ್ರದಲ್ಲಿ ವಾಯುಭಾರ ಕುಸಿತ ಉಂಟಾಗಿದ್ದು, ಪಶ್ಚಿಮ ಬಂಗಾಳದ ಸಾಗರ ದ್ವೀಪದ ಆಗ್ನೇಯ ದಿಕ್ಕಿನ ಸಮುದ್ರದಲ್ಲಿ ಇದೇ 24ರಂದು ಚಂಡಮಾರುತ ರೂಪುಗೊಳ್ಳುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ವಾಯವ್ಯ ಬಂಗಾಳ ಕೊಲ್ಲಿಯ ಕಡೆಗೆ ಚಂಡಮಾರುತ ಬೀಸುವ ಸಾಧ್ಯತೆ ಇದ್ದು, ಒಡಿಶಾ ಹಾಗೂ ಕರಾವಳಿ ಪ್ರದೇಶ ಇರುವ ಕೆಲವು ರಾಜ್ಯಗಳಲ್ಲಿ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದೂ ಹೇಳಿದೆ.

ಒಡಿಶಾ ಕರಾವಳಿ, ಬಂಗಾಳ ಕೊಲ್ಲಿಯಲ್ಲಿ ಮೀನುಗಾರರು ಆಳಸಮುದ್ರಕ್ಕೆ ತೆರಳದಂತೆ ಐಎಂಡಿ ಎಚ್ಚರಿಕೆ ನೀಡಿದೆ.

ಒಡಿಶಾದ ಪುರಿ, ಬಾಲೇಶ್ವರ, ಕಟಕ್, ಖುರ್ದಾ ಮೊದಲಾದೆಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಕೇಂದ್ರ ಹೇಳಿದೆ.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ಪೂರ್ಣ ಪ್ರತಿಕ್ರಿಯೆಗಳನ್ನು prajavani.net ನಲ್ಲಿ ನೋಡಬಹುದು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ

ಮೊದಲ ಆಯ್ಕೆ...



ಮೂಲತಃ ಕರಾವಳಿಯವರಾದ ನಾವು ಅಂಗಡಿಗೆ ಹೋಗಿ 'ಪೇಪರ್ ಕೊಡಿ' ಎಂದಷ್ಟೇ ಕೇಳುವುದು, ಅಂಗಡಿಯವ್ರು ಸ್ಥಳೀಯ ಪ್ರಭಾವಿ ಪತ್ರಿಕೆ ಕೊಡುವುದೂ ಸಾಮಾನ್ಯವಾಗಿತ್ತು. ರಾಜಧಾನಿ ಸೇರಿದ ಮೇಲೆ ಕೈಗೆತ್ತಿಕೊಂಡ 'ಪ್ರಜಾವಾಣಿ' ಕಳೆದ ಇಪ್ಪತ್ತೆಂಟು ವರ್ಷಗಳಿಂದ ನನ್ನ ಮೊದಲ ಓದುವ ಆಯ್ಕೆ.

ಪತಿ ಶಿವಸುಬ್ರಹ್ಮಣ್ಯ ಬೇರೆ ಬೇರೆ ಪತ್ರಿಕೆಗಳ ಸಂಪಾದಕರಾಗಿ ಕಾರ್ಯನಿರ್ವಹಿಸುತ್ತಿದ್ದಾಗಲೂ ಮೊದಲು ನಾನು ಕೈಗೆತ್ತಿಕೊಳ್ಳುತ್ತಿದ್ದ ಪತ್ರಿಕೆ ಪ್ರಜಾವಾಣಿ. ಮನೆಯವರು ಮತ್ತು ಸ್ನೇಹಿತರು ಇಂದಿಗೂ ನನ್ನನ್ನು 'ಪ್ರಜಾವಾಣಿಯವ್ರು' ಎಂದು ತರಲೆ ಮಾಡುವುದಿದೆ. ಸಾಹಿತ್ಯ, ಲಲಿತ ಕಲೆಗಳ ಬಗ್ಗೆ 'ಪ್ರಜಾವಾಣಿ' ತೋರುವ ಆದರ ನಿಜಕ್ಕೂ ಮಾದರಿ. ವೈಯಕ್ತಿಕ ನೆಲೆಯಲ್ಲಿ ಕೂಡ, ಮಯೂರದಲ್ಲಿ ನನ್ನ ಕತೆಗಳು ಮತ್ತು 'ಪ್ರಜಾವಾಣಿ'ಯಲ್ಲಿ ನಾನು ಬರೆದ ಅನೇಕ ಲೇಖನಗಳು ಪ್ರಕಟವಾಗಿದ್ದು, ಪತ್ರಿಕೆಯ ಮೇಲೆ ಅಕ್ಕರೆ ಹೆಚ್ಚಿರಲೂ ಅದೂ ಒಂದು ಕಾರಣ. ಕೆಲವೊಂದು ಬಾರಿ ಅನಗತ್ಯವೆನಿಸುವ ವರದಿ, ಲೇಖನಗಳಿದ್ದರೂ ಅಭಿಮಾನಕ್ಕೆ ಎಂದೂ ಕುಂದಾಗಿಲ್ಲ. 'ಪ್ರಜಾವಾಣಿ'ಗೆ 75ರ ಅಭಿನಂದನೆಗಳು.

ದೀಪಾ ಫಡ್ಕೆ, ಬೆಂಗಳೂರು

ಫಾಂಟ್ ಇಷ್ಟ....

ನಾನೂ ಸಹ ಕಳೆದ 50 ವರ್ಷಗಳಿಂದ ಪ್ರಜಾವಾಣಿ ಪತ್ರಿಕೆಯನ್ನು ಓದುತ್ತಾ ಬಂದಿದ್ದೇನೆ. ಮೊದಲು 5 ವರ್ಷ ಮನೆಯಲ್ಲಿ ಪತ್ರಿಕೆ ತರಿಸುತ್ತಿರಲಿಲ್ಲ. ಅಕ್ಕ ಪಕ್ಕದ ಮನೆಗೆ ಹೋಗಿ ನನ್ನ ಮೆಚ್ಚಿನ ಕ್ರೀಡಾ ಅಂಕಣವನ್ನು ಓದಿ ಬರುತ್ತಿದ್ದೆ. ಕಾಲೇಜು ಸೇರಿದ ಸಮಯದಲ್ಲಿ ಮನೆಗೆ ಪತ್ರಿಕೆ ಬರಲು ಪ್ರಾರಂಭವಾಯಿತು. ಬೆಳಿಗ್ಗೆ ಪತ್ರಿಕೆ ಓದಿ ಮುಗಿಸಿ ನಂತರ ಬೇರೆ ಕಾರ್ಯಗಳು. ನನಗೆ ಹೆಚ್ಚು ಪ್ರಿಯವಾದ ವಿಷಯವೆಂದರೆ ಪತ್ರಿಕೆಯಲ್ಲಿ ಉಪಯೋಗಿಸುತ್ತಿರುವ ಟೈಪ್ಸ್ /ಫಾಂಟ್ಸ್. ಈ ಫಾಂಟ್‌ನಲ್ಲಿ ಕನ್ನಡ ದಿನ ಪತ್ರಿಕೆಯನ್ನು ಓದಿ ಬೇರೆ ಯಾವುದೇ ಫಾಂಟ್‌ನಲ್ಲಿ ಓದಲು ಮನಸ್ಸಾಗುವುದಿಲ್ಲ. ಪತ್ರಿಕೆ ಓದಿದ ಹಾಗೆ ಆಗುವುದಿಲ್ಲ. ಪ್ರಜಾವಾಣಿ ಇನ್ನೂ ಬೆಳೆಯಲಿ ಎಂದು ಆಶಿಸುತ್ತೇನೆ.

ನಾರಾಯಣ ಎಂ.ಎಸ್., ನಿವೃತ್ತ ಬ್ಯಾಂಕ್ ಅಧಿಕಾರಿ



ಗೆರೆಯಲ್ಲಿ ವ್ಯಂಗ್ಯ ಜೀವಂತಿಕೆ ಮೂಡಿಸುತ್ತಿದ್ದ ಅಪರೂಪದ ಕಲಾವಿದ ಅವರು. ಪ್ರಜಾವಾಣಿ ಕನ್ನಡ ಸಾಹಿತ್ಯವನ್ನು ಮುನ್ನಡೆಸಿದ ಪತ್ರಿಕೆ. ಅದು ಏರ್ಪಡಿಸಿದ್ದ ಕಥಾ ಸ್ಪರ್ಧೆಯಿಂದ ಕನ್ನಡಕ್ಕೆ ಮಹತ್ವದ ಕತೆಗಾರರನ್ನು ಕೊಟ್ಟಿದೆ. ಪ್ರಜಾವಾಣಿಯಲ್ಲಿ ಪ್ರಕಟಗೊಂಡರೆ ಮಾತ್ರ ನಮ್ಮ ಕತೆಗಳು ಸಾಹಿತ್ಯಕ ಮೌಲ್ಯಗಳನ್ನು ಪಡೆದಿರುತ್ತವೆ ಎಂಬ ಭಾವನೆ ಲೇಖಕರಲ್ಲಿ ಬರುವಂತೆ ಪತ್ರಿಕೆ ತನ್ನ ಶ್ರೇಷ್ಠತೆ, ಅಭಿರುಚಿಯನ್ನು ಕಾಯ್ದುಕೊಂಡು ಬಂದಿದೆ. ಈಗಂತೂ ಪತ್ರಿಕೆ ನಮ್ಮ ದೈನಂದಿನ ಬದುಕಿನಲ್ಲಿ ಹಾಸುಹೊಕ್ಕಾಗಿದೆ.

ಬಿ. ಚಂದ್ರೇಗೌಡ, ಶಿವಮೊಗ್ಗ

ತಂದೆಯ ಬಳುವಳಿ...



ನನ್ನ ಅಪ್ಪಯ್ಯ 15 ವರ್ಷಗಳ ಹಿಂದೆ ತೀರಿಹೋದರು. ಆದರೆ ಅವರು ನನಗೆ ಪ್ರಜಾವಾಣಿ ಓದುವ ಅಭ್ಯಾಸವನ್ನು ಬಿಟ್ಟುಹೋದರು. ನನಗೆ ಪ್ರಜಾವಾಣಿ ಬಗ್ಗೆ ಎಷ್ಟು ಹುಚ್ಚು ಪ್ರೀತಿ ಎಂದರೆ ನಾನು ಕೆಲಸ ಮಾಡುತ್ತಿದ್ದ ಸಹಕಾರಿ ತರಬೇತಿ ಕೇಂದ್ರದ ಲೈಬ್ರರಿಯಲ್ಲಿ ಎಲ್ಲಾ ದಿನಪತ್ರಿಕೆಗಳನ್ನು ತರಿಸುತ್ತಿದ್ದರೂ, ಯಾವಾಗ ಪ್ರಜಾವಾಣಿ ನನಗೆ ಓದಲು ಸಿಗುತ್ತದೆ ಎಂದು ಗಂಟೆಗಟ್ಟಲೆ ಕಾಯುತ್ತಿದ್ದೆ. ಪ್ರಜಾವಾಣಿಯ ಮುದ್ದಾದ ಅಕ್ಷರಗಳೇ ನನಗಿಷ್ಟ. ಮುಂದೆ ಪ್ರಜಾವಾಣಿ ಪ್ರತಿಯೊಬ್ಬರ ವಾಣಿಯಾಗಲೆನ್ನುವುದೇ ನನ್ನ ಆಶಯ.

ಎಚ್.ಬಿ.ಪ್ರಮೀಳಾ, ಹಾರೋಗೋಳಿಗೆ

ಕನ್ನಡದ ಅಸ್ಮಿತೆ ಎತ್ತಿ ಹಿಡಿಯಲಿ



ಪ್ರಜಾವಾಣಿಗೆ 75 ವರ್ಷಗಳು ತುಂಬಿರುವ ಈ ಹೊತ್ತಿನಲ್ಲಿ ಪತ್ರಿಕೆಗೆ ವೈಯಕ್ತಿಕವಾಗಿ, ಕರ್ನಾಟಕ ರಕ್ಷಣಾ ವೇದಿಕೆಯ ಲಕ್ಷಾಂತರ ಕಾರ್ಯಕರ್ತರ ಪರವಾಗಿ ಮನದುಂಬಿದ ಅಭಿನಂದನೆಗಳನ್ನು ಸಲ್ಲಿಸಲು ಬಯಸುತ್ತೇನೆ. ಪ್ರಜಾವಾಣಿ ನಮ್ಮ ಪಾಲಿಗೆ ಒಂದು ಪತ್ರಿಕೆ ಮಾತ್ರವಲ್ಲ, ಅದು ನಮ್ಮ ಬದುಕಿನ ಭಾಗವಾಗಿಯೇ ಬೆಳೆಯುತ್ತ ಬಂದಿದೆ. ಏಳೂವರೆ ದಶಕಗಳಿಂದಲೂ ಕರ್ನಾಟ ಕದ ಜನರನ್ನು ಪ್ರಭಾವಿಸುತ್ತ ಬಂದಿರುವ ಪ್ರಜಾವಾಣಿ, ನಿಜವಾದ ಅರ್ಥದಲ್ಲಿ 'ಪ್ರಜಾ'ವಾಣಿಯಾಗಿದೆ.

ಒಂದು ಮಾಧ್ಯಮ ಸಂಸ್ಥೆ ಇಷ್ಟು ವರ್ಷಗಳ ಸುದೀರ್ಘ ಅವಧಿಯನ್ನು ಕ್ರಮಿಸುವಾಗ ಏರುಪೇರುಗಳು ಸಹಜ. ಆದರೆ ಪ್ರಜಾವಾಣಿ ಎಂದಿಗೂ ತನ್ನತನವನ್ನು ಕಳೆದುಕೊಳ್ಳಲಿಲ್ಲ. ಸ್ಥಾಪಿತ ಹಿತಾಸಕ್ತಿಗಳಿಗೆ ಎಂದಿಗೂ ಶರಣಾಗಲಿಲ್ಲ.

ಪ್ರಜಾವಾಣಿ ಯಾಕಾಗಿ ಸ್ಥಾಪನೆಯಾಯಿತೋ, ಅದರ ಧ್ಯೇಯೋದ್ದೇಶಗಳೇನು ಇವೆಯೋ, ಅದೆಲ್ಲವನ್ನೂ ಈ ಎಲ್ಲ ಪತ್ರಕರ್ತರು ಚೆನ್ನಾಗಿ ಅರ್ಥ ಮಾಡಿಕೊಂಡು ಕಾರ್ಯನಿರ್ವಹಿಸಿದ್ದಾರೆ. ಪ್ರಜಾವಾಣಿಯ ಜನಪರ ಧೋರಣೆ ಎಂದಿಗೂ ಹಾದಿತಪ್ಪದಂತೆ ಅವರು ನೋಡಿಕೊಂಡಿದ್ದಾರೆ. ಈ ಎಲ್ಲ ಪತ್ರಕರ್ತರೂ ಸಹ ಅಭಿನಂದನಾರ್ಹರು.

ಪ್ರಜಾವಾಣಿ ಕನ್ನಡದ ಅಸ್ಮಿತೆಯನ್ನು ಎತ್ತಿಹಿಡಿಯುವ, ಕನ್ನಡಿಗರ ಹಕ್ಕುಗಳನ್ನು ಪ್ರತಿಪಾದಿಸುವ ಕೆಲಸವನ್ನು ಹಿಂದಿನಿಂದಲೂ ಮಾಡಿಕೊಂಡು ಬಂದಿದೆ. ಆ ಕಾರ್ಯವನ್ನು ಇನ್ನಷ್ಟು ಮಾಡಲಿ ಎಂದು ಕನ್ನಡಿಗರ ಪರವಾಗಿ ಕೇಳಿಕೊಳ್ಳುತ್ತೇನೆ.

ಟಿ.ಎ.ನಾರಾಯಣಗೌಡ, ರಾಜ್ಯಾಧ್ಯಕ್ಷ, ಕರವೇ

ಬದುಕಿನಲ್ಲಿ ಹಾಸುಹೊಕ್ಕಾಗಿದೆ...

ನಾನು ಪ್ರಜಾವಾಣಿ ನೋಡಿದ್ದು 1968ರಲ್ಲಿ. ಅಂದೊಂದು ದಿನ ನಮ್ಮ ಹೆಡ್‌ಮಾಸ್ಟರ್ ವೈ.ಜಿ. ಸತ್ಯನಾರಾಯಣ ಅವರು ಪತ್ರಿಕೆ ತೋರಿಸಿ ಅದರ ಮುಖ್ಯ ವಿಷಯಗಳನ್ನು ಪ್ರಾರ್ಥನೆ ಮಾಡುವ ಮುನ್ನ ಓದಿಸಿ ನಂತರ ಸ್ಕೂಲ್ ಜಗುಲಿಯ ಟೇಬಲ್ ಮೇಲೆ ಹಾಸಿ ಓದಲು ಹೇಳಿದ್ದರು. ಕ್ಲಾಸಿನಲ್ಲಿ 'ಛೂ ಬಾಣ' ಓದಲು ಹೇಳಿದ್ದರು. ಅಂದಿನಿಂದ ಪ್ರಜಾವಾಣಿ ಬದುಕಿನ ಭಾಗವಾಗಿದೆ. ಆಗ ಪ್ರಜಾವಾಣಿಯಲ್ಲಿ ಬರುತ್ತಿದ್ದ ನಗೆಲೇಸು ಓದಿ ನಾನು ಅರ್ಥಪುಟ ನಗೆಲೇಸು ಕಳಿಸಿದ್ದೆ. ಅದು ಪ್ರಕಟಗೊಂಡಿತ್ತು. ಹಲವು ವರ್ಷ ಮೂರ್ತಿಯವರು ಬರೆದ ವ್ಯಂಗ್ಯ ಚಿತ್ರಗಳನ್ನು ಇಟ್ಟುಕೊಂಡಿದ್ದೆ. ತುಂಬಾ ಕಡಿಮೆ

ಮೀಸಲಾತಿ ನಿಗದಿಗೆ ಹೊಸ ನಿಯಮ

ಒಂದನೇ ಪುಟದಿಂದ

ಶೇ 50ರ ಮಿತಿ: ಜಿಲ್ಲಾ ಪಂಚಾಯಿತಿ ಮತ್ತು ತಾಲ್ಲೂಕು ಪಂಚಾಯಿತಿ ಗಳಲ್ಲಿ ಎಸ್‌ಸಿ, ಎಸ್‌ಟಿ ಮತ್ತು ಹಿಂದುಳಿದ ವರ್ಗಗಳಿಗೆ ನೀಡುವ ಒಟ್ಟು ಮೀಸಲಾತಿಯ ಪ್ರಮಾಣವನ್ನು ಶೇ 50ಕ್ಕೆ ಮಿತಿಗೊಳಿಸಬೇಕು.

ಎಸ್‌ಸಿ ಮತ್ತು ಎಸ್‌ಟಿ ಮೀಸಲಾತಿ ಪ್ರಮಾಣ ಶೇ 50 ರಷ್ಟನ್ನು ತಲುಪಿದರೆ ಅಥವಾ ಅದಕ್ಕಿಂತ ಹೆಚ್ಚಾದರೆ ಉಳಿದ ಯಾರಿಗೂ ಮೀಸ ಲಾತಿ ನೀಡುವಂತಿಲ್ಲ ಎಂಬ ನಿರ್ಬಂಧ ಹೊಸ ನಿಯಮಗಳಲ್ಲಿದೆ.

'ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕೆಂಬ ಅಂಶ ಸಂವಿಧಾನದಲ್ಲೇ ಅಡಕವಾಗಿದೆ. ಈ ಸಮುದಾಯಗಳ ಜನಸಂಖ್ಯೆಯ ಪ್ರಮಾಣ ಹೆಚ್ಚಳವಾದರೆ ಮೀಸಲಾತಿಯನ್ನೂ ಹೆಚ್ಚಿಸಬೇಕಾಗುತ್ತದೆ. ಆಗ ಹಿಂದುಳಿದ ವರ್ಗಗಳು ಸೇರಿದಂತೆ ಇತರರ ಮೀಸಲಾತಿಯನ್ನು ಕಡಿತಗೊಳಿಸುವುದಕ್ಕಾಗಿ ಈ ನಿಯಮ ಸೇರಿಸಲಾಗಿದೆ. ಸದ್ಯಕ್ಕೆ ಈ ನಿಯಮವನ್ನು ಅನ್ವಯಿಸುವ ಪ್ರಶ್ನೆ ಉದ್ಭವಿಸುವುದಿಲ್ಲ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ಆಕ್ಷೇಪಣೆಗೆ ಅವಕಾಶ: ಕರಡು ನಿಯಮಗಳಿಗೆ ಆಕ್ಷೇಪಣೆ ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಲಾಗಿದೆ. ಆಕ್ಷೇಪಣೆಗಳಿದ್ದರೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಮೂರನೇ ಹಂತ, ಮೂರನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ.ಬಿ.ಆರ್. ಅಂಬೇಡ್ಕರ್ ವೀದಿ, ಬೆಂಗಳೂರು-01 ಈ ವಿಳಾಸಕ್ಕೆ ಕಳುಹಿಸಬಹುದು ಎಂದು ಇಲಾಖೆ ತಿಳಿಸಿದೆ.

ಅಧ್ಯಕ್ಷ, ಉಪಾಧ್ಯಕ್ಷ ಮೀಸಲಾತಿಗೂ ನಿಯಮ

ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿಗಳ ಅಧ್ಯಕ್ಷ, ಉಪಾಧ್ಯಕ್ಷರ ಹುದ್ದೆಗಳ ಮೀಸಲಾತಿ ನಿಗದಿಗೂ ಕರಡು ನಿಯಮಗಳನ್ನು ಪ್ರಕಟಿಸಲಾಗಿದೆ.

ಎಸ್‌ಟಿ ಜನಸಂಖ್ಯೆ ಹೆಚ್ಚಾಗಿರುವ ಜಿಲ್ಲೆ, ತಾಲ್ಲೂಕುಗಳಲ್ಲಿ ಈ ಸಮುದಾಯಕ್ಕೆ ಅಧ್ಯಕ್ಷ ಸ್ಥಾನದ ಮೀಸಲಾತಿ ಕಲ್ಪಿಸಬೇಕು. ಒಂದು ಸಂಸ್ಥೆಯ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎರಡೂ ಸ್ಥಾನಗಳ ಮೀಸಲಾತಿಯನ್ನು ಎಸ್‌ಸಿ ಹಾಗೂ ಎಸ್‌ಟಿ ಸಮುದಾಯಗಳಿಗೆ ಮೀಸಲಿಡುವಂತಿಲ್ಲ. ಒಂದೇ ಹುದ್ದೆಗೆ ಈ ಎರಡೂ ಸಮುದಾಯಗಳಿಗೆ ನಿರಂತರವಾಗಿ ಮೀಸಲಾತಿ ನೀಡುವಂತಿಲ್ಲ ಎಂಬ ಅಂಶ ನಿಯಮಗಳಲ್ಲಿದೆ.

ಜಿ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಮೀಸಲಾತಿ ಪ್ರಮಾಣ

ಪ್ರವರ್ಗ	ಅಧ್ಯಕ್ಷರು		ಉಪಾಧ್ಯಕ್ಷರು	
	ಒಟ್ಟು	ಮಹಿಳೆಯರು	ಒಟ್ಟು	ಮಹಿಳೆಯರು
ಎಸ್‌ಟಿ	03	02	03	02
ಎಸ್‌ಸಿ	06	03	06	03
ಬಿಸಿಎಂ–ಎ	05	02	05	02
ಬಿಸಿಎಂ–ಬಿ	01	01	01	01
ಸಾಮಾನ್ಯ	16	08	16	08
ಒಟ್ಟು	31	16	31	16

ತಾ.ಪಂ. ಅಧ್ಯಕ್ಷ, ಉಪಾಧ್ಯಕ್ಷ ಮೀಸಲಾತಿ ಪ್ರಮಾಣ

ಪ್ರವರ್ಗ	ಅಧ್ಯಕ್ಷರು		ಉಪಾಧ್ಯಕ್ಷರು	
	ಒಟ್ಟು	ಮಹಿಳೆಯರು	ಒಟ್ಟು	ಮಹಿಳೆಯರು
ಎಸ್‌ಟಿ	22	11	22	11
ಎಸ್‌ಸಿ	49	25	49	25
ಬಿಸಿಎಂ–ಎ	38	19	38	19
ಬಿಸಿಎಂ–ಬಿ	09	04	09	04
ಸಾಮಾನ್ಯ	120	60	120	60
ಒಟ್ಟು	238	119	238	119

ಕರಡಿನಲ್ಲಿರುವ ಪ್ರಮುಖ ಅಂಶಗಳು

- ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು ಮತ್ತು ಮಹಿಳಾ ಮೀಸಲಾತಿ ಪುನರಾವರ್ತನೆ ಆಗುವಂತಿಲ್ಲ.
- ಎಸ್‌ಸಿ, ಎಸ್‌ಟಿ, ಹಿಂದುಳಿದ ವರ್ಗಗಳು ಹಾಗೂ ಸಾಮಾನ್ಯ ವರ್ಗದ ಮಹಿಳಾ ಮೀಸಲು ಕ್ಷೇತ್ರಗಳನ್ನೂ ಜನಸಂಖ್ಯೆ ಆಧಾರದಲ್ಲೇ ಗುರುತಿಸಬೇಕು.
- ಎರಡು ಅಥವಾ ಹೆಚ್ಚು ಕ್ಷೇತ್ರಗಳು ವಿಲೀನವಾದರೆ ದೊಡ್ಡ ಮತಕ್ಷೇತ್ರದ ಮೀಸಲು ಮುಂದುವರಿಸುವುದು.
- ಮೀಸಲಾತಿಯ ಕರಡು ಪಟ್ಟಿಗೆ ಆಕ್ಷೇಪಣೆ ಸಲ್ಲಿಸಲು 10 ದಿನ ಕಾಲಾವಕಾಶ ನೀಡಬೇಕು.
- ಆಕ್ಷೇಪಣೆಗಳ ವಿಲೇವಾರಿ ಬಳಿಕ ಅಂತಿಮ ಅಧಿಸೂಚನೆ ಹೊರಡಿಸಬೇಕು.

₹ 100 ದೇಣಿಗೆ ಸುತ್ತೋಲೆ ವಾಪಸ್

ಒಂದನೇ ಪುಟದಿಂದ

ಸರ್ಕಾರದ ನಿರ್ಧಾರಕ್ಕೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ.ಕುಮಾರಸ್ವಾಮಿ, ಕೆಆರ್‌ಎಸ್ ಪಕ್ಷ, ಎಐಡಿಎಸ್‌ಒ, ಆಮ್ ಆದ್ಮಿ ಪಕ್ಷ, ಚೈಲ್ಡ್ ರೈಟ್ಸ್ ಟ್ರಸ್ಟ್, ಕರ್ನಾಟಕ ರಾಜ್ಯ ಎಸ್‌ಡಿಎಂಸಿ ಸಮನ್ವಯ ವೇದಿಕೆ, ಪೀಪಲ್ ಲಾಯರ್ಸ್ ಗಿಲ್ಡ್ ಸೇರಿದಂತೆ ವಿವಿಧ ಸಂಘಟನೆಗಳು, ಶಿಕ್ಷಣ ತಜ್ಞರು ತೀವ್ರ ವಿರೋಧ ವ್ಯಕ್ತಪಡಿಸಿದ್ದರು.

ಸಮರ್ಥಿಸಿದ್ದ ಸಚಿವ: ಗುರುವಾರ ಬೆಳಿಗ್ಗೆಯಷ್ಟೇ ಸುತ್ತೋಲೆಯನ್ನು ಸಮರ್ಥಿಸಿಕೊಂಡಿದ್ದ ಶಾಲಾ ಶಿಕ್ಷಣ ಸಚಿವ ಬಿ.ಸಿ. ನಾಗೇಶ್ ಅವರು, ಸಂಜೆ ಹೊತ್ತಿಗೆ ತಮ್ಮ ಇಲಾಖೆಯ ಆಯುಕ್ತರಿಗೆ ಕರೆ ಮಾಡಿ, ತಕ್ಷಣವೇ ಅದನ್ನು ವಾಪಸ್ ಪಡೆದಿರುವ ಬಗ್ಗೆ ಸ್ಪಷ್ಟನೆ ಕೊಡಿ ಎಂದು ಸೂಚಿಸಿದರು.

ವಾಪಸ್ ಪಡೆಯುವ ಮುನ್ನ ಸುದ್ದಿಗಾರರ ಜತೆ ಮಾತನಾಡಿದ್ದ ಸಚಿವ ನಾಗೇಶ್, 'ಶಾಲೆ ಅಭಿವೃದ್ಧಿಗೆ ಸ್ಥಳೀಯವಾಗಿ ಹಣ ಸಂಗ್ರಹಿಸಲು ಆರ್‌ಟಿಇನಲ್ಲಿ ಅವಕಾಶ ಕಲ್ಪಿಸಿದ್ದೇ ಕಾಂಗ್ರೆಸ್. ಅದರಲ್ಲಿರುವ ಅಂಶ ಬಳಸಿಕೊಳ್ಳಲಾಗಿದೆ. ಪೋಷಕರು ಅವರಾಗಿಯೇ ಕೊಟ್ಟರೆ, ತಿಂಗಳಿಗೆ ₹ 100 ಪಡೆದು ರಸೀದಿ ಕೊಡುತ್ತಾರೆ' ಎಂದು ಹೇಳಿದ್ದರು.

'ಶಾಲೆಗಳಲ್ಲಿ ಎಲ್‌ಕೆಜಿ- ಯುಕೆಜಿ ಆರಂಭಿಸಿದವರು ಅಲ್ಲಿ ಪಾಠ ಮಾಡುವವರಿಗೆ ಸಂಭಾವನೆಗೆ ವ್ಯವಸ್ಥೆ ಮಾಡಿಲ್ಲ. ಹೀಗಾಗಿ, ಸಂಭಾವನೆಗಾಗಿ ಹಣ ಸಂಗ್ರಹಿಸಲು ಸುತ್ತೋಲೆ ಹೊರಡಿಸಲಾಗಿದೆ. ಆಗ ಕಾಂಗ್ರೆಸ್ ಸರ್ಕಾರದಲ್ಲಿ ಹಣವಿರಲಿಲ್ಲವೇ? ದುಡ್ಡಿದ್ದಿದ್ದರೆ 5 ವರ್ಷಗಳಲ್ಲಿ ಶಾಲೆಗಳಲ್ಲಿ 4,618 ಕೊಠಡಿಗಳನ್ನು ಮಾತ್ರ ಕಟ್ಟಿದರೇಕೆ? ಹೆಚ್ಚಿನ ಶಿಕ್ಷಕರನ್ನು ನೇಮಿಸಿಕೊಳ್ಳಲಿಲ್ಲವೇಕೆ?' ಎಂದೂ ಅವರು ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದ್ದರು.

'ದೇಣಿಗೆ ಸಂಗ್ರಹಿಸುವುದು ಬೇಡ ಎನ್ನುವುದಾದರೆ, ಎಲ್‌ಕೆಜಿ–ಯುಕೆಜಿ ತರಗತಿಗಳನ್ನು ನಿಲ್ಲಿಸಿ ಬಿಡಬೇಕಾ? 'ಎಸ್‌ಡಿಎಂಸಿಗಳು ಹಣ ದುರುಪಯೋಗ ಮಾಡಿಕೊಳ್ಳುವುದು ಕಂಡುಬಂದರೆ ಸುತ್ತೋಲೆ ಹಿಂಪಡೆಯಲಾಗುವುದು' ಎಂದೂ ಹೇಳಿದ್ದರು.

ರಾಯಪುರ: ನ.1ರಿಂದ ರಾಷ್ಟ್ರೀಯ ಬುಡಕಟ್ಟು ನೃತ್ಯೋತ್ಸವ



ನವದೆಹಲಿ (ಪಿಟಿಐ): ರಾಯಪುರದಲ್ಲಿ ನವೆಂಬರ್ 1ರಿಂದ 3ರವರೆಗೆ ರಾಷ್ಟ್ರೀಯ ಬುಡಕಟ್ಟು ನೃತ್ಯೋತ್ಸವ ನಡೆಯಲಿದ್ದು, 1,500 ಮಂದಿ ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಕಲಾವಿದರು ಭಾಗವಹಿಸುವರು ಎಂದು ಛತ್ತೀಸಗಡ ಮುಖ್ಯಮಂತ್ರಿ ಭೂಪೇಶ್ ಬಘೇಲ್ ಹೇಳಿದ್ದಾರೆ.

ಇಲ್ಲಿ ಹಮ್ಮಿಕೊಂಡಿದ್ದ ಪ್ರವಾಸೋದ್ಯಮ ಸಮಾವೇಶದಲ್ಲಿ ಮಾತನಾಡಿದ ಅವರು, ರಾಯಪುರದ ವಿಜ್ಞಾನ ಕಾಲೇಜು ಮೈದಾನದಲ್ಲಿ ಹಮ್ಮಿಕೊಂಡಿರುವ ನೃತ್ಯೋತ್ಸವವನ್ನು ಛತ್ತೀಸಗಡದ ಪ್ರವಾಸೋದ್ಯಮ ಮಂಡಳಿ ಆಯೋಜಿಸಿದೆ ಎಂದೂ ತಿಳಿಸಿದ್ದಾರೆ.

'ಜಗತ್ತಿನಾದ್ಯಂತ ಇರುವ ಬುಡಕಟ್ಟು ಜನರನ್ನು ಒಂದೇ ವೇದಿಕೆಗೆ ಕರೆತರುವ ಮತ್ತು ಅವರಿಗೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ನೃತ್ಯೋತ್ಸವ ಹಮ್ಮಿಕೊಳ್ಳಲಾಗುತ್ತಿದೆ. ಮಂಗೋಲಿಯಾ, ರಷ್ಯಾ, ಇಂಡೊನೇಷ್ಯಾ, ಸರ್ಬಿಯಾ, ನ್ಯೂಜಿಲೆಂಡ್, ಈಜಿಪ್ಟ್ ಮೊದಲಾದ ದೇಶಗಳ ನೃತ್ಯತಂಡಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿವೆ' ಎಂದು ಅವರು ಮಾಹಿತಿ ನೀಡಿದ್ದಾರೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	30,043	29,786
ಹಾರಂಗಿ	2,859	2,855.89	1,849	250
ಕಬಿನಿ	2,284	2,283.87	2,290	5,000
ಹೇಮಾವತಿ	2,922	2,921.50	4,989	7,722
ಲಿಂಗನಮಕ್ಕಿ	1,819	1,814	2,260	5,591
ಸೂಪಾ (ಮೀ)	564	553.84	1,664	2,087
ಮಾಣಿ	595	589	188	751
ತುಂಗಭದ್ರಾ	1,633	1,632.99	28,039	28,399
ಮಲಪ್ರಭಾ	2079.50	2,079.50	2,394	2,394
ಘಟಪ್ರಭಾ	2,175	2,175	1,564	1,564
ಭದ್ರಾ	186	185	3,671	2,456
ಆಲಮಟ್ಟಿ (ಮೀ)	519.60	519.59	47,034	47,034
ನಾರಾಯಣಪುರ (ಮೀ)	492.25	492.09	55,000	47,800

* ನೆಲಮಟ್ಟದಿಂದ

ಹೊಯ್ಸಳ ಸಾಹಿತ್ಯೋತ್ಸವದಲ್ಲಿ ಡಾ. ಎಸ್‌.ಎಲ್‌. ಭೈರಪ್ಪ ವಿಷಾದ

‘ಶುದ್ಧ ಸಾಹಿತ್ಯ ಪಾಠ ಕಡಿಮೆ’

ಪ್ರಜಾವಾಣಿ ವಾರ್ತೆ

ಹಾಸನ: ‘ಬೋಧಕರು ಒಂದೊಂದು ವಾದಕ್ಕೆ ಅಂಟಿಕೊಂಡಿದ್ದು, ವಿಶ್ವ ವಿದ್ಯಾಲಯಗಳಲ್ಲಿ ಶುದ್ಧ ಸಾಹಿತ್ಯದ ಪಾಠ ಕಡಿಮೆಯಾಗಿದೆ. ನಿಜವಾದ ಸಾಹಿತ್ಯದ ತತ್ವ ಹೇಳುತ್ತಿಲ್ಲ’ ಎಂದು ಕಾದಂಬರಿಕಾರ ಡಾ.ಎಸ್‌.ಎಲ್‌.ಭೈರಪ್ಪ ವಿಷಾದಿಸಿದರು.

ಕನ್ನಡ ಸಾಹಿತ್ಯ ಪರಿಷತ್‌ ಜಿಲ್ಲಾ ಘಟಕದಿಂದ ಆಯೋಜಿಸಿರುವ ಎರಡು ದಿನಗಳ ‘ಹೊಯ್ಸಳ ಸಾಹಿತ್ಯೋತ್ಸವ’ವನ್ನು ಶನಿವಾರ ಉದ್ಘಾಟಿಸಿ ಅವರು ಮಾತನಾಡಿದರು.

‘ಒಂದಲ್ಲ ಒಂದು ದಿನ ನಾವು ಶುದ್ಧ ಸಾಹಿತ್ಯದ ಕಡೆಗೆ ವಾಲಲೇಬೇಕು. ಸಾಹಿತ್ಯ ಓದುವ ಜನರಿಗೆ ನಿಜ ಸಾಹಿತ್ಯ ಯಾವುದು ಎನ್ನುವುದು ಗೊತ್ತಿದೆ. ಅವರನ್ನು ಅಡ್ಡದಾರಿಗೆ ಎಳೆಯುವುದು ಬಹಳ ಕಷ್ಟ. ಬೇರೆ ಬೇರೆ ವಿಚಾರ ತಿಳಿದಿರುವ ಓದುಗರು ಇರುವುದು ಒಳ್ಳೆಯದು. ಇದರಿಂದ ಸಾಹಿತ್ಯ ಬೆಳೆಯಲಿದೆ’ ಎಂದು ಅಭಿಪ್ರಾಯಪಟ್ಟರು.

‘ಜಿಜ್ಞಾಸೆ ಮತ್ತು ಜೀವನ ಮೌಲ್ಯದ ಅನುಭವ ಆಗುವುದು ಸಾಹಿತ್ಯದಿಂದ ಮಾತ್ರ. ಯಾವ ಸಾಹಿತ್ಯ ಕೃತಿ ಜಿಜ್ಞಾಸೆ, ಮೌಲ್ಯಗಳ ಜ್ಞಾನ ತಂದುಕೊಡುವುದಿಲ್ಲವೋ ಅದು ಹೆಚ್ಚು ದಿನ ಬಾಳುವುದಿಲ್ಲ’ ಎಂದರು.

‘ಆಧುನಿಕ ಸಾಹಿತ್ಯದ ಅನೇಕ ಕವಿಗಳು ಹೊಸ ಮೌಲ್ಯ ಹುಡುಕಲು ಪ್ರಯತ್ನಿಸಿದರು. ನಮ್ಮ ಪರಂಪರೆಯಲ್ಲಿ ಸಾಹಿತ್ಯದ ಕೆಲಸ ಏನೆಂದರೆ ಮೌಲ್ಯಗಳನ್ನು ಜನರಿಗೆ ತಿಳಿಸುವುದು. ಆದರೆ, ಸಾಹಿತ್ಯದ ಮೂಲಕವೇ ಎಲ್ಲವನ್ನೂ ಮಾಡುತ್ತೇವೆ, ಬಡತನ ಹೋಗಲಾಡಿಸುತ್ತೇವೆ, ಆರ್ಥಿಕತೆ ಸುಧಾರಿಸುತ್ತೇವೆ ಎಂಬ ವಾದವೆಲ್ಲ ಅಡ್ಡದಾರಿ ಅನ್ನಿಸುತ್ತದೆ’ ಎಂದು ವ್ಯಾಖ್ಯಾನಿಸಿದರು.



ಹಾಸನದಲ್ಲಿ ನಡೆದ ‘ಹೊಯ್ಸಳ ಸಾಹಿತ್ಯೋತ್ಸವ’ವನ್ನು ಡಾ.ಎಸ್‌.ಎಲ್‌. ಭೈರಪ್ಪ ಶನಿವಾರ ಉದ್ಘಾಟಿಸಿದರು. ಕಸಾಪ ಜಿಲ್ಲಾ ಘಟಕದ ಅಧ್ಯಕ್ಷ ಡಾ.ಎಚ್‌.ಎಲ್‌. ಮಲ್ಲೇಶಗೌಡ, ಶಾಸಕ ಪ್ರೀತಂ ಗೌಡ, ಅನುವಾದಕ ಡಾ.ಪ್ರಧಾನ ಗುರುದತ್ತ, ಕಸಾಪ ಅಧ್ಯಕ್ಷ ಡಾ.ಮಹೇಶ್‌ ಜೋಶಿ, ಕವಿ ಬಿ.ಆರ್‌. ಲಕ್ಷ್ಮಣರಾವ್‌, ಗಿರೀಶ್‌ ಹತ್ವಾರ್‌ (ಜೋಗಿ) ಇದ್ದಾರೆ.

ಸುದ್ದಿ 2 ನಿಮಿಷ

ಭೂತಾರಾಧನೆ; ಅಧ್ಯಯನ ಮಾಡಲಿ: ಸಚಿವೆ ಕರಂದ್ಲಾಜೆ

ಹುಬ್ಬಳ್ಳಿ: ‘ಸಿನಿಮಾ ಕುರಿತು ಯಾರು ಬೇಕಾದರೂ ಹೇಳಿಕೆ ನೀಡಬಹುದು. ಆದರೆ, ಭೂತಕೋಲ, ಭೂತಾರಾಧನೆ, ದೈವಾರಾಧನೆ, ಕೇರಳದ ತೆಯ್ಯಂ ಬಗ್ಗೆ ಮಾತನಾಡುವವರು, ಅದರ ಬಗ್ಗೆ ಅಧ್ಯಯನ ಮಾಡಲಿ’ ಎಂದು ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಕಾಂತಾರ ಚಿತ್ರದ ಬಗ್ಗೆ ನಟ ಚೇತನ್‌ ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ‘ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳ ಜನರು ಭೂತಾರಾಧನೆ, ದೈವಾರಾಧನೆಯನ್ನು ಸಂಪ್ರದಾಯದ ಪ್ರಕಾರ ಹಿಂದಿನಿಂದಲೂ ಮಾಡಿಕೊಂಡು ಬರುತ್ತಿದ್ದು, ಇದರಲ್ಲೇ ನೆಮ್ಮದಿ ಕಾಣುತ್ತಿದ್ದಾರೆ. ಇದು ನಮ್ಮ ನಾಡಿನ ಸಂಸ್ಕೃತಿ. ಎಲ್ಲರೂ ಇದನ್ನು ಗೌರವಿಸಬೇಕು. ಇಲ್ಲದಿದ್ದರೆ ಸುಮ್ಮನಿರಬೇಕು. ನಮ್ಮ ದೇಶದಲ್ಲಿ ನಾಸ್ತಿಕ, ಆಸ್ತಿಕ ಇಬ್ಬರಿಗೂ ಜಾಗ ಇದೆ’ ಎಂದು ಹೇಳಿದರು.



‘ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ಕೇರಳ, ತಮಿಳುನಾಡು, ಉತ್ತರ ಪ್ರದೇಶಗಳು ದೇಶದ ಭಾಗವಾಗಿಯೇ ಇವೆ. ಇಲ್ಲಿ ಭಾರತ ಜೋಡೊ ಅಗತ್ಯ ಇಲ್ಲ. ದೇಶ ವಿಭಜನೆ ಆಗಿದ್ದು ಕಾಂಗ್ರೆಸ್‌ನಿಂದ. ಬೇರೆ ದೇಶಗಳಿಗೆ ಕಾಂಗ್ರೆಸ್‌ ಸರ್ಕಾರ ಬಿಟ್ಟುಕೊಟ್ಟಿರುವ ಜಾಗದಲ್ಲಿ ಪಾದಯಾತ್ರೆ ನಡೆಸಲಿ’ ಎಂದು ಹೇಳಿದರು.

ಎರಡು ಕಡೆ ಸ್ಪರ್ಧಿಸಲ್ಲ: ಎಚ್‌ಡಿಕೆ

ಚನ್ನಪಟ್ಟಣ: ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಎರಡು ಕ್ಷೇತ್ರಗಳಲ್ಲಿ ಸ್ಪರ್ಧಿಸುವ ಮಾತೇ ಇಲ್ಲ. ಚನ್ನಪಟ್ಟಣದಲ್ಲಿ ಮಾತ್ರ ಸ್ಪರ್ಧಿಸುತ್ತೇನೆ’ ಎಂದು ಶಾಸಕ ಎಚ್‌.ಡಿ. ಕುಮಾರಸ್ವಾಮಿ ಸ್ಪಷ್ಟಪಡಿಸಿದರು.

ನಗರದಲ್ಲಿ ಶನಿವಾರ ಜೆಡಿಎಸ್‌ ಅಲ್ಪಸಂಖ್ಯಾತರ ಘಟಕದ ಕಚೇರಿ ಉದ್ಘಾಟಿಸಿದ ಬಳಿಕ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

‘ರಾಜ್ಯದ ಹಲವೆಡೆ ಸ್ಪರ್ಧಿಸಲು ಒತ್ತಾಯ ಇದೆ. ನಾನು ಟೂರಿಂಗ್‌ ಟಾಕೀಸ್‌ ಅಲ್ಲ ಎಂದು ಪಕ್ಷದ ಅಭಿಮಾನಿಗಳಿಗೆ ಹೇಳಿದ್ದೇನೆ. ಮಂಡ್ಯ ಜಿಲ್ಲೆಯ ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಒತ್ತಾಯಿಸಿದ್ದಾರೆ. ಆದರೆ, ಚನ್ನಪಟ್ಟಣ ಹೊರತುಪಡಿಸಿ ಬೇರೆಲ್ಲೂ ಸ್ಪರ್ಧಿಸುವುದಿಲ್ಲ’ ಎಂದರು.

ಕಳೆದ ಬಾರಿ ಎರಡು ಕ್ಷೇತ್ರದಲ್ಲಿ ಸ್ಪರ್ಧಿಸಿದ್ದೆ. ಅದಕ್ಕೆ ಪಕ್ಷದ ಚನ್ನಪಟ್ಟಣ ಕಾರ್ಯಕರ್ತರೇ ಕಾರಣ. ಕಳೆದ ಇಪ್ಪತ್ತು ವರ್ಷಗಳಿಂದ ಇಲ್ಲಿನ ಕಾರ್ಯಕರ್ತರು ನೊಂದಿದ್ದರು. ಅವರ ಒತ್ತಡ ಮತ್ತು ನೋವಿಗೆ ಸ್ಪಂದಿಸುವ ಉದ್ದೇಶದಿಂದ ಎರಡು ಕಡೆ ಸ್ಪರ್ಧಿಸಬೇಕಾಯಿತು ಎಂದು ಅವರು ಸಮರ್ಥಿಸಿಕೊಂಡರು.

ಹೈದರಾಬಾದ್‌ನಿಂದ ಗೋರಖಪುರಕ್ಕೆ ತೆರಳುತ್ತಿದ್ದಾಗ ದುರ್ಘಟನೆ

ಟ್ರಕ್‌ಗೆ ಬಸ್‌ ಡಿಕ್ಕಿ:15 ಮಂದಿ ಸಾವು

ರೇವಾ, ಮಧ್ಯಪ್ರದೇಶ (ಪಿಟಿಐ): ರೇವಾ ಜಿಲ್ಲೆಯ ಸೋಹಾಗಿ ಘಾಟಿ ಸಮೀಪ ನಿಂತಿದ್ದ ಟ್ರಕ್‌ಗೆ ಖಾಸಗಿ ಬಸ್‌ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ 15 ಮಂದಿ ಮೃತಪಟ್ಟಿದ್ದು, ಇತರ 40 ಮಂದಿ ಗಾಯಗೊಂಡಿದ್ದಾರೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದ್ದಾರೆ.

ಗಾಯಾಳುಗಳ ಪೈಕಿ ಕೆಲವರ ಸ್ಥಿತಿ ಗಂಭೀರವಾಗಿದ್ದು, ರೇವಾ ಆಸ್ಪತ್ರೆಗೆ ದಾಖಲಿಸಲಾಗಿದೆ. ಈ ಅಪಘಾತ ಶುಕ್ರವಾರ ರಾತ್ರಿ ಸಂಭವಿಸಿದೆ. ಮೃತರಲ್ಲಿ ಬಹುತೇಕರು ಕಾರ್ಮಿಕರಾಗಿದ್ದು, ದೀಪಾವಳಿ ಹಬ್ಬಕ್ಕಾಗಿ ತವರಿಗೆ ತೆರಳುತ್ತಿದ್ದರು.

‘ಬಸ್‌ ಹೈದರಾಬಾದ್‌ನಿಂದ ಉತ್ತರಪ್ರದೇಶದ ಗೋರಖ್‌ಪುರಕ್ಕೆ ತೆರಳುತ್ತಿತ್ತು. ಜಿಲ್ಲಾ ಕೇಂದ್ರ ರೇವಾದಿಂದ 60 ಕಿ.ಮೀ. ದೂರದಲ್ಲಿರುವ ಸೋಹಾಗಿ ಘಾಟಿ ಬಳಿ ರಾಷ್ಟ್ರೀಯ ಹೆದ್ದಾರಿ 30ರಲ್ಲಿ ನಿಂತಿದ್ದ ಟ್ರಕ್‌ಗೆ ಬಸ್‌ ಡಿಕ್ಕಿ ಹೊಡೆದಿದೆ’ ಎಂದು ಜಿಲ್ಲಾ ಪೊಲೀಸ್‌ ವರಿಷ್ಠಾಧಿಕಾರಿ ನವನೀತ್‌ ಭಾಸಿನ್‌ ತಿಳಿಸಿದ್ದಾರೆ.


ಮಧ್ಯಪ್ರದೇಶದ ರೇವಾ ಜಿಲ್ಲೆಯ ಸೋಹಾಗಿ ಘಾಟಿಯಲ್ಲಿ ನಿಂತಿದ್ದ ಟ್ರಕ್‌ಗೆ ಡಿಕ್ಕಿ ಹೊಡೆದ ಖಾಸಗಿ ಬಸ್‌ನ ಮುಂಭಾಗ ನಜ್ಜುಗುಜ್ಜಾಗಿದೆ —ಪಿಟಿಐ ಚಿತ್ರ

‘12 ಮಂದಿ ಸ್ಥಳದಲ್ಲಿಯೇ ಮೃತಪಟ್ಟರು. ಇಬ್ಬರು ರೇವಾದಲ್ಲಿನ ಆಸ್ಪತ್ರೆಗೆ ಕರೆದೊಯ್ಯುವ ಮಾರ್ಗ ಮಧ್ಯೆ ಅಸುನೀಗಿದರೆ, ಮತ್ತೊಬ್ಬರು ಆಸ್ಪತ್ರೆಯಲ್ಲಿ ಸಾವನ್ನಪ್ಪಿದರು’ ಎಂದು ತಿಳಿಸಿದ್ದಾರೆ.

‘ಮುಂದಿದ್ದ ವಾಹನವೊಂದಕ್ಕೆ ಡಿಕ್ಕಿ ಹೊಡೆದ ಕಾರಣ, ಚಾಲಕ ಹಠಾತ್ತನೇ ಬ್ರೇಕ್‌ ಹಾಕಿ ಟ್ರಕ್‌ ನಿಲ್ಲಿಸಿದ್ದಾರೆ. ಈ ವೇಳೆ, ಹಿಂದಿನಿಂದ ವೇಗವಾಗಿ ಬರುತ್ತಿದ್ದ ಬಸ್‌, ಟ್ರಕ್‌ಗೆ ಅಪ್ಪಳಿಸಿದೆ’ ಎಂದು ಭಾಸಿನ್‌ ಹೇಳಿದ್ದಾರೆ.

ಶೋಕ: ಬಸ್‌ ಅಪಘಾತದ ಬಗ್ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಪ್ರಧಾನಿ ನರೇಂದ್ರ ಮೋದಿ ಅವರು ಶೋಕ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬಗಳಿಗೆ ಸಂತಾಪ ಸೂಚಿಸಿರುವ ಅವರು, ಗಾಯಾಳುಗಳು ಶೀಘ್ರವೇ ಗುಣಮುಖರಾಗಲಿ ಎಂದು ಹಾರೈಸಿದ್ದಾರೆ.

ಪರಿಹಾರ: ಪ್ರಧಾನಿ ಮೋದಿ ಅವರು, ಈ ಅಪಘಾತದಲ್ಲಿ ಮೃತರ ಕುಟುಂಬಗಳಿಗೆ ₹ 2 ಲಕ್ಷ, ಗಾಯಾಳುಗಳಿಗೆ ತಲಾ ₹ 50 ಸಾವಿರ ಪರಿಹಾರ ಘೋಷಿಸಿದ್ದಾರೆ ಎಂದು ಪ್ರಧಾನಮಂತ್ರಿ ಕಾರ್ಯಾಲಯ ಟ್ವೀಟ್‌ ಮಾಡಿದೆ.

ಮುಖ್ಯಮಂತ್ರಿ ಶಿವರಾಜ್‌ ಸಿಂಗ್‌ ಚೌಹಾಣ್‌ ಅವರು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರಿಗೆ ದೂರವಾಣಿ ಕರೆ ಮಾಡಿ, ಈ ಅಪಘಾತ ಕುರಿತು ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ಹೇಳಿವೆ.

‘ಹಣದುಬ್ಬರ ದರಕ್ಕಿಂತಲೂ ಎಂಎಸ್‌ಪಿ ಕಡಿಮೆ’

ನವದೆಹಲಿ (ಪಿಟಿಐ): ‘ಹಿಂಗಾರು ಬೆಳೆಗಳಿಗೆ ಘೋಷಿಸಿರುವ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ) ಹಣದುಬ್ಬರ ದರಕ್ಕಿಂತಲೂ ಕಡಿಮೆ ಇದೆ. ಎಂಎಸ್‌ಪಿ ಹೆಸರಿನಲ್ಲಿ ಕೇಂದ್ರ ಸರ್ಕಾರ ರೈತರಿಗೆ ಮೋಸ ಮಾಡುತ್ತಿದೆ’ ಎಂದು ಕಾಂಗ್ರೆಸ್‌ ಶನಿವಾರ ಆರೋಪಿಸಿದೆ.

‘ಎಂಎಸ್‌ಪಿ ಘೋಷಿಸುವ ಮೂಲಕ ರೈತರಿಗೆ ಅನುಕೂಲ ಮಾಡಿಕೊಟ್ಟಿರುವುದಾಗಿ ಬಿಜೆಪಿ ತನ್ನ ಬೆನ್ನನ್ನು ತಾನೇ ತಟ್ಟಿಕೊಳ್ಳುತ್ತಿದೆ. ವಾಸ್ತವದಲ್ಲಿ ಅದು ರೈತರಿಗೆ ವಂಚಿಸಿದೆ. ಬೆಳಕಿನ ಹಬ್ಬ ದೀಪಾವಳಿಯನ್ನು ಸಂಭ್ರಮಿಸಬೇಕೆಂಬ ರೈತರ ಶ್ರಮ, ಕೇಂದ್ರದ ಇಂಥ ಕ್ರಮದಿಂದ ವ್ಯರ್ಥವಾದಂತಾಗಿದೆ’ ಎಂದು ಕಾಂಗ್ರೆಸ್‌ ಪ್ರಧಾನ ಕಾರ್ಯದರ್ಶಿ ರಣದೀಪ್‌ ಸುರ್ಜೇವಾಲಾ ಅವರು ಟೀಕಿಸಿದ್ದಾರೆ.

ಈ ಕುರಿತು ಅವರು ಹಿಂದಿಯಲ್ಲಿ ಸರಣಿ ಟ್ವೀಟ್‌ಗಳನ್ನು ಮಾಡಿದ್ದಾರೆ.



ಶೋಭಾ ಯಾತ್ರೆ ಚಾಮರಾಜನಗರದ ವಿದ್ಯಾಗಣಪತಿ ಮಂಡಳಿ ಪ್ರತಿಷ್ಠಾಪಿಸಿದ್ದ ವಿದ್ಯಾಗಣಪತಿ ಮೂರ್ತಿಯ ವಿಸರ್ಜನಾ ಶೋಭಾಯಾತ್ರೆ ಶನಿವಾರ ನೂರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು –ಪ್ರಜಾವಾಣಿ ಚಿತ್ರ

‘ಗ್ರಾಮ ಒನ್‌’: ಕೋಟಿ ದಾಟಿದ ಫಲಾನುಭವಿಗಳ ಸಂಖ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರ ಗ್ರಾಮೀಣ ಭಾಗಗಳಲ್ಲಿ ನಾಗರಿಕರ ಮನೆ ಬಾಗಿಲಿಗೆ ವಿವಿಧ ಸೇವೆಗಳನ್ನು ಒದಗಿಸಲು ಆರಂಭಿಸಿರುವ ‘ಗ್ರಾಮ ಒನ್‌’ ಯೋಜನೆಯ ಫಲಾನುಭವಿಗಳ ಸಂಖ್ಯೆ ಕೇವಲ ಒಂಬತ್ತು ತಿಂಗಳಲ್ಲಿ ಒಂದು ಕೋಟಿ ದಾಟಿದೆ. ಯೋಜನೆಯು ಜ. 17ರಂದು ಆರಂಭಗೊಂಡಿತ್ತು.

ಈ ಬಗ್ಗೆ ಮಾಹಿತಿ ನೀಡಿದ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಇ-ಆಡಳಿತ) ಕಾರ್ಯದರ್ಶಿ ವಿ. ಪೊನ್ನುರಾಜ್‌, ‘ಗ್ರಾಮ ಒನ್‌ ಕೇಂದ್ರಗಳ ಮೂಲಕ ನಾಗರಿಕರ ಮನೆ ಬಾಗಿಲಿಗೆ ವಿವಿಧ ಸೇವೆಗಳನ್ನು ತಲುಪಿಸುವುದು ಸರ್ಕಾರದ ಉದ್ದೇಶ. ಸೇವಾಸಿಂಧು ಯೋಜನೆಯಡಿ ರೂಪಿಸಲಾಗಿರುವ 800 ಸೇವೆಗಳ ಜೊತೆ ಆಧಾರ್‌, ಪಾನ್‌ ಕಾರ್ಡ್‌, ಬ್ಯಾಂಕಿಂಗ್‌, ಪ್ರಧಾನ ಮಂತ್ರಿ ಫಸಲ್‌ ಭೀಮಾ ಯೋಜನೆ, ಇ- ಸ್ಟ್ಯಾಂಪ್‌ ಮತ್ತಿತರ ಸೇವೆಗಳನ್ನೂ ನೀಡಲಾಗುತ್ತಿದೆ’ ಎಂದಿದ್ದಾರೆ.

‘ಗ್ರಾಮೀಣರಿಗೆ ಸರ್ಕಾರದ ಸೇವೆಗಳು ಸುಲಭವಾಗಿ ಸಿಗುವಂತೆ ಮಾಡುವುದು ಈ ಯೋಜನೆಯ ಮೂಲ ಉದ್ದೇಶ. ನಾಗರಿಕ ಕೇಂದ್ರಿತ ಎಲ್ಲ ಸೇವೆಗಳನ್ನು ನೀಡುವ ಚಟುವಟಿಕೆಗೆ ಏಕ- ಗವಾಕ್ಷಿ ಕೇಂದ್ರವಾಗಿ ಈ ಯೋಜನೆಯನ್ನು ಸೃಜಿಸಲಾಗಿದ್ದು, ಎಲ್ಲ 31 ಜಿಲ್ಲೆಗಳಲ್ಲಿಯೂ ಅಭೂತಪೂರ್ವ ಯಶಸ್ಸು ಕಂಡಿದೆ’ ಎಂದು ಯೋಜನೆಯ ಯೋಜನಾ ನಿರ್ದೇಶಕ ಬಿ.ಎನ್‌. ವರಪ್ರಸಾದ್‌ ರೆಡ್ಡಿ ತಿಳಿಸಿದ್ದಾರೆ.

‘ಸದ್ಯ 7,112 ಗ್ರಾಮ ಒನ್‌ ಕೇಂದ್ರಗಳು ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸುತ್ತಿವೆ. ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಕನಿಷ್ಠ ಒಂದು ಕೇಂದ್ರ ಇರಬೇಕೆಂಬ ಕಾರಣಕ್ಕೆ ಇನ್ನೂ 1,600 ಕೇಂದ್ರಗಳನ್ನು ತೆರೆಯಲು ಸರ್ಕಾರ ಉದ್ದೇಶಿಸಿದೆ. ಮಧ್ಯವರ್ತಿಗಳ ಹಾವಳಿಯಿಂದ ನಾಗರಿಕರನ್ನು ಮುಕ್ತಗೊಳಿಸುವ ಜೊತೆಗೆ, ಗುಣಮಟ್ಟದ ಸೇವೆಯನ್ನು ನಿಗದಿತ ಸಮಯದಲ್ಲಿ ಇಲ್ಲಿ ನೀಡಲಾಗುತ್ತಿದೆ’ ಎಂದೂ ಅವರು ಹೇಳಿದ್ದಾರೆ.

ಸಂಪುಟ ವಿಸ್ತರಣೆಯೊ, ಪುನರ್ ರಚನೆಯೊ ಕಾದು ನೋಡಿ: ಸಿ.ಎಂ

ಪ್ರಜಾವಾಣಿ ವಾರ್ತೆ

ಹೊಸದುರ್ಗ (ಚಿತ್ರದುರ್ಗ): ‘ಸಚಿವ ಸಂಪುಟ ಸೇರಲು ಹಲವು ಆಕಾಂಕ್ಷಿಗಳು ಉತ್ಸುಕರಾಗಿದ್ದಾರೆ. ಈ ಬಗ್ಗೆ ಹೈಕಮಾಂಡ್‌ ಅಂತಿಮ ತೀರ್ಮಾನ ಕೈಗೊಳ್ಳಲಿದೆ. ಸಂಪುಟ ವಿಸ್ತರಣೆಯೊ, ಪುನರ್ ರಚನೆಯೊ ಕಾದು ನೋಡಿ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶನಿವಾರ ತಿಳಿಸಿದರು.

ಪಟ್ಟಣದ ಹೆಲಿಪ್ಯಾಡ್‌ ಬಳಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಈ ಬಗ್ಗೆ ಸಿದ್ದತೆಗಳು ನಡೆಯುತ್ತಿವೆ. ಶೀಘ್ರದಲ್ಲೇ ದೆಹಲಿಗೆ ತೆರಳಿ ಹೈಕಮಾಂಡ್‌ ಭೇಟಿ ಮಾಡುತ್ತೇನೆ. ರಾಜಕೀಯ ಸನ್ನಿವೇಶದಲ್ಲಿ ಕೆಲವು ಸಂದರ್ಭದಲ್ಲಿ ಚಿತ್ರದುರ್ಗಕ್ಕೆ ಪ್ರಾತಿನಿಧ್ಯ ನೀಡಲು ಸಾಧ್ಯವಾಗಿಲ್ಲ. ಈ ಬಾರಿ ಅವಕಾಶ ನೀಡಲು ಪ್ರಯತ್ನಿಸಲಾಗುವುದು’ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

‘ಭದ್ರಾ ಮೇಲ್ದಂಡೆ ಯೋಜನೆ ರಾಷ್ಟ್ರೀಯ ಯೋಜನೆಯಾಗಿ ಶೀಘ್ರದಲ್ಲೇ ಘೋಷಣೆ ಆಗಲಿದೆ. ಈ ಕುರಿತು ಕೇಂದ್ರ ಸಚಿವರ ಜೊತೆ ಮಾತನಾಡಿದ್ದೇನೆ. ಇದು ರಾಜ್ಯದ ಮೊದಲ ರಾಷ್ಟ್ರೀಯ ನೀರಾವರಿ ಯೋಜನೆಯಾಗಲಿದ್ದು, ದೊಡ್ಡ ಹಣಕಾಸಿನ ನೆರವು ಸಿಗಲಿದೆ. ಇದರಿಂದ ಕಾಮಗಾರಿ ತ್ವರಿತಗತಿಯಲ್ಲಿ ಪೂರ್ಣಗೊಳಿಸಲು ಅನುಕೂಲವಾಗಲಿದೆ’ ಎಂದು ಮಾಹಿತಿ ನೀಡಿದರು.

‘ತುಮಕೂರು-ಚಿತ್ರದುರ್ಗ-ದಾವಣಗೆರೆ ನೇರ ರೈಲು ಮಾರ್ಗಕ್ಕೆ ಭೂಸ್ವಾಧೀನ ಪ್ರಕ್ರಿಯೆ ಅಂತಿಮ ಹಂತದಲ್ಲಿದೆ. ಅಲ್ಲಲ್ಲಿ ಕೆಲ ಕಾರಣದಿಂದ ಭೂಸ್ವಾಧೀನ ವಿಳಂಬ ಆಗಿದೆ. ಅಗತ್ಯ ಇರುವ ₹ 100 ಕೋಟಿ ನೆರವು ನೀಡುವುದಾಗಿ ಆಶ್ವಾಸನೆ ನೀಡಿದ್ದೇನೆ. ಶೀಘ್ರದಲ್ಲೇ ಕಾಮಗಾರಿ ಕೈಗೆತ್ತಿಕೊಳ್ಳಲಾಗುವುದು’ ಎಂದು ಅವರು ಹೇಳಿದರು.

ವೀರ ಸಾವರ್ಕರ್‌ ಮೊಮ್ಮಗ ಸಾತ್ಯಕಿ ಅಭಿಮತ

‘ಜಾತಿ ವ್ಯವಸ್ಥೆ ಅಂತ್ಯ ಅಜ್ಜನ ಆಶಯ’

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಹಿಂದೂಗಳ ಏಕತೆಗೆ ಅಡ್ಡಿಯಾಗಿರುವ ಜಾತಿ ವ್ಯವಸ್ಥೆ ಅಂತ್ಯಗೊಳಿಸಬೇಕು ಎಂಬುದು ವೀರ ಸಾವರ್ಕರ್‌ ಅವರ ಆಶಯವಾಗಿತ್ತು. ಅವರ ವಿಚಾರಧಾರೆ ಆಚರಣೆಗೆ ತರಲು ಜಾತಿ ನಿರ್ಮೂಲನೆ ಹೋರಾಟ ಮತ್ತೆ ಆರಂಭಿಸಬೇಕಿದೆ’ ಎಂದು ಸಾವರ್ಕರ್‌ ಅವರ ಮೊಮ್ಮಗ ಸಾತ್ಯಕಿ ಹೇಳಿದರು.

ನಗರದ ಶ್ರೀಗಂಧ ಹಾಗೂ ಸಾಮಗಾನ ಸಂಸ್ಥೆಗಳಿಂದ ಶನಿವಾರ ಇಲ್ಲಿ ಆಯೋಜಿಸಿದ್ದ ಸಾವರ್ಕರ್‌ ಸಾಮ್ರಾಜ್ಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಹಿಂದೂಗಳ ಶಕ್ತಿ ಕೇಂದ್ರ ಶಿವಮೊಗ್ಗ ಎಂಬುದು ಗೊತ್ತಿಲ್ಲದೇ ಕೆಲ ದಿನಗಳ ಹಿಂದೆ ವೀರ ಸಾವರ್ಕರ್‌ ಅವರಿಗೆ ಇಲ್ಲಿ ಅಪಮಾನ ಮಾಡಲಾಯಿತು. ಇದರ ಫಲವಾಗಿ ಸಾವರ್ಕರ್‌ ವಿಚಾರಧಾರೆ ಎಂಬ ಜ್ಯೋತಿ ಇಡೀ ರಾಜ್ಯಕ್ಕೆ ವ್ಯಾಪಿಸಿದೆ’ ಎಂದರು.



ಶಿವಮೊಗ್ಗದಲ್ಲಿ ಶನಿವಾರ ನಡೆದ ‘ಸಾವರ್ಕರ್‌ ಸಾಮ್ರಾಜ್ಯ’ ಕಾರ್ಯಕ್ರಮದಲ್ಲಿ ಸಾವಿರ ಗಾಯಕರು ಏಕಕಾಲದಲ್ಲಿ ‘ವಂದೇ ಮಾತರಂ’ ಗೀತೆ ಹಾಡಿದರು

‘ಹಿಂದೂಗಳ ಸಂಘಟನೆ ಸಾವರ್ಕರ್‌ ಅವರ ಆಶಯವಾಗಿತ್ತು. ರಾಷ್ಟ್ರ ವಿರೋಧಿ ಶಕ್ತಿಗಳು ನಮ್ಮ ನಡುವೆ ಇವೆ. ಅವರೊಂದಿಗೆ ಹೋರಾಡಲು ಸಾವರ್ಕರ್‌ ಅವರ ಹಿಂದುತ್ವ ಮಂತ್ರವನ್ನು ಮತ್ತೆ ಜಾಗೃತ ಮಾಡಬೇಕಿದೆ’ ಎಂದರು.

ಹಿಂದೂಸ್ತಾನ್‌ ಏರೋನಾಟಿಕ್ಸ್‌ ಲಿಮಿಟೆಡ್‌ ಅಭಿವೃದ್ಧಿಪಡಿಸಿದ್ದ ಆಧುನಿಕ ಲಘು ಹೆಲಿಕಾಪ್ಟರ್‌

ಹೆಲಿಕಾಪ್ಟರ್‌ ದುರಂತ: ಮೃತರ ಸಂಖ್ಯೆ 5ಕ್ಕೆ ಏರಿಕೆ

ಇಟಾನಗರ (ಪಿಟಿಐ): ‘ಅರುಣಾಚಲಪ್ರದೇಶದ ಮಿಗ್ಗಿಂಗ್‌ನಲ್ಲಿ ಶುಕ್ರವಾರ ನಡೆದಿದ್ದ ಸೇನಾ ಹೆಲಿಕಾಪ್ಟರ್‌ ದುರಂತದ ವೇಳೆ ನಾಪತ್ತೆಯಾಗಿದ್ದ ಸಿಬ್ಬಂದಿಯೊಬ್ಬರ ಮೃತದೇಹ ಶನಿವಾರ ಪತ್ತೆಯಾಗಿದೆ. ಇದರೊಂದಿಗೆ ಅವಘಡದಲ್ಲಿ ಸಾವಿಗೀಡಾದವರ ಸಂಖ್ಯೆಯು 5ಕ್ಕೆ ಏರಿಕೆಯಾಗಿದೆ’ ಎಂದು ರಕ್ಷಣಾ ಸಚಿವಾಲಯದ ವಕ್ತಾರ ಲೆಫ್ಟಿನೆಂಟ್‌ ಕರ್ನಲ್‌ ಎ.ಎಸ್‌.ವಾಲಿಯಾ ತಿಳಿಸಿದ್ದಾರೆ.

‘ಇಬ್ಬರು ಪೈಲಟ್‌ ಸೇರಿದಂತೆ ಒಟ್ಟು ಐವರು ಸೇನಾ ಸಿಬ್ಬಂದಿಯನ್ನು ಒಳಗೊಂಡ ಆಧುನಿಕ ಲಘು ಹೆಲಿಕಾಪ್ಟರ್‌ (ಎಎಲ್‌ಎಚ್‌) ಶುಕ್ರವಾರ ಬೆಳಿಗ್ಗೆ ಪತನಗೊಂಡಿತ್ತು. ನಾಲ್ವರ ಮೃತದೇಹಗಳು ಘಟನಾ ಸ್ಥಳದಲ್ಲಿ ಶುಕ್ರವಾರ ಸಂಜೆಯೇ ಪತ್ತೆಯಾಗಿದ್ದವು’ ಎಂದು ಅವರು ಮಾಹಿತಿ ನೀಡಿದ್ದಾರೆ.

‘ಮೃತರನ್ನು ಪೈಲಟ್‌ಗಳಾದ ಮೇಜರ್‌ ವಿಕಾಸ್‌ ಬಾಂಬೂ ಮತ್ತು ಮೇಜರ್‌ ಮುಸ್ತಾಫಾ ಬೊಹಾರಾ, ಸಿಎಫ್‌ಎನ್‌ ತಂತ್ರಜ್ಞ (ಎಇಎನ್‌) ಕೆ.ವಿ. ಅಶ್ವಿನ್‌, ಹವಾಲ್ದಾರ್‌ ಬೀರೇಶ್‌ ಸಿನ್ಹಾ (ಒಪಿಆರ್‌) ಹಾಗೂ ರೋಹಿತಾಶ್ವ ಕುಮಾರ್‌ ಎಂದು ಗುರುತಿಸಲಾಗಿದೆ. ಹೆಲಿಕಾಪ್ಟರ್‌ ಪತನಕ್ಕೆ ಕಾರಣ ಏನೆಂದು ಇನ್ನೂ ಗೊತ್ತಾಗಿಲ್ಲ. ಈ ಕುರಿತು ಮಾಹಿತಿ ಕಲೆಹಾಕಲಾಗುತ್ತಿದೆ’ ಎಂದಿದ್ದಾರೆ.

‘ಹೆಲಿಕಾಪ್ಟರ್‌ ಕಾರ್ಯಾಚರಣೆಗೆ ಪೂರಕವಾದ ವಾತಾವರಣ ಇತ್ತು ಎಂದು ಗೊತ್ತಾಗಿದೆ. ಈ ಹೆಲಿಕಾಪ್ಟರ್‌ ಅನ್ನು 2015ರ ಜೂನ್‌ನಲ್ಲಿ ಸೇನೆಗೆ ಸೇರ್ಪಡೆ ಮಾಡಲಾಗಿತ್ತು’ ಎಂದೂ ತಿಳಿಸಿದ್ದಾರೆ.

ಹೆಲಿಕಾಪ್ಟರ್‌ ಹೆಸರು ‘ಎಚ್‌ಎಎಲ್‌ ರುದ್ರ’: ಪತನವಾಗಿರುವ ಸೇನಾ ಹೆಲಿಕಾಪ್ಟರ್‌ ಹೆಸರು ‘ಎಚ್‌ಎಎಲ್‌ ರುದ್ರ’. ಇದು ಲೋಯರ್‌ ಸಿಯಾಂಗ್‌ ಜಿಲ್ಲೆಯ ಲಿಕಾಬಾಲಿಯಿಂದ ಹಾರಾಟ ನಡೆಸಿತ್ತು. ಹಿಂದೂಸ್ತಾನ್‌ ಏರೋನಾಟಿಕ್ಸ್‌ ಲಿಮಿಟೆಡ್‌ (ಎಚ್‌ಎಎಲ್‌) ಈ ಹೆಲಿಕಾಪ್ಟರ್‌ ಅನ್ನು ಭಾರತೀಯ ಸೇನೆಗೆಂದೇ ಅಭಿವೃದ್ಧಿಪಡಿಸಿತ್ತು.

ಇದು ಶಸ್ತ್ರಾಸ್ತ್ರ ಸಂಯೋಜಿತ (ಡಬ್ಲ್ಯುಎಸ್‌ಐ) ಧ್ರುವ್‌ ಮಾರ್ಕ್‌–4ನ ರೂಪಾಂತರಿ ಹೆಲಿಕಾಪ್ಟರ್‌ ಆಗಿದೆ. ದಾಳಿಯ ಉದ್ದೇಶದಿಂದ ದೇಶಿಯವಾಗಿ ಅಭಿವೃದ್ಧಿಪಡಿಸಲಾಗಿದ್ದ ಮೊದಲ ಶಸ್ತ್ರ ಸಜ್ಜಿತ ಹೆಲಿಕಾಪ್ಟರ್‌ ಇದಾಗಿತ್ತು.

ತಾಂತ್ರಿಕ ತೊಂದರೆ ಬಗ್ಗೆ ಮಾಹಿತಿ ನೀಡಿದ್ದ ಸಿಬ್ಬಂದಿ: ‘ಹೆಲಿಕಾಪ್ಟರ್‌ ಪತನಕ್ಕೂ ಮುನ್ನ ಅದರಲ್ಲಿ ಉಂಟಾಗಿದ್ದ ತಾಂತ್ರಿಕ ತೊಂದರೆ ಕುರಿತ ಮಾಹಿತಿಯು ಏರ್‌ ಟ್ರಾಫಿಕ್‌ ಕಂಟ್ರೋಲ್‌ಗೆ (ಎಟಿಸಿ) ಲಭಿಸಿತ್ತು’ ಎಂದು ಎ.ಎಸ್‌.ವಾಲಿಯಾ ತಿಳಿಸಿದ್ದಾರೆ. ‘ಅವಘಡಕ್ಕೆ ಕಾರಣವಾಗಿರುವ ಅಂಶಗಳ ಕುರಿತು ಸಮಗ್ರ ಮಾಹಿತಿ ಕಲೆಹಾಕಬೇಕಿದೆ. ಈ ನಿಟ್ಟಿನಲ್ಲಿ ತನಿಖೆ ನಡೆಸಲಾಗುತ್ತದೆ’ ಎಂದಿದ್ದಾರೆ.

ಮೃತರಲ್ಲಿ ಕಾಸರಗೋಡು ಜಿಲ್ಲೆಯ ಸೈನಿಕ

ಕಾಸರಗೋಡು: ಅರುಣಾಚಲ ಪ್ರದೇಶದಲ್ಲಿ ಹೆಲಿಕಾಪ್ಟರ್‌ ಪತನಗೊಂಡು ಮೃತಪಟ್ಟ ಸೈನಿಕರಲ್ಲಿ, ಕಾಸರಗೋಡು ಜಿಲ್ಲೆ ಚೆರುವತ್ತೂರು ಕಿಳಕ್ಕೇಮುರಿ ಗ್ರಾಮದ ಕೆ.ವಿ.ಅಶ್ವಿನ್‌ (24)ಅವರೂ ಸೇರಿದ್ದಾರೆ.


ಅಶ್ವಿನ್‌

ಅವರು ಸ್ಥಳೀಯ ಕಟ್ಟಡ ನಿರ್ಮಾಣ ಕಾರ್ಮಿಕ ಅಶೋಕನ್‌-ಕೆ.ವಿ.ಕೌಸಲ್ಯ ದಂಪತಿ ಪುತ್ರ. ಇವರಿಗೆ ಸಹೋದರಿಯರಾದ ಅಶ್ವತಿ, ಅನಶ್ವರ ಇದ್ದಾರೆ. ನಾಲ್ಕು ವರ್ಷಗಳ ಹಿಂದೆ ಎಲೆಕ್ಟ್ರಾನಿಕ್‌ ಅಂಡ್‌ ಮೆಕಾನಿಕಲ್‌ ಎಂಜಿನಿಯರಿಂಗ್‌ ವಿಭಾಗದಲ್ಲಿ ಎಂಜಿನಿಯರ್‌ ಆಗಿ ಅಶ್ವಿನ್‌ ಸೈನ್ಯ ಸೇರಿದ್ದರು.

ರಜೆಗೆ ಊರಿಗೆ ಬಂದಿದ್ದ ಅಶ್ವಿನ್‌ ಕಳೆದ ತಿಂಗಳಷ್ಟೇ ಕರ್ತವ್ಯಕ್ಕೆ ಮರಳಿದ್ದರು. ಸ್ನೇಹಮಯಿ ವ್ಯಕ್ತಿತ್ವದ ಅಶ್ವಿನ್‌ ಅವರು ಊರಲ್ಲಿ ಸಾಮಾಜಿಕ, ಸಾಂಸ್ಕೃತಿಕ ವಲಯಗಳಲ್ಲಿ ಸಕ್ರಿಯವಾಗಿದ್ದರು. ಪಾರ್ಥಿವ ಶರೀರವನ್ನು ಭಾನುವಾರ (ಅ.23) ಊರಿಗೆ ತರುವ ನಿರೀಕ್ಷೆಯಿದೆ ಎಂದು ಸಂಬಂಧಿಕರು ತಿಳಿಸಿದರು.

ಸಂಚಾರ ನಿಯಮ ಉಲ್ಲಂಘಿಸಿದರೆ ದಂಡ ಇಲ್ಲ!

ಪ್ರಜಾವಾಣಿ ವಾರ್ತೆ

ಅಹಮದಾಬಾದ್‌: ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಅ.27ರ ವರೆಗೆ ಸಂಚಾರ ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸದಂತೆ ಗೃಹ ಸಚಿವ ಹರ್ಷ ಸಾಂಘ್ವಿ ಅವರು ಪೊಲೀಸರಿಗೆ ನಿರ್ದೇಶನ ನೀಡಿದ್ದಾರೆ.

ಸರ್ಕಾರದ ನಿರ್ಧಾರ ಖಂಡಿಸಿ ಟ್ವೀಟ್‌ ಮಾಡಿರುವ ಎಐಎಂಐಎಂ ಮುಖ್ಯಸ್ಥ ಒವೈಸಿ, ‘2021ರಲ್ಲಿ ಗುಜರಾತ್‌ನಲ್ಲಿ 15,200 ರಸ್ತೆ ಅಪಘಾತವಾಗಿದ್ದು, 7,457 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಬಿಜೆಪಿ ಗುಜರಾತ್‌ ಸರ್ಕಾರದ ‘ಉಚಿತ’ ಕೊಡುಗೆ ಜನರ ಜೀವನವನ್ನು ಅಪಾಯಕ್ಕೆ ತಳ್ಳುತ್ತಿದೆ’ ಎಂದು ಹೇಳಿದ್ದಾರೆ.

‘ರೋಜ್‌ಗಾರ್ ಮೇಳ’ಕ್ಕೆ ಪ್ರಧಾನಿ ಚಾಲನೆ; 10 ಲಕ್ಷ ಜನರಿಗೆ ಉದ್ಯೋಗ ನೀಡುವ ಗುರಿ

75,000 ಜನರಿಗೆ ನೇಮಕಾತಿ ಪತ್ರ ಹಸ್ತಾಂತರ

ನವದೆಹಲಿ (ಪಿಟಿಐ): 10 ಲಕ್ಷ ಜನರಿಗೆ ಉದ್ಯೋಗ ನೀಡುವ ಉದ್ದೇಶದ ‘ರೋಜ್‌ಗಾರ್ ಮೇಳ’ಕ್ಕೆ (ಉದ್ಯೋಗ ಮೇಳ) ಪ್ರಧಾನಿ ನರೇಂದ್ರ ಮೋದಿ ಅವರು ವರ್ಚುವಲ್ ಆಗಿ ಶನಿವಾರ ಚಾಲನೆ ನೀಡಿದರು. ಮೊದಲ ಹಂತದಲ್ಲಿ 75,000 ಜನರಿಗೆ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಉದ್ಯೋಗದ ನೇಮಕಾತಿ ಪತ್ರಗಳನ್ನು ನೀಡಲಾಯಿತು. ನಿರುದ್ಯೋಗ ವಿಚಾರವಾಗಿ ಸರ್ಕಾರದ ವಿರುದ್ಧ ನಿರಂತರವಾಗಿ ಟೀಕಾಪ್ರಹಾರ ನಡೆಸುತ್ತಿರುವ ವಿರೋಧ ಪಕ್ಷಗಳಿಗೆ ರೋಜ್‌ಗಾರ್ ಮೇಳದ ಮೂಲಕ ತಿರುಗೇಟು ನೀಡಿರುವ ಪ್ರಧಾನಿ, ಕಳೆದ ಎಂಟು ವರ್ಷಗಳಲ್ಲಿ ಉದ್ಯೋಗ ಸೃಷ್ಟಿಗೆ ಸರ್ಕಾರ ತೆಗೆದುಕೊಂಡಿರುವ ಕ್ರಮಗಳನ್ನು ವಿವರಿಸಿದರು.

ಜಗತ್ತಿನ ಹಲವು ದೇಶಗಳು ದಾಖಲೆಯ ಹಣದುಬ್ಬರ ಹಾಗೂ ನಿರುದ್ಯೋಗದ ಸವಾಲು ಎದುರಿಸಿ ಏದುಸಿರು ಬಿಡುತ್ತಿರುವ ಈ ಸಮಯದಲ್ಲಿ, ತಮ್ಮ ಸರ್ಕಾರವು ಇಂತಹ ಅಪಾಯದಿಂದ ಪಾರಾಗಲು ಸಾಧ್ಯವಿರುವ ಎಲ್ಲ ಯತ್ನಗಳನ್ನು ಮಾಡುತ್ತಿದೆ ಎಂದು ಪ್ರಧಾನಿ ಹೇಳಿದರು. ‘ಜಾಗತಿಕ ಆರ್ಥಿಕ ಪರಿಸ್ಥಿತಿ ಚೆನ್ನಾಗಿಲ್ಲ. ದೊಡ್ಡ ಅರ್ಥ ವ್ಯವಸ್ಥೆ ಹೊಂದಿರುವ ದೇಶಗಳೇ ಬಿಕ್ಕಟ್ಟಿನಲ್ಲಿವೆ. ಹಣದುಬ್ಬರ, ನಿರುದ್ಯೋಗದಂತಹ ಸಮಸ್ಯೆಗಳು ಅಪಾಯಕಾರಿ ಹಂತಕ್ಕೆ ತಲುಪಿವೆ. ಕೋವಿಡ್ ಸಾಂಕ್ರಾಮಿಕವು ಎಲ್ಲ ಕಡೆ ಪ್ರತಿಕೂಲ ಪರಿಣಾಮ ಉಂಟುಮಾಡಿದೆ’ ಎಂದು ಅವರು ಜಾಗತಿಕ ವಿದ್ಯಮಾನವನ್ನು ವಿವರಿಸಿದರು.



ನೇಮಕಾತಿ ಪತ್ರ ಪಡೆದ ಉದ್ಯೋಗಿಯೊಬ್ಬರು ಭೋಪಾಲ್‌ನಲ್ಲಿ ಆಯೋಜಿಸಿದ್ದ ರೋಜ್‌ಗಾರ್ ಮೇಳ ಕಾರ್ಯಕ್ರಮದಲ್ಲಿ ಪ್ರಧಾನಿ ಮೋದಿ ಅವರ ಕಟೌಟ್ ಜೊತೆ ಫೋಟೊ ತೆಗೆಸಿಕೊಂಡರು —ಪಿಟಿಐ ಚಿತ್ರ

ನೇಮಕಗೊಂಡವರನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಿ, ಉತ್ಪಾದನೆ, ಮೂಲಸೌಕರ್ಯ, ಪ್ರವಾಸೋದ್ಯಮ ಒಳಗೊಂಡಂತೆ ವಿವಿಧ ಕ್ಷೇತ್ರಗಳಲ್ಲಿ ಸರ್ಕಾರ ತೆಗೆದುಕೊಂಡ ಕ್ರಮಗಳಿಂದಾಗಿ, ಉದ್ಯೋಗ ಅವಕಾಶಗಳು ಹೆಚ್ಚಿವೆ ಎಂದರು. ಸರ್ಕಾರಿ ಇಲಾಖೆಗಳ ದಕ್ಷತೆ ಹೆಚ್ಚಳವಾಗಿರುವ ಕಾರಣ, ಕಳೆದ ಎಂಟು ವರ್ಷಗಳ ಅವಧಿಯಲ್ಲಿ, ಭಾರತವು ಬೃಹತ್ ಅರ್ಥವ್ಯವಸ್ಥೆಯ 10ನೇ ಸ್ಥಾನದಿಂದ 5ನೇ ಸ್ಥಾನಕ್ಕೆ ಸ್ಥಾನಕ್ಕೆ ಜಿಗಿದಿದೆ ಎಂದು ಹೇಳಿದರು.

ಉದ್ಯಮಗಳ ಆರಂಭಕ್ಕೆ ನೆರವು ನೀಡುವ ಮುದ್ರಾ ಯೋಜನೆಯಲ್ಲಿ ದಾಖಲೆ ಪ್ರಮಾಣದ ಸಾಲ ವಿತರಣೆ ಆಗಿದೆ ಎಂಬುದನ್ನು ಉಲ್ಲೇಖಿಸಿದ ಅವರು, ಕೋವಿಡ್ ಅವಧಿಯಲ್ಲಿ ಸುಮಾರು ₹3 ಲಕ್ಷ ಕೋಟಿಯಷ್ಟು ನೆರವು ನೀಡಿದ್ದರಿಂದ ಸೂಕ್ಷ್ಮ, ಸಣ್ಣ, ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ವಲಯದ ಕೈಗಾರಿಕೆಗಳಲ್ಲಿ 1.5 ಕೋಟಿಗಿಂತಲೂ ಹೆಚ್ಚು ಉದ್ಯೋಗಗಳು ಬಿಕ್ಕಟ್ಟಿಗೆ ಸಿಲುಕುವುದು ತಪ್ಪಿತು ಎಂದು ಹೇಳಿದರು.

ದೇಶದ ಯುವಜನರಿಗೆ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಲು ಸರ್ಕಾರವು ಹಲವು ಆಯಾಮಗಳಲ್ಲಿ ಕೆಲಸ ಮಾಡುತ್ತಿದೆ. ಸ್ಕಿಲ್ ಇಂಡಿಯಾ ಕಾರ್ಯಕ್ರಮದ ಅಡಿಯಲ್ಲಿ ದೇಶದ 1.25 ಕೋಟಿ ಜನರು ತರಬೇತಿ ಪಡೆದಿದ್ದಾರೆ. ಖಾದಿ ಮತ್ತು ಗ್ರಾಮೋದ್ಯೋಗ ಆಯೋಗದ (ಕೆವಿಐಸಿ) ಒಟ್ಟಾರೆ ಮೌಲ್ಯ ಇದೇ ಮೊದಲ ಬಾರಿಗೆ ₹4 ಲಕ್ಷ ಕೋಟಿ ದಾಟಿದೆ. ಈ ವಲಯದಲ್ಲಿ 4 ಕೋಟಿ ಉದ್ಯೋಗ ಸೃಷ್ಟಿಯಾಗಿವೆ. ನರೇಗಾ ಉದ್ಯೋಗ ಕಾರ್ಯಕ್ರಮದಿಂದ ದೇಶದ 7 ಕೋಟಿ ಜನರಿಗೆ ಅನುಕೂಲವಾಗಿದೆ. ಕಳೆದ ಎಂಟು ವರ್ಷಗಳಲ್ಲಿ ಉದ್ಯೋಗ ಹಾಗೂ ಸ್ವಉದ್ಯೋಗ ಸೃಷ್ಟಿಯಲ್ಲಿ ‘ರೋಜ್‌ಗಾರ್ ಮೇಳ’ ಒಂದು ಪ್ರಮುಖ ಮೈಲಿಗಲ್ಲು’ ಎಂದು ಪ್ರಧಾನಿ ಹೇಳಿದರು.

ದೇಶವು ಜಾಗತಿಕ ಆರ್ಥಿಕ ಬಿಕ್ಕಟ್ಟಿನ ಸುಳಿಗೆ ಸಿಲುಕುವುದನ್ನು ತಡೆಯಲು ಸರ್ಕಾರ ದಿಟ್ಟ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ನಿಮ್ಮೆಲ್ಲರ ಆಶೀರ್ವಾದದಿಂದ ನಮಗೆ ಈವರೆಗೆ ರಕ್ಷಣೆ ಸಿಕ್ಕಿದೆ

ನರೇಂದ್ರ ಮೋದಿ, ಪ್ರಧಾನಿ

ಕೇಂದ್ರದ ರೋಜ್‌ಗಾರ್ ಮೇಳವು ಎಂಜಿನಿಯರಿಂಗ್ ಪದವೀಧರರು, ಪಿಯುಸಿವರೆಗೆ ಓದಿದವರಿಗೂ ಅವಕಾಶ ನೀಡಲಿದೆ

ನಿರ್ಮಲಾ ಸೀತಾರಾಮನ್
ಕೇಂದ್ರ ಹಣಕಾಸು ಸಚಿವೆ

ಮಹಾರಾಷ್ಟ್ರ ರಾಜ್ಯ ಸರ್ಕಾರವು ಮುಂದಿನ ಒಂದು ವರ್ಷದಲ್ಲಿ 75 ಸಾವಿರ ಯುವಜನರಿಗೆ ಸರ್ಕಾರಿ ಉದ್ಯೋಗ ನೀಡಲಿದೆ

ದೇವೇಂದ್ರ ಫಡಣವೀಸ್
ಮಹಾರಾಷ್ಟ್ರದ ಉಪಮುಖ್ಯಮಂತ್ರಿ

‘ಬದಲಾವಣೆಗೆ ನಾಂದಿ’

ಪ್ರಧಾನಮಂತ್ರಿ ಆವಾಸ್ ಯೋಜನೆಯು (ಪಿಎಂಎವೈ) ಸಾಮಾಜಿಕ–ಆರ್ಥಿಕ ಬದಲಾವಣೆಯ ಪ್ರಮುಖ ಮಾಧ್ಯಮವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು. ಮಧ್ಯಪ್ರದೇಶದ ಸತನಾ ಜಿಲ್ಲೆಯಲ್ಲಿ ಯೋಜನೆಯ 4.31 ಲಕ್ಷ ಫಲಾನುಭವಿಗಳ ‘ಗೃಹಪ್ರವೇಶ’ ಕಾರ್ಯಕ್ರಮವನ್ನು ವರ್ಚುವಲ್ ಆಗಿ ಉದ್ಘಾಟಿಸಿ ಅವರು ಮಾನತಾಡಿದರು.

ಉಚಿತ ಕೊಡುಗೆ ಘೋಷಿಸಿರುವ ಪ್ರತಿಪಕ್ಷಗಳನ್ನು ತರಾಟೆಗೆ ತೆಗೆದುಕೊಂಡ ಅವರು, ‘ಪಿಎಂಎವೈ ಯೋಜನೆಯಡಿ ಫಲಾನುಭವಿಗಳು ಮನೆಗಳನ್ನು ಪಡೆಯುತ್ತಿದ್ದಾರೆ. ಇದನ್ನು ನೋಡುವ ತೆರಿಗೆದಾರರಿಗೆ ಖುಷಿಯಾಗುತ್ತದೆ. ಆದರೆ ದೇಶದಲ್ಲಿ ಉಚಿತ ಕೊಡುಗೆ ನೀಡುವ ಸಂಸ್ಕೃತಿ ಬೆಳೆಯುತ್ತಿರುವುದನ್ನು ನೋಡಿದರೆ ಅವರಿಗೆ ಬೇಸರವಾಗುತ್ತದೆ’ ಎಂದರು.

ಅಂಕಿ-ಅಂಶಗಳು

40.78 ಲಕ್ಷ
ಕೇಂದ್ರ ಸರ್ಕಾರದ ಮಂಜೂರಾದ ಹುದ್ದೆಗಳು

31.91 ಲಕ್ಷ
ಕರ್ತವ್ಯ ನಿರ್ವಹಿಸುತ್ತಿರುವ ಉದ್ಯೋಗಿಗಳು

21.75%
ಖಾಲಿ ಇರುವ ಹುದ್ದೆಗಳ ಪ್ರಮಾಣ

ಚುನಾವಣೆ ಮೇಲೆ ಕಣ್ಣು?

ಗುಜರಾತ್ ಹಾಗೂ ಹಿಮಾಚಲ ಪ್ರದೇಶ ವಿಧಾನಸಭೆಗಳಿಗೆ ಸದ್ಯದಲ್ಲೇ ಚುನಾವಣೆ ನಡೆಯಲಿದ್ದು, ರೋಜ್‌ಗಾರ್ ಮೇಳದಿಂದ ಬಿಜೆಪಿಗೆ ನೆರವಾಗಲಿದೆ ಎಂದು ವಿಶ್ಲೇಷಿಸಲಾಗಿದೆ. ನಿರ್ಮಲಾ ಸೀತಾರಾಮನ್ ಸೇರಿದಂತೆ ಕೇಂದ್ರ ಸಚಿವರು ದೇಶದ ವಿವಿಧ ಕಡೆಗಳಲ್ಲಿ ಉದ್ಯೋಗಿಗಳಿಗೆ ನೇಮಕಾತಿ ಪತ್ರಗಳನ್ನು ಶನಿವಾರ ಹಸ್ತಾಂತರಿಸಿದರು.

ನೇಮಕಾತಿ ಆದೇಶ ಪಡೆದವರು ಕೇಂದ್ರ ಸರ್ಕಾರದ 38 ಸಚಿವಾಲಯಗಳು ಹಾಗೂ ಇಲಾಖೆಗಳಲ್ಲಿ ಕೆಲಸ ಮಾಡಲಿದ್ದಾರೆ. ಗ್ರೂಪ್ ಎ ಮತ್ತು ಬಿ (ಗೆಜೆಟೆಡ್), ಗ್ರೂಪ್ ಬಿ (ನಾನ್ ಗೆಜೆಟೆಡ್) ಮತ್ತು ಗ್ರೂಪ್ ಸಿ ಹಂತಗಳಲ್ಲಿ ನೇಮಕಾತಿ ನಡೆದಿದೆ. ಸಶಸ್ತ್ರ ಪಡೆ ಸಿಬ್ಬಂದಿ, ಸಬ್ ಇನ್‌ಸ್ಪೆಕ್ಟರ್, ಕಾನ್‌ಸ್ಟೆಬಲ್, ಸ್ಟೆನೊಗ್ರಾಫರ್, ಆಪ್ತ ಸಹಾಯಕರು, ಆದಾಯ ತೆರಿಗೆ ಇನ್‌ಸ್ಪೆಕ್ಟರ್ ಸೇರಿದಂತೆ ವಿವಿಧ ಹುದ್ದೆಗಳಿಗೆ ನೇಮಕ ಮಾಡಿಕೊಳ್ಳಲಾಗಿದೆ.

18 ತಿಂಗಳಲ್ಲಿ 10 ಲಕ್ಷ ನೇಮಕಾತಿ ಮಾಡಿಕೊಳ್ಳುವಂತೆ ವಿವಿಧ ಸಚಿವಾಲಯಗಳು ಹಾಗೂ ಇಲಾಖೆಗಳಿಗೆ ಪ್ರಧಾನಿ ಮೋದಿ ಅವರು ಇದೇ ಜೂನ್‌ನಲ್ಲಿ ನಿರ್ದೇಶನ ನೀಡಿದ್ದರು. ‘ಕಳೆದ ಎಂಟು ವರ್ಷಗಳಿಂದ ಸರ್ಕಾರವು ಉದ್ಯೋಗ ಸೃಷ್ಟಿಸುತ್ತಿದೆ. ದೇಶ ಸ್ವತಂತ್ರಗೊಂಡ 75ನೇ ವರ್ಷಾಚರಣೆ ಅಂಗವಾಗಿ, 75,000 ಯುವಜನರಿಗೆ ನೇಮಕಾತಿ ಆದೇಶ ನೀಡಲಾಗಿದೆ’ ಎಂದು ಪ್ರಧಾನಿ ಹೇಳಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

16 ಕೋಟಿ ಉದ್ಯೋಗ ಎಲ್ಲಿ: ಕಾಂಗ್ರೆಸ್ ಪ್ರಶ್ನೆ

ಕೇಂದ್ರ ಸರ್ಕಾರ ನೀಡಿದ್ದ ಭರವಸೆಯಂತೆ 16 ಕೋಟಿ ಉದ್ಯೋಗಗಳನ್ನು ಯಾವಾಗ ನೀಡಲಾಗುತ್ತದೆ ಎಂದು ಕಾಂಗ್ರೆಸ್ ಪ್ರಶ್ನಿಸಿದೆ. 2014ರಲ್ಲಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿಜೆಪಿ ನೇತೃತ್ವದ ಸರ್ಕಾರವು, ಪ್ರತೀ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿತ್ತು. ಈಗ ಎಂಟು ವರ್ಷಗಳು ಕಳೆದಿದ್ದು, 16 ಕೋಟಿ ಜನರಿಗೆ ಉದ್ಯೋಗ ಯಾವಾಗ ಸಿಗಲಿದೆ ಎಂಬುದನ್ನು ದೇಶದ ಯುವಜನರಿಗೆ ತಿಳಿಸಬೇಕು ಎಂದು ಕಾಂಗ್ರೆಸ್ ವಕ್ತಾರ ರಣದೀಪ್ ಸುರ್ಜೇವಾಲಾ ಟ್ವೀಟ್ ಮಾಡಿದ್ದಾರೆ.

ನಿರುದ್ಯೋಗವು ದೇಶದ ಯುವಜನರು ಎದುರಿಸುತ್ತಿರುವ ಅತಿದೊಡ್ಡ ಸಮಸ್ಯೆ ಎಂದು ‘ಸುಳ್ಳಿನ ರಾಜ’ ಕೊನೆಗೂ ಅರಿತುಕೊಂಡಿದ್ದಾರೆ ಎಂದು ಸುರ್ಜೇವಾಲಾ ಅವರು ಪ್ರಧಾನಿ ಅವರನ್ನು ಪರೋಕ್ಷವಾಗಿ ಉಲ್ಲೇಖಿಸಿದ್ದು, ಇದು ‘ಭಾರತ್ ಜೋಡೊ’ ಯಾತ್ರೆಯ ಅತಿದೊಡ್ಡ ಸಾಧನೆ ಎಂದು ಬಣ್ಣಿಸಿದ್ದಾರೆ.

ಬೆಂಗಳೂರು ಐಟಿ ಕಂಪನಿ ಉದ್ಯೋಗಿ ಮೇಲೆ ಸಾಮೂಹಿಕ ಅತ್ಯಾಚಾರ

ಚಾಯ್‌ಬಸಾ (ಪಿಟಿಐ): ಜಾರ್ಖಂಡ್‌ನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯಲ್ಲಿ 26 ವರ್ಷದ ಮಹಿಳೆ ಮೇಲೆ ಸುಮಾರು 10 ಮಂದಿ ಸಾಮೂಹಿಕ ಅತ್ಯಾಚಾರ ಎಸಗಿರುವ ಆರೋಪ ಕೇಳಿಬಂದಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ.

ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಮಹಿಳೆಯು ಬೆಂಗಳೂರಿನ ಪ್ರತಿಷ್ಠಿತ ಐಟಿ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕಂಪನಿಯು ಮನೆಯಿಂದಲೇ ಕೆಲಸ ಮಾಡುವ ಅವಕಾಶ ನೀಡಿದ್ದರಿಂದಾಗಿ ಊರಿಗೆ ತೆರಳಿದ್ದರು.

‘ಮಹಿಳೆಯು ಗುರುವಾರ ಸಂಜೆ ಸ್ನೇಹಿತನ ಜೊತೆ ದ್ವಿಚಕ್ರ ವಾಹನದಲ್ಲಿ ಹಳೆ ವಿಮಾನ ನಿಲ್ದಾಣಕ್ಕೆ ತೆರಳಿದ್ದರು. ಈ ವೇಳೆ 8 ರಿಂದ 10 ಮಂದಿಯ ಗುಂಪು ಅವರಿಬ್ಬರನ್ನು ತಡೆದು ಸ್ನೇಹಿತನನ್ನು ಥಳಿಸಿತ್ತು. ಬಳಿಕ ಮಹಿಳೆಯನ್ನು ನಿರ್ಜನ ಸ್ಥಳಕ್ಕೆ ಕರೆದೊಯ್ದು ಸಾಮೂಹಿಕ ಅತ್ಯಾಚಾರ ಎಸಗಿದ ಆರೋಪ ಇದೆ’ ಎಂದು ಪೊಲೀಸರು ಹೇಳಿದ್ದಾರೆ.

‘ಅತ್ಯಾಚಾರದ ಬಳಿಕ ಆರೋಪಿಗಳು ತನ್ನ ಮೊಬೈಲ್ ಮತ್ತು ಪರ್ಸ್ ತೆಗೆದುಕೊಂಡು ಪರಾರಿಯಾದರು. ಬಳಿಕ ತಾನು ಮನೆಗೆ ಬಂದು ನಡೆದುದನ್ನು ಕುಟುಂಬದವರಿಗೆ ತಿಳಿಸಿದೆ ಎಂದು ಮಹಿಳೆಯು ದೂರಿನಲ್ಲಿ ತಿಳಿಸಿದ್ದಾರೆ. ಸಾದರ್ ಆಸ್ಪತ್ರೆಯಲ್ಲಿ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿದೆ’ ಎಂದೂ ಮಾಹಿತಿ ನೀಡಿದ್ದಾರೆ.

‘ಘಟನೆ ಸಂಬಂಧ ಮುಫಾಸಿಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆಗೆ ವಿಶೇಷ ತನಿಖಾ ತಂಡ ರಚಿಸಲಾಗಿದೆ’ ಎಂದು ಪೊಲೀಸ್ ವರಿಷ್ಠಾಧಿಕಾರಿ ಅಶುತೋಷ್ ಶೇಖರ್ ತಿಳಿಸಿದ್ದಾರೆ.

‘ಘಟನೆಗೆ ಸಂಬಂಧಿಸಿದಂತೆ ಒಟ್ಟು 12 ಮಂದಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ’ ಎಂದು ಸಾದರ್ ವಿಭಾಗೀಯ ಪೊಲೀಸ್ ಅಧಿಕಾರಿ ದಿಲೀಪ್ ಖಲ್ಕೊ ತಿಳಿಸಿದ್ದಾರೆ.

ಘಟನೆ ಬೆನ್ನಲ್ಲೇ ಬಿಜೆಪಿಯು ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರ ರಾಜೀನಾಮೆಗೆ ಆಗ್ರಹಿಸಿದೆ.

ಪ್ರಸಾರ ಚಟುವಟಿಕೆ: ಕೇಂದ್ರದ ಅಂಕುಶ

ನವದೆಹಲಿ (ಪಿಟಿಐ): ‘ಇನ್ನು ಮುಂದೆ ಯಾವುದೇ ಬಗೆಯ ಪ್ರಸಾರ ಚಟುವಟಿಕೆಗಳಲ್ಲಿ ನೇರವಾಗಿ ತೊಡಗಿಕೊಳ್ಳುವಂತಿಲ್ಲ. ಈಗಾಗಲೇ ಭಾಗಿಯಾಗಿದ್ದರೆ ಅದನ್ನು ನಿಲ್ಲಿಸಬೇಕು’ ಎಂದು ಕೇಂದ್ರ ಸರ್ಕಾರವು, ಕೇಂದ್ರದ ಸಚಿವಾಲಯಗಳು, ರಾಜ್ಯ, ಕೇಂದ್ರಾಡಳಿತ ಪ್ರದೇಶಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದೆ.

ಈ ಸಂಬಂಧ ಶುಕ್ರವಾರ ಅಧಿಕೃತ ಪ್ರಕಟಣೆಯನ್ನೂ ಹೊರಡಿಸಿದೆ.

‘ಸಚಿವಾಲಯಗಳು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶ ಗಳು ಏನೇ ಪ್ರಸಾರ ಮಾಡಬೇಕಿದ್ದರೂ ಪ್ರಸಾರ ಭಾರತಿ ಮಾರ್ಗವಾಗಿಯೇ ಕೈಗೊಳ್ಳಬೇಕು. ಈಗಾಗಲೇ ಪ್ರಸಾರ ಚಟುವಟಿಕೆ ನಡೆಸುತ್ತಿದ್ದರೆ ಅದನ್ನು 2023ರ ಡಿಸೆಂಬರ್ 31ರೊಳಗೆ ನಿಲ್ಲಿಸಬೇಕು’ ಎಂದು ಕೇಂದ್ರ ವಾರ್ತಾ ಮತ್ತು ಪ್ರಸಾರ ಸಚಿವಾಲಯ ಹೊರಡಿಸಿರುವ ಅಧಿಕೃತ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಕೇಂದ್ರದ ಈ ಪ್ರಕಟಣೆಯಿಂದಾಗಿ ತಮಿಳುನಾಡು ಸರ್ಕಾರದ ಶೈಕ್ಷಣಿಕ ವಾಹಿನಿ ಕಳವಿ ಟಿವಿ ಹಾಗೂ ಆಂಧ್ರಪ್ರದೇಶ ಸರ್ಕಾರ ನಡೆಸುತ್ತಿರುವ ಐಪಿ ಟಿವಿ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಅವುಗಳ ಸಹಭಾಗಿತ್ವದ ಕಂಪನಿಗಳು ಪ್ರಸಾರ ಉದ್ಯಮ ದಲ್ಲಿ ಭಾಗಿಯಾಗಲು ಅವಕಾಶ ನೀಡಬಾರದೆಂದು ಭಾರತೀಯ ದೂರ ಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) 2012 ರಲ್ಲಿ ಶಿಫಾರಸು ಮಾಡಿತ್ತು. ಟ್ರಾಯ್‌ನ ಶಿಫಾರಸನ್ನು ಸರ್ಕಾರ ಪರಿಗಣಿಸಿದೆ’ ಎಂದೂ ಪ್ರಕಟಣೆ ಹೇಳಲಾಗಿದೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಸಂಕ್ಷಿಪ್ತ ಸುದ್ದಿ

‘ಬಂಧನದ ವೇಳೆ ದಾಖಲೆ ನೀಡಿ’

ನವದೆಹಲಿ: ‘ಅಧಿಕಾರಿಗಳು ವ್ಯಕ್ತಿಯೊಬ್ಬನನ್ನು ಬಂಧಿಸುವಾಗ ಯಾವ ಆಧಾರದಲ್ಲಿ ಅಥವಾ ಯಾವ ಕಾರಣಕ್ಕೆ ಆತನನ್ನು ಬಂಧಿಸಲಾಗುತ್ತಿದೆ ಎಂಬುದರ ಕುರಿತ ದಾಖಲೆಗಳನ್ನು ಒದಗಿಸಬೇಕು. ಇಲ್ಲದಿದ್ದರೆ ಆತನ ಪರಿಣಾಮಕಾರಿ ಪ್ರಾತಿನಿಧ್ಯ ಹಕ್ಕಿನ ಮೇಲೆ ವ್ಯತಿರಿಕ್ತ ಪರಿಣಾಮ ಉಂಟಾಗಲಿದೆ’ ಎಂದು ಸುಪ್ರೀಂ ಕೋರ್ಟ್ ಶನಿವಾರ ಅಭಿಪ್ರಾಯಪಟ್ಟಿದೆ.

ಮಣಿಪುರ ಪೊಲೀಸರು ಬುಯಾಮಯುಮ್ ಅಬ್ದುಲ್ ಹನಾನ್ ಎಂಬಾತನನ್ನು ‘ಮಾದಕ ದ್ರವ್ಯ ಹಾಗೂ ನಿದ್ರಾಜನ್ಯ ವಸ್ತುಗಳ ಅಕ್ರಮ ಸಾಗಣಿಕೆ ತಡೆ (ಪಿಐಟಿ–ಎನ್‌ಡಿಪಿಎಸ್)’ ಕಾಯ್ದೆಯಡಿ ಬಂಧಿಸಿದ್ದರು. ಇದನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ ಅಬ್ದುಲ್ ಹನಾನ್, ಬಂಧನದ ವೇಳೆ ತನಗೆ ಅಧಿಕಾರಿಗಳು ಏತಕ್ಕಾಗಿ ಬಂಧಿಸಲಾಗುತ್ತಿದೆ ಎಂಬುದರ ಕುರಿತ ದಾಖಲೆಯನ್ನು ಒದಗಿಸಿಲ್ಲ ಎಂದು ಆರೋಪಿಸಿದ್ದ. ಆತನ ಅರ್ಜಿಯನ್ನು ಹೈಕೋರ್ಟ್ ಪುರಸ್ಕರಿಸಿತ್ತು. ಹೈಕೋರ್ಟ್ ನಿರ್ಧಾರ ಪ್ರಶ್ನಿಸಿ ಮಣಿಪುರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಸಿ.ಟಿ.ರವಿಕುಮಾರ್ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ಇದನ್ನು ತಿರಸ್ಕರಿಸಿದೆ.

‘ಕಾನೂನಿನಡಿ ನಿಗದಿಪಡಿಸಲಾಗಿರುವ ಕ್ರಮಗಳನ್ನು ಅನುಸರಿಸದೆಯೇ ವ್ಯಕ್ತಿಯನ್ನು ಬಂಧಿಸುವ ಮೂಲಕ ತಾತ್ಕಾಲಿಕವಾಗಿಯೂ ಆತನ ಹಕ್ಕನ್ನು ಉಲ್ಲಂಘಿಸಬಾರದು’ ಎಂದು ನ್ಯಾಯಪೀಠ ಹೇಳಿದೆ.

ರಾಜಸ್ಥಾನ: ಬೌದ್ಧ ಧರ್ಮಕ್ಕೆ ಮತಾಂತರ

ಕೋಟಾ (ರಾಜಸ್ಥಾನ) (ಪಿಟಿಐ): ರಾಜಸ್ಥಾನದ ಬರಲ್ ಜಿಲ್ಲೆಯಲ್ಲಿ ಪರಿಶಿಷ್ಟ ಕುಟುಂಬವೊಂದರ 12 ಸದಸ್ಯರು ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದಾರೆ.

ಪರಿಶಿಷ್ಟ ಕುಟುಂಬದ ಸದಸ್ಯರೊಬ್ಬರ ಮೇಲೆ ವ್ಯಕ್ತಿಯೊಬ್ಬರು ಹಲ್ಲೆ ಮಾಡಿದ್ದರು. ಈ ಸಂಬಂಧ ಪಂಚಾಯಿತಿಯ ಸರಪಂಚರೊಬ್ಬರ ಪತಿಯ ವಿರುದ್ಧ ಪೊಲೀಸರು ದೂರು ದಾಖಲಿಸಿಕೊಳ್ಳಲು ನಿರಾಕರಿಸಿದ್ದಕ್ಕೆ ಕುಟುಂಬವು ಅಸಮಾಧಾನಗೊಂಡಿತ್ತು. ಈ ಹಿನ್ನೆಲೆಯಲ್ಲಿ ಪರಿಶಿಷ್ಟ ಕುಟುಂಬದ ಸದಸ್ಯರು ಬೌದ್ಧ ಧರ್ಮಕ್ಕೆ ಮತಾಂತರಗೊಂಡಿದ್ದಾರೆಂದು ಹೇಳಲಾಗಿದೆ.

18 ಲಕ್ಷ ಹಣತೆ ಬೆಳಗಿ ದೀಪೋತ್ಸವ

ಅಯೋಧ್ಯೆ (ಪಿಟಿಐ): ದೀಪಾವಳಿ ಹಬ್ಬದ ಅಂಗವಾಗಿ ಅಯೋಧ್ಯೆಯಲ್ಲಿ ಭಾನುವಾರ ನಡೆಯಲಿರುವ ದೀಪೋತ್ಸವದಲ್ಲಿ 18 ಲಕ್ಷ ಹಣತೆಗಳನ್ನು ಬೆಳಗಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರೊ ಕಬಡ್ಡಿ ಲೀಗ್ ಟೂರ್ನಿ: ಯು ಮುಂಬಾಗೆ ಸೋಲುಣಿಸಿದ ಬೆಂಗಳೂರು

ಭರತ್ ಮಿಂಚು: ಬುಲ್ಸ್ ಜಯಭೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೂಪರ್ 10' ಸಾಧಿಸಿದ ರೇಡರ್ ಭರತ್ (16 ಪಾಯಿಂಟ್ಸ್) ಪ್ರೊ ಕಬಡ್ಡಿ ಲೀಗ್ ಟೂರ್ನಿಯಲ್ಲಿ ಬೆಂಗಳೂರು ಬುಲ್ಸ್ ತಂಡಕ್ಕೆ ಜಯ ತಂದುಕೊಟ್ಟರು.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಹಣಾಹಣಿಯಲ್ಲಿ ಬುಲ್ಸ್ 42–32ರಿಂದ ಯು ಮುಂಬಾ ತಂಡವನ್ನು ಪರಾಭವಗೊಳಿಸಿತು.

ಪಂದ್ಯದ ಆರಂಭದಲ್ಲಿ ಮುಂಬಾ ಉತ್ತಮ ಆಟದ ಮೂಲಕ ಮುನ್ನಡೆಯಲ್ಲಿತ್ತು. ಮೊದಲಾರ್ಧದ ವೇಳೆಗೆ 24–11ರಿಂದ ಮುಂದಿತ್ತು. ಆದರೆ ದ್ವಿತೀಯಾರ್ಧದಲ್ಲಿ ಭಾರೀ ತಿರುಗೇಟು ನೀಡಿದ ಬೆಂಗಳೂರು ಎದುರಾಳಿಗೆ ಕೇವಲ 8 ಪಾಯಿಂಟ್ಸ್ ಬಿಟ್ಟುಕೊಟ್ಟಿತು. ಈ ಅವಧಿಯಲ್ಲಿ ಬುಲ್ಸ್ 31 ಪಾಯಿಂಟ್ಸ್ ಕಲೆಹಾಕಿತು.

ಭರತ್ 14 ಟಚ್ ಪಾಯಿಂಟ್ಸ್ ಕಲೆಹಾಕಿದರೆ, ಎರಡು ಬೋನಸ್ ಪಾಯಿಂಟ್ಸ್ ಕಲೆಹಾಕಿ ಮಿಂಚಿದರು. ಇನ್ನೊಬ್ಬ ರೇಡರ್ ವಿಕಾಸ್ ಖಂಡೋಲ (8) ಬೆಂಗಳೂರು ಗೆಲುವಿಗೆ ಕೊಡುಗೆ ನೀಡಿದರು.

ಮುಂಬಾ ಪರ ಗುಮಾನ್ ಸಿಂಗ್ (11) ಅವರ ಆಟ ವ್ಯರ್ಥವಾಯಿತು.

ಬೆಂಗಳೂರು ತಂಡವು ಎದುರಾಳಿಯನ್ನು ಮೂರು ಬಾರಿ ಆಲೌಟ್ ಮಾಡಿದರೆ, ಮುಂಬಾ ತಂಡವು ಎರಡು ಬಾರಿ ಬುಲ್ಸ್ ಆಟಗಾರರನ್ನು ಕಟ್ಟಿ ಹಾಕಿತು.

ಇನ್ನೊಂದು ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು 51–27ರಿಂದ ತೆಲುಗು ಟೈಟನ್ಸ್ ತಂಡವನ್ನು ಪರಾಭವಗೊಳಿಸಿತು.

ಜೈಪುರ ಪರ ಅರ್ಜುನ್ ದೇಸ್ವಾಲ್ 12 ಪಾಯಿಂಟ್ಸ್ ಗಳಿಸಿದರು. ರಾಹುಲ್ ಚೌಧರಿ (8) ಹಾಗೂ ಸಾಹುಲ್ ಕುಮಾರ್ (7) ಕೂಡ ಮಿಂಚಿದರು.

ಗುಜರಾತ್ ಜೈಂಟ್ಸ್ 42–38 ರಲ್ಲಿ ಹರಿಯಾಣ ತಂಡವನ್ನು ಮಣಿಸಿತು.



ಯು ಮುಂಬಾ ತಂಡದ ಆಟಗಾರನನ್ನು 'ಟ್ಯಾಕಲ್' ಮಾಡಿದ ಬೆಂಗಳೂರು ಬುಲ್ಸ್ ಆಟಗಾರರು

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	6	5	1	0	26
ಡೆಲ್ಲಿ	6	5	1	0	26
ಬೆಂಗಳೂರು	6	4	2	0	21
ಪುಣೇರಿ	6	3	2	1	19
ಬೆಂಗಾಲ್	6	3	3	0	16
ಮುಂಬಾ	6	3	3	0	16

ಇಂದಿನ ಪಂದ್ಯಗಳು

ಬೆಂಗಳೂರು ಬುಲ್ಸ್– ಪಟ್ನಾ ಪೈರೇಟ್ಸ್

ರಾತ್ರಿ 7.30

ಯುಪಿ ಯೋಧಾಸ್– ತಮಿಳ್ ತಲೈವಾಸ್ 8.30

ಐಎಸ್‌ಎಲ್: ಬಿಎಫ್‌ಸಿಗೆ ನಿರಾಸೆ

ಹೈದರಾಬಾದ್: ಪಂದ್ಯದ ಕೊನೆಯ ಹಂತದಲ್ಲಿ ಗೋಲು ಬಿಟ್ಟುಕೊಟ್ಟ ಬೆಂಗಳೂರು ಎಫ್‌ಸಿ ತಂಡವು ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಫುಟ್‌ಬಾಲ್ ಟೂರ್ನಿಯಲ್ಲಿ ಸೋಲು ಅನುಭವಿಸಿತು.

ಇಲ್ಲಿನ ಜಿಎಂಸಿ ಬಾಲಯೋಗಿ ಅಥ್ಲೆಟಿಕ್ಸ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಹಣಾಹಣಿಯಲ್ಲಿ ಸುನಿಲ್ ಚೆಟ್ರಿ ನಾಯಕತ್ವದ ಬೆಂಗಳೂರು 0–1ರಿಂದ ಹೈದರಾಬಾದ್ ಎಫ್‌ಸಿಗೆ ಮಣಿಯಿತು.

ಬಾರ್ತೊಲೊಮಿವ್ ಒಗ್ಬೆಚೆ 83ನೇ ನಿಮಿಷದಲ್ಲಿ ತೋರಿದ ಕಾಲ್ಚಳಕವು ಹೈದರಾಬಾದ್ ತಂಡದ ಗೆಲುವಿಗೆ ಕಾರಣವಾಯಿತು.

ಮುಂಬೈನಲ್ಲಿ ನಡೆದ ಇನ್ನೊಂದು ಪಂದ್ಯದಲ್ಲಿ ಮುಂಬೈ ಸಿಟಿ ಎಫ್‌ಸಿ ಮತ್ತು ಜಮ್ಶೆಡ್‌ಪುರ ಎಫ್‌ಸಿ 1–1ರಿಂದ ಡ್ರಾ ಸಾಧಿಸಿದವು.

ಕೇರಳ-ಒಡಿಶಾ ಮುಖಾಮುಖಿ: ಭುವನೇಶ್ವರದ ಕಳಿಂಗ ಕ್ರೀಡಾಂಗಣದಲ್ಲಿ ಭಾನುವಾರ ನಡೆಯುವ ಪಂದ್ಯದಲ್ಲಿ ಒಡಿಶಾ ಎಫ್‌ಸಿ ತಂಡವು ಕೇರಳ ಬ್ಲಾಸ್ಟರ್ಸ್ ಸವಾಲು ಎದುರಿಸಲಿದೆ. ಈ ಹಿಂದಿನ ಎರಡೂ ಪಂದ್ಯಗಳಲ್ಲಿ ಸೋಲು ಅನುಭವಿಸಿರುವ ಎರಡೂ ತಂಡಗಳೂ ಇಲ್ಲಿ ಗೆಲುವಿಗಾಗಿ ಛಲ ತೊಟ್ಟಿವೆ.



ಬಿಎಫ್‌ಸಿಯ ಶಿವಶಕ್ತಿ ನಾರಾಯಣನ್ (ಎಡ) ಮತ್ತು ಹೈದರಾಬಾದ್ ಎಫ್‌ಸಿಯ ನಿಖಿಲ್ ಪೂಜಾರಿ ನಡುವೆ ಚೆಂಡಿಗಾಗಿ ಪೈಪೋಟಿ– ಪಿಟಿಐ ಚಿತ್ರ

ಕ್ರಿಕೆಟ್: ಕರ್ನಾಟಕಕ್ಕೆ ಜಯ

ಬೆಂಗಳೂರು: ಶುಭಾ ಸತೀಶ್ (50) ಅವರ ಅಜೇಯ ಅರ್ಧಶತಕದ ನೆರವಿನಿಂದ ಕರ್ನಾಟಕ ತಂಡ, ಬಿಸಿಸಿಐ ಮಹಿಳಾ ಟಿ20 ಕ್ರಿಕೆಟ್ ಟೂರ್ನಿಯ ಪಂದ್ಯದಲ್ಲಿ ಹಿಮಾಚಲ ಪ್ರದೇಶ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿತು.

ಸೂರತ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಹಿಮಾಚಲ ಪ್ರದೇಶ 19.5 ಓವರ್‌ಗಳಲ್ಲಿ 90 ರನ್‌ಗಳಿಗೆ ಆಲೌಟಾಯಿತು.

ಶ್ರೇಯಾಂಕಾ ಆರ್.ಪಾಟೀಲ್ (18ಕ್ಕೆ 4) ಮತ್ತು ಕೆ.ಪುಷ್ಪಾ (11ಕ್ಕೆ 2) ಅವರು ಎದುರಾಳಿ ಬ್ಯಾಟಿಂಗ್‌ನ ಬೆನ್ನೆಲುಬು ಮುರಿದರು.

ಹಿಮಾಚಲ ಪ್ರದೇಶ ತಂಡ ನೀಡಿದ ಗುರಿ ಕರ್ನಾಟಕಕ್ಕೆ ಸವಾಲಾಗಿ ಪರಿಣಮಿಸಲೇ ಇಲ್ಲ. ಶುಭಾ ಸೊಗಸಾದ ಆಟವಾಡಿ ತಂಡವನ್ನು ಗೆಲುವಿನತ್ತ ಮುನ್ನಡೆಸಿದರು. 54 ಎಸೆತಗಳನ್ನು ಎದುರಿಸಿದ ಅವರು 6 ಬೌಂಡರಿ ಹೊಡೆದರು.

ಸಂಕ್ಷಿಪ್ತ ಸ್ಕೋರ್: ಹಿಮಾಚಲ ಪ್ರದೇಶ 19.5 ಓವರ್‌ಗಳಲ್ಲಿ 90 (ಮೋನಿಕಾ ದೇವಿ 27, ಸೋನಲ್ ಠಾಕೂರ್ 27, ಶ್ರೇಯಾಂಕಾ ಆರ್.ಪಾಟೀಲ್ 18ಕ್ಕೆ 4, ಕೆ.ಪುಷ್ಪಾ 11ಕ್ಕೆ 2)

ಕರ್ನಾಟಕ 17.2 ಓವರ್‌ಗಳಲ್ಲಿ 3 ವಿಕೆಟ್‌ಗೆ 92 (ಶುಭಾ ಸತೀಶ್ ಔಟಾಗದೆ 50, ಕೆ.ರಕ್ಷಿತಾ ಔಟಾಗದೆ 20, ಹರ್ಲೀನ್ ಡಿಯೋಲ್ 22ಕ್ಕೆ 2) ಫಲಿತಾಂಶ: ಕರ್ನಾಟಕಕ್ಕೆ 7 ವಿಕೆಟ್ ಗೆಲುವು

ಚೆಸ್: ಅಪೂರ್ವ, ನಿರಂಜನ್ ಮುನ್ನಡೆ

ಬೆಂಗಳೂರು: ಅಪೂರ್ವ ಕಾಂಬ್ಳೆ, ನಿರಂಜನ್ ಜೆ. ವಾರಿಯರ್ ಮತ್ತು ಸಿದ್ಧಾಂತ್ ಪೂಂಜಾ ಅವರು ರಾಜ್ಯ 13 ವರ್ಷದೊಳಗಿನವರ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಮುನ್ನಡೆ ಸಾಧಿಸಿದ್ದರು.

ಹೊಸಕೋಟೆ ತಾಲ್ಲೂಕಿನ ಶೆಟ್ಟಿಹಳ್ಳಿ ಕ್ರಾಸ್‌ನ ಶ್ರೀ ಸಾಯಿ ಪ್ಯಾಲೇಸ್‌ನಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನಲ್ಲಿ 5 ಸುತ್ತುಗಳಲ್ಲಿ ಅಪೂರ್ವ, ನಿರಂಜನ್ ಮತ್ತು ಸಿದ್ಧಾಂತ್ ತಲಾ ಐದು ಪಾಯಿಂಟ್ಸ್ ಕಲೆಹಾಕಿದ್ದರು. ಬಾಲಕಿಯರಲ್ಲಿ ಶ್ರೀಯಾನಾ ಮಲ್ಯ, ಕೃಪಾ ಉಕ್ಕಲಿ ತಲಾ 5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನದಲ್ಲಿದ್ದರು.

'ಉದ್ದೇಶಪೂರ್ವಕ ಮದ್ದು ಸೇವಿಸಿಲ್ಲ'



ಲಂಡನ್ (ಎಪಿ): 'ಉದ್ದೇಶಪೂರ್ವಕವಾಗಿ ನಿಷೇಧಿತ ಉದ್ದೀಪನ ಮದ್ದು ಎಂದಿಗೂ ಸೇವಿಸಿಲ್ಲ. ಅದನ್ನು ಸಾಬೀತುಪಡಿಸುವರೆಗೆ ಹೋರಾಡುವೆ' ಎಂದು ಎರಡು ಬಾರಿಯ ಗ್ರ್ಯಾನ್‌ಸ್ಲಾಮ್ ಟೆನಿಸ್ ಚಾಂಪಿಯನ್, ರುಮೇನಿಯಾದ ಸಿಮೊನಾ ಹಲೆಪ್ ಹೇಳಿದ್ದಾರೆ.

ಆಗಸ್ಟ್‌ನಲ್ಲಿ ನಡೆದ ಅಮೆರಿಕ ಓಪನ್ ಟೂರ್ನಿಯ ಸಂದರ್ಭದಲ್ಲಿ ಸಿಮೊನಾ ಅವರು ನಿಷೇಧಿತ ದ್ರವ್ಯ ಸೇವಿಸಿದ್ದರೆಂದು ಅಂತರರಾಷ್ಟ್ರೀಯ ಟೆನಿಸ್ ಇಂಟಿಗ್ರಿಟಿ ಘಟಕ (ಐಟಿಐಎ) ಶುಕ್ರವಾರ ಅವರಿಗೆ ತಾತ್ಕಾಲಿಕ ಅಮಾನತು ಶಿಕ್ಷೆ ವಿಧಿಸಿದೆ.

ವಿಜಯಪುರ ಸೈಕ್ಲಿಸ್ಟ್‌ಗಳ ಪ್ರಾಬಲ್ಯ

ಪ್ರಜಾವಾಣಿ ವಾರ್ತೆ

ಮೈಸೂರು: ವಿಜಯಪುರ ಜಿಲ್ಲೆಯ ಸ್ಪರ್ಧಿಗಳು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಆಶ್ರಯದಲ್ಲಿ ಶನಿವಾರ ಆರಂಭವಾದ 13ನೇ ರಾಜ್ಯ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಾಬಲ್ಯ ಮೆರೆದರು.

14 ವರ್ಷದೊಳಗಿನವರ ಬಾಲಕರ ವಿಭಾಗದಲ್ಲಿ ಬಾಗಲಕೋಟೆಯ ತರುಣ್ ನಾಯಕ್ ಮೊದಲ ಸ್ಥಾನ ಗಳಿಸಿದರು. ಬೆಳಗಾವಿಯ ಯಲ್ಲೇಶ ಹನುಮಂತ ಹುಡೇದ, ಬಾಗಲಕೋಟೆಯ ಹೊನ್ನಪ್ಪ ಚಿದಾನಂದ ಧರ್ಮಟ್ಟಿ ಕ್ರಮವಾಗಿ 2 ಹಾಗೂ 3ನೇ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ವಿಜಯಪುರ ಜಿಲ್ಲೆಯ ದೀಪಿಕಾ ಪಡತಾರೆ ಪ್ರಥಮ ಸ್ಥಾನ ಗಳಿಸಿ ಮಿಂಚಿದರು. ಅದೇ ಜಿಲ್ಲೆಯ ಜ್ಯೋತಿ ಲಮಾಣಿ, ಕೋಕಿಲ್ ಚವ್ಹಾಣ ನಂತರದ ಸ್ಥಾನಗಳನ್ನು ಗಳಿಸಿದರು.

16 ವರ್ಷದೊಳಗಿನ ಬಾಲಕರ ಸ್ಪರ್ಧೆಯಲ್ಲಿ ವಿಜಯಪುರ ಜಿಲ್ಲೆಯ ಸುಜಲ್ ಯಾದವ್ ಪ್ರಥಮ, ರಾಹುಲ್ ರಾಥೋಡ್ ದ್ವಿತೀಯ ಮತ್ತು ಧನಂಜಯ ಎಸ್.ತಿಪ್ಪನವರ ತೃತೀಯ ಸ್ಥಾನ ಗಳಿಸಿದರು. ಬಾಲಕಿಯರ ವಿಭಾಗದಲ್ಲಿ ಬಾಗಲಕೋಟೆಯ ಅನುಪಮಾ ಗುಳೇದ ಮೊದಲ ಸ್ಥಾನ ಪಡೆದರು. ಪಾಯಲ್ ಚವ್ಹಾಣ ಹಾಗೂ ಕೀರ್ತಿ ನಾಯಕ್ ಕ್ರಮವಾಗಿ ದ್ವಿತೀಯ, ತೃತೀಯ ಸ್ಥಾನಗಳನ್ನು ಗಳಿಸಿದರು.

18 ವರ್ಷದೊಳಗಿನವರ ವಿಭಾಗದಲ್ಲಿ ವಿಜಯಪುರದ ರಾಘವೇಂದ್ರ ವಂಡಾಳ್ ಮೊದಲ ಸ್ಥಾನ ತಮ್ಮದಾಗಿಸಿಕೊಂಡರು. ಪ್ರತಾಪ ಪಡಚಿ, ಉದಯ ಗುಳೇದ ಕ್ರಮವಾಗಿ 2ನೇ ಹಾಗೂ 3ನೇ ಸ್ಥಾನ ಪಡೆದರು. ಬಾಲಕಿಯರ ವಿಭಾಗದಲ್ಲಿ ನಂದಾ ಚಿಚಕಂಡಿ ಮೊದಲಿಗರಾದರು. ಭಾವನಾ ಪಾಟೀಲ ಹಾಗೂ ಸವಿತಾ ಅಡಗಲ್ ಕ್ರಮವಾಗಿ ದ್ವಿತೀಯ, ತೃತೀಯ ಸ್ಥಾನ ಗಳಿಸಿದರು.

23 ವರ್ಷದೊಳಗಿನವರ ಸ್ಪರ್ಧೆಯಲ್ಲಿ ವಿಜಯಪುರದ ಶ್ರೀಶೈಲ ವೀರಾಪುರ ಜಯಿಸಿದರು. ಮೈಸೂರಿನ ವೈಶಾಖ್ ಕೆ.ವಿ ಹಾಗೂ ವಿಜಯಪುರದ ಅನಿಲ ಕಳಗೊಪ್ಪಲ ಕ್ರಮವಾಗಿ 2 ಹಾಗೂ 3ನೇ ಸ್ಥಾನ ಪಡೆದರು. ಎಲೈಟ್ ವಿಭಾಗದಲ್ಲಿ ಧಾರವಾಡದ ಸೌಮ್ಯಾ ಅನಂತಪುರ ಅಗ್ರಸ್ಥಾನ ಪಡೆದರೆ, ಬೆಂಗಳೂರಿನ ಚೈತ್ರಾ ಬೋರ್ಜಿ ಹಾಗೂ ಧಾರವಾಡದ ಸಾವಿತ್ರಿ ಹೆಬ್ಬಲಟ್ಟಿ ನಂತರದ ಸ್ಥಾನಗಳನ್ನು ಗಳಿಸಿದರು.



ಮೈಸೂರಿನ ಉತ್ತನಹಳ್ಳಿಯಲ್ಲಿ ಶನಿವಾರ ನಡೆದ ಸೈಕ್ಲಿಂಗ್ ಸ್ಪರ್ಧೆಯ 16 ವರ್ಷದೊಳಗಿನವರ ವಿಭಾಗದಲ್ಲಿ ಪಾಲ್ಗೊಂಡಿದ್ದ ಬಾಲಕಿಯರು– ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಜೊಹರ್ ಕಪ್ ಹಾಕಿ: ಭಾರತ ಶುಭಾರಂಭ

ಜೊಹರ್, ಮಲೇಷ್ಯಾ (ಪಿಟಿಐ): ಭಾರತ ಜೂನಿಯರ್ ತಂಡ ಸುಲ್ತಾನ್ ಜೊಹರ್ ಕಪ್ ಹಾಕಿ ಟೂರ್ನಿಯಲ್ಲಿ 5–2 ಗೋಲುಗಳಿಂದ ಆತಿಥೇಯ ಮಲೇಷ್ಯಾ ತಂಡವನ್ನು ಮಣಿಸಿ ಶುಭಾರಂಭ ಮಾಡಿತು.

ಶನಿವಾರ ನಡೆದ ಪಂದ್ಯದಲ್ಲಿ ಅಮನ್‌ದೀಪ್ (6ನೇ ನಿಮಿಷ), ಅರೈಜಿತ್ ಸಿಂಗ್ (10), ಬಾಬಿ ಸಿಂಗ್ (20), ಸುದೀಪ್ ಚಿರ್ಮಾಕೊ (26) ಮತ್ತು ಶಾರದಾ ನಂದ ತಿವಾರಿ (56) ಅವರು ಭಾರತದ ಪರ ಗೋಲು ಗಳಿಸಿದರು.

ಪ್ಯಾರಿಸ್ ಒಲಿಂಪಿಕ್ಸ್‌ಗೆ ಸ್ವಪ್ನಿಲ್ ಅರ್ಹತೆ

ಕೈರೊ (ಪಿಟಿಐ): ಭಾರತದ ಶೂಟರ್ ಸ್ವಪ್ನಿಲ್ ಕುಸಾಲೆ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಪುರುಷರ 50 ಮೀ. ರೈಫಲ್ ತ್ರಿ ಪೊಸಿಷನ್‌ನಲ್ಲಿ ನಾಲ್ಕನೇ ಸ್ಥಾನ ಪಡೆದರು. ಈ ಸಾಧನೆಯಿಂದ ಅವರು ಪ್ಯಾರಿಸ್ ಒಲಿಂಪಿಕ್ಸ್‌ಗೆ ಅರ್ಹತೆ ಗಿಟ್ಟಿಸಿಕೊಂಡರು.

ಕೋಲ್ಕತ್ತ ಡರ್ಬಿ

ಇಂಪೀರಿಯಲ್ ಪವರ್ ಗೆಲ್ಲುವ ನಿರೀಕ್ಷೆ

ಆರ್ ಸಿ ಟಿ ಸಿ 175ನೇ ಜ್ಯುಬಿಲಿ ಕೋಲ್ಕತ್ತ ಮಾನ್ಸೂನ್ ಡರ್ಬಿ ಭಾನುವಾರದ ಕೋಲ್ಕತ್ತ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು ಇಂಪೀರಿಯಲ್ ಪವರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಲ್ಲಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಕಂಪ್ಲೈಯನ್ಸ್ 4, ಆಕ್ಟ್ ಆಫ್‌ಮ್ಯಾಜಿಕ್ 5, ರೇಗನ್ 1
2ನೇ ರೇಸ್: ಸಿಲ್ವರಿಟಾ 6, ದುಬೈ ಸ್ಟಾರ್ 5, ದಿವ್ಯಶಕ್ತಿ 7
3ನೇ ರೇಸ್: ರೈಸಿನ ಸ್ಟಾರ್ 7, ಥಿಯಾಗೊ 2, ಪ್ರಾಪರ್ಲಿ ಪಾಶ್ 3
4ನೇ ರೇಸ್: ಸದರನ್ ಲ್ಯಾಡ್ 6, ಮೆಮೋರಬಲ್ ಮೆಮೋರೀಸ್ 4, ಜೀನ್ ಲಫೆಟ್ಟೆ 3
5ನೇ ರೇಸ್: ಮ್ಯಾನ್‌ಡೆವಿಲ್ಲೆ 7, ಗ್ಯಾಲೆನ್ 1, ಡಿ ನೈಟ್ ಮೈಸೂರ್ 3
6ನೇ ರೇಸ್: ಇಂಪೀರಿಯಲ್ ಪವರ್ 1, ಸಕ್ಸಸ್ 7, ರೌಡಿ 2
7ನೇ ರೇಸ್: ಹಿಡನ್ ಗೋಲ್ಡ್ 5, ಸೋರಿಂಗ್ ಹೈ 1, ಮಾನ್ಸೋರ್ಟಿನೊ 2
8ನೇ ರೇಸ್: ಡ್ರೀಮ್ ಚೇಸರ್ 1, ಐಲ್ಯಾಂಡ್ ಲಾಸ್ 6, ದುಬೈ ಬೇ 4

ಉತ್ತಮ ಬೆಟ್: ರೈಸಿನ ಸ್ಟಾರ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	5,6,7	6,7,8

ಅಮನ್‌ಗೆ ಚಿನ್ನ

ಪೊಂತೆವೇದ್ರಾ, ಸ್ಪೇನ್ (ಪಿಟಿಐ): ಫ್ರೀಸ್ಟೈಲ್ ಕುಸ್ತಿಪಟು ಅಮನ್ ಅವರು ಇಲ್ಲಿ ನಡೆದ 23 ವರ್ಷದೊಳಗಿನವರ ವಿಶ್ವ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಭಾರತಕ್ಕೆ ಮೊದಲ ಚಿನ್ನ ತಂದಿತ್ತರು.

ಶನಿವಾರ ನಡೆದ 57 ಕೆ.ಜಿ ವಿಭಾಗದ ಫೈನಲ್‌ನಲ್ಲಿ ಅವರು ಟರ್ಕಿಯ ಅಹ್ಮೆತ್ ದುಮಾನ್ ಅವರನ್ನು ಮಣಿಸಿದರು. ಅಮನ್ ತಮ್ಮ ಎಲ್ಲ ಪಾಯಿಂಟ್‌ಗಳನ್ನು ಎರಡನೇ ಸುತ್ತಿನಲ್ಲಿ ಗಳಿಸಿದರು.

ಅಮನ್ ಅವರು ಈ ಋತುವಿನಲ್ಲಿ ಗೆದ್ದ ನಾಲ್ಕನೇ ಪದಕ ಇದಾಗಿದೆ. ಅವರು ಅಲ್ಮಾಟಿಯಲ್ಲಿ ನಡೆದಿದ್ದ ಚಾಂಪಿಯನ್‌ಷಿಪ್‌ನಲ್ಲಿ ಚಿನ್ನ ಗೆದ್ದಿದ್ದರೆ, ಡಾನ್ ಕೊಲೊವ್‌ನಲ್ಲಿ ಬೆಳ್ಳಿ ಹಾಗೂ ಯಾಸರ್ ಡೊಗುವಿನಲ್ಲಿ ಕಂಚು ಜಯಿಸಿದ್ದರು.

ಭಾರತ ಈ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ಆರು ಪದಕ ಜಯಿಸಿತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹465
12 ಮೊಟ್ಟೆಗೆ	₹60

ಮೈಸೂರು

100 ಮೊಟ್ಟೆಗೆ	₹470

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1340 (1340)
ಸೂರ್ಯಕಾಂತಿ (ರಿಫೈನ್ಡ್)	₹1570 (1570)
ಪಾಮೋಲಿನ್	₹990 (980)

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹150
ಆರ್‌ಎಸ್‌ಎಸ್-5	₹142
ಗುಡ್ ಲಾಟ್	₹136

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹252-468
ದ್ವಿತಳಿ (ಬಿ.ವಿ)	₹352-612

ಎಚ್‌ಪಿ ವರ್ಲ್ಡ್‌ನಲ್ಲಿ ಕುಶಲಕರ್ಮಿಗಳ ಉತ್ಪನ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಭಾಗವಾಗಿ ಸ್ಥಳೀಯ ಕುಶಲಕರ್ಮಿಗಳು ತಮ್ಮ ಉತ್ಪನ್ನಗಳನ್ನು ಎಚ್‌ಪಿ ವರ್ಲ್ಡ್ ಮಳಿಗೆಯಲ್ಲಿ ಮಾರಾಟ ಮಾಡಬಹುದು ಎಂದು ಎಚ್‌ಪಿ ಇಂಡಿಯಾ ಕಂಪನಿಯು ತಿಳಿಸಿದೆ.

ಬೆಂಗಳೂರು ಸೇರಿದಂತೆ ದೇಶದಾದ್ಯಂತ ಒಟ್ಟು 15 ನಗರಗಳಲ್ಲಿ ಇರುವ 75 ಎಚ್‌ಪಿ ವರ್ಲ್ಡ್ ಮಳಿಗೆಗಳಲ್ಲಿ ಸ್ಥಳೀಯ ಕುಶಲಕರ್ಮಿಗಳಿಗೆ ತಮ್ಮ ಉತ್ಪನ್ನಗಳನ್ನು ಮಾರಾಟ ಮಾಡಲು ಸ್ಥಳಾವಕಾಶ ನೀಡಲಾಗಿದೆ ಎಂದು ಹೇಳಿದೆ. ಸ್ಥಳೀಯ ಕುಶಲಕರ್ಮಿಗಳ ಮಹತ್ವ ತಿಳಿಸುವ 'ಥೋಡಿಸಿ ಜಗಾ ಬನಾಲೊ' ಎನ್ನುವ ಕಿರುಚಿತ್ರವನ್ನು ಬಿಡುಗಡೆ ಮಾಡಲಾಗಿದೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಕೋಟಕ್ ಬ್ಯಾಂಕ್ ಲಾಭ ಶೇ 27 ಹೆಚ್ಚಳ

ನವದೆಹಲಿ (ಪಿಟಿಐ): ಕೋಟಕ್ ಮಹೀಂದ್ರ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹2,581 ಕೋಟಿಗೆ ತಲುಪಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹2,032 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 27ರಷ್ಟು ಏರಿಕೆ ಕಂಡಿದೆ.

ಮುಂಬೈ ಧಾರಣೆ

ಶೇಂಗಾ

22-10-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	10100-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1280 (1265)
ಪಾಮ್ ವಾರದ ಡೆಲಿವರಿ	988 (978)
ಸೂರ್ಯಕಾಂತಿ ಎಣ್ಣೆ ಕಚ್ಚಾ	1460 (1460)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
50,550 (50,000)
ಬೆಳ್ಳಿ ಕೆ.ಜಿ 58,000 (55,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಎರಡು ವರ್ಷ ಸಾಲಪತ್ರ ಮಾರುಕಟ್ಟೆ ಪ್ರವೇಶ ಇಲ್ಲ

ಬಾಂಬೆ ಡೈಯಿಂಗ್‌ಗೆ 'ಸೆಬಿ' ನಿಷೇಧ

ನವದೆಹಲಿ (ಪಿಟಿಐ): ಕಂಪನಿಯ ಹಣಕಾಸಿನ ವ್ಯವಹಾರದ ಕುರಿತು ತಪ್ಪು ಮಾಹಿತಿ ನೀಡಿರುವುದಕ್ಕೆ ಸಂಬಂಧಿಸಿದಂತೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಬಾಂಬೆ ಡೈಯಿಂಗ್ ಒಳಗೊಂಡು ಒಟ್ಟು 10 ಕಂಪನಿಗಳಿಗೆ ಸಾಲಪತ್ರ ಮಾರುಕಟ್ಟೆಯಿಂದ ಎರಡು ವರ್ಷಗಳವರೆಗೆ ನಿಷೇಧ ಹೇರಿದೆ.

ಬಾಂಬೆ ಡೈಯಿಂಗ್ ಕಂಪನಿಗೆ ಸೇರಿದ ಫ್ಲ್ಯಾಟ್‌ಗಳನ್ನು ವಾಡಿಯಾ ಸಮೂಹದ ಕಂಪನಿ ಸ್ಕೇಲ್ ಸರ್ವೀಸಸ್ ಲಿಮಿಟೆಡ್ ನೈಜ ಮೌಲ್ಯಕ್ಕಿಂತ ಹೆಚ್ಚಿನ ಬೆಲೆಗೆ, ಅಂದರೆ ₹ 2,492.94 ಕೋಟಿಗೆ ಮಾರಾಟ ಮಾಡಿದ್ದು, ₹1,302 ಕೋಟಿ ಲಾಭ ಮಾಡಿಕೊಳ್ಳಲಾಗಿದೆ. ಆ ಮೂಲಕ ಬಾಂಬೆ ಡೈಯಿಂಗ್ ಕಂಪನಿಯ ಹಣಕಾಸಿನ ವ್ಯವಹಾರದ ಬಗ್ಗೆ ತಪ್ಪು ಮಾಹಿತಿ ನೀಡಲಾಗಿದೆ ಎನ್ನುವ ಆರೋಪದ ಮೇಲೆ ಈ ಕ್ರಮ ಕೈಗೊಂಡಿರುವುದಾಗಿ ಸೆಬಿ ತಿಳಿಸಿದೆ.

2011-12 ಮತ್ತು 2017–18ನೇ ಹಣಕಾಸು ವರ್ಷದ ಅವಧಿಯಲ್ಲಿ ಅವ್ಯವಹಾರ ನಡೆದಿರುವ ಬಗ್ಗೆ ದೂರುಗಳು ಬಂದಿದ್ದರಿಂದ ಸೆಬಿ ತನಿಖೆ ನಡೆಸಿದೆ.

ಈ ಸಂಬಂಧ 10 ಕಂಪನಿಗಳಿಗೆ ಒಟ್ಟು ₹15.75 ಕೋಟಿ ದಂಡ ವಿಧಿಸಿದ್ದು, 45 ದಿನಗಳ ಒಳಗಾಗಿ ದಂಡ ಪಾವತಿಸುವಂತೆ ನಿರ್ದೇಶನ ನೀಡಿದೆ.

ಬಾಂಬೆ ಡೈಯಿಂಗ್ ಮತ್ತು ಅದರ ಪ್ರವರ್ತಕರಾದ ನುಸ್ಲಿ ಎನ್. ವಾಡಿಯಾ ಮತ್ತು ಅವರ ಇಬ್ಬರು ಮಕ್ಕಳು ನೆಸ್ ಮತ್ತು ಜಹಂಗೀರ್ ಅವರು ಎರಡು ವರ್ಷಗಳವರೆಗೆ ಸೆಕ್ಯುರಿಟಿ ಮಾರುಕಟ್ಟೆಯಲ್ಲಿ ವಹಿವಾಟು ನಡೆಸುವಂತಿಲ್ಲ.

ಸ್ಕೇಲ್ ಸರ್ವೀಸಸ್ ಲಿಮಿಟೆಡ್ ಮತ್ತು ಅದರ ಆಗಿನ ನಿರ್ದೇಶಕರಿಗೆ ಒಂದು ವರ್ಷದವರೆಗೆ ನಿಷೇಧ ಹೇರಲಾಗಿದೆ.

ಸ್ಕೇಲ್ ಕಂಪನಿಯಲ್ಲಿ ಬಾಂಬೆ ಡೈಯಿಂಗ್ ಶೇ 19ರಷ್ಟು ಷೇರುಪಾಲು ಮಾತ್ರ ಹೊಂದಿದ್ದರೂ, ಸ್ಕೇಲ್ ಹೊಂದಿರುವ ಅಷ್ಟೂ ಷೇರುಬಂಡವಾಳದ ಮೇಲೆ ಪೂರ್ಣ ರೀತಿಯ ನಿಯಂತ್ರಣವು ಬಾಂಬೆ ಡೈಯಿಂಗ್ ಕೈಯಲ್ಲಿ ಇರುವಂತೆ ಮಾಡಲಾಗಿದೆ.

ಬಾಂಬೆ ಡೈಯಿಂಗ್ ಜೊತೆ ಸ್ಕೇಲ್ ಕಂಪನಿಯ ಹಣಕಾಸು ವಹಿವಾಟಿನ ಮಾಹಿತಿ ಸೇರಿಸುವುದನ್ನು ತಪ್ಪಿಸಲು ಈ ರೀತಿ ಮಾಡಲಾಗಿದೆ. ಈ ಮೂಲಕ, ಸ್ಕೇಲ್ ಕಂಪನಿಗೆ ಮಾಡುವ ಮಾರಾಟ ಮತ್ತು ಅದರಿಂದ ಬರುವ ಲಾಭವನ್ನು ಬಾಂಬೆ ಡೈಯಿಂಗ್‌ನ ಸಮಗ್ರ ಹಣಕಾಸು ಮಾಹಿತಿಯಲ್ಲಿ ಸೇರಿಸುವುದರಿಂದ ತಪ್ಪಿಸಿಕೊಳ್ಳಲಾಗಿದೆ ಎಂದು ಸೆಬಿ ತನ್ನ ವರದಿಯಲ್ಲಿ ತಿಳಿಸಿದೆ.

ಎಸ್‌ಎಟಿಗೆ ಮೇಲ್ಮನವಿ: ಸೆಬಿ ತನ್ನ ವಿರುದ್ಧ ನೀಡಿರುವ ಆದೇಶವನ್ನು ಪ್ರಶ್ನಿಸಿ ಸೆಕ್ಯುರಿಟಿ ಅಪಲೆಟ್ ಟ್ರಿಬ್ಯುನಲ್ (ಎಸ್‌ಎಟಿ) ಕದ ತಟ್ಟುವುದಾಗಿ ಬಾಂಬೆ ಡೈಯಿಂಗ್ ಕಂಪನಿ ಹೇಳಿದೆ.

ಸೆಬಿ ಆದೇಶದ ವಿರುದ್ಧ ಮೇಲ್ಮನವಿ ಸಲ್ಲಿಸಲು ಕಂಪನಿಯು ತನ್ನ ಶಾಸನಬದ್ಧ ಹಕ್ಕನ್ನು ಚಲಾಯಿಸಲಿದೆ. ಎಸ್‌ಎಟಿಯಲ್ಲಿ ನ್ಯಾಯ ಸಿಗಲಿದ್ದು, ಆರೋಪಮುಕ್ತ ಆಗುವ ವಿಶ್ವಾಸವಿದೆ ಎಂದು ಕಂಪನಿಯ ವಕ್ತಾರರೊಬ್ಬರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಐಸಿಐಸಿಐ ಬ್ಯಾಂಕ್ ಲಾಭ ₹8,006 ಕೋಟಿಗೆ ಏರಿಕೆ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್ ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 8,006 ಕೋಟಿ ನಿವ್ವಳ ಲಾಭ ಗಳಿಸಿದೆ.

ಹಿಂದಿನ ಹಣಕಾಸು ವರ್ಷದಲ್ಲಿ ಬ್ಯಾಂಕ್ ₹7,557 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 31.43ರಷ್ಟು ಹೆಚ್ಚಾಗಿದೆ.

ಬ್ಯಾಂಕ್‌ನ ಒಟ್ಟು ವರಮಾನ ₹31,088 ಕೋಟಿಗೆ ಏರಿಕೆ ಆಗಿದೆ. ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹ 2,713 ಕೋಟಿಯಿಂದ ₹1,644 ಕೋಟಿಗೆ ಇಳಿಕೆ ಕಂಡಿದೆ.

ವಸೂಲಾಗದ ಸಾಲದ ಸರಾಸರಿ ಪ್ರಮಾಣ ಶೇ 3.41 ರಿಂದ ಶೇ 3.19ಕ್ಕೆ ಇಳಿಕೆ ಆಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಯೆಸ್ ಬ್ಯಾಂಕ್ ಲಾಭ ಶೇ 32 ಇಳಿಕೆ

ನವದೆಹಲಿ (ಪಿಟಿಐ): ಯೆಸ್ ಬ್ಯಾಂಕ್‌ನ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹152.82 ಕೋಟಿ ಆಗಿದೆ.

ಹಿಂದಿನ ಹಣಕಾಸು ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಬ್ಯಾಂಕ್ ₹225.50 ಕೋಟಿ ನಿವ್ವಳ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಈ ಬಾರಿ ಲಾಭವು ಶೇ 32ರಷ್ಟು ಇಳಿಕೆ ಆಗಿದೆ.

ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹377 ಕೋಟಿಯಿಂದ ₹582 ಕೋಟಿಗೆ ಏರಿಕೆ ಆಗಿದೆ. ಹೀಗಾಗಿ ಲಾಭದಲ್ಲಿ ಇಳಿಕೆ ಕಾಣುವಂತಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಒಟ್ಟು ವರಮಾನವು ₹5,430 ಕೋಟಿಯಿಂದ ₹6,394 ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಬ್ಯಾಂಕ್ ಮಾಹಿತಿ ನೀಡಿದೆ.

ವಸೂಲಾಗದ ಸಾಲದ (ಎನ್‌ಪಿಎ) ಸರಾಸರಿ ಪ್ರಮಾಣವು ಶೇ 14.97 ರಿಂದ ಶೇ 12.89ಕ್ಕೆ ಇಳಿಕೆ ಕಂಡಿದೆ. ನಿವ್ವಳ ಎನ್‌ಪಿಎ ಶೇ 5.55 ರಿಂದ ಶೇ 3.60ಕ್ಕೆ ಇಳಿಕೆ ಆಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ

ಕೂಳೆ	400-420
ನಡುಗೋಲು	450-480
ರಾಶಿ	500-520
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485

ಅಡಿಕೆ
ಕುಂದಾಪುರ

ಹಳೆಚಾಲಿ	50000-56000
ಹೊಸಚಾಲಿ	40000-47500

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15750	15600	16100	195.10 ಸೆಂಟ್ಸ್
ಎಸಿ	9100	8400	8850	
ಆರ್‌ಪಿ	9800	9800	9850	ಲಂಡನ್
ಆರ್‌ಸಿ	4800	4500	4750	2057 ಡಾಲರ್ಸ್

ಕಮ್ಯುನಿಸ್ಟ್ ಪಕ್ಷದ ಸಮಾವೇಶ: ಹಿಡಿತ ಬಿಗಿಗೊಳಿಸಿದ ಚೀನಾ ಅಧ್ಯಕ್ಷ

ಜಿನ್‌ಪಿಂಗ್‌ಗೆ ಮತ್ತೊಂದು ಅವಧಿ ಖಚಿತ

ಬೀಜಿಂಗ್ (ಎಎಫ್‌ಪಿ): ಚೀನಾ ಕಮ್ಯುನಿಸ್ಟ್ ಪಕ್ಷವು ಐದು ವರ್ಷಕ್ಕೊಮ್ಮೆ ನಡೆಸುವ ಸಮಾವೇಶವು ಶನಿವಾರ ಸಮಾರೋಪಗೊಂಡಿದ್ದು, ಪ್ರಧಾನ ಕಾರ್ಯದರ್ಶಿ ಮತ್ತು ಚೀನಾದ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಪಕ್ಷದ ಮೇಲಿನ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಿದ್ದಾರೆ. ಮೂರನೇ ಅವಧಿಗೆ ಅವರು ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ದೇಶದ ಅಧ್ಯಕ್ಷರಾಗಿ ಮುಂದುವರಿಯುವುದು ಖಚಿತವಾಗಿದೆ.

ಹಲವು ಪ್ರಮುಖರನ್ನು ಹುದ್ದೆಗಳಿಂದ ಕೈಬಿಡುವ ಮಹತ್ವದ ನಿರ್ಧಾರವನ್ನು ವಾರ ಕಾಲ ಬೀಜಿಂಗ್‌ನಲ್ಲಿ ನಡೆದ ಸಮಾವೇಶದಲ್ಲಿ ತೆಗೆದುಕೊಳ್ಳಲಾಗಿದೆ. ಪ್ರಧಾನಿ ಲಿ ಕೆಕಿಯಾಂಗ್ ಅವರೂ ಹುದ್ದೆಯಿಂದ ಕೆಳಕ್ಕೆ ಇಳಿಯಲಿದ್ದಾರೆ.

2,300 ಪ್ರತಿನಿಧಿಗಳ ಸಮಾವೇಶವನ್ನು ಅತ್ಯಂತ ವ್ಯವಸ್ಥಿತವಾಗಿ ಆಯೋಜಿಸಲಾಗಿತ್ತು. ಕೊನೆಯ ಕ್ಷಣದ ಬದಲಾವಣೆಗಳು ಅಥವಾ ಅಚ್ಚರಿಯ ಕ್ರಮಗಳಿಗೆ ಯಾವುದೇ ಅವಕಾಶ ಇರಲಿಲ್ಲ. ತಮಗೆ ಇನ್ನೊಂದು ಅವಧಿಯ ಅಧಿಕಾರ ದೊರೆಯುವ ಕಾರ್ಯಕ್ರಮವಾದ ಕಾರಣ ಜಿನ್‌ಪಿಂಗ್ ಅವರು ಅತ್ಯಂತ ಎಚ್ಚರಿಕೆ ವಹಿಸಿದ್ದರು.

'ಕಾಮ್ರೇಡ್ ಷಿ ಜಿನ್‌ಪಿಂಗ್ ಅವರು ಪಕ್ಷದ ಕೇಂದ್ರ ಸಮಿತಿ ಮತ್ತು ಇಡೀ ಪಕ್ಷದ ಕೇಂದ್ರ ವ್ಯಕ್ತಿ' ಎಂಬ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಲಾಗಿದೆ. ಕೇಂದ್ರ ಸಮಿತಿಯ ಸಭೆಯು ಭಾನುವಾರ ನಡೆಯಲಿದೆ. ಈ ಸಭೆಯ ಬಳಿಕ ಜಿನ್‌ಪಿಂಗ್ ಅವರ ಪುನರಾಯ್ಕೆಯನ್ನು ಘೋಷಿಸಲಾಗುವುದು.

ಷಿ ಅವರು ಚೀನಾದ ಸರ್ವಾಧಿಕಾರಿ. ಅವರಿಗೆ ಸಲಹೆ ನೀಡಲು ಅಥವಾ ಅವರ ನಿರ್ಧಾರಗಳನ್ನು ಬದಲಿಸಲು ಪ್ರಯತ್ನಿಸುವುದಕ್ಕೂ ಅವಕಾಶ ಇಲ್ಲ

ಸ್ಟೀವ್ ತ್ಸಾಂಗ್, ನಿರ್ದೇಶಕ, ಎಸ್‌ಒಎಎಸ್ ಚೀನಾ ಇನ್‌ಸ್ಟಿಟ್ಯೂಟ್, ಲಂಡನ್ ಯುನಿವರ್ಸಿಟಿ



ಅಧಿಕಾರಿಯೊಬ್ಬರು ಸಭಾಂಗಣದಿಂದ ಹೊರಗೆ ಕರೆದೊಯ್ಯುವ ಮೊದಲು ಹು ಜಿಂಟಾವೊ ಅವರು ಜಿನ್‌ಪಿಂಗ್ ಅವರೊಂದಿಗೆ ಮಾತನಾಡಿದರು

–ಎಎಫ್‌ಪಿ ಚಿತ್ರ

ಸುಮಾರು 200 ಸದಸ್ಯರು ಇರುವ ಕೇಂದ್ರ ಸಮಿತಿಯನ್ನು ಸಮಾವೇಶದ ಸಮಾರೋಪಕ್ಕೆ ಮೊದಲು ಆಯ್ಕೆ ಮಾಡಲಾಗಿದೆ. ಪಕ್ಷದ ಏಳು ಸದಸ್ಯರ ಸ್ಥಾಯಿ ಸಮಿತಿಯ ನಾಲ್ವರು ಈ ವರ್ಷ ನಿವೃತ್ತರಾಗಲಿದ್ದಾರೆ. ಹಾಲಿ ಪ್ರಧಾನಿ ಲಿ ಕೆಕಿಯಾಂಗ್, ಪಾಲಿಟ್‌ಬ್ಯೂರೊ ಸದಸ್ಯ ವಾಂಗ್ ಯಾಂಗ್ (ಇವರು ಕೆಕಿಯಾಂಗ್ ಅವರ ಉತ್ತರಾಧಿಕಾರಿ ಆಗಬಹುದು ಎಂದು ಈ ಹಿಂದೆ ಹೇಳಲಾಗಿತ್ತು), ಹಾನ್ ಝೆಂಗ್ ಮತ್ತು ಲಿ ಝುಂಶು ಅವರು ನಿವೃತ್ತರಾಗಲಿದ್ದಾರೆ.

ಸಮಾರೋಪದಿಂದ ಜಿಂಟಾವೊ ಹೊರಕ್ಕೆ

ಮಾಜಿ ಅಧ್ಯಕ್ಷ ಹು ಜಿಂಟಾವೊ ಅವರನ್ನು ಸಮಾರೋಪ ಸಮಾರಂಭದಿಂದ ಹೊರಕ್ಕೆ ಕಳುಹಿಸಿದ ಅಚ್ಚರಿಯ ವಿದ್ಯಮಾನ ಶನಿವಾರ ನಡೆದಿದೆ. ಅಂತರ್ಜಾಲದ ಮೇಲೆ ನಿಗಾ ಇರಿಸಲಾಗಿದ್ದು, ಜಿಂಟಾವೊ ಅವರಿಗೆ ಸಂಬಂಧಿಸಿದ ಇತ್ತೀಚಿನ ಮಾಹಿತಿ ಚೀನಾದಲ್ಲಿ ಲಭ್ಯವಾಗದಂತೆ ಮಾಡಲಾಗಿದೆ.

ದುರ್ಬಲಗೊಂಡಂತೆ ಕಾಣುತ್ತಿದ್ದ 79 ವರ್ಷದ ಜಿಂಟಾವೊ ಅವರಿಗೆ ಸಮಾರಂಭದಿಂದ ಎದ್ದು ಹೋಗಲು ಇಷ್ಟ ಇರಲಿಲ್ಲ. ಸಮಾರಂಭದಲ್ಲಿ ಅವರು ಮೊದಲ ಸಾಲಿನಲ್ಲಿ, ಜಿನ್‌ಪಿಂಗ್ ಅವರ ಸಮೀಪ ಕುಳಿತಿದ್ದರು.

ಅಧಿಕಾರಿಯೊಬ್ಬರು ಅವರನ್ನು ತೋಳು ಹಿಡಿದು ಎತ್ತಿ ಹೊರಗೆ ಒಯ್ಯಲು ಯತ್ನಿಸಿದರು. ಆ ಸಂದರ್ಭದಲ್ಲಿ ಜಿಂಟಾವೊ ಅವರು ಜಿನ್‌ಪಿಂಗ್ ಮತ್ತು ಕೆಕಿಯಾಂಗ್ ಅವರೊಂದಿಗೆ ಒಂದು ನಿಮಿಷ ಮಾತುಕತೆ ನಡೆಸಿದರು. ಬಳಿಕ ಅವರು ಸಭಾಂಗಣದಿಂದ ಹೊರ ನಡೆದ ವಿಡಿಯೊ ಬಹಿರಂಗವಾಗಿದೆ. ಬಹುತೇಕ 'ರಬ್ಬರ್ ಸ್ಟ್ಯಾಂಪ್' ಮಾದರಿಯ ಪ್ರತಿನಿಧಿಗಳ ಗುಂಪಿನಲ್ಲಿ ಯಾರೊಬ್ಬರೂ ಏನನ್ನೂ ಮಾತನಾಡಲಿಲ್ಲ.

ಸಮಾವೇಶಕ್ಕೆ ಮಾಧ್ಯಮ ಪ್ರತಿನಿಧಿಗಳಿಗೆ ಪ್ರವೇಶ ಇರಲಿಲ್ಲ. ಆದರೆ, ಸಮಾರೋಪ ಸಮಾರಂಭವನ್ನು ವರದಿ ಮಾಡಲು ಅವಕಾಶ ಕೊಡಲಾಗಿತ್ತು. ಮಾಧ್ಯಮ ಪ್ರತಿನಿಧಿಗಳು ಹಾಜರಿದ್ದ ಸಂದರ್ಭದಲ್ಲಿಯೇ ಜಿಂಟಾವೊ ಅವರನ್ನು ಹೊರಕ್ಕೆ ಕಳುಹಿಸಲಾಗಿದೆ. ಹಾಗಾಗಿ, ಇದು ವರದಿಯಾಗಿದೆ.

ಅಸ್ವಸ್ಥಗೊಂಡ ಕಾರಣ ಜಿಂಟಾವೊ ಅವರನ್ನು ಸಭಾಂಗಣದಿಂದ ಹೊರಕ್ಕೆ ಕಳುಹಿಸಲಾಯಿತು ಎಂದು ಚೀನಾದ ಸರ್ಕಾರಿ ಸ್ವಾಮ್ಯದ ಮಾಧ್ಯಮ ವರದಿ ಮಾಡಿದೆ.

ಝೆಂಗ್ ಮತ್ತು ಝುಂಶು ಅವರಿಗೆ 68 ವರ್ಷ ದಾಟಿದ್ದರಿಂದ ಅವರು ನಿವೃತ್ತರಾಗುತ್ತಿದ್ದಾರೆ. 68 ವರ್ಷದ ನಂತರ ಮಹತ್ವದ ಹುದ್ದೆಗಳಲ್ಲಿ ಮುಂದುವರಿಯುವಂತಿಲ್ಲ ಎಂಬ ಅನೌಪಚಾರಿಕ ನಿಯಮವೊಂದು ಚೀನಾದ ಕಮ್ಯುನಿಸ್ಟ್ ಪಕ್ಷದಲ್ಲಿ ಇದೆ. ಆದರೆ, 69 ವರ್ಷ ವಯಸ್ಸಾಗಿರುವ ಜಿನ್‌ಪಿಂಗ್ ಅವರಿಗೆ ಇದನ್ನು ಅನ್ವಯಿಸಲಾಗಿಲ್ಲ.

67 ವರ್ಷದವರಾಗಿರುವ ವಾಂಗ್ ಮತ್ತು ಕೆಕಿಯಾಂಗ್ ಅವರು ಇನ್ನೊಂದು ಅವಧಿಗೆ ಮುಂದುವರಿಯಲು ಅವಕಾಶ ಇತ್ತು. ಹಾಗಿದ್ದರೂ ಅವರು ನಿವೃತ್ತರಾಗಿದ್ದಾರೆ. ಮಾಜಿ ವಿದೇಶಾಂಗ ಸಚಿವ ಯಾಂಗ್ ಜೈಚಿ ಮತ್ತು ಜಿನ್‌ಪಿಂಗ್ ಅವರ ಬಲಗೈ ಎಂದೇ ಗುರುತಿಸಿಕೊಂಡಿದ್ದ ಉಪಪ್ರಧಾನಿ ಲಿಯು ಹಿ ಅವರ ಗೈರುಹಾಜರಿ ಅಚ್ಚರಿಗೆ ಕಾರಣವಾಗಿದೆ.

ಬ್ರಿಟನ್: ಸ್ಪರ್ಧೆಗೆ ಅರ್ಹತೆ ಪಡೆದ ಸುನಕ್

ಲಂಡನ್ (ಪಿಟಿಐ): ಕನ್ಸರ್ವೇಟಿವ್ ಪಕ್ಷದ ನಾಯಕತ್ವ ಮತ್ತು ಬ್ರಿಟನ್ ಪ್ರಧಾನಿ ಹುದ್ದೆ ಆಕಾಂಕ್ಷಿಗಳ ಪಟ್ಟಿಯಲ್ಲಿ ಭಾರತೀಯ ಮೂಲದ ರಿಷಿ ಸುನಕ್ ಅವರ ಹೆಸರು ಮತ್ತೆ ಮುಂಚೂಣಿಯಲ್ಲಿದೆ.

ಲಿಜ್ ಟ್ರಸ್ ಅವರ ರಾಜೀನಾಮೆ ಬಳಿಕ ತೆರವಾಗಲಿರುವ ಸ್ಥಾನಕ್ಕೆ ಸ್ಪರ್ಧಿಸಲು ಅಗತ್ಯವಿರುವ 100 ಸಂಸದರ ಬೆಂಬಲ ಸುನಕ್ ಅವರಿಗೆ ಲಭಿಸಿದೆ ಎಂದು ಅವರ ಬೆಂಬಲಿಗರು ಶನಿವಾರ ಹೇಳಿದ್ದಾರೆ.

ಕೆರಿಬಿಯನ್ ನಾಡಿಗೆ ಪ್ರವಾಸ ಕೈಗೊಂಡಿದ್ದ ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರು ಪ್ರವಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ತವರಿಗೆ ಹಿಂದಿರುಗಿದ್ದಾರೆ. ಅವರು ಮತ್ತೊಮ್ಮೆ ಪ್ರಧಾನಿ ಹುದ್ದೆಗೆ ಸ್ಪರ್ಧಿಸಲಿದ್ದಾರೆ ಎಂದು ಹೇಳಲಾಗಿದೆ. ತಮ್ಮ ಸ್ಪರ್ಧೆಯ ಕುರಿತು, ಜಾನ್ಸನ್ ಮತ್ತು ಸುನಕ್ ಅವರು ಈವರೆಗೂ ಯಾವುದೇ ಅಧಿಕೃತ ಮಾಹಿತಿ ಪ್ರಕಟಿಸಿಲ್ಲ. ತಾವು ಪ್ರಧಾನಿ ಹುದ್ದೆಗೆ ಸ್ಪರ್ಧಿಸುವುದಾಗಿ ಪೆನಿ ಮಾರ್ಡಂಟ್ ಈಗಾಗಲೇ ಘೋಷಿಸಿದ್ದಾರೆ.

ಪ್ರಧಾನಿ ಹುದ್ದೆಗೆ ಸುನಕ್ ಸೂಕ್ತ ಆಯ್ಕೆ ಎಂದು ಹಲವರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಟೋರಿಯ ಪ್ರಭಾವಿ ಸಚಿವರು ಹಾಗೂ ಸಂಸದರೂ ಕೂಡ ಸುನಕ್ ಬೆಂಬಲಕ್ಕೆ ನಿಂತಿದ್ದಾರೆ ಎಂದು ಹೇಳಲಾಗಿದೆ.

ಬಿಬಿಸಿ ಸುದ್ದಿ ಸಂಸ್ಥೆ ಜೊತೆ ಮಾತನಾಡಿರುವ ಬ್ರಿಟನ್‌ನ ಮಾಜಿ ಉಪ ಪ್ರಧಾನಿ ಡಾಮಿನಿಕ್ ರಾಬ್, 'ಆರ್ಥಿಕ ಹಿಂಜರಿತದಿಂದ ದೇಶವನ್ನು ಮೇಲಕ್ಕೆತ್ತಲು ಅಗತ್ಯವಿರುವ ಯೋಜನೆಯನ್ನು ರಿಷಿ ಸಿದ್ಧಪಡಿಸಿದ್ದಾರೆ. ದೇಶದಲ್ಲಿ ಸುಸ್ಥಿರ ಆಡಳಿತ ನಡೆಸಲು ಅವರು ಸೂಕ್ತ ವ್ಯಕ್ತಿ. ಲಕ್ಷಾಂತರ ಮಂದಿ ಕಾರ್ಮಿಕರು ಹಾಗೂ ಉದ್ಯಮಿಗಳಲ್ಲಿ ಅವರು ಹೊಸ ಭರವಸೆಗಳನ್ನು ಚಿಗುರೊಡೆಯುವಂತೆ ಮಾಡಬಲ್ಲರು' ಎಂದಿದ್ದಾರೆ.

ಮಾಜಿ ಪ್ರಧಾನಿ ಜಾನ್ಸನ್ ಸ್ಪರ್ಧೆಯ ಕುರಿತು ಪ್ರತಿಕ್ರಿಯಿಸಿದ ಅವರು, 'ಕೋವಿಡ್ ನಿಯಂತ್ರಣಕ್ಕಾಗಿ ಹೇರಲಾಗಿದ್ದ ಲಾಕ್‌ಡೌನ್ ಅವಧಿಯಲ್ಲಿ ಜಾನ್ಸನ್ ಅವರು ತಮ್ಮ ಸಿಬ್ಬಂದಿ ಜೊತೆ ಮೋಜಿನ ಕೂಟ ನಡೆಸಿದ್ದರು. ಈ ಕುರಿತ ವಿಚಾರಣೆ ಇನ್ನೂ ಬಾಕಿ ಇದೆ. ದೇಶದ ಜನರು ಸಂಕಷ್ಟದಲ್ಲಿದ್ದಾಗ ಮೋಜು ಮಸ್ತಿ ನಡೆಸಿದ್ದ ಜಾನ್ಸನ್, ಪಕ್ಷದ ವಿಶ್ವಾಸವನ್ನೇ ಕಳೆದುಕೊಂಡಿದ್ದಾರೆ. ಅವರನ್ನು ಪ್ರಧಾನಿ ಮಾಡುವ ಮೂಲಕ ನಾವು ಹಿಂದಿನ ಸ್ಥಿತಿಗೆ ಮರಳಬಾರದು. ದೇಶ ಮತ್ತು ಸರ್ಕಾರ ಅಭಿವೃದ್ಧಿಯ ದಿಸೆಯಲ್ಲಿ ಸಾಗಬೇಕು' ಎಂದು ಕುಟುಕಿದ್ದಾರೆ.

ಜಾನ್ಸನ್‌ಗೆ ಈಗಾಗಲೇ 45 ಸಂಸದರು ಬಹಿರಂಗವಾಗಿಯೇ ಬೆಂಬಲ ಸೂಚಿಸಿದ್ದಾರೆ. ಸೋಮವಾರದ ವೇಳೆಗೆ ಅವರು ಅಗತ್ಯವಿರುವ 100 ಸಂಸದರ ಬೆಂಬಲ ಗಳಿಸಲಿದ್ದಾರೆ ಎಂದೂ ಹೇಳಲಾಗಿದೆ.

ತಮಗೆ 100 ಸಂಸದರ ಬೆಂಬಲ ಇರುವುದನ್ನು ಸಾಬೀತುಪಡಿಸಲು ಪ್ರಧಾನಿ ಹುದ್ದೆ ಆಕಾಂಕ್ಷಿಗಳಿಗೆ ಸೋಮವಾರ ಸ್ಥಳೀಯ ಕಾಲಮಾನ 2 ಗಂಟೆವರೆಗೂ ಸಮಯಾವಕಾಶವಿದೆ. ನಿಗದಿತ ಕಾಲಮಿತಿ ಮುಗಿದ ಬಳಿಕ ಸ್ಪರ್ಧಾಕಣದಲ್ಲಿ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಮಂದಿ ಉಳಿದರೆ ಅವರ ಆಯ್ಕೆಗಾಗಿ ಟೋರಿ ಸದಸ್ಯರು ಆನ್‌ಲೈನ್ ಮೂಲಕ ಮತದಾನ ನಡೆಸಲಿದ್ದಾರೆ. ಯಾರಾದರೂ ಒಬ್ಬರೇ ಸ್ಪರ್ಧಾಕಣದಲ್ಲಿದ್ದರೆ ಅವರೇ ಪ್ರಧಾನಿ ಹುದ್ದೆಗೇರಲಿದ್ದಾರೆ.

ಬೋರಿಸ್‌ಗೆ ಪ್ರೀತಿ ಬೆಂಬಲ: ಪ್ರಧಾನಿ ಹುದ್ದೆಗೆ ಬೋರಿಸ್ ಜಾನ್ಸನ್ ಸೂಕ್ತ ವ್ಯಕ್ತಿ ಎಂದು ಭಾರತೀಯ ಸಂಜಾತೆ ಪ್ರೀತಿ ಪಟೇಲ್ ಹೇಳಿದ್ದಾರೆ. ಬೋರಿಸ್ ಅವರು ಪ್ರಧಾನಿಯಾಗಿದ್ದಾಗ ಪ್ರೀತಿ ಅವರು ಗೃಹ ಸಚಿವಾಲಯದ ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದರು.

41,448 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ: 11 ಯೋಜನೆಗಳಿಗೆ ಒಪ್ಪಿಗೆ

₹ 1.74 ಲಕ್ಷ ಕೋಟಿ ಬಂಡವಾಳ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ಶನಿವಾರ ನಡೆದ ರಾಜ್ಯ ಮಟ್ಟದ ಉನ್ನತಾಧಿಕಾರ ಸಮಿತಿಯ 60ನೇ ಸಭೆಯಲ್ಲಿ ಬರೋಬ್ಬರಿ ₹1,74,381.44 ಕೋಟಿ ಹೂಡಿಕೆಯ ಒಟ್ಟು 11 ಯೋಜನೆಗಳಿಗೆ ಒಪ್ಪಿಗೆ ನೀಡಲಾಯಿತು.

ರಾಜ್ಯದಲ್ಲಿ ಇಷ್ಟೊಂದು ಭಾರಿ ಮೊತ್ತದ ಬಂಡವಾಳ ಹೂಡಿಕೆ ಪ್ರಸ್ತಾವನೆಗೆ ಅನುಮೋದನೆ ನೀಡಿರುವುದು ಇದೇ ಮೊದಲು.

ಗ್ರೀನ್ ಹೈಡ್ರೋಜನ್ ಉತ್ಪಾದಕ ಸಂಸ್ಥೆ ಆಕ್ಮೆ ಕ್ಲೀನ್ ಟೆಕ್ ಸೆಲ್ಯೂಷನ್ ಸೇರಿದಂತೆ 8 ಹೊಸ ಕೈಗಾರಿಕಾ ಪ್ರಸ್ತಾವಗಳು ಹಾಗೂ 3 ಹೆಚ್ಚುವರಿ ಹೂಡಿಕೆ ಯೋಜನೆಗಳ ಪ್ರಸ್ತಾವನೆಗೆ ಅನುಮೋದನೆ ದೊರೆತಿದೆ. ಈ ಯೋಜನೆಗಳಿಂದ ರಾಜ್ಯದಲ್ಲಿ 41,448 ಉದ್ಯೋಗ ಸೃಷ್ಟಿಯಾಗುವ ನಿರೀಕ್ಷೆ ಇದೆ.

ಅನುಮೋದನೆ ಪಡೆದ ಪ್ರಮುಖ ಯೋಜನೆಗಳು (₹ ಕೋಟಿಗಳಲ್ಲಿ)	
ಆಕ್ಮೆ ಕ್ಲೀನ್ ಟೆಕ್ ಸಲ್ಯೂಷನ್ ಪ್ರೈ.ಲಿ. ಹೂಡಿಕೆ	51,865
ಅವದಾ ವೆಂಚರ್ಸ್ ಪ್ರೈ. ಲಿ. ಹೂಡಿಕೆ	45,000
ಜೆಎಸ್‌ಡಬ್ಲ್ಯು ಗ್ರೀನ್ ಹೈಡ್ರೋಜನ್ ಲಿ. ಹೂಡಿಕೆ	40,148
ರಿನ್ಯೂ ಇ-ಫ್ಯೂಯೆಲ್ಸ್ ಪ್ರೈವೇಟ್ ಲಿಮಿಟೆಡ್ ಹೂಡಿಕೆ	20,000
ಏಟ್ರಿಯಾ ಪವರ್ ಹೋಲ್ಡಿಂಗ್ಸ್ ಹೂಡಿಕೆ	9,454
ಕಿರ್ಲೋಸ್ಕರ್ ಫೆರೋಸ್ ಇಂಡಸ್ಟ್ರೀಸ್ ಲಿ. ಹೂಡಿಕೆ	3,025
ಜೆಎಸ್‌ಡಬ್ಲ್ಯು ನಿಯೋ ಎನರ್ಜಿ ಲಿ. ಹೂಡಿಕೆ	2,579
ಕಾಂಟಿನೆಂಟಲ್ ಆಟೋಮೇಟಿವ್ ಕಾಂಪೊನೆಂಟ್ಸ್ ಹೂಡಿಕೆ	920

ಸಭೆಯಲ್ಲಿ ಯೋಜನೆಗಳಿಗೆ ಒಪ್ಪಿಗೆ ನೀಡಿದ ನಂತರ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, 'ಹಸಿರು ಇಂಧನವೇ ಭವಿಷ್ಯ. 2026ರಿಂದ ಗ್ರೀನ್ ಹೈಡ್ರೋಜನ್ ರಫ್ತು ಆರಂಭವಾಗಲಿದ್ದು, ದೇಶದ ಒಟ್ಟು ಗ್ರೀನ್ ಹೈಡ್ರೋಜನ್ ರಫ್ತಿನಲ್ಲಿ ರಾಜ್ಯದ ಪಾಲು ಅಧಿಕವಾಗಿರಲಿದೆ. ಈ ನಿಟ್ಟಿನಲ್ಲಿ ರಾಜ್ಯದಲ್ಲಿ ಗ್ರೀನ್ ಹೈಡ್ರೋಜನ್ ಉತ್ಪಾದನೆಗೆ ಮುಂದಾಗಿರುವ ಆಕ್ಮೆ ಕ್ಲೀನ್ ಟೆಕ್ ಸಲ್ಯೂಷನ್, ಜೆಎಸ್‌ಡಬ್ಲ್ಯು ಗ್ರೀನ್ ಹೈಡ್ರೋಜನ್, ಅವದಾ ವೆಂಚರ್ಸ್ ಹಾಗೂ ರಿನ್ಯೂ ಇ-ಫ್ಯೂಯೆಲ್ಸ್ ಪ್ರೈವೇಟ್ ಲಿಮಿಟೆಡ್‌ನ ಪ್ರಸ್ತಾವನೆಗಳಿಗೆ ಸಭೆಯಲ್ಲಿ ಅನುಮೋದನೆ ನೀಡಲಾಗಿದೆ. ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಮೊದಲೇ ಇಷ್ಟು ಭಾರಿ ಮೊತ್ತದ ಬಂಡವಾಳ ರಾಜ್ಯದಲ್ಲಿ ಹೂಡಿಕೆ ಆಗುತ್ತಿರುವುದು ವಿಶೇಷ. ಇದು ನಮ್ಮ ಉತ್ಸಾಹ ಮತ್ತು ನಿರೀಕ್ಷೆಯನ್ನು ಹೆಚ್ಚಿಸಿದೆ' ಎಂದರು.

ಹೆಚ್ಚುವರಿ ಹೂಡಿಕೆ ಪ್ರಸ್ತಾವನೆಗಳು

₹511 ಕೋಟಿ ಟೊಯೋಟ ಕಿರ್ಲೋಸ್ಕರ್ ಮೋಟಾರ್ ಪ್ರೈ ಲಿ. ಹೂಡಿಕೆ

₹49.44 ಕೋಟಿ ಜಿ.ಎಂ ಶುಗರ್ ಮತ್ತು ಎನರ್ಜಿ ಲಿ. ಹೂಡಿಕೆ

₹830 ಕೋಟಿ ರಿಸೋರ್ಸ್‌ಸ್ ಪೆಲ್ಲೆಟ್ಸ್ ಕಾನ್ಸನ್ಟ್ರೇಟ್ಸ್ ಪ್ರೈ. ಲಿ. ಹೂಡಿಕೆ

'ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಕರ್ನಾಟಕ ಮಂಚೂಣಿಯಲ್ಲಿದೆ. ರಾಜ್ಯ ಸರ್ಕಾರವು ಗ್ರೀನ್ ಹೈಡ್ರೋಜನ್ ನೀತಿಯನ್ನು ರೂಪಿಸುತ್ತಿದೆ. ಕಬ್ಬು ಬೆಳೆಯುವ ರಾಜ್ಯಗಳ ಪೈಕಿ ದೇಶದಲ್ಲೇ 3ನೇ ಸ್ಥಾನದಲ್ಲಿರುವ ಕರ್ನಾಟಕ ಅತಿ ಹೆಚ್ಚು ಎಥನಾಲ್ ಉತ್ಪಾದಿಸುವ ರಾಜ್ಯ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದಕ್ಕೆ ಪೂರಕವಾಗಿ ಸಭೆಯಲ್ಲಿ ಹಸಿರು ಇಂಧನ ಉತ್ಪಾದನಾ ವಲಯದ ಬಂಡವಾಳ ಹೂಡಿಕೆ ಪ್ರಸ್ತಾವನೆಗಳಿಗೆ ಅನುಮೋದನೆ ದೊರೆತಿದೆ' ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವ ಮುರುಗೇಶ ಆರ್. ನಿರಾಣಿ ಹೇಳಿದರು.

ಜಲಸಂಪನ್ಮೂಲ ಸಚಿವ ಗೋವಿಂದ ಕಾರಜೋಳ, ಕೃಷಿ ಸಚಿವ ಬಿ.ಸಿ ಪಾಟೀಲ್, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ, ಮುಖ್ಯಮಂತ್ರಿ ಅವರ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್ ಇದ್ದರು.



ಎಂ.ಎಸ್ ಆಶಾದೇವಿ ಅವರನ್ನು ಶರಣ ಸಾಹಿತ್ಯ ಪರಿಷತ್ತಿನಿಂದ ಸನ್ಮಾನಿಸಲಾಯಿತು. ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಗೀತಾ ಜಯಂತ್, ಬೆಂಗಳೂರು ನಗರ ಜಿಲ್ಲಾ ಕದಳಿ ಮಹಿಳಾ ವೇದಿಕೆ ಅಧ್ಯಕ್ಷೆ ಪ್ರಮೀಳಾ ಗರಡಿ, ಕರ್ನಾಟಕ ಪ್ರದೇಶ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ, ಪರಿಷತ್ತಿನ ಕಾರ್ಯದರ್ಶಿ ಕೆ. ಗುರುಪ್ರಸಾದ್ ಕುಚ್ಚಂಗಿ, ಆಲಗೂರು ಪಂಚಮಸಾಲಿ ಪೀಠದ ಮಹಾದೇವ ಶಿವಾಚಾರ್ಯ ಸ್ವಾಮೀಜಿ, ಪರಿಷತ್ತಿನ ಅಧ್ಯಕ್ಷ ಕೆ.ವಿ ನಾಗರಾಜಮೂರ್ತಿ, ತೋಂಟದ ಸಿದ್ಧರಾಮ ಸ್ವಾಮೀಜಿ ಇದ್ದರು ಪ್ರಜಾವಾಣಿ ಚಿತ್ರ

'ಒಂದೇ ರಾಷ್ಟ್ರ, ಒಂದೇ ಪಿಂಚಣಿ' ಜಾರಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಪಿಂಚಣಿ ಯೋಜನೆ ರದ್ದುಪಡಿಸಲು ಕೇಂದ್ರ ಸರ್ಕಾರ ಪಿಎಫ್‌ಆರ್‌ಡಿಎ (ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ) ಕಾಯ್ದೆಗೆ ತಿದ್ದುಪಡಿ ತರಬೇಕು ಎಂದು ರಾಷ್ಟ್ರೀಯ ಹಳೇ ಪಿಂಚಣಿ ಮರುಸ್ಥಾಪನಾ ಸಂಯುಕ್ತರಂಗ ಆಗ್ರಹಿಸಿದೆ.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸರ್ಕಾರಿ, ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಲ್ಲಿ 75 ಲಕ್ಷಕ್ಕೂ ಹೆಚ್ಚು ನೌಕರರು ಹೊಸ ಪಿಂಚಣಿ ವ್ಯವಸ್ಥೆಗೆ ಒಳಪಟ್ಟಿದ್ದಾರೆ. ಅವರ ಸಂಧ್ಯಾಕಾಲದ ಬದುಕು ಅನಿಶ್ಚಿತತೆಯಿಂದ ಕೂಡಿದೆ. ಮೂರು ದಶಕ ದುಡಿದರೂ ಜೀವನ ಭದ್ರತೆ ಇಲ್ಲ. ಈ ಯೋಜನೆ ಕೇಂದ್ರ ಸರ್ಕಾರ ಪಿಎಫ್‌ಆರ್‌ಡಿಎ ವ್ಯಾಪ್ತಿಗೆ ಒಳಪಡುತ್ತದೆ. ಈಗಾಗಲೇ ದೇಶದ 3 ರಾಜ್ಯಗಳು ಹೊಸ ಪಿಂಚಣಿ ವ್ಯವಸ್ಥೆ ರದ್ದುಪಡಿಸುವ ನಿರ್ಧಾರ ಕೈಗೊಂಡರೂ, ನಿರ್ಧಾರ ಜಾರಿಯಾಗಲು, ಅಲ್ಲಿನ ನೌಕರರಿಂದ ಸಂಗ್ರಹಿಸಿದ್ದ ಎನ್‌ಪಿಎಸ್ ವಂತಿಕೆ ಮರಳಿಸಲು ಪಿಎಫ್‌ಆರ್‌ಡಿಎ ಕಾಯ್ದೆ ಅಡ್ಡಿಯಾಗಿದೆ ಎಂದು ಈಚೆಗೆ ಬೆಂಗಳೂರಿಗೆ ಭೇಟಿ ನೀಡಿದ್ದ ಹಳೇ ಪಿಂಚಣಿ ಮರುಸ್ಥಾಪನಾ ಸಂಯುಕ್ತ ರಂಗದ ಅಧ್ಯಕ್ಷ ಬಿ.ಪಿ. ಸಿಂಗ್ ರಾವತ್, ಉಪಾಧ್ಯಕ್ಷ ವಿನೋದ್ ಕನೋಜಿಯಾ, ತೆಲಂಗಾಣ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಂಪತ್‌ಕುಮಾರ್ ಸ್ವಾಮಿ ದೂರಿದರು.

ದೇಶದ ಇತರೆ ರಾಜ್ಯಗಳು ಎನ್‌ಪಿಎಸ್ ರದ್ದು ಮಾಡುವ ನಿರ್ಧಾರ ತೆಗೆದುಕೊಂಡರೂ ವಂತಿಗೆ ಹಣ ಹಿಂಪಡೆಯಲು ಅವಕಾಶ ಇರುವುದಿಲ್ಲ. ಕೇಂದ್ರ ಸರ್ಕಾರವು ತಕ್ಷಣ ಕಾಯ್ದೆಗೆ ತಿದ್ದುಪಡಿ ತರಬೇಕು. ಎಲ್ಲ ರಾಜ್ಯಗಳ ನೌಕರರಿಗೂ 'ಒಂದೇ ರಾಷ್ಟ್ರ– ಒಂದೇ ಪಿಂಚಣಿ' ಯೋಜನೆ ನೀಡಬೇಕು. ಈ ಕಾಯ್ದೆ ವ್ಯಾಪ್ತಿಯಿಂದ ಕೈಬಿಡುವ ಮಸೂದೆಯನ್ನು ಮಂಡಿಸಬೇಕು. ರಾಷ್ಟ್ರೀಯ ಪಕ್ಷ ಗಳು ಮುಂದಿನ ಚುನಾವಣಾ ಪ್ರಣಾಳಿಕೆಯಲ್ಲಿ ಎನ್‌ಪಿಎಸ್ ರದ್ದು ವಿಷಯ ಅಳವಡಿಸಬೇಕು ಎಂದು ಒತ್ತಾಯಿಸಿದರು.



ರಾಷ್ಟ್ರೀಯ ಹಳೇ ಪಿಂಚಣಿ ಮರುಸ್ಥಾಪನಾ ಸಂಯುಕ್ತರಂಗ, ರಾಜ್ಯ ಸರ್ಕಾರಿ ನೌಕರರ ಸಂಘದ ಪದಾಧಿಕಾರಿಗಳು ಹೊಸ ಪಿಂಚಣಿ ಯೋಜನೆ ರದ್ದುಪಡಿಸಲು ಕೇಂದ್ರ ಸರ್ಕಾರ ಪಿಎಫ್‌ಆರ್‌ಡಿಎ ಕಾಯ್ದೆಗೆ ತಿದ್ದುಪಡಿ ತರಬೇಕೆಂದು ಆಗ್ರಹಿಸಿದರು

ಕಾರ್ಮಿಕ ಸಾವು: ಮೂವರ ಬಂಧನ

ಮಾಲೂರು (ಕೋಲಾರ ಜಿಲ್ಲೆ): ತಾಲ್ಲೂಕಿನ ಟೇಕಲ್ ಹೋಬಳಿಯ ಕೊಮ್ಮನಹಳ್ಳಿ ಬಳಿ ಕಲ್ಲು ಕ್ವಾರಿಯಲ್ಲಿ ಸ್ಫೋಟಕ ಸಿಡಿದು ಕಾರ್ಮಿಕ ಮೃತಪಟ್ಟ ಪ್ರಕರಣ ಸಂಬಂಧ ಮಾಸ್ತಿ ಪೊಲೀಸರು ಕ್ವಾರಿ ಮಾಲೀಕ ಮಂಜುನಾಥ್ ಸೇರಿ ಮತ್ತೆ ಮೂವರನ್ನು ಬಂಧಿಸಿದ್ದಾರೆ.

ಕಲ್ಲು ಕ್ವಾರಿಯಲ್ಲಿ ಡ್ರಿಲ್ ಮಾಡಿದ್ದ ಸುರೇಶ್, ಲಾರಿ ಚಾಲಕ ಅಂಜಿ ಬಂಧಿತ ಇನ್ನಿಬ್ಬರು. ಮೃತ ರಾಕೇಶ್ ಸಾಣಿ ತಮ್ಮ ನಿತೇಶ್ ಕುಮಾರ್ ಹಾಗೂ ಸ್ಫೋಟಕ ಸರಬರಾಜು ಮಾಡಿದ್ದ ದಿಪೇನ್ ಎಂಬುವರನ್ನು ಬಂಧಿಸಲಾಗಿತ್ತು. 'ಪ್ರಕರಣಕ್ಕೆ ಸಂಬಂಧಿಸಿದಂತೆ ಈರೇಗೌಡ ಎಂಬುವರಿಗಾಗಿ ಶೋಧ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಸ್ಫೋಟಕ ವಸ್ತು ಕಾಯ್ದೆ, ಸಾಕ್ಷ್ಯ ನಾಶಪಡಿಸುವ ಪ್ರಯತ್ನದ ಪ್ರಕರಣ ದಾಖಲಿಸಿ ಡಿವೈಎಸ್ಪಿ ಮುರಳೀಧರ್ ನೇತೃತ್ವದಲ್ಲಿ ತನಿಖೆ ನಡೆಸಲಾಗುತ್ತಿದೆ.

ಅಸಹಿಷ್ಣುತೆ, ಅಮಾನವೀಯತೆಗೆ ಪ್ರೀತಿಯೇ ಮದ್ದು: ಆಶಾದೇವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಸಹಿಷ್ಣುತೆ ಮತ್ತು ಅಮಾನವೀಯತೆ ಎಂಬ ರೋಗಕ್ಕೆ ತುತ್ತಾಗಿರುವ ಮಾನವ ಸಮುದಾಯಕ್ಕೆ ಸಹಿಷ್ಣುತೆ ಮತ್ತು ಪ್ರೀತಿಯೇ ಮದ್ದು. ಈ ಮದ್ದು ಶರಣ ಚಳವಳಿಯಲ್ಲಿದೆ' ಎಂದು ವಿಮರ್ಶಕಿ ಎಂ.ಎಸ್. ಆಶಾದೇವಿ ಪ್ರತಿಪಾದಿಸಿದರು.

ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು ಮತ್ತು ಕದಳಿ ಮಹಿಳಾ ವೇದಿಕೆ ಆಯೋಜಿಸಿದ್ದ ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ವಚನ ಚಳವಳಿಯ ಬಗ್ಗೆ ಇನ್ನಿಲ್ಲದ ಪ್ರೀತಿ ಅಭಿಮಾನದಿಂದ ನಾವು ಮಾತನಾಡುತ್ತೇವೆ. ವಚನ ಪರಂಪರೆಯ ಉತ್ತರಾಧಿಕಾರಿಗಳೆಂದು ಹೇಳಿಕೊಳ್ಳುತ್ತಿದ್ದೇವೆ. ಆದರೆ, ಆ ಹೊಣೆಯನ್ನು ಸಮರ್ಪಕವಾಗಿ ನಿಭಾಯಿಸಿಲ್ಲ ಎನ್ನುದಕ್ಕೆ ಸಮಕಾಲೀನ ಸಂದರ್ಭವೇ ಸಾಕ್ಷಿ' ಎಂದರು.

'ದಲಿತರ ಮತ್ತು ಮಹಿಳೆಯರ ಸವಾಲುಗಳಿಗೆ ಪರಿಹಾರ ಸಿಗದ ಹೊರತು, ಮತಾಂಧತೆ ಮತ್ತು ಅದರ ಕ್ರೌರ್ಯದ ನೂರು ರೂಪಗಳು ನಿಲ್ಲದ ಹೊರತು ಈ ಜಗತ್ತಿನಲ್ಲಿ ಶಾಂತಿ ಸಮಾಧಾನ ನೆಲೆಸಲಾರವು. ಶರಣರ ಪರಂಪರೆಯವರು ಎಂದು ಹೆಮ್ಮೆಯಿಂದ ಘೋಷಿಸಿಕೊಳ್ಳುವ ನಾವು ಮಾತಿನಿಂದ ಕೃತಿಗೆ ಇಳಿಯಬೇಕಾದ ತುರ್ತಿದೆ. ಎದೆಯ ದನಿಯ ಶರಣ ಧರ್ಮವನ್ನು ಜನರ ಧರ್ಮವಾಗಿಸುವ ಜರೂರಿದೆ. ಪ್ರೀತಿ ಮತ್ತು ಸಹಿಷ್ಣುತೆಯ ಮದ್ದನ್ನು ಮೊದಲು ನಾವು ಕುಡಿದು, ಬಳಿಕ ಬೇರೆಯವರಿಗೆ ಕುಡಿಸಬೇಕಾಗಿದೆ' ಎಂದು ಅವರು ಹೇಳಿದರು.

ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಗೌರವಾಧ್ಯಕ್ಷ ತೋಂಟದ ಸಿದ್ಧರಾಮ ಸ್ವಾಮೀಜಿ ಮಾತನಾಡಿ, 'ಇಡೀ ಕನ್ನಡ ಸಾಹಿತ್ಯಕ್ಕೆ ಪ್ರಜ್ಞೆ ತಂದು ಕೊಟ್ಟ ಸಾಹಿತ್ಯ ಇದ್ದರೆ ಅದು ವಚನ ಸಾಹಿತ್ಯ. ಜನ ಪರವಾಗಿ ನಿಲುವು ಹೊಂದಿರುವ ಪ್ರಪಂಚದ ಏಕೈಕ ಸಾಹಿತ್ಯ ಎಂದರೆ ಶರಣ ಸಾಹಿತ್ಯ' ಎಂದರು.

ಸಮ್ಮೇಳನ ಉದ್ಘಾಟಿಸಿದ ಶಾಸಕಿ ಸೌಮ್ಯಾರೆಡ್ಡಿ ಮಾತನಾಡಿ, 'ಪ್ರಸ್ತುತ ಸಮಾಜವನ್ನು ಬದಲಾವಣೆ ಮಾಡಲು ಸಾಧ್ಯವಿದ್ದರೆ, ಅದು ವಚನ ಸಾಹಿತ್ಯದಿಂದ ಮಾತ್ರ ಸಾಧ್ಯ. ವಚನ ಸಾಹಿತ್ಯ ನಮ್ಮ ಬದುಕಿನ ಮಾರ್ಗವಾಗಿದೆ. ಸಮ ಸಮಾಜದ ನಿರ್ಮಾಣಕ್ಕೆ ಅತ್ಯಂತ ಪ್ರಮುಖವಾಗುತ್ತದೆ' ಎಂದರು.

ಪರಿಷತ್ತಿನ ನಗರ ಜಿಲ್ಲಾ ಘಟಕ ಅಧ್ಯಕ್ಷ ಕೆ.ವಿ.ನಾಗರಾಜಮೂರ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.



ಕಾನ್ವೆ, ಟಿಮ್ ಸೌಥಿ ಮಿಂಚು

ಟಿ20 ವಿಶ್ವಕಪ್: ಆಸ್ಟ್ರೇಲಿಯಾ ತಂಡಕ್ಕೆ ಆಘಾತ: ನ್ಯೂಜಿಲೆಂಡ್ ಶುಭಾರಂಭ

ಸಿಡ್ನಿ (ಪಿಟಿಐ): ಹಾಲಿ ಚಾಂಪಿಯನ್ ಹಾಗೂ ಆತಿಥೇಯ ಆಸ್ಟ್ರೇಲಿಯಾ ತಂಡಕ್ಕೆ ಶನಿವಾರ ಆರಂಭವಾದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಉದ್ಘಾಟನೆ ಪಂದ್ಯದಲ್ಲಿಯೇ ಮುಖಭಂಗವಾಯಿತು.

ಸಿಡ್ನಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವು 89 ರನ್‌ಗಳ ಭಾರಿ ಅಂತರದಿಂದ ಆತಿಥೇಯರಿಗೆ ಸೋಲುಣಿಸಿತು. ಹೋದ ವರ್ಷದ ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಅನುಭವಿಸಿದ್ದ ಪರಾಜಯಕ್ಕೆ ಮುಯ್ಯಿ ತೀರಿಸಿಕೊಂಡಿತು.

ಟಾಸ್ ಗೆದ್ದು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡ ಆಸ್ಟ್ರೇಲಿಯಾ ತಂಡದ ಬೌಲರ್‌ಗಳಲ್ಲಿ ಕಿವೀಸ್ ಆರಂಭಿಕ ಜೋಡಿ ಫಿನ್ ಅಲೆನ್ (42; 16ಎ, 4X5, 6X3) ಹಾಗೂ ಡೆವೊನ್ ಕಾನ್ವೆ (ಔಟಾಗದೆ 92; 58ಎ, 4X7, 6X2) ಬಿಸಿ ಮುಟ್ಟಿಸಿದರು. ಈ ಉತ್ತಮ ಆರಂಭದ ಅಡಿಪಾಯದ ಮೇಲೆ ತಂಡವು 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 200 ರನ್ ಸೇರಿಸಿತು. ಕಾನ್ವೆ ಅವರು ಎರಡನೇ ವಿಕೆಟ್ ಜೊತೆಯಾಟದಲ್ಲಿ ನಾಯಕ ಕೇನ್ ಜೊತೆಗೆ 69 ರನ್ ಹಾಗೂ ಮೂರನೇ ವಿಕೆಟ್‌ಗೆ ಫಿಲಿಪ್ಸ್ ಜೊತೆಗೆ 27 ರನ್ ಸೇರಿಸಿದರು. ಕೊನೆಯ ನಾಲ್ಕು ಓವರ್‌ಗಳಲ್ಲಿ ವಿಜೃಂಭಿಸಿದ ಅವರು ಹಾಗೂ ನಿಶಾಮ್ (ಔಟಾಗದೆ 26; 13ಎ, 6X2) 48 ರನ್ ಸೇರಿಸಿದರು.


ನ್ಯೂಜಿಲೆಂಡ್ ಬ್ಯಾಟರ್ ಡೆವೊನ್ ಕಾನ್ವೆ –ಎಎಫ್‌ಪಿ ಚಿತ್ರ

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ ತಂಡಕ್ಕೆ ಅನುಭವಿ ಬೌಲರ್ ಟಿಮ್ ಸೌಥಿ ಆರಂಭದಲ್ಲಿಯೇ ಪೆಟ್ಟು ಕೊಟ್ಟರು. ಈ ಪರಿಸ್ಥಿತಿಯಿಂದ ಸುಧಾರಿಸಿಕೊಳ್ಳಲು ಉಳಿದ ಬೌಲರ್‌ಗಳು ಬಿಡಲಿಲ್ಲ. ಅದರಿಂದಾಗಿ ಆತಿಥೇಯ ತಂಡವು 17.1 ಓವರ್‌ಗಳಲ್ಲಿ 111 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ನ್ಯೂಜಿಲೆಂಡ್: 20 ಓವರ್‌ಗಳಲ್ಲಿ 3ಕ್ಕೆ200 (ಫಿನ್ ಅಲೆನ್ 42, ಡೆವೊನ್ ಕಾನ್ವೆ ಔಟಾಗದೆ 92, ಕೇನ್ ವಿಲಿಯಮ್ಸನ್ 23, ಜೇಮ್ಸ್ ನಿಶಾನ್ ಔಟಾಗದೆ 26, ಜೋಶ್ ಹ್ಯಾಜಲ್‌ವುಡ್ 41ಕ್ಕೆ2, ಆ್ಯಡಂ ಜಂಪಾ 39ಕ್ಕೆ1) ಆಸ್ಟ್ರೇಲಿಯಾ: 117.1 ಓವರ್‌ಗಳಲ್ಲಿ 111 (ಗ್ಲೆನ್ ಮ್ಯಾಕ್ಸ್‌ವೆಲ್ 28, ಪ್ಯಾಟ್ ಕಮಿನ್ಸ್ 21, ಟ್ರೆಂಟ್ ಬೌಲ್ಟ್ 24ಕ್ಕೆ2, ಟಿಮ್ ಸೌಥಿ 6ಕ್ಕೆ3, ಮಿಚೆಲ್ ಸ್ಯಾಂಟನರ್ 31ಕ್ಕೆ3) ಫಲಿತಾಂಶ: ನ್ಯೂಜಿಲೆಂಡ್‌ಗೆ 89 ರನ್ ಜಯ. ಪಂದ್ಯಶ್ರೇಷ್ಠ: ಡೆವೊನ್ ಕಾನ್ವೆ.

ಐಸಿಸಿ ಟ್ವೆಂಟಿ–20 ವಿಶ್ವಕಪ್ ಆಸ್ಟ್ರೇಲಿಯಾ 2022

ಅಫ್ಗಾನಿಸ್ತಾನ ವಿರುದ್ಧ ಇಂಗ್ಲೆಂಡ್‌ಗೆ 5 ವಿಕೆಟ್ ಗೆಲುವು

ಸ್ಯಾಮ್ ಕರನ್ ಪ್ರಭಾವಿ ಬೌಲಿಂಗ್

ಪರ್ತ್ (ಪಿಟಿಐ): ಮಧ್ಯಮವೇಗಿ ಸ್ಯಾಮ್ ಕರನ್ (10ಕ್ಕೆ 5) ಅವರ ಪರಿಣಾಮಕಾರಿ ಬೌಲಿಂಗ್ ಹಾಗೂ ತಂಡದ ಅಮೋಘ ಫೀಲ್ಡಿಂಗ್ ಬಲದಿಂದ ಇಂಗ್ಲೆಂಡ್ ಟಿ20 ವಿಶ್ವಕಪ್ ಟೂರ್ನಿಯ ಸೂಪರ್ 12 ಪಂದ್ಯದಲ್ಲಿ ಜಯ ಗಳಿಸಿತು.

ಶನಿವಾರ ಇಲ್ಲಿ ನಡೆದ ಒಂದನೇ ಗುಂಪಿನ ಮೊದಲ ಹಣಾಹಣಿಯಲ್ಲಿ ಇಂಗ್ಲೆಂಡ್ 5 ವಿಕೆಟ್‌ಗಳಿಂದ ಅಫ್ಗಾನಿಸ್ತಾನಕ್ಕೆ ಸೋಲುಣಿಸಿತು.

ಟಾಸ್ ಗೆದ್ದ ಇಂಗ್ಲೆಂಡ್ ನಾಯಕ ಜೋಸ್ ಬಟ್ಲರ್ ಫೀಲ್ಡಿಂಗ್ ಆಯ್ದುಕೊಂಡರು. ತಂಡವು ಮೊಹಮ್ಮದ್ ನಬಿ ಬಳಗವನ್ನು 19.4 ಓವರ್‌ಗಳಲ್ಲಿ 112 ರನ್‌ಗಳಿಗೆ ಕಟ್ಟಿ ಹಾಕಿತು.

ಸುಲಭ ಗುರಿ ಬೆನ್ನತ್ತಿದ ಇಂಗ್ಲೆಂಡ್ 19ನೇ ಓವರ್‌ನಲ್ಲಿ 5 ವಿಕೆಟ್ ಕಳೆದುಕೊಂಡು ಜಯದ ನಗೆ ಬೀರಿತು.

ಲಿಯಾಮ್ ಲಿವಿಂಗ್‌ಸ್ಟೋನ್ (ಔಟಾಗದೆ 29 ರನ್), ಅಲೆಕ್ಸ್ ಹೇಲ್ಸ್ (19) ಮತ್ತು ಡೇವಿಡ್ ಮಲಾನ್ (18) ತಂಡದ ಜಯಕ್ಕೆ ಕೊಡುಗೆ ನೀಡಿದರು.

ಇದಕ್ಕೂ ಮೊದಲು ಬ್ಯಾಟ್ ಮಾಡಿದ್ದ ಅಫ್ಗಾನಿಸ್ತಾನ ಆರಂಭದಿಂದಲೇ ವಿಕೆಟ್ ಕಳೆದುಕೊಳ್ಳುತ್ತಾ ಸಾಗಿತು. ಪಂದ್ಯದ ಮೂರನೇ ಓವರ್‌ನಲ್ಲಿ ಮಾರ್ಕ್ ವುಡ್ ಎಸೆತದಲ್ಲಿ ರಹಮಾನುಲ್ಲಾ ಗುರ್ಬಾಜ್ (10), ವಿಕೆಟ್ ಕೀಪರ್ ಜೋಸ್ ಬಟ್ಲರ್‌ಗೆ ಕ್ಯಾಚಿತ್ತರು. ಹಜ್ರತ್‌ಉಲ್ಲಾ ಜಜೈ (7) ಮತ್ತು ಇಬ್ರಾಹಿಂ ಜದ್ರಾನ್ (32) ಎರಡನೇ ವಿಕೆಟ್ ಜೊತೆಯಾಟದಲ್ಲಿ 24 ರನ್ ಸೇರಿಸಿದರು. ಜಜೈ ವಿಕೆಟ್ ಕಬಳಿಸಿದ ಬೆನ್ ಸ್ಟೋಕ್ಸ್ ಇಂಗ್ಲೆಂಡ್‌ಗೆ ಮೇಲುಗೈ ಒದಗಿಸಿದರು.


ಸ್ಯಾಮ್ ಕರನ್ ಸಂಭ್ರಮ– ಎಪಿ ಚಿತ್ರ

ಇಬ್ರಾಹಿಂ ಮತ್ತು ಉಸ್ಮಾನ್ ಗಣಿ (30) ತಂಡಕ್ಕೆ ಆಸರೆಯಾಗುವ ವಿಶ್ವಾಸ ಮೂಡಿಸಿದರು. ಮೂರನೇ ವಿಕೆಟ್‌ಗೆ 27 ರನ್ ಸೇರಿಸಿದರು. ಆದರೆ ಇಬ್ರಾಹಿಂ ಅವರನ್ನು ಪೆವಿಲಿಯನ್‌ಗೆ ಕಳುಹಿಸುವ ಮೂಲಕ ತಮ್ಮ ವಿಕೆಟ್ ಬೇಟೆ ಆರಂಭಿಸಿದ ಸ್ಯಾಮ್, ಅಫ್ಗಾನಿಸ್ತಾನ ಬ್ಯಾಟರ್‌ಗಳಿಗೆ ಸಿಂಹಸ್ವಪ್ನವಾದರು.

ಸಂಕ್ಷಿಪ್ತ ಸ್ಕೋರು: ಅಫ್ಗಾನಿಸ್ತಾನ: 19.4 ಓವರ್‌ಗಳಲ್ಲಿ 112 (ಇಬ್ರಾಹಿಂ ಜದ್ರಾನ್ 32, ಉಸ್ಮಾನ್ ಘನಿ 30, ನಜೀಬುಲ್ಲಾ ಜದ್ರಾನ್ 13; ಬೆನ್ ಸ್ಟೋಕ್ಸ್ 19ಕ್ಕೆ 2, ಕ್ರಿಸ್ ವೋಕ್ಸ್ 24ಕ್ಕೆ 1, ಮಾರ್ಕ್ ವುಡ್ 23ಕ್ಕೆ 2, ಸ್ಯಾಮ್ ಕರನ್ 10ಕ್ಕೆ 5) ಇಂಗ್ಲೆಂಡ್:18.1 ಓವರ್‌ಗಳಲ್ಲಿ 5ಕ್ಕೆ 113(ಜೋಸ್ ಬಟ್ಲರ್ 18, ಅಲೆಕ್ಸ್ ಹೇಲ್ಸ್ 19, ಡೇವಿಡ್ ಮಲಾನ್ 18, ಲಿಯಾಮ್ ಲಿವಿಂಗ್‌ಸ್ಟೋನ್ ಔಟಾಗದೆ 29; ಫಜಲ್‌ಹಕ್ ಫಾರೂಕಿ 24ಕ್ಕೆ 1, ಮುಜೀಬುರ್ ರೆಹಮಾನ್ 22ಕ್ಕೆ 1, ರಶೀದ್ ಖಾನ್ 17ಕ್ಕೆ 1, ಮೊಹಮ್ಮದ್ ನಬಿ 16ಕ್ಕೆ 1).

ಫಲಿತಾಂಶ: ಇಂಗ್ಲೆಂಡ್ ತಂಡಕ್ಕೆ 5 ವಿಕೆಟ್‌ಗಳ ಜಯ

ಡೆನ್ಮಾರ್ಕ್ ಓಪನ್: ಲಕ್ಷ್ಯಗೆ ಸೋಲು

ಒಡೆನ್ಸ್ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಚಾಂಪಿಯನ್, ಭಾರತದ ಲಕ್ಷ್ಯ ಸೇನ್ ಅವರು ಡೆನ್ಮಾರ್ಕ್ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಕ್ವಾರ್ಟರ್‌ಫೈನಲ್‌ನಲ್ಲಿ ಸೋಲು ಅನುಭವಿಸಿದರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಅಭಿಯಾನ ಅಂತ್ಯವಾಯಿತು.

ಶುಕ್ರವಾರ ರಾತ್ರಿ ನಡೆದ ಪುರುಷರ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ ಲಕ್ಷ್ಯ 17-21, 12-21ರಿಂದ ಜಪಾನ್‌ನ ಕೊಡಾಯಿ ನರವೊಕಾ ವಿರುದ್ಧ ಎಡವಿದರು.

ಇಬ್ಬರೂ ಆಟಗಾರರು ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಮೂರು ಬಾರಿ ಮುಖಾಮುಖಿಯಾಗಿದ್ದು, ಜಪಾನ್ ಆಟಗಾರ ಎರಡು ಬಾರಿ ಗೆದ್ದಿದ್ದರು. 2018ರ ಯೂತ್ ಒಲಿಂಪಿಕ್ಸ್ ಸೆಮಿಫೈನಲ್‌ನಲ್ಲಿ ಲಕ್ಷ್ಯ ಅವರು ನರವೊಕಾ ಅವರನ್ನು ಮಣಿಸಿದ್ದರು.

ಭಾರತದ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ–ಚಿರಾಗ್ ಶೆಟ್ಟಿ ಕೂಡ ಶುಕ್ರವಾರ ನಿರಾಸೆ ಅನುಭವಿಸಿದರು. ಎಂಟರಘಟ್ಟದಲ್ಲಿ ಈ ಆಟಗಾರರು 16–21, 19–21ರಿಂದ ಮಲೇಷ್ಯಾದ ಆ್ಯರನ್ ಚಿಯಾ ಮತ್ತು ವೂಯಿ ಯಿಕ್ ಎದುರು ಸೋತರು.




ಐರ್ಲೆಂಡ್– ಲಂಕಾ ಪೈಪೋಟಿ ಇಂದು

ಹೋಬರ್ಟ್: ಏಷ್ಯಾ ಕಪ್ ಚಾಂಪಿಯನ್ ಶ್ರೀಲಂಕಾ ತಂಡದವರು ಟಿ20 ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯದಲ್ಲಿ ಭಾನುವಾರ ಐರ್ಲೆಂಡ್ ತಂಡವನ್ನು ಎದುರಿಸಲಿದ್ದಾರೆ. ಅರ್ಹತಾ ಹಂತದಲ್ಲಿ ಗೆದ್ದು ಬಂದಿರುವ ಐರ್ಲೆಂಡ್, ಲಂಕಾ ತಂಡಕ್ಕೆ ಪ್ರಬಲ ಪೈಪೋಟಿ ನೀಡುವ ಸಾಧ್ಯತೆಯಿದೆ.

ಪಂದ್ಯ ಆರಂಭ: ಬೆಳಿಗ್ಗೆ 9.30

ನಿಧನ



ಶ್ರೀ ಡಿ. ಬಿ. ಸುಬ್ಬೆ ಗೌಡ 92 ವರ್ಷ,

ಜನನ: 08–03–1931

ಇವರು 22–10–2022 ಶನಿವಾರ ಮಧ್ಯಾಹ್ನ 12.30 ಘಂಟೆಗೆ ಅವರ ಸ್ವಗೃಹದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಇವರು ಸ್ವಾತಂತ್ರ್ಯ ಹೋರಾಟಗಾರರು, ಸಮಾಜ ಸೇವಕರು ಮತ್ತು ಉದಾರ ದಾನಿಗಳಾಗಿದ್ದರು.

ಇವರ ಪಾರ್ಥಿವ ಶರೀರವನ್ನು ಅಂತಿಮ ನಮನ ಸಲ್ಲಿಸಲು ಅವರ ನಿವಾಸದಲ್ಲಿ ಇರಿಸಲಾಗುವುದು ಮತ್ತು ಅಕ್ಟೋಬರ್ 23 ಭಾನುವಾರ ಮಧ್ಯಾಹ್ನ 2.00 ರಿಂದ 3.00 ಘಂಟೆಯವರೆಗೆ ದುಂಡುಗ ಎಸ್ಟೇಟ್ ಮೂಡಿಗೆರೆಯಲ್ಲಿ ಅಗ್ನಿಸ್ಪರ್ಶ ಮಾಡಲಾಗುವುದು.

ಇಂತಿ ದುಃಖತಪ್ತರು
ಕುಟುಂಬದವರು ಮತ್ತು ಬಂಧುಮಿತ್ರರು

4ನೇ ವರ್ಷದ ಪುಣ್ಯಸ್ಮರಣೆ



ಶ್ರೀ ಪಿ. ವಿ. ಚಿಕ್ಕಕೃಷ್ಣಪ್ಪ
(ಲೇಟ್ ಪಟೇಲ್ ವೀರಪ್ಪನವರ ಮಗ
ಅಮೃತಹಳ್ಳಿ, ಬೆಂಗಳೂರು–92)
(ನಿಧನ: 23–10–2018)
ನೀವು ನಮ್ಮನ್ನಗಲಿ ಇಂದಿಗೆ 4 ವರ್ಷ.
ಆದರೆ ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಅಮರ.
ನಿಮ್ಮ ಆದರ್ಶಗಳು ನಮಗೆ ದಾರಿದೀಪ.
ಇಂತಿ ಪತ್ನಿ: ಶ್ರೀಮತಿ ಮುನಿರತ್ನಮ್ಮ, ಮಕ್ಕಳು, ಮೊಮ್ಮಕ್ಕಳು ಹಾಗೂ ಕುಟುಂಬವರ್ಗದವರು.

ಭಾರತ–ಪಾಕಿಸ್ತಾನ ಮುಖಾಮುಖಿ ಇಂದು, ಮಳೆ ಬರುವ ಸಾಧ್ಯತೆ

ಐತಿಹಾಸಿಕ ಪಂದ್ಯಕ್ಕೆ ಮೆಲ್ಬರ್ನ್ ಸಿದ್ಧ

• ಆರ್. ಕೌಶಿಕ್

ಮೆಲ್ಬರ್ನ್: 'ಇದನ್ನು ಪೈಪೋಟಿ ಎಂದು ಕರೆಯುವಂತಾಗಲು ನಾನು ಕೆಲವು ಪಂದ್ಯಗಳನ್ನು ಜಯಿಸಬೇಕು'–

ಹಿಂದೊಮ್ಮೆ ಅಮೆರಿಕದ ಟೆನಿಸ್ ಆಟಗಾರ ಆ್ಯಂಡಿ ರಾಡಿಕ್ ಹಾರಿಸಿದ್ದ ನಗೆಚಟಾಕಿ ಇದು. ತಮ್ಮ ಹಾಗೂ ರೋಜರ್ ಫೆಡರರ್ ನಡುವೆ 'ಪೈಪೋಟಿ' ಇದೆ ಎಂದು ಬಿಂಬಿಸುವಂತಾಗುವುದರ ಕುರಿತು ಅವರು ಹೇಳಿದ್ದರು. ಅಂದು ತಮ್ಮನ್ನೇ ಹಾಸ್ಯಕ್ಕೊಡ್ಡಿಕೊಂಡ ಆ್ಯಂಡಿ, ಸ್ವಿಸ್ ತಾರೆ ರೋಜರ್ ಎದುರು ಆಡಿದ್ದ 24 ಪಂದ್ಯಗಳಲ್ಲಿ ಗೆದ್ದಿದ್ದು ಮೂರರಲ್ಲಿ ಮಾತ್ರ!

ಕ್ರಿಕೆಟ್ ವಿಶ್ವಕಪ್ ಟೂರ್ನಿಗಳಲ್ಲಿ ಬಹುಚರ್ಚಿತವಾಗಿರುವ ಭಾರತ–ಪಾಕಿಸ್ತಾನ 'ಪೈಪೋಟಿ'ಯ ಕುರಿತು ತದ್ವಿರುದ್ಧವಾದ ಮಾತು ಹೇಳಬಹುದು. ಸರಿಯಾಗಿ 12 ತಿಂಗಳುಗಳ ಹಿಂದಿವನರೆಗೂ ಭಾರತವು 50 ಓವರ್ ಹಾಗೂ 20 ಓವರ್‌ಗಳ ಮಾದರಿಗಳ ವಿಶ್ವಕಪ್ ಟೂರ್ನಿಗಳಲ್ಲಿ ಪಾಕ್ ವಿರುದ್ಧ 12–0 ಜಯದ ದಾಖಲೆ ಹೊಂದಿತ್ತು. ಹೋದ ವರ್ಷ ದುಬೈನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ಪಂದ್ಯದಲ್ಲಿ ಅಕ್ಟೋಬರ್ 24ರಂದು ಈ ಗೆಲುವಿನ ಸರಪಣಿ ಕಳಚಿಬಿತ್ತು. 13ನೇ ಮುಖಾಮುಖಿಯಲ್ಲಿ ಪಾಕಿಸ್ತಾನವು ಹತ್ತು ವಿಕೆಟ್‌ಗಳ ಜಯಸಾಧಿಸಿತ್ತು. ನಂತರದಲ್ಲಿ ಆ ಸೋಲಿನ ಸುತ್ತ ಅಭಿಮಾನಿಗಳ ಕಟುಟೀಕೆಗಳ ಅಲೆಗಳೆದ್ದಿದ್ದವು.

ಇತ್ತೀಚೆಗಷ್ಟೇ ಏಷ್ಯಾ ಕ್ರಿಕೆಟ್ ಕೌನ್ಸಿಲ್ (ಎಸಿಸಿ) ಮುಖ್ಯಸ್ಥರೂ ಆಗಿರುವ ಜಯ್ ಶಾ ಅವರು, ಮುಂದಿನ ವರ್ಷ ಪಾಕಿಸ್ತಾನದಲ್ಲಿ ನಡೆಯುವ ಏಷ್ಯಾಕಪ್‌ಗೆ ಭಾರತ ತೆರಳುವುದಿಲ್ಲ. ತಟಸ್ಥ ತಾಣಕ್ಕೆ ಪಂದ್ಯ ಸ್ಥಳಾಂತರಿಸುವುದಾಗಿ ನೀಡಿರುವ ಹೇಳಿಕೆಯು ಈಗ ಚರ್ಚೆಗೆ ಗ್ರಾಸವಾಗಿದೆ. ಇದೇ ಸಂದರ್ಭದಲ್ಲಿ ನಡೆಯುತ್ತಿರುವ ಈ ಪಂದ್ಯ ಕುತೂಹಲ ಕೆರಳಿಸಿದೆ.

ಇಂತಹ ಕಾವೇರಿದ ಪರಿಸ್ಥಿತಿಯಲ್ಲಿಯೂ ಪ್ರಬುದ್ಧ ನಾಯಕರು ಸಂಘರ್ಷದ ಬದಲು 'ಇದು ಒಂದು ಪಂದ್ಯ ಮಾತ್ರ' ಎಂಬ ನಿಲುವಿಗೆ ಬದ್ಧರಾಗಿದ್ದಾರೆ. ಭಾನುವಾರ ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಉಭಯ ತಂಡಗಳು ಮುಖಾಮುಖಿಯಾಗಲಿವೆ. ಮಳೆರಾಯ ಕೃಪೆ ತೋರಿದರೆ, ಹೊಸದೊಂದು ಅಧ್ಯಾಯ ಬರೆಯಲು ಉಭಯ ತಂಡಗಳು ಉತ್ಸುಕವಾಗಿವೆ. 2012ರ ಟಿ20 ವಿಶ್ವಕಪ್ ಟೂರ್ನಿಯಿಂದ ಈಚೆಗೆ ಪ್ರತಿ ಬಾರಿಯೂ ಲೀಗ್ ಹಂತದಲ್ಲಿ ಉಭಯ ತಂಡಗಳು ಲೀಗ್ ಹಂತದಲ್ಲಿ ಹಣಾಹಣಿ ನಡೆಸುವಂತೆ ನೋಡಿಕೊಳ್ಳುತ್ತಿದೆ. ಇದು ಲಾಭದಾಯಕ ಎಂಬುದು ಐಸಿಸಿಗೆ ಚೆನ್ನಾಗಿ ಗೊತ್ತಿದೆ.

2013ರಿಂದ ಉಭಯ ತಂಡಗಳ ನಡುವೆ ದ್ವಿಪಕ್ಷೀಯ ಸರಣಿಗಳು ನಡೆದಿಲ್ಲ. ಆದರೆ ತಟಸ್ಥ ತಾಣಗಳಲ್ಲಿ ಸಿಕ್ಕ ಅವಕಾಶಗಳಲ್ಲಿಯೇ ಎರಡೂ ದೇಶಗಳ ಆಟಗಾರರು ತಮ್ಮ ಸಂಪೂರ್ಣ ಸಾಮರ್ಥ್ಯದೊಂದಿಗೆ ಆಡಿದ್ದಾರೆ. ಹೊಸ ಸ್ನೇಹ ಬೆಳೆಸಿಕೊಂಡಿದ್ದಾರೆ. ಕೆಲವು ತಿಂಗಳುಗಳ ಹಿಂದೆ ವೈಫಲ್ಯ ಅನುಭವಿಸುತ್ತಿದ್ದ ವಿರಾಟ್ ಕೊಹ್ಲಿಗೆ ವಿಶ್ವಾಸ ತುಂಬುವಂತಹ ಟ್ವೀಟ್ ಸಂದೇಶವೊಂದನ್ನು ಪಾಕ್ ತಂಡದ ನಾಯಕ ಬಾಬರ್ ಆಜಂ ಹಾಕಿದ್ದರು. ಕಳೆದ ಅಗಸ್ಟ್‌ನಲ್ಲಿ ದುಬೈನಲ್ಲಿ ಗಾಯಗೊಂಡಿದ್ದ ಶಾಹೀನ್ ಶಾ ಆಫ್ರಿದಿ ಅವರ ಕುಶಲೋಪರಿ ವಿಚಾರಿಸಲು ವಿರಾಟ್ ತೆರಳಿದ್ದರು.


ಏಷ್ಯಾದ ಎರಡು ದೈತ್ಯ ಕ್ರಿಕೆಟ್ ದೇಶಗಳಾಗಿರುವ ಭಾರತ ಮತ್ತು ಪಾಕ್ ವಿಶ್ವದ ಯಾವುದೇ ತಾಣದಲ್ಲಿ ಮು ಖಾ ಮು ಖಿ ಯಾ ದ ರೂ ದೇಶಭಕ್ತಿ ಉಕ್ಕುತ್ತದೆ. ಸೆಂಚುರಿಯನ್, ಕೊಲಂಬೊ, ಮ್ಯಾಂಚೆಸ್ಟರ್ ಅಥವಾ ಮೆಲ್ಬರ್ನ್ ಇರಲಿ ಇದೇ ವಾತಾವರಣವಿರುತ್ತದೆ. ಈಗ ಎಂಸಿಜಿಯೂ ಇದಕ್ಕೆ ಹೊರತಲ್ಲ. 90 ಸಾವಿರ ಪ್ರೇಕ್ಷಕರು ಸೇರಲಿರುವ ತಾಣದಲ್ಲಿ ಭಾರತ ಪರವಾದ ಭಾವನೆಗಳು ಪ್ರವಹಿಸುತ್ತಿವೆ. ತಮ್ಮ ನೆಚ್ಚಿನ ಆಟಗಾರರನ್ನು ಹುರಿದುಂಬಿ ಸುವ, ತಮ್ಮ ತಂಡದ ಗೆಲುವನ್ನು ಬಯಸುವುದು ಸ್ವಾಗತಾರ್ಹ. ಆದರೆ ಇಲ್ಲಿಯ ಫಲಿತಾಂಶವೇ ಸರ್ವಸ್ವವೂ ಅಲ್ಲ ಮತ್ತು ಅಂತ್ಯವೂ ಅಲ್ಲ. ಏಕೆಂದರೆ ಕ್ರೀಡೆಯ ಮೂಲ ಉದ್ದೇಶ ಒಡೆಯುವುದಲ್ಲ, ಮನಗಳನ್ನು ಬೆಸೆಯುವುದು.

ಮುಖ್ಯಾಂಶಗಳು
- ಹೋದ ಟಿ20 ವಿಶ್ವಕಪ್‌ನಲ್ಲಿ ಪಾಕ್‌ಗೆ ಸೋತಿದ್ದ ಭಾರತ
- ಎಂಸಿಜಿಯಲ್ಲಿ 90 ಸಾವಿರ ಪ್ರೇಕ್ಷಕರಿಗೆ ಅವಕಾಶ
- ಎಲ್ಲರ ಚಿತ್ತ ಸೂರ್ಯಕುಮಾರ್ ಮೇಲೆ


ರೋಹಿತ್ ಶರ್ಮಾ

ಟಿ20 ವಿಶ್ವಕಪ್ ಮುಖಾಮುಖಿ
6 ಒಟ್ಟು ಪಂದ್ಯ; 5 ಭಾರತ ಜಯ; 1 ಪಾಕ್ ಜಯ

ಪಂದ್ಯ ಆರಂಭ
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್
ಮಧ್ಯಾಹ್ನ 1.30


ಬಾಬರ್ ಆಜಂ

ಟಿ20ಯಲ್ಲಿ ಮುಖಾಮುಖಿ
11 ಒಟ್ಟು ಪಂದ್ಯ; 8 ಭಾರತ ಜಯ; 3 ಪಾಕ್ ಜಯ

ಗರಿಷ್ಠ ಮೊತ್ತ	ಭಾರತ 5ಕ್ಕೆ 192 (2012 ಅಹಮದಾಬಾದ್‌ನಲ್ಲಿ)
ಕನಿಷ್ಠ	ಪಾಕಿಸ್ತಾನ 83 (2016, ಢಾಕಾದಲ್ಲಿ)
ಮುಖಾಮುಖಿಯಲ್ಲಿ ಅತಿ ಹೆಚ್ಚು ರನ್	ವಿರಾಟ್ ಕೊಹ್ಲಿ 406
ಅತಿ ಹೆಚ್ಚು ವಿಕೆಟ್	ಉಮರ್ ಗುಲ್ (ಪಾಕಿಸ್ತಾನ) 11

ತಂಡಗಳು

ಭಾರತ: ರೋಹಿತ್ ಶರ್ಮಾ (ನಾಯಕ), ಕೆ.ಎಲ್. ರಾಹುಲ್, ವಿರಾಟ್ ಕೊಹ್ಲಿ, ಸೂರ್ಯಕುಮಾರ್ ಯಾದವ್, ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ಆರ್. ಅಶ್ವಿನ್, ಭುವನೇಶ್ವರ್ ಕುಮಾರ್, ಮೊಹಮ್ಮದ್ ಶಮಿ, ಅರ್ಷದೀಪ್ ಸಿಂಗ್, ಹರ್ಷಲ್ ಪಟೇಲ್, ರಿಷಭ್ ಪಂತ್, ದಿನೇಶ್ ಕಾರ್ತಿಕ್ (ಇಬ್ಬರೂ ವಿಕೆಟ್‌ಕೀಪರ್), ಯಜುವೇಂದ್ರ ಚಾಹಲ್, ದೀಪಕ್ ಹೂಡಾ.

ಪಾಕಿಸ್ತಾನ: ಬಾಬರ್ ಆಜಂ (ನಾಯಕ), ಮೊಹಮ್ಮದ್ ರಿಜ್ವಾನ್ (ವಿಕೆಟ್‌ಕೀಪರ್), ಶಾನ್ ಮಸೂದ್, ಶಾದಾಬ್ ಖಾನ್, ಮೊಹಮ್ಮದ್ ನವಾಜ್, ಹೈದರ್ ಅಲಿ, ಇಫ್ತಿಕಾರ್ ಅಹಮದ್, ಆಸಿಫ್ ಅಲಿ, ನಸೀಂ ಶಾಹ, ಹ್ಯಾರಿಸ್ ರವೂಫ್, ಶಾಹೀನ್ ಆಫ್ರಿದಿ, ಖುಷದಿಲ್ ಶಾಹ, ಮೊಹಮ್ಮದ್ ಹಸನೈನ್, ಮೊಹಮ್ಮದ್ ವಾಸೀಂ. ಜೂನಿಯರ್ ಫಖರ್ ಜಮಾನ್.

ಸದ್ಯ ವಿಶ್ವಕಪ್ ಮೇಲೆ ಚಿತ್ತ, ಉಳಿದದ್ದು ನಂತರ: ರೋಹಿತ್

ಮೆಲ್ಬರ್ನ್ (ಪಿಟಿಐ): 'ಸದ್ಯ ಈ ವಿಶ್ವಕಪ್ ಟೂರ್ನಿಯ ಮೇಲೆ ಸಂಪೂರ್ಣ ಚಿತ್ತ ನೆಟ್ಟಿದ್ದೇವೆ. ಮುಂದೆ ಆಗುವ, ಹೋಗುವ ವಿಷಯಗಳ ಬಗ್ಗೆ ಯೋಚಿಸುತ್ತಿಲ್ಲ'–

ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರ ಮಾತುಗಳಿವು. ಭಾರತ ತಂಡವು ಮುಂದಿನ ವರ್ಷ ಏಷ್ಯಾ ಕಪ್ ಟೂರ್ನಿ ಆಡಲು ಪಾಕಿಸ್ತಾನಕ್ಕೆ ಹೋಗುವುದಿಲ್ಲವೆಂದು ಈಚೆಗೆ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿಕೆ ನೀಡಿರುವುದರ ಕುರಿತು ರೋಹಿತ್ ನೀಡಿದ ಪ್ರತಿಕ್ರಿಯೆ ಇದು.

'ಆ ವಿಷಯಗಳ ಕುರಿತು ಬಿಸಿಸಿಐ ನಿರ್ಧಾರ ಕೈಗೊಳ್ಳುವುದು. ನಾಳೆ (ಭಾನುವಾರ)ಯ ಪಂದ್ಯದ ಬಗ್ಗೆ ಹೇಗೆ ಸಿದ್ಧರಾಗಬೇಕು ಎಂಬುದರ ಬಗ್ಗೆ ಮಾತ್ರ ನಾವು ಯೋಚಿಸುತ್ತಿದ್ದೇವೆ. ಉತ್ತಮವಾಗಿ ಆಡುವುದರ ಮೇಲೆ ನಮ್ಮ ಗಮನ' ಎಂದು ಹೇಳಿದರು.

'ಟಿ20 ವಿಶ್ವಕಪ್ ಜಯಿಸಿ 15 ವರ್ಷಗಳ ಕಳೆದಿವೆ. 2011ರ ಏಕದಿನ ವಿಶ್ವಕಪ್ ಜಯದ ನಂತರ ಭಾರತವು ಯಾವ ವಿಭಾಗದಲ್ಲಿಯೂ ಕಪ್ ಜಯಿಸಿಲ್ಲ. ಈ ಪ್ರಶಸ್ತಿ ಬರವನ್ನು ನೀಗಿಸುವ ಛಲ ತಂಡದ ಎಲ್ಲ ಆಟಗಾರರಲ್ಲೂ ಇದೆ. ಅದಕ್ಕಾಗಿ ಅಗತ್ಯವಿರುವ ಎಲ್ಲ ಶ್ರಮವನ್ನೂ ವಿನಿಯೋಗಿಸುತ್ತಿದ್ದೇವೆ' ಎಂದರು.

SAD DEMISE



IGNATIUS SEQUEIRA (Inna)
Husband of Ivilla Lobo
Passed away on Saturday, October 22, 2022.
His mortal remains will be placed for last respects on 23.10.2022, between 2.15 pm to 3.00 pm & Funeral Mass at 3:00 pm at Ascension Church, D'costa Layout, Bangalore- followed by burial at Kalpalli Cemetery.
Deeply Mourned by Family



ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಕ್ರಿಕೆಟ್: ಮಿಂಚಿದ ಪಾಂಡೆ, ಗೌತಮ್

ಕ್ವಾರ್ಟರ್ ಫೈನಲ್‌ಗೆ ಕರ್ನಾಟಕ ತಂಡ

ಮೊಹಾಲಿ: ಮನೀಷ್ ಪಾಂಡೆ ಅವರ ಅಜೇಯ ಅರ್ಧಶತಕದ ನೆರವಿನಿಂದ ಕರ್ನಾಟಕ ತಂಡ, ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಹರಿಯಾಣ ತಂಡವನ್ನು ಐದು ವಿಕೆಟ್‌ಗಳಿಂದ ಮಣಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಮೊಹಾಲಿಯಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಹರಿಯಾಣ ನಿಗದಿತ ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 125 ರನ್ ಗಳಿಸಿತು. ಕರ್ನಾಟಕ ತಂಡ 17.2 ಓವರ್‌ಗಳಲ್ಲಿ 5 ವಿಕೆಟ್‌ಗೆ 129 ರನ್ ಗಳಿಸಿ ಜಯ ಸಾಧಿಸಿತು. 47 ಎಸೆತಗಳಲ್ಲಿ 64 ರನ್ ಗಳಿಸಿದ ಪಾಂಡೆ, ಗೆಲುವಿನ ಹಾದಿ ಸುಗಮಗೊಳಿಸಿದರು.

‘ಸಿ’ ಗುಂಪಿನಲ್ಲಿ ಆಡಿದ ಏಳು ಪಂದ್ಯಗಳಿಂದ 24 ಪಾಯಿಂಟ್ಸ್ ಕಲೆಹಾಕಿದ ಮಯಂಕ್ ಅಗರವಾಲ್ ಬಳಗ ನಾಕೌಟ್ ಹಂತಕ್ಕೆ ಅರ್ಹತೆ ಪಡೆದುಕೊಂಡಿತು. ಉಭಯ ತಂಡಗಳು ತಲಾ 20 ಪಾಯಿಂಟ್ಸ್‌ಗಳೊಂದಿಗೆ ಕೊನೆಯ ಲೀಗ್ ಪಂದ್ಯಕ್ಕಾಗಿ ಕಣಕ್ಕಿಳಿದಿದ್ದವು. 20 ಪಾಯಿಂಟ್ಸ್ ಗಳಿಸಿದ ಹರಿಯಾಣ ಗುಂಪಿನಲ್ಲಿ ಎರಡನೇ ಸ್ಥಾನ ಗಳಿಸಿತು.

ಕರ್ನಾಟಕ ತಂಡ ಲೀಗ್ ಹಂತದ ಎರಡನೇ ಪಂದ್ಯದಲ್ಲಿ ಕೇರಳದ ಎದುರು ಸೋತಿತ್ತು. ಆ ಬಳಿಕ ಆಡಿದ ಐದೂ ಪಂದ್ಯಗಳಲ್ಲಿ ಗೆದ್ದಿದೆ.


ಅಜೇಯ ಅರ್ಧಶತಕ ಗಳಿಸಿದ ಮನೀಷ್ ಪಾಂಡೆ

ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿಸಲ್ಪಟ್ಟ ಹರಿಯಾಣ ತಂಡ, ಕರ್ನಾಟಕದ ಶಿಸ್ತಿನ ಬೌಲಿಂಗ್ ಮುಂದೆ ನಲುಗಿತು. ಕೆ.ಗೌತಮ್ ಕೈಚಳಕ (17ಕ್ಕೆ 3) ಮೆರೆದರೆ, ಅವರಿಗೆ ವಿದ್ವತ್ ಕಾವೇರಪ್ಪ ಮತ್ತು ವೈಶಾಖ್ ವಿಜಯಕುಮಾರ್ ತಕ್ಕ ಸಾಥ್ ನೀಡಿದರು.

ಗೆಲುವಿಗೆ ಸಾಧಾರಣ ಗುರಿ ಬೆನ್ನಟ್ಟಿದ ಕರ್ನಾಟಕ, ಎಲ್.ಆರ್. ಚೇತನ್ (0), ಮಯಂಕ್ (14) ಮತ್ತು ಲವನೀತ್ ಸಿಸೋಡಿಯಾ (10) ಅವರನ್ನು ಬೇಗನೇ ಕಳೆದುಕೊಂಡಿತು. 36 ರನ್ ಆಗುವಷ್ಟರಲ್ಲಿ ಮೂರು ವಿಕೆಟ್‌ಗಳು ಬಿದ್ದವು.

ಆದರೆ ಅನುಭವಿ ಪಾಂಡೆ ಅವರು ಶ್ರೇಯಸ್ ಗೋಪಾಲ್ (22 ರನ್, 23 ಎ.) ಜತೆ ಸೇರಿಕೊಂಡು ತಂಡವನ್ನು ಕುಸಿತದಿಂದ ಪಾರು ಮಾಡಿದರು. ಇವರು ನಾಲ್ಕನೇ ವಿಕೆಟ್‌ಗೆ 66 ರನ್ ಸೇರಿಸಿದರು. ಪಾಂಡೆ 3 ಬೌಂಡರಿ ಹಾಗೂ 5 ಸಿಕ್ಸರ್ ಹೊಡೆದರು.

ಸಂಕ್ಷಿಪ್ತ ಸ್ಕೋರ್: ಹರಿಯಾಣ 20 ಓವರ್‌ಗಳಲ್ಲಿ 9 ವಿಕೆಟ್‌ಗೆ 125 (ಚೈತನ್ಯ ಬಿಷ್ಣೋಯಿ 26, ರಾಹುಲ್ ತೇವಟಿಯಾ 27, ಪೀಯೂಷ್ ದಹಿಯಾ 16, ಜಯಂತ್ ಯಾದವ್ ಔಟಾಗದೆ 17, ಕೆ.ಗೌತಮ್ 17ಕ್ಕೆ 3, ವಿದ್ವತ್ ಕಾವೇರಪ್ಪ 26ಕ್ಕೆ 2, ವೈಶಾಖ್ ವಿಜಯಕುಮಾರ್ 17ಕ್ಕೆ 2) ಕರ್ನಾಟಕ 17.2 ಓವರ್‌ಗಳಲ್ಲಿ 5 ವಿಕೆಟ್‌ಗೆ 129 (ಮನೀಷ್ ಪಾಂಡೆ ಔಟಾಗದೆ 64, ಶ್ರೇಯಸ್ ಗೋಪಾಲ್ 22, ಅಭಿನವ್ ಮನೋಹರ್ 15, ಮೋಹಿತ್ ಶರ್ಮ 22ಕ್ಕೆ 2) ಫಲಿತಾಂಶ: ಕರ್ನಾಟಕಕ್ಕೆ 5 ವಿಕೆಟ್ ಗೆಲುವು

ಮೆಲ್ಲ ಮೆಲ್ಲಾಕ ಉರಿಯೆ ಪರಂಜ್ಯೋತಿ...

ಕೃಷ್ಣಮೂರ್ತಿ ಹನೂರು

ಬೆಂಕಿ ಹಚ್ಚುವುದು ಸುಲಭ, ದೀಪ ಹಚ್ಚುವುದು ಕಷ್ಟ



ಮನುಷ್ಯನಾಗುವುದು ಕಷ್ಟ. ಅದಕ್ಕಿಂತಲೂ ಕಠಿಣವಾದುದೆಂದರೆ ಇನ್ನೊಬ್ಬರೊಂದಿಗೆ ನಾವು ಒಂದಾಗುವ, ಅಂತರಂಗಪೂರ್ವಕ ಸಂಬಂಧವಿದೆಯೆಂದು ಮೆಲುದನಿಯಲ್ಲಿ ಹೇಳಿಕೊಳ್ಳುವ ವಿಚಾರ. ಗುಂಪುಗಳ ನಡುವೆ ರಾಗದ್ವೇಷಗಳನ್ನು ಸೃಷ್ಟಿಸುವುದು ಸುಲಭ. ಅದಕ್ಕೆ ಕುತಂತ್ರಮೂಲದ ಮನಸ್ಥಿತಿ ಇದ್ದರೆ ಸಾಕು. ನಿಂತ ನೆಲವನ್ನೂ, ಜನಸಮೂಹವನ್ನೂ ಜೀವವಿಲ್ಲದ ಕುರುಹುಗಳ ಮೇಲೆ ಒಡೆದು ಹಾಕಿಬಿಡಬಹುದು. ಬದುಕಿನ ಸಮಯವೆಲ್ಲ ಅದಕ್ಕೇ ಮೀಸಲು. ನಮ್ಮ ಸುತ್ತಲಿನ ಪ್ರಕೃತಿಯೇನೋ ಸಮೃದ್ಧವಾಗಿದೆ; ಆದರೆ ಬೆಳಕನ್ನು ಬೆಂಕಿ ಮಾಡುತ್ತಿರುವ, ಹರಿಯುವ ಪವಿತ್ರ ತೀರ್ಥಗಳನ್ನು ಬಚ್ಚಲು ಮಾಡುತ್ತಿರುವ ಮನುಷ್ಯನ ಈ ಹೊತ್ತಿನ ಮನಃಸ್ಥಿತಿ, ತನ್ನ ಸುತ್ತಿನ ಚರಾಚರವನ್ನು, ಸುಂದರ ಪ್ರಕೃತಿಯನ್ನು ಕೃಶವಾಗಿಸುತ್ತಿದೆ. ಭೋಗಕ್ಕೆ ಬೆಲೆ ಕೊಡುವವರು ದೇವರನ್ನೂ, ಭಕ್ತಿ, ಅಧ್ಯಾತ್ಮವನ್ನೂ ಫ್ಯಾಷನ್ ಆಗಿಸಿರುವುದುಂಟು. ಇದು ಅರೆ ಬೌದ್ಧಿಕತೆಯ ಮತ್ತು ನಮ್ಮ ಶಿಕ್ಷಣ ನೀಡುತ್ತಿರುವ ಪದವಿಗಳ ವ್ಯಾಪಾರದ ಸಂಗತಿ. ಪ್ರಪಂಚ ಗೆಲ್ಲುವ ಹುಂಬರಿಗೆ ಶತಮಾನಗಳ ಕತೆ ಗೊತ್ತಿರಬೇಕು. ಭೂಪಾಲರೆಲ್ಲ ಸಮಾಧಿಯ ವೀರಗಲ್ಲಾಗಿ ಅಲ್ಲಲ್ಲೇ ಬಿದ್ದರಲ್ಲ! ಅವರ ಅಸಂಖ್ಯ ರಾಣಿಯರೆಲ್ಲ ಬೆಂಕಿ ಪಾಲಾದರು. ಅರಮನೆಯ ಸಕಲ ಭೋಗವೂ ಅವರ ಪದತಲದಲ್ಲಿದ್ದರೂ ಬೆಳ್ಳಿ, ಬಂಗಾರ ತಿನ್ನಲಾಗಲಿಲ್ಲ. ಯಾಕೆಂದರೆ ಅವರ ಕೈಯಲ್ಲಿ ಆಯುಧವಿದ್ದಿತು. ಅದರಿಂದ ಯಾರನ್ನೂ ಅಪ್ಪಿಕೊಳ್ಳಲಾಗಲೇ ಇಲ್ಲ. ಕೊನೆಗೆ ನಂಬಿದವರನ್ನು ಕೂಡ!

ಬೆಳಕಿನ ದಾರಿಗೆ ಅಡ್ಡಲಾಗಿರುವ ಸಂಗತಿಗಳು ಒಂದೇ, ಎರಡೇ. ಹಾಗಾದರೆ ಜಗತ್ತನ್ನು ಆವರಿಸಿರುವ ಕತ್ತಲೆಯಿಂದ ಬಿಡುಗಡೆ ಹೊಂದುವ ದಾರಿ ಯಾವುದು? ದೀಪಾವಳಿಯ ಈ ಹೊತ್ತಿನಲ್ಲಿ ಹೀಗೊಂದು ಬೆಳಕಿನ ಚಿಂತನೆ

'ನೀವು ನಿಮ್ಮ ಜೀವನದಲ್ಲಿ ಏನನ್ನು ತ್ಯಜಿಸಲು ಬಯಸುತ್ತೀರಿ' ಎಂದು ಕೇಳುವಲ್ಲಿ ಆಲ್ಬರ್ಟ್ ಕಾಮು, 'ನನ್ನೊಳಗೆ ಮನೆ ಮಾಡಿರುವ ಕತ್ತಲು ಹಾಗೂ ಅದಕ್ಕೆ ಕಾರಣವಾಗಿರುವ ಅಸ್ಪೃಶ್ಯ ಸಂಗತಿ' ಎಂದು ಹೇಳಿದ. ಹೀಗೆ ಜಗತ್ತನ್ನು ತುಂಬಿದ ಕತ್ತಲೆಗೆ ಸಿಡಿಮದ್ದು ಇಟ್ಟು ಇನ್ನಷ್ಟು ಬೆಂಕಿ ಹಚ್ಚಿ ಹೊಗೆ ಏಳಿಸಿ ಎಲ್ಲಿಯವರೆಗೆ ಸಾಗಬಹುದು? ಈ ಸಾಗಾಟದಲ್ಲಿ ಯಾರನ್ನೋ ಎಳೆ ತರುತ್ತ ಮತ್ತೆ ಯಾರನ್ನೋ ಹಿಂದೆ ತಳ್ಳುತ್ತ ಯಾವ ಗುರಿಯನ್ನು ಮುಟ್ಟಬಹುದು? ನಾನಾ ತಂತ್ರಗಳ ಉಪಾಯಗಳಲ್ಲೇ ಸಿಲುಕಿಕೊಂಡಿರುವ ಲೋಕಕ್ಕೆ ಬಿಡುಗಡೆಯ ಬೆಳಕು ಯಾವುದು?

***

ದಕ್ಷಿಣ ಕರ್ನಾಟಕದ ತುತ್ತ ತುದಿಯ ಅರಣ್ಯ ಭಾಗದಲ್ಲಿ ಹತ್ತಿಪ್ಪತ್ತು ಗುಡಿಸಲ ಸಮೂಹದ ನಡುವೆ ಮರದ ನೆರಳಿನ ಕಟ್ಟೆಯಲ್ಲಿ ಕೂತಿದ್ದ ಬುಡಕಟ್ಟು ಹಿರಿಯನೊಬ್ಬ ಮೇಲಿನ ಆಕಾಶವನ್ನೂ, ಸುತ್ತಿನ ಅರಣ್ಯವನ್ನೂ ನೋಡುತ್ತ ಹೊರ ಜಗತ್ತಿನ ವಿದ್ಯಮಾನಗಳು ಗೊತ್ತಿದ್ದೋ ಗೊತ್ತಿಲ್ಲದೆಯೋ 'ನಿಮ್ಮದೆಲ್ಲ ನಾಣ್ಯದ ಪರಪಂಚ' ಎಂದ. ಅಷ್ಟಾಗಿ ಕಾಸಿನ ಲೋಕ ಗೊತ್ತಿಲ್ಲದ ಈ ಅರಣ್ಯ ಮಧ್ಯದ ವ್ಯಕ್ತಿ ನಾಣ್ಯ ಪದವನ್ನು ಹಣ ಎಂಬ ಅರ್ಥದಲ್ಲಿ ಬಳಸಿರಲಾರ ಎನಿಸಿತು. ಒಂದು ಗಳಿಗೆ ಯೋಚಿಸಲಾಗಿ ನಾವೀನ್ಯದ ಪ್ರಪಂಚ ಎಂಬುದನ್ನು ನಾಣ್ಯ ಪರಪಂಚ ಎಂದಿರಬಹುದೇ, ಹೇಗಿದ್ದರೂ ಅದು ಸರಿಯೇ ಸರಿ ಎನಿಸಿತು.

ಸರಿಸುಮಾರು ನಲವತ್ತೈದು ವರ್ಷಗಳ ಹಿಂದೆ ಮಧ್ಯ ಕರ್ನಾಟಕದ ಚಿತ್ರದುರ್ಗ ಸೀಮೆಯ ಬುಡಕಟ್ಟು ಹಟ್ಟಿಯ ಜನಪದ ಗಾಯಕಿ ಸಿರಿಯಜ್ಜಿಯ ಕೈಗೆ ನೂರರ ಎರಡು ನೋಟುಗಳನ್ನು ಇಟ್ಟಾಗ, ಅವಳು ಒಂದು ಗಳಿಗೆ ಅದನ್ನೇ ನೋಡುತ್ತ ಈ ಕಾಸನ್ನು ಏನು ಮಾಡಬೇಕು ಎಂದಳು. ಅವಳು ಬದುಕುತ್ತಿದ್ದ ಹತ್ತಾರು ಗುಡಿಸಲುಗಳ ಸುತ್ತ ಯಾವ ಮಾಲ್‌ಗಳೂ ಇರಲಿಲ್ಲ. ಒಂದು ಕೊಂಡರೆ ಇನ್ನೊಂದು ಉಚಿತ ಎನ್ನುವ ಇಳುವರಿಯ ಮಾರಾಟದ ಭಾರಿ ವ್ಯಾಪಾರ ಮಳಿಗೆಗಳು ಇರಲಿಲ್ಲ. ಹೀಗಾಗಿ ಕೈಯಲ್ಲಿದ್ದ ಕಾಗದದ ನೋಟುಗಳನ್ನು ಏನು ಮಾಡಬೇಕೆಂದು ಕ್ಷಣಕಾಲ ಗೊತ್ತಾಗದೇ ಹೋಗಿದ್ದರೆ ಅದರಲ್ಲೇನು ಆಶ್ಚರ್ಯವಿರಲಿಲ್ಲ.

ಆಮೇಲೆ, ಸಿರಿಯಜ್ಜಿ ಪದ ಹೇಳು ಅಂದರೆ ತನಗೇನೂ ಗೊತ್ತಿಲ್ಲ ಅಂದಳು. ಸ್ವಲ್ಪ ಹೊತ್ತಿನ ಮೇಲೆ ಅವಳ ಹಾಡಿನ ಪ್ರಕಾರದಂತೆ ಬಾಳೆಯ ವನದಲ್ಲಿರುವ ಸರಸೋತಿ, ನೆಲ್ಲು ತೆನೆಯಂತೆ ತೂಗುವ ಸರಸೋತಿಯನ್ನು ಆವಾಹಿಸಿ ಆಮೇಲಾಮೇಲೆ 'ಮಳೆರಾಯ ಬಂದು ಇಳೆಯೆಲ್ಲ ತಣಿದು, ಮೊದಲ ವೀಳ್ಯವ ಒಕ್ಕಲು ಮಗನಿಗೆ ನೀಡಿರೋ' ಎಂದು ಹಾಡಿದಳು. ಲೋಕದ ಜೀವನಾಡಿಯಾದ ನೇಗಿಲ ಯೋಗಿಗೆ ಮೊದಲ ವೀಳ್ಯ ನೀಡಿ ಎಂದದ್ದು ಎಲ್ಲ ಕಾಲದ ಕ್ರಿಯೆ ಆಗಬೇಕಿತ್ತು. ಹಾಗೇನೂ ಆಗಲಿಲ್ಲ. ರಾಜಕಾರಣ, ಶಿಕ್ಷಣ ಎಲ್ಲವೂ ಹಣ ಪ್ರಪಂಚವಾಗಿರುವಂತೆ ಉಳುವ ನೆಲವೂ ಕಾಸು ಬೆಳೆಯುವ ಜಾಗಗಳಾಗುತ್ತಿವೆ. ಇಂಥದೆಲ್ಲ ದಂಧೆಗಳ ನಡುವೆ ಕಾಣಬಹುದಾದ ಬೆಳಕಿನ ಮಾರ್ಗ ಯಾವುದು?

***

ನಮ್ಮ ಪರಂಪರೆಯಾದರೋ ದೈವವನ್ನು ಸತ್ಯಶುದ್ಧ ಕಾಯಕದ ಮೂಲಕ ಕಂಡುಕೊಳ್ಳಬೇಕಾದದ್ದು, ಅದೇ ಬೆಳಕಿನ ಮಾರ್ಗ ಎಂದು ಹೇಳಿದೆ. ಆ ಬೆಳಕು ಅದರ ಸಂಕೇತವಾಗಿರುವ ಹಣತೆ ಅಥವಾ ಜ್ಯೋತಿ; ಇದಕ್ಕೆ ನಮ್ಮ ಸಂತರು ವಿವರಿಸಿಕೊಂಡು ಬಂದಿರುವ ಕ್ರಮವನ್ನು ಗಮನಿಸಿದರೆ ಆಶ್ಚರ್ಯವಾಗುತ್ತದೆ. ಸೌಂದರ್ಯಕ್ಕೆ ಸೋತು ಕೈಹಿಡಿದವನನ್ನು ಬಿಟ್ಟು, ಅರಸೊತ್ತಿಗೆಯನ್ನು ತಳ್ಳಿ, ಹುಟ್ಟಿದ ಪರಿಸರವನ್ನು ತೊರೆದು, ಕಲ್ಯಾಣವನ್ನು ಮುಟ್ಟಿ, ಬಸವನೆಂಬ ಅಮೃತಬಳ್ಳಿ ಸುತ್ತಿಕೊಂಡದ್ದರ ಸ್ಪರ್ಶದಿಂದ ಶ್ರೀಶೈಲ ಶಿಖರವನ್ನು ಕಂಡ ಅಕ್ಕ ಮಹಾದೇವಿ ತನ್ನೆಲ್ಲ ಪಡಿಪಾಟಲುಗಳ, ಪ್ರಯಾಣದ ಸಂಕಷ್ಟಗಳ ನಂತರ 'ಕೋಟಿ ರವಿ ಶಶಿಗಳಿಗೆ ಮೀಟಾದ ಪ್ರಭೆ ಬಂದು ನಾಟಿತು ಎನ್ನ ಮನದೊಳಗೆ, ಅದರಿಂದ ದಾಟಿದೆನು ಭವದ ಕೊಳಗಳ' ಎಂದಳು. ಆಕೆ ಹೇಳುವ ದಿವ್ಯ ಪ್ರಭೆ ಯಾವುದು? ಅಧ್ಯಾತ್ಮದ ತುದಿ ಮುಟ್ಟಿದವರ, ಪರಮಹಂಸರುಗಳ ಬದುಕಿನ ಆತ್ಯಂತಿಕ ಸಂದರ್ಭದಲ್ಲಿ ಕಂಡ ದಿವ್ಯರೂಪ ಅದೇ ಇರಬಹುದೆ? ಅದರ ಆರಂಭಿಕ ಹಂತ ಯಾವುದು? ನಿತ್ಯ ಬೆಳಗಿಸುವ ಅಥವಾ ಹಬ್ಬಗಳಂದು ಹಚ್ಚಿಡುವ ಹಣತೆಗಳೇ ಇರಬಹುದು. ಈ ಕಿರು ಹಣತೆಗಳೇ ದೈವ ಪ್ರಭೆಯನ್ನು ಕಾಣುವ ಕಿರುದಾರಿ ಹೌದು ಎನ್ನುವಂತೆ ತಿಳಿಯಲಾಗಿದೆ.

ಅಕ್ಕ ಮಹಾದೇವಿಯ ಕಠಿಣ ಮಾರ್ಗದಲ್ಲಿ ಕಂಡುಕೊಂಡ ಕೋಟಿ ರವಿ ಶಶಿಯ ಪ್ರಭೆಗೆ ಮೀಟಾದ ದಿವ್ಯ ಪ್ರಭೆಯನ್ನು ಕುರಿತು ತುಂಬ ಸರಳವಾಗಿಯೂ ಮನೋಜ್ಞವಾಗಿಯೂ ನಮ್ಮ ಸಂತರು, ಕವಿಗಳು ತತ್ವ ಪದಗಳಲ್ಲಿ ಕಾಣಿಸಿರುವುದುಂಟು. ಅಂಥ ಪರಿಶುದ್ಧ ರೂಪವನ್ನು ಕುರಿತು ದಕ್ಷಿಣ ಕರ್ನಾಟಕದ ಗ್ರಾಮವೊಂದರ ಬದಿಯ ಎತ್ತರದ ಗುಡ್ಡದ ಗವಿಯಲ್ಲಿ ವಾಸವಿದ್ದ ನಿಜಗುಣ ಶಿವಯೋಗಿಗಳು ಜ್ಯೋತಿ ಬೆಳಗುತಿದೆ ಎಂಬ ತತ್ವಪದ ಹಾಡಿದ್ದಾರೆ. ಕರ್ನಾಟಕದ ದಕ್ಷಿಣ ತುದಿಯಿಂದ ಉತ್ತರ ಕರ್ನಾಟಕದ ಕಲಬುರ್ಗಿವರೆಗೆ ಕೇಳಿಸಿಕೊಳ್ಳಬಹುದಾದ ಈ ಕೀರ್ತನೆಯ ಅರ್ಥವ್ಯಾಪ್ತಿ ದೊಡ್ಡದು. ಬಳಕೆಯಾಗಿರುವ ಒಂದೊಂದು ಪದವೂ ವಿಶ್ವ ಚೈತನ್ಯ ಶಕ್ತಿಯ ಕಡೆಗೆ ನಡೆಯುವಂತಿದೆ. ಬೆಳಕಿನ ಕಡೆಗೆ ಕೈ ಹಿಡಿದು ನಡೆಸಿಕೊಂಡು ಹೋಗುವಂತಿದೆ. ಆ ಪ್ರಯಾಣದಲ್ಲಿ ಮಾತು ಕಡಿಮೆಯಾಗಬೇಕು. ಮಾತು, ಆಪಾದನೆ, ಜಗಳ ಇಲ್ಲವಾದರೆ ಸಾಲದು. ಅಂತರಂಗ ಸರಿ ಹೋಗಿ ಅದು ನಿರ್ಮಲವಾಗಬೇಕು. ಕಾಣುವ ಜ್ಯೋತಿಯ ಕಡೆ ದೃಷ್ಟಿ ಇದ್ದರೆ ಮಾತ್ರವಲ್ಲ, ಆ ಬಗ್ಗೆ ತಿಳಿಯುವ ಕುತೂಹಲ ಇರಬೇಕು. ಮುಂದುವರೆದು ನಿಜಗುಣರು ಇನ್ನೊಂದು ನಿಯಮ ಹಾಕುತ್ತಾರೆ, ಅಲ್ಲಿ ಯಾವ ಲಾಭ ನಷ್ಟದ ಉದ್ದೇಶವೂ ಇರಕೂಡದು. ದೇವರಿಗೆ ಎಷ್ಟು ಆಮಿಷ ತೋರಿ, ತಾನೆಷ್ಟು ಹೊಡೆಯಬಹುದು ಎಂಬ ತುಚ್ಛ ಭಾವ ಇರುವಂತಿಲ್ಲ. ಈ ಕಾರಣ ಜ್ಯೋತಿಯ ಕಡೆಗಿನ ಪ್ರಯಾಣ ಕಠಿಣ. ಸರಳ ನಡೆಯಿದ್ದಲ್ಲಿ ಸುಲಭ ಕೂಡ. ನಿರುಪಾಧಿಕ ಭಾವದಿಂದ ಹೊರಟಲ್ಲಿ ಕಡೆಗೊಮ್ಮೆ ಆ ಜ್ಯೋತಿ ಕಾಣಿಸಿಕೊಳ್ಳಬಹುದು. ಇದನ್ನೇ ನಿಜಗುಣರು 'ಮಾತು ಮನಂಗಳಿಂದ ಅತ್ತತ್ತ ಮೀರಿದ ಸಾತಿಶಯದ ನಿರುಪಾಧಿಕ ನಿರ್ಮಲ ಜ್ಯೋತಿ' ಎಂದಿದ್ದಾರೆ. ಸಂಸ್ಕೃತ ಅಲಂಕಾರಿಕರು ಕೂಡ ಲೋಕ ಆಡುವ ಮಾತನ್ನೇ ಜ್ಯೋತಿ ಎಂದಿದ್ದಾರೆ.

ಕರ್ನಾಟಕದ ಯಾವುದೋ ತುದಿಯ ಗುಡ್ಡದ ಗವಿಯಲ್ಲಿ ಐದು ಶತಮಾನಗಳ ಹಿಂದೆ ಹೇಳಿದ್ದನ್ನೇ, ಹತ್ತೊಂಬತ್ತನೆಯ ಶತಮಾನದಲ್ಲಿ ಯೂರೋಪಿನ ಕವಿ ಜಾನ್ ಹೆನ್ರಿ ನ್ಯೂಮನ್, ಆ ಬೆಳಕನ್ನೆ ತನ್ನ ಬಳಿಗೆ ಕರೆದು ಕೈ ಹಿಡಿದು ನಡೆಸಬೇಕೆಂದು ಪ್ರಾರ್ಥಿಸಿದ್ದಾನೆ. ಕರುಣಾಳು ಬೆಳಕಿನ ಬಗೆಗೆ ಅಂಥ ಪ್ರಾರ್ಥನೆ ಏಕೆಂದರೆ, ಬೇಡುವವನು ಮುಸುಕಿದ ಕತ್ತಲೆಯ ಗವಿಯಲ್ಲಿ ಸಿಲುಕಿಬಿಟ್ಟಿದ್ದಾನೆ, ದಾರಿ ಕಾಣುತ್ತಿಲ್ಲ. ಹಾಗಾಗಿ ಬೆಳಕನ್ನು ಕರೆಯುತ್ತಿದ್ದಾನೆ. ನಿಜಗುಣ, ನ್ಯೂಮನ್ ಇವರ ರಚನೆ ಎರಡೂ ವಿರುದ್ಧ ದಿಕ್ಕಿನದಾದರೂ ಅವುಗಳ ಉದ್ದೇಶ ಒಂದೇ. ನಿಜಗುಣರು ದಾರಿ ತೋರಿದರೆ, ನ್ಯೂಮನ್ ದಾರಿ ಕಾಣದು ಎನ್ನುತ್ತಿದ್ದಾನೆ. ಈ ದಾರಿಗೆ ಅಡ್ಡಲಾಗಿರುವ ಸಂಗತಿಗಳು ಒಂದೇ ಎರಡೇ.

ನಾವೇ ಸೃಷ್ಟಿ ಮಾಡಿಕೊಂಡಿರುವ ಹುಸಿ ಅಧ್ಯಾತ್ಮ ಸಂಸ್ಥೆಗಳು, ದೇಶದೋದ್ಧಾರ ಸಂಬಂಧಿ ಚರ್ಚೆಗಳು, ಬದುಕಿಗೆ ಬಿಡುಗಡೆ ನೀಡಬೇಕಾದ ಧರ್ಮಗಳೇ ಕೈಕಾಲುಗಳಿಗೆ ಸುತ್ತಿಕೊಂಡು ಅದಕ್ಕೆ ಹೊಂದಿಕೊಂಡಂತೆ ಅಸಂಖ್ಯಾತ ದೈವಗಳು, ಇವೆಲ್ಲವೂ ನಮ್ಮನ್ನು ಬೆಳಕಿನತ್ತ ಮುಖವಾಗದಂತೆ ಮಾಡಿಬಿಟ್ಟಿವೆ. ವಿದ್ಯಮಾನಗಳೆಲ್ಲ ಗೋಚರವಾಗುತ್ತಿದ್ದರೂ ಬಿಡಿಸಿಕೊಳ್ಳಲಾರದಂತೆ, ಬಲೆಯಿಂದ ಹೊರಬರದಂತೆ ನಿರ್ಬಂಧವೇರ್ಪಡುತ್ತಿವೆ. ನಮ್ಮ ಜಾತಿಯವನೆ ಮುಖ್ಯಮಂತ್ರಿ ಎಂತಲೋ, ಜೈಲಿನಿಂದ ಬಂದ ನಮ್ಮವನೇ ನಾಯಕನೆಂದೋ ಹಾರವೇರಿಸಿ, ಮದ್ದಿನ ಸರಮಾಲೆಗೆ ಕಿಡಿ ಸೋಕಿಸಿ ಸಿಡಿಯುವಂತೆ ಮಾಡಿರಲಾಗಿ, ಸುತ್ತೆಲ್ಲ ಗುಡಿಸಲಾಗದ ಕಸದ ಗುಡ್ಡೆ ನಿರ್ಮಾಣವಾಗಿದೆ. ಇವರ ಗದ್ದಲಕ್ಕೆ ಹಕ್ಕಿ ಪಕ್ಷಿಗಳೂ ಬೆಚ್ಚಿ ಬೀಳುತ್ತಿವೆ. ಈ ಕ್ರಮದಲ್ಲಿ ಅಸಹಾಯಕವಾಗಿರುವ ಸಮೂಹಕ್ಕೆ ಅದರ ಬೇಡಿಕೆ ಪೂರೈಸಲೋ, ಪ್ರಭುತ್ವ ಸಾಧಿಸಲೋ, ಭೇದಭಾವ ಹುಟ್ಟಿಸಲೋ ಒಟ್ಟಿನಲ್ಲಿ ತಮ್ಮ ಯಾವತ್ತೂ ಉದ್ದೇಶಗಳಿಗೆ ಬೇಕಾದ ಮೂಲ ಸಾಮಗ್ರಿಗಳನ್ನಾಗಿ ಮನುಷ್ಯ ಗುಂಪುಗಳನ್ನು ಬಳಸಿಕೊಳ್ಳುವಂತಾಗಿದೆ. ಇದರ ವೇಗದಲ್ಲಿ ಮಂಗಳದ ಬೆಳಕು ದೇವರನ್ನೂ ಸೇರಿಸಿ ಊರು ಕೇರಿಯನ್ನೇ ಸುಡುತ್ತ, ತೀರ್ಥವಾಗಬೇಕಿದ್ದ ನೀರು ಹುಚ್ಚು ಹೊಳೆಯಾಗಿ ಜನ ಜಾನುವಾರನ್ನು ಮುಳುಗಿಸುವುದಾದರೆ ರಕ್ಷಕರು ಯಾರು?

ಸಂದರ್ಭ ನಿಷ್ಠೆಯಿಂದ ಬೇರೆಯಾಗಿ ಸಾರ್ವತ್ರಿಕವಾಗಿ ಎಲ್ಲರಿಗೂ ಎಲ್ಲ ಸಮಯದಲ್ಲೂ ಅನ್ವಯವಾಗುವಂಥ ಸೂತ್ರಗಳು ಭಾರತದಲ್ಲಿ ಹಿಂದೆಯೂ ಇದ್ದವು, ಈಗಲೂ ಇದ್ದೇ ಇವೆ. ಎಲ್ಲ ಮಹಾ ಪುರುಷರೂ ಅದನ್ನೇ ಪ್ರತಿಪಾದಿಸಿದ್ದಾರೆ. ಆದರೆ ಆಯಾ ಮಹಾನುಭಾವರ ಅನುಯಾಯಿಗಳೇ ತಮಗೆ ಬೇಕಾದಂತೆ ಆ ಜೀವನ ಸೂತ್ರಗಳನ್ನು ತಿರುಗಿಸಿ, ಉರುಗಿಸಿ ಎಲ್ಲ ದಿವ್ಯವಾದುದೂ ತಮ್ಮ ಕೈ ಅಳತೆಯಲ್ಲೇ ಇದೆ, ಇತ್ತಲೇ ಬನ್ನಿ ಎಂದು ಲಾಭದ ಹುಂಡಿಯನ್ನು ಇಟ್ಟು ಕೂತಿದ್ದಾರಲ್ಲ!

***

ಎಲ್ಲ ಪದಗಳೂ ಹೇಳಿ ಮುಗಿದವೇ ಎಂದು ಸಿರಿಯಜ್ಜಿಯನ್ನು ಕೇಳಲಾಗಿ ಅವಳು ಹಾಡುವುದು ಇನ್ನೂ ಇದೆ ಎಂದಳು. ಉಳಿದದ್ದು ಎಂದರೆ 'ಸಣ್ಣ ಹಣತೆ, ಮಿಳ್ಳೆ ಎಣ್ಣೆ/ ನನ್ನ ಗುಡಿಸಲ ಜ್ಯೋತಿಯೇ/ ಮೆಲ್ಲ ಮೆಲ್ಲಾಕ ಉರಿಯೆ ಪರಂಜ್ಯೋತಿ' ಎಂದು ಹಾಡಿದಳು. ಗಮನಿಸಬೇಕಾದದ್ದು ಎಂದರೆ ಎರಡನೆಯ ಸಾಲಿನಲ್ಲಿ ಕಣ್ಣಿಗೆ ಕಾಣುವ ಜ್ಯೋತಿ, ಮೂರನೆಯ ವಾಕ್ಯದಲ್ಲಿ ಶ್ರಮ ವಹಿಸಿ ಕಾಣಿಸಿಕೊಳ್ಳಬೇಕಾದ ಪರಂಜ್ಯೋತಿಯಾಗಿಬಿಡುತ್ತದೆ. ಈ ಪದ ಕೇಳುವಲ್ಲಿ ಆಕೆಯನ್ನು ಸನ್ಮಾನಿಸಲು ಸೇರಿದ್ದ ಸಭೆ ಒಂದು ಗಳಿಗೆ ನಿಶ್ಚಲ ದೀಪದ ಕುಡಿಯಂತಾಗಿಬಿಟ್ಟಿತು! ಇದೀಗ ಮಳೆಯ ಸಮೃದ್ಧಿಯೊಡನೆ ಮತ್ತೆ ಬಂದಿರುವ ದೀಪಾವಳಿ ದಿನದಂದು ಮಕ್ಕಳು, ಹೆಣ್ಣುಮಕ್ಕಳು, ಹಿರಿಯರು ಸೇರಿ ಹಚ್ಚುವ ಹಣತೆಗಳ ಸಣ್ಣ ಬೆಳಕು ನಮ್ಮ ಕಣ್ಣುಗಳಿಗೆ ಕಾಣಿಸಿ, ಅದು ಅಂತರಂಗಕ್ಕಿಳಿದು ಬೆಳಗುವಂತಾಗಲಿ.

ಚೌಕಾಸಿ ಶಾಪಿಂಗ್!

ಡಾ.ಕೆ.ಎಸ್. ಪವಿತ್ರ



'ಶಾಪಿಂಗ್' ಎಂಬ ಪದವೇ ನನಗೆ ಬಲು ಇಷ್ಟ. ಅದನ್ನು 'ಕೊಳ್ಳುಬಾಕತನ' ಎಂದೆಲ್ಲಾ ಕೆಟ್ಟದಾಗಿ ಕರೆಯುವುದನ್ನು ನಾನು ಸುತರಾಂ ಒಪ್ಪಲಾರೆ. ಕಂಪ್ಯೂಟರ್ /ಮೊಬೈಲ್ ಮುಂದೆ ಕುಳಿತು ಆ್ಯಪ್‌ಗಳಲ್ಲಿ 'ಶಾಪ್' ಮಾಡುವುದು ನನ್ನ ಪಾಲಿಗೆ ಏನೇನೂ ಮಜಾ ತರಲಾರದು. ಸಾದಾ ದಿನಗಳಲ್ಲಿ, ಕೆಲಸದ ಒತ್ತಡದಲ್ಲಿ ಹೊರಗೆ ಹೋಗಿ ಅಗತ್ಯ ವಸ್ತುಗಳನ್ನಾದರೂ ಖರೀದಿ ಮಾಡುವುದೇ ಕಷ್ಟ. ಹೀಗಿರುವಾಗ ನನ್ನಮಟ್ಟಿಗೆ ಶಾಪಿಂಗ್ ಎಂದರೆ ಪ್ರವಾಸಕ್ಕೆ ಹೋದಾಗ ನಾನು ಉತ್ಸಾಹದಿಂದ ಚೌಕಾಸಿ ಮಾಡಿ, ಹೊಸತನ್ನು ಖರೀದಿಸಿ, ಸಂತಸಪಡುವ ಪ್ರಕ್ರಿಯೆಯೇ.

ಪ್ರವಾಸಿ ಕಂಪನಿಗಳು ಪ್ರವಾಸದ ವೇಳಾಪಟ್ಟಿ ನೀಡುವಾಗ ಕೆಲವು ಅವಧಿಗಳನ್ನು 'ಶಾಪಿಂಗ್'ಗಾಗಿ ಎಂದು ಹಾಕಿರುತ್ತಾರಷ್ಟೆ. ಇದು ಸಾಮಾನ್ಯವಾಗಿ ನನ್ನಲ್ಲಿ ಸಂಶಯ ಮೂಡಿಸಿಬಿಡುತ್ತದೆ! ಅವರು ನ್ಯಾಯವಾಗಿಯೇ ಹಾಗೆ ಹಾಕಿರಬಹುದಾದರೂ ಆ ಕಂಪನಿಗೂ, ಅವರು ಕರೆದುಕೊಂಡು ಹೋಗುವ ಮಾಲ್/ ಅಂಗಡಿ/ ಫ್ಯಾಕ್ಟರಿ ಔಟ್‌ಲೆಟ್‌ಗೂ ಒಳನಂಟು ಇರಬಹುದೇ/ ಮತ್ತೊಂದು ತಾಣಕ್ಕೆ ಕರೆದುಕೊಂಡು ಹೋಗುವ ಬದಲು ಇವರು ನಮ್ಮನ್ನು ಸುಮ್ಮನಾಗಿಸಲು ಶಾಪಿಂಗ್ ಅಸ್ತ್ರ ಉಪಯೋಗಿಸುತ್ತಿರಬಹುದೇ? ಹೀಗೆ ನನ್ನ ಅನುಮಾನದ ರೈಲು ಓಡಲಾರಂಭಿಸುತ್ತದೆ. ನಾನು ಕಾಲಿಗೆ ಚಕ್ರ ಕಟ್ಟಿಕೊಂಡಂತೆ ವಿವಿಧ ಕಾರಣಗಳಿಗಾಗಿ ಸುತ್ತಾಡುವುದರಿಂದ, ತಿರುಗಾಡುವುದರ ಬಗೆಗೆ ಇರುವಷ್ಟೇ ಅಗಾಧ ಎನ್ನುವ ಅನುಭವವನ್ನು 'ಶಾಪಿಂಗ್'ನಲ್ಲಿಯೂ ಸಂಪಾದಿಸಿಬಿಟ್ಟಿದ್ದೇನೆ! ಹಾಗಾಗಿ ಪ್ರವಾಸಿ ಕಂಪನಿಗಳಾಗಲಿ, ಇತರ ಪ್ರವಾಸಿಗಳಾಗಲಿ ನೋಡುವುದಕ್ಕಿಂತ 'ಶಾಪಿಂಗ್' ಬಗ್ಗೆ ನನ್ನ ದೃಷ್ಟಿಕೋನವೇ ಬದಲಾಗಿಬಿಟ್ಟಿದೆ!


ನನ್ನ ಮಟ್ಟಿಗೆ ದೇಶೀಯ/ ಅಂತರ್ದೇಶೀಯ ಪ್ರವಾಸಿ ತಾಣಗಳಲ್ಲಿ ಉಳಿದ ಪ್ರೇಕ್ಷಣೀಯ ಸ್ಥಳಗಳಂತೆ, ಅಲ್ಲಿನ ಮಾರುಕಟ್ಟೆ-ಬಜಾರ್‌ಗಳೂ ಪ್ರೇಕ್ಷಣೀಯ ಸ್ಥಳಗಳೇ. ವಿವಿಧ ರೀತಿಯ ಬದುಕುಗಳನ್ನು ನಾವು ಅಲ್ಲಿ ನೋಡುತ್ತೇವೆ. ನಾನಂತೂ ಚೌಕಾಸಿ ಮಾಡುವ ಕೌಶಲವನ್ನು ಈ ಮಾರುಕಟ್ಟೆಗಳಿಂದಲೇ ಕಲಿತವಳು. ಶಾಪಿಂಗ್ ಬಗೆಗಿನ ನನ್ನ ಅನುಭವಗಳ ಮೊದಲ ಮೈಲಿಗಲ್ಲು ಬಹುಶಃ ನನ್ನ ಹದಿಹರೆಯದ ದಿನಗಳಲ್ಲಿ. ದೆಹಲಿಯ ಕರ್ನಾಟಕ ಸಂಘಕ್ಕೆ ನೃತ್ಯ ಕಾರ್ಯಕ್ರಮ ನೀಡಲು ಹೋಗಿದ್ದೆವು. ಸುತ್ತಮುತ್ತಲ ಸರೋಜಿನಿ ಬಾಗ್, ಪಾಲಿಕಾ ಬಜಾರ್ ತಿರುಗಾಡಿದೆವು. ಹಿರಿಯರು ಮಾಡುತ್ತಿದ್ದ ಚೌಕಾಸಿ ವ್ಯಾಪಾರವನ್ನು ನಾನು ಕುತೂಹಲದಿಂದ ಗಮನಿಸುತ್ತಿದ್ದೆ. ಒಬ್ಬ ಬ್ಯಾಗ್‌ಗಳನ್ನು ಮಾರುತ್ತಿದ್ದ. ಒಂದಕ್ಕೆ 500 ರೂಪಾಯಿ ಎನ್ನುತ್ತಿದ್ದ. ನಾನು 'ನೋಡೇ ಬಿಡೋಣ' ಎಂದು 100 ರೂಪಾಯಿಗೆ ಕೇಳಿದೆ. ನನಗೆ ಅದು ಬೇಕಾಗಿರಲಿಲ್ಲ. ಆತ ಕೈಯಾಡಿಸಿದ. ನಾನೂ ಮುನ್ನಡೆದೆ. ಮಾರುಕಟ್ಟೆಯಿಂದ ಹೊರ ಬರುವಷ್ಟರಲ್ಲಿ ಆತ '100 ರೂಪಾಯಿಗೆ ಕೊಡುತ್ತೇನೆ, ತೆಗೆದುಕೊಳ್ಳಿ' ಎಂದು ಬೆನ್ನು ಹತ್ತಿದ. 'ಬೇಡದ ಬ್ಯಾಗ್‌ಗೆ ಇಷ್ಟು ಕಾಟ' ಎಂದು ಎಲ್ಲರ ಹತ್ತಿರ ಬೈಸಿಕೊಳ್ಳಬೇಕಾಯ್ತು. ಪಾಲಿಕಾ ಬಜಾರ್-ಸರೋಜಿನಿ ಬಾಗ್‌ಗಳನ್ನು ಓಡಾಡಿ ಹೊರಬರುವಾಗ ಸಾಕೋಸಾಕಾಗಿತ್ತು.

ಚೌಕಾಸಿಯ ಬಗ್ಗೆ ಸರಿಯಾದ ಪಾಠವನ್ನು ನಾನು ಕಲಿತಿದ್ದು ಮುಂಬಯಿನ ಫ್ಯಾಷನ್ ಸ್ಟ್ರೀಟ್‌ನಲ್ಲಿ. ನನ್ನ ಸೋದರಮಾವ ನನ್ನ ಜೊತೆ ಬಂದಿದ್ದರು. ಅವರು ಹೇಳಿದ್ದರು, 'ನಿನಗೆ ಏನು ಬೇಕೋ ಆರಿಸು, ಒಮ್ಮೆ ಆ ತುದಿಯಿಂದ ಈ ತುದಿಗೆ ಓಡಾಡು. ಆದರೆ, ದುಡ್ಡು ಕೊಡುವಾಗ ಮಾತ್ರ ಮಾತಾಡಬೇಡ, ನನಗೆ ಬಿಡು'. 'ಗುರು'ವಿನಿಂದ ಕಲಿಯಲು ಉತ್ಸುಕಳಾಗಿ ಒಂದೆಡೆ ಒಂದೆರಡು ಡ್ರೆಸ್ ಆರಿಸಿದೆ. ಸುಮ್ಮನೇ ನಿಂತೆ. ಮಾವ ಅಂಗಡಿಯವನ ಬಳಿ ಬೆಲೆ ಕೇಳಿದರು. ಅವನು ಹೇಳಿದ ತಕ್ಷಣ 'ಓ ಎರಡರ ಬೆಲೆ ಹೇಳ್ತಿದ್ದೀಯ, ಸಾಕಷ್ಟು ಚೀಪೇ, ಕೊಡು' ಎಂದರು. ಅವನು ನಗುತ್ತ 'ನಾನು ಹೇಳಿದ್ದು ಒಂದರದ್ದು ಸಾಬ್' ಎಂದು ನಕ್ಕ. ಹೀಗೇ ರಂಜನೀಯವಾಗಿ ಚೌಕಾಸಿ ಮುಂದುವರಿಯಿತು. ಆತ ಹೇಳಿದ್ದ ಕಾಲು ಬೆಲೆಗೆ ಡ್ರೆಸ್‌ಗಳು ನನ್ನ ಕೈಲಿದ್ದವು!

ನನ್ನ 'ಗುರು' ಹೇಳಿದ್ದು 'ನೋಡು ಇಂತಹ ಮಾರುಕಟ್ಟೆಗಳಲ್ಲಿ ಕೊಳ್ಳುವಾಗ, ಅವರು ಹೇಳಿದ ಬೆಲೆಯ ಕಾಲು ಭಾಗದಷ್ಟಕ್ಕೆ, ಅಂದರೆ ನಮಗೇ ಕೇಳಲು ನಾಚಿಕೆ ಎನಿಸುವಷ್ಟಕ್ಕೆ ಕೇಳಬೇಕು. ಅವರು ಕೊಡುವುದಿಲ್ಲ ಎಂದಾಗ ಮುನ್ನಡೆಯಲು ಸಿದ್ಧರಿರಬೇಕು. ಒಮ್ಮೆ ನೀನು ಕೇಳಿದ ಬೆಲೆ ಗಿಟ್ಟದಿದ್ದರೆ ಇನ್ನು 10 ರೂಪಾಯಿ ಹೆಚ್ಚು ಮಾಡು. 100 ಅಲ್ಲ. ನೀನು ಸೈಕಿಯಾಟ್ರಿ ಓದುತ್ತಿರಬಹುದು. ಆದರೆ ಇವರೆಲ್ಲಾ ಇಲ್ಲಿಗೆ ಬರುವ ಜನರ ಮನಸ್ಸನ್ನು ಕ್ಷಣಾರ್ಧದಲ್ಲಿ ಅಳೆಯುವ ಜಾಣರು. ಯಾವ ಮನೋವಿಜ್ಞಾನಿಗೂ ಇವರು ಕಡಿಮೆಯಿಲ್ಲ'. ಅದರಲ್ಲಿಯೂ ನನ್ನಂಥ ಸೀಮಿತ ಸಮಯವನ್ನಿಟ್ಟುಕೊಂಡು, ಓಡುವ, ಅವಸರದಲ್ಲಿ ಒಂದಿಷ್ಟನ್ನು ಕೊಳ್ಳುವ ವ್ಯಕ್ತಿಗೆ ಇವು ಬಹು ಉಪಯುಕ್ತ ಮಾರ್ಗಸೂಚಿಗಳಾಗಿದ್ದವು.

3ನೇ ಪುಟಕ್ಕೆ...

ಐದು, ಐದು ಹತ್ತು; ಕೈಗೆ ಕೈ ಒತ್ತು!



ದೀಪಾವಳಿ ಅಂದರೆ ವರಕವಿ ಬೇಂದ್ರೆ ನಮ್ಮನ್ನಗಲಿದ ದಿನವೂ ಹೌದು. ಆದರೆ, ಅವರು ಹಚ್ಚಿಟ್ಟ ಪದ್ಯ ದೀವಿಗೆ ಎಂದಿಗೂ ನಮ್ಮನ್ನು ಬೆಳಗುತ್ತಲೇ ಇದೆಯಲ್ಲವೇ? ದೈನಂದಿನ ವಿಷಯಗಳನ್ನು ಹೇಳುತ್ತಲೇ ಭಕ್ಕಂತ ಮಹಾಭಾರತ, ರಾಮಾಯಣ ತತ್ವ ವಿಚಾರಗಳಿಗೆ ಅವರು ಹಾರುತ್ತಿದ್ದ ಪರಿ ಅನನ್ಯ-ಅಪ್ರತಿಮ. ಹಾಗೆಂದೇ ಅವರೊಬ್ಬ ಶಬ್ದ ಗಾರುಡಿಗ. ಅವರ ಮಾತು ಕೇಳಿಸಿಕೊಳ್ಳುವ ಆ ಕ್ಷಣಗಳೆಂದರೆ ಕೇಳುಗರಿಗೆಲ್ಲ ರಸಪಾಕ...

ನಾರಾಯಣ ರಾಯಚೂರ್

ಸ್ಮರಣೆ

ಅದು 1969–70ರ ಸಂದರ್ಭ. ನಾನಾಗ ಎಸ್.ಎಸ್.ಎಲ್.ಸಿ. ಓದುತ್ತಿದ್ದೆ. ನವಲಗುಂದದ ಮಾಡೆಲ್ ಹೈಸ್ಕೂಲ್‌ನಲ್ಲಿ ನನ್ನ ಓದು. ಆಗೆಲ್ಲ ಶಾಲೆಯಲ್ಲಿ ವರ್ಷದ ಕೊನೆಗೆ ಗ್ಯಾದರಿಂಗ್, 'ಸರಸ್ವತಿ ಪೂಜೆ' ಅಂತ ಇಟ್ಟುಕೊಳ್ಳೋರು. ದೊಡ್ಡ ಸಾಹಿತಿಗಳೋ, ಕವಿಗಳೋ, ಸಾಧಕರೋ ಅತಿಥಿಗಳಾಗಿ ಬಂದು ಕಾರ್ಯಕ್ರಮ ನಡೆಸಿಕೊಡೋರು. ಆ ವರ್ಷ ಧಾರವಾಡದಿಂದ ಕವಿವರ ದ.ರಾ.ಬೇಂದ್ರೆ ಅವರು ಅತಿಥಿಗಳಾಗಿ ಬಂದಿದ್ದರು. ಬೆಳಿಗ್ಗೆ-ಸಂಜೆ ಇಡೀ ದಿನ ಕಾರ್ಯಕ್ರಮ. ಬೆಳಿಗ್ಗೆ ಬಂದ ಬೇಂದ್ರೆ ಅವರು ಬೆಳಗಿನ ಕಾರ್ಯಕ್ರಮ ಪೂರೈಸಿ ಬಿಡುವಾದ ಮೇಲೆ, ವಿದ್ಯಾರ್ಥಿಗಳೊಂದಿಗೆ ಹರಟೆ-ಮಾತುಕತೆ ತರಹದ ಒಂದು ಆಪ್ತ ಸಂವಾದದಲ್ಲಿ ಪಾಲ್ಗೊಂಡರು. ಅದರಲ್ಲಿ ನನಗೂ ಭಾಗವಹಿಸುವ ಸುಯೋಗ.

ಬೇಂದ್ರೆ ಅಜ್ಜ ಮಧ್ಯದಲ್ಲಿ. ನಾವಷ್ಟು ವಿದ್ಯಾರ್ಥಿಗಳು ಸುತ್ತ ಕುಳಿತಿದ್ದೆವು. ಒಬ್ಬೊಬ್ಬರಾಗಿ ಪರಿಚಯಿಸಿಕೊಂಡೆವು. ನಂತರ ಬೇಂದ್ರೆ ಅವರು ನಮ್ಮಲ್ಲೊಬ್ಬನನ್ನು ತೋರಿಸಿ, 'ನೀನು ಹೇಳು, ನಿನ್ನ ಬಾಜೂಕ ಕೂತಾನಲ್ಲ, ಆಂವಾ ನಿನಗ ಏನಾಗಬೇಕು?' ಅಂದರು. ಅದಕ್ಕೆ 'ಆಂವಾ ನನಗ ಗೆಳೆಯ ಆಗಬೇಕು' ಅಂದ. ಬೇಂದ್ರೆ ಮುಂದುವರಿದು 'ಗೆಳೆಯ ಅಂದ್ರ ಏನು?' ಅಂದರು. ಆಂವಾ ಸುಮ್ಮನಿರಬೇಕೋ ಬೇಡವೊ? 'ಗೆಳೆಯ ಅಂದ್ರ, ಜೀವಕ್ಕ ಜೀವಾ ಕೊಡಾಂವ' ಅಂದುಬಿಟ್ಟ. ಅಷ್ಟು ಸಾಕಾತು ಬೇಂದ್ರೆಯವರಿಗೆ. ಗೆಳೆಯ, ಜೀವಾ, ಜೀವಕ್ಕ ಜೀವಾ ಕೊಡೋದು ಅಂತ ಓತಪ್ರೋತವಾಗಿ ಮಾತಿನ ಲಹರಿ. ನಮಗೆಷ್ಟು ಅರ್ಥ ಆಯಿತೋ? ಎಷ್ಟು ದಕ್ಕಿತೋ? ಗೊತ್ತಿಲ್ಲ. ಅವರ ಜತೆ, ಅಂದು ನಮಗೆ ಮುಖ್ಯ ಅತಿಥಿಗಳ ಫಲಾಹಾರ-ಆತಿಥ್ಯದಲ್ಲಿ ಪಾಲು, ಧಾರವಾಡ ಪೇಢಾ ಹಾಗೂ ಚೂಡಾ ವಿಶೇಷವಾಗಿ ಸಿಕ್ಕಿದ್ದು ಇನ್ನೂ ಮರೆತಿಲ್ಲ. ಇದು ಬೇಂದ್ರೆ ಅಜ್ಜನೊಡನೆ ನನ್ನ ಮೊದಲ ಭೇಟಿಯ ಮುದ.

ಮುಂದೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಅನೇಕಾನೇಕ ಗೌರವ/ಸನ್ಮಾನ ಸಮಾರಂಭಗಳು. ಬೆಂಗಳೂರಿನ ಮಹಾನಗರ ಪಾಲಿಕೆಯಿಂದಲೂ ಪೌರ ಸನ್ಮಾನ. ಬಹುಶಃ ಟೌನ್‌ಹಾಲ್‌ನಲ್ಲಿ ಅನ್ನುತ್ತೆ. ಆರು ಗಂಟೆಗೆ ಕಾರ್ಯಕ್ರಮ. ಬೇಂದ್ರೆ ಠಾಕೊ-ಠೀಕ್ ಆಗಿ ಬಂದುಬಿಟ್ಟಿದ್ದರು. ಆಯೋಜಕರು ಮಾಮೂಲಾಗಿ ಆರೂವರೆ, ಏಳು ಹೀಗೆ ನಿಧಾನವಾಗಿ ಶುರುಮಾಡಬೇಕು ಅನ್ಕೊಂಡಿದ್ರೋ ಏನೋ? ಅಂತೂ ಲಗುಬಗೆಯಿಂದ ಸಭೆ ಶುರುವಾಯಿತು.

ಬೇಂದ್ರೆ ಅವರ ಭಾಷಣದ ಸರದಿ ಬಂತು. 'ಆರು ಗಂಟೆಕ್ಕ ಕಾರ್ಯಕ್ರಮ ಅಂದಿದ್ದರು. ತಡ ಮಾಡಬಾರದು, ಕಾಯಿಸಬಾರ್ದು ಅಂದುಕೊಂಡು - 'ಹೊತ್ತಾತು ಅಂತ ರಿಕ್ಷಾದಾಗ ಬಂದೆ. ಹೊತ್ತಾತು 'ಅಂತರಿಕ್ಷಾ'ದಾಗ ಬಂದೆ' ಅಂತ ಕೈ ಮೇಲೆತ್ತಿ ವಿಮಾನ ಹಾರಿದಂತೆ ತೋರಿಸಿದರು. ಸಭೆಯಲ್ಲಿ ಚಪ್ಪಾಳೆ. ಅವರ ಪದ-ಪ್ರಯೋಗದ ಶ್ಲೇಷೆಯ(ಪನ್) ಮುಖಾಂತರವೇ ಆಯೋಜಕರಿಗೂ ಬಿಸಿ ಮುಟ್ಟಿಸಿದರು, ಸಭಿಕರನ್ನೂ ರಂಜಿಸಿದರು. ಇದು ಹೆಚ್ಚು ಕಡಿಮೆ ಐವತ್ತು ವರ್ಷದ ಹಿಂದಿನ ಪ್ರಸಂಗ; ಈಗಿನ ಬೆಂಗಳೂರು? ಟೆರಿಫಿಕ್-ಟ್ರಾಫಿಕ್ಕು ಊಹಿಸಿಕೊಳ್ಳೋದು ಕಷ್ಟ!

'ಎನ್ನ ಪಾಡಡೆನಗಿರಲಿ, ಅದರ ಸವಿಯನ್ನಷ್ಟೇ ನೀಡುವೆನು ನಿನಗೆ' ಎಂದ ಕವಿ ಅಂದಿನ ಸಭೆಯ ಆರಂಭಕ್ಕೆ 'ಮನುಷ್ಯ ದುಃಖ ಹ್ಯಾಂಗಾದರೂ ತಡಕೋಬಹುದು. ಆದರೆ, ಸುಖ ತಡಕೊಳ್ಳೋದು ಭಾಳ ಕಷ್ಟ ಅದ' ಎಂದು ಉದ್ಗಾರ ತೆಗೆದಾಗ ಮತ್ತೆ ಚಪ್ಪಾಳೆ. ಮುಂದುವರಿದು ಕರ್ನಾಟಕದ ಮಹತ್ವವನ್ನು ಸಾರುತ್ತ 'ಜಗದೇಳಿಗೆಯಾಗುವುದಿದೆ ಕರ್ನಾಟಕದಿಂದ' ಎಂದು ಶಕುನ ಸಾರಿದರು. ಚಪ್ಪಾಳೆಯೋ ಚಪ್ಪಾಳೆ. ವಾಟಾಳ್ ನಾಗರಾಜರಂತೂ ಖುಷಿಯಿಂದ ತಮ್ಮ ಟೊಪ್ಪಿಗೆಯನ್ನೇ ಮೇಲೆ ತೂರಿ ಸಂಭ್ರಮಿಸಿದ್ದು ಕಣ್ಣಮುಂದೆ ಕಟ್ಟಿದಂತಿದೆ.

ಗೆಳೆಯ ಗೋಪಾಲ ವಾಜಪೇಯಿ ಅಭಿನಯಿಸಿಕೊಂಡು ಬಣ್ಣಿಸುತ್ತಿದ್ದ ಇನ್ನೊಂದು ಬೇಂದ್ರೆ ಪ್ರಸಂಗ. ಬೇಂದ್ರೆಯವರಿಗೆ ಗಣಿತದ ಲೆಕ್ಕಾಚಾರ, ಸಂಖ್ಯಾಶಾಸ್ತ್ರದ ಗೀಳು ಅಂಟಿಕೊಂಡಿದ್ದ ದಿನಗಳವು. ಮನಸ್ಸಿಗೆ 411; ಹೃದಯಕ್ಕೆ 881 ಎಂಬ ಸಂಖ್ಯೆಯನ್ನು ಬೇಂದ್ರೆಯವರು ಕೊಟ್ಟಿದ್ದರಂತೆ! ಅಂತೂ ಆ ದಿನಗಳಲ್ಲಿ, ಹುಬ್ಬಳ್ಳಿಯಲ್ಲಿ ರೈಲ್ವೆ ವರ್ಕ್‌ಶಾಪ್ ಕಾರ್ಮಿಕರು ಆಯೋಜಿಸಿದ ರಾಜ್ಯೋತ್ಸವ ಕಾರ್ಯಕ್ರಮಕ್ಕೆ ಬೇಂದ್ರೆ ಮಾತನಾಡಲು ಎದ್ದರು. ತಮ್ಮ ಬಲ ಹಸ್ತವನ್ನು ಬಿಚ್ಚಿ ತೋರುತ್ತ 'ಇವು ಎಷ್ಟು?' ಎಂದರು. ಸಭಿಕರು ಮೌನ. 'ಇವು ಐದು' ಎಂದು ಬೇಂದ್ರೆ ಮುಂದುವರಿದರು. ಎಡ ಹಸ್ತವನ್ನು ಹರಡಿ 'ಇವು ಎಷ್ಟು?' ಎಂದರು. ಮತ್ತೆ ಮೌನ. 'ಇವು ಐದು' ಬೇಂದ್ರೆ ಉತ್ತರ. 'ಐದು, ಐದು ಹತ್ತು; ಕೈಗೆ ಕೈ ಒತ್ತು, ಮೇಲೆತ್ತು' (ಕೈಗೆ ಕೈ ಒತ್ತಿ, ಮೇಲತ್ತಿ ತೋರಿಸುತ್ತ) 'ಮನ, ನಮ... ಆಗ್ತದ್ರೋ... ಮನ, ನಮ ಆಗ್ತದ್ರೋ' ಎಂದ್ರು. ಆ ಶ್ರಮಜೀವಿಗಳು ಈ ಹೊಸ-ಬೇಗೆಯ ಭಾಷಣವನ್ನು ಎಷ್ಟು ಗ್ರಹಿಸಿದರೋ? ಬೇಂದ್ರೆ ಬೆರಳುಗಳ ಮೂಲಕ ಸರಳವಾಗಿ ದೊಡ್ಡ ತತ್ತ್ವವನ್ನೇ ವಿವರಿಸಿದ್ದರು. ಹಾಗೇ ಮುಂದುವರಿದು ಹೇಗೆ 'ಪತ - ತಪ' ಆಗುತ್ತದೆ ಎಂದೂ ವಿವರಸಿದ್ದರಂತೆ.


ಇನ್ನೊಂದು ಪ್ರಸಂಗ. ಹುಬ್ಬಳ್ಳಿ-ಧಾರವಾಡದ ಒಂದು ಕಾರ್ಯಕ್ರಮ. ಮಹಿಳೆಯರು ಜಾಸ್ತಿಯಿದ್ದ ಕಾರ್ಯಕ್ರಮವದು. ಬೇಂದ್ರೆಯವರು ಮಾತು ಆರಂಭಿಸಿದರಂತೆ. 'ನೀರ-ಸಾಗರದಾಗ (ಆಗ ಹುಬ್ಬಳ್ಳಿ-ಧಾರವಾಡಕ್ಕೆ ನೀರಸಾಗರ ರಿಸರ್ವಾಯರ್‌ನಿಂದ ನೀರು ಸರಬರಾಜು ಆಗುತ್ತಿತ್ತು) ನೀರು ಸ್ವಚ್ಛ ಇದ್ದರ ನಮ್ಮ ಮನಿ ನಳದಾಗ ನೀರು ಸ್ವಚ್ಛ ಬರ್ತಾವ; ಆದರ ನಮ್ಮ ಮನಿ ನಳ ನಿಯಂತ್ರಣ ಮಾಡಲಿಕ್ಕೆ ಮನಿಯೊಳಗ ದಮಯಂತಿಯರು ಇರ್ತಾರ ಅಂದರಂತೆ. ಮಹಿಳೆಯರೆಲ್ಲ ಖುಷ್, ಚಪ್ಪಾಳೆಗಳೂ ಬಂದ್ವಂತೆ. ಹೀಗೆ ಬೇಂದ್ರೆ ದೈನಂದಿನ ವಿಷಯಗಳನ್ನು ಹೇಳುತ್ತಲೇ ಭಕ್ಕಂತ ಮಹಾಭಾರತ, ರಾಮಾಯಣ, ತತ್ತ್ವ ವಿಚಾರಗಳಿಗೆ ಹಾರೋ ಪರಿ ಅನನ್ಯ-ಅಪ್ರತಿಮವಾಗಿತ್ತು.

ಕೊನೆಯದಾಗಿ, 'ಸಾಯೋದು ಸುಲಭ, ಬದುಕೋದು ಕಷ್ಟ' ಅಂತಿದ್ದ ಬೇಂದ್ರೆಯವರಿಗೆ 'ಹಂಗಾದರ ನೀವು ಸಾವಿಗೆ ಹೆದರೋದಿಲ್ಲ ಅಂತೀರಿ?' ಅಂದರೆ 'ಸಾವಿಗೆ ನಾನು ಹೆದರೋದಿಲ್ಲ; ಯಾಕಂದ್ರ, ಅದು ಬಂದಾಗ ನಾನು ಇರೋದಿಲ್ಲ. ಮತ್ತ... ನಾನು ಇರೋತನಕ ಅದು ಬರೋದಿಲ್ಲ' ಎಂದು ಕೈಕೊಡವುತ್ತ ನಗಿಸುತ್ತಿದ್ದರು. ಅಂತಹ ಬೇಂದ್ರೆಯವರು 1981ರ ಅಕ್ಟೋಬರ್ 26ರಂದು (ದೀಪಾವಳಿ) ನಮ್ಮನ್ನಗಲಿದರು. ಕತ್ತಲಾವರಿಸಿತು ನಿಜ. ಆದರೆ ಅವರಿತ್ತಿರುವ ಪದ್ಯ-ದೀವಿಗೆಗಳಿಂದಲೇ ನಮ್ಮ ಪ್ರತೀ ದೀಪಾವಳಿ.

ಹೆಣ್ಣಳತೆಗೋಲು: ಇದಿರು ನೋಟ

ಡಾ. ಎಚ್.ಎಸ್. ಅನುಪಮಾ

ವಿಮರ್ಶೆ



ಇದಿರು ನೋಟ
ಲೇ: ಸಬಿತಾ ಬನ್ನಾಡಿ
ಪ್ರ: ಬಹುರೂಪಿ
ಸಂ: 7019182729
ಪು: 164 ₹200

ಲೇಖಕಿ ಸಬಿತಾ ಬನ್ನಾಡಿ ಪ್ರಜಾವಾಣಿಯಲ್ಲಿ ಬರೆದ 38 ಅಂಕಣ ಬರಹಗಳ ಸಂಗ್ರಹ 'ಇದಿರು ನೋಟ'. ಹೆಸರೇ ಸೂಚಿಸುವಂತೆ ತಳಗೂ ಅಲ್ಲ, ಮೇಲೂ ಅಲ್ಲ, ಇದಿರೇ ನಿಂತು 'ಕಾಣುವ' ನೋಟವನ್ನು ಈ ಹೊತ್ತಗೆ ದಾಖಲಿಸಿದೆ. ಅತ್ಯಾಚಾರ, ಜಾತಿ ದೌರ್ಜನ್ಯ, ಸಂವಿಧಾನದ ಮೇಲೆ ದಾಳಿ, ಬೆಲೆಯೇರಿಕೆ, ಕೋಮುದ್ವೇಷ, ಮಾರುಕಟ್ಟೆಯ ಹಪಹಪಿ, ಹೆಣ್ಣುಬದುಕಿನ ಜಂಜಡಗಳು, ಯುದ್ಧ-ಹಿಂಸೆ, ಭಾಷೆ, ಶಿಕ್ಷಣ, ರಾಜಕಾರಣ, ಸಿನಿಮಾ, ನಾಟಕ, ಸಾಹಿತ್ಯವೇ ಮೊದಲಾದ ಹಲವು ವಿಷಯಗಳನ್ನು ಚರ್ಚಿಸುವ ಬರಹಗಳು ನಿನ್ನೆ-ಇಂದು-ನಾಳೆಗಳ ನಡುವೆ ಸುಲಲಿತವಾಗಿ ಚಲಿಸುತ್ತವೆ. ಸ್ಥಗಿತಗೊಂಡ ಮನಸ್ಸುಗಳು ಚಲನಶೀಲವಾಗಲಿ; ಕೇಡು ಕೊನೆಗೊಂಡು ನೆಮ್ಮದಿ ನೆಲೆಸಲಿ ಎನ್ನುವ ಪ್ರಧಾನ ಆಶಯದ ಬರಹಗಳು ಓದಿದವರನ್ನು ಚಿಂತನೆಗೆ ಹಚ್ಚುತ್ತವೆ.

'ಇದಿರು ನೋಟ'ದಲ್ಲಿ ಮುಖ್ಯವಾಗಿ ಗಮನ ಸೆಳೆಯುವುದು ಬರಹದಲ್ಲಿ ಬಳಸಿರುವ ಕಸುವಿನ ಭಾಷೆ, ವಸ್ತು ವೈವಿಧ್ಯ ಮತ್ತು ಮಂಡಿಸುವ ವಿಧಾನಗಳು.

ಕನ್ನಡ ಭಾಷೆಯ ಪದಸಂಪತ್ತು ಸಮೃದ್ಧವಾಗಿದ್ದರೂ ನಿತ್ಯ ಬಳಕೆಯಲ್ಲಿ ನಾವು ಅವವೇ ಸಾವಿರ ಪದಗಳನ್ನು ಬಳಸುತ್ತೇವೆ. ಹೊಗಳಿಕೆ, ತೆಗಳಿಕೆ, ಟೀಕೆ, ಮೋಹ, ಪ್ರೇಮ, ದುಃಖ, ಸಂಭ್ರಮಗಳೆಲ್ಲಕ್ಕೂ ಬಳಸಿದ ಪದಗಳನ್ನೇ ಬಳಸಿ ಜಡಗೊಂಡ ಇಂಗನ್ನಡಕ್ಕೆ 'ನೇರವಂತಿಕೆ, ಉಸಿರ್ತಾಣ, ನುಡಿಪಾತ, ತಿಳಿವಿನ ಬಿತ್ತು' ಮುಂತಾದ ಹೊಸಹೊಸ ಪದಗುಚ್ಛಗಳನ್ನು ಸಬಿತಾ ಕೊಟ್ಟಿದ್ದಾರೆ. ಕರ್ತೃ-ಕರ್ಮ-ಕ್ರಿಯಾಪದಗಳ ಹೊಸಜೋಡಣೆಯ ಮೂಲಕ ನವನವೀನ, ಸಣ್ಣಸಣ್ಣ ವಾಕ್ಯಗಳು ಮೈತಳೆದೆದ್ದು ಬಂದಿವೆ. ಓದುಗಿತ್ತಿ ಸಬಿತಾರ ಹಳಗನ್ನಡ, ನಡುಗನ್ನಡ ಸಾಹಿತ್ಯಿಕ ಪಠ್ಯಗಳ ಆಳಜ್ಞಾನ ಪ್ರತೀ ಬರಹದಲ್ಲೂ ಅರಿವಿಗೆ ಬರುತ್ತದೆ. ಮಹಾದೇವಿಯಕ್ಕ ಅಂತರ್ಗಾಮಿನಿಯಂತೆ ಹರಿದಿದ್ದಾಳೆ. ಪಂಪ, ರನ್ನ, ಕುಮಾರವ್ಯಾಸರಿಂದ ಇಲ್ಲಿಯವರೆಗಿನ ಕನ್ನಡ ಸಾಹಿತ್ಯ ಹಲವೆಡೆ ಉಲ್ಲೇಖಗೊಂಡಿದೆ. ಬರಹಗಳ ಶೀರ್ಷಿಕೆ ಕಾವ್ಯಾತ್ಮಕವಾಗಿದ್ದು ಮತ್ತೆಮತ್ತೆ ಕಾಣುವ ರೂಪಕಗಳು ಓದುವವರ ಕಲ್ಪನಾ ಲೋಕವನ್ನು ವಿಸ್ತರಿಸುತ್ತವೆ. ರೂಪಕದ ಭಾಷೆಯೇ ಪದಮಿತಿಯ ಅಂಕಣ ಬರಹದ ಆಳವನ್ನು ಹೆಚ್ಚಿಸಿದೆ.

ಸಾಹಿತ್ಯದಂತೆ ಸಿನಿಮಾ ವಿಷಯಗಳೂ ಬರಹದ ಒಳನೇಯ್ಗೆಯಲ್ಲಿ ಸೇರಿಕೊಂಡಿವೆ. ದೇಶಭಾಷೆಗಳ ಗಡಿಮೀರಿ ನೋಡುವ ಮನಸ್ಸುಗಳಲ್ಲಿ ನ್ಯಾಯಾನ್ಯಾಯ ಪ್ರಜ್ಞೆಯನ್ನು ಅರಳಿಸುವಂತಹ ಹಲವು ಜಾಗತಿಕ ಸಿನಿಮಾಗಳನ್ನು ಪರಿಚಯಿಸಲಾಗಿದೆ. ಟ್ವೆಲ್ವ್ ಆಂಗ್ರಿ ಮ್ಯಾನ್, ಕ್ಯಾಸ್ಟ್ ಅವೇ ಆನ್ ದ ಮೂನ್, ದ ಬಾಯ್ ವಿತ್ ದ ಸ್ಟ್ರೈಪಡ್ ಪೈಜಾಮಾ, ಹನಿಲ್ಯಾಂಡ್, ಡ್ರೀಮ್ಸ್, ಡಿ ಜ್ಯಾಂಗೋ, ನ್ಯೂ ಸಿಂಡ್ರೆಲಾ, ಜೈಭೀಮ್, ಶೇರ್ನಿ ಮುಂತಾದ ಸಿನಿಮಾಗಳ ಬಗೆಗೆ ಚರ್ಚಿಸುತ್ತಲೇ ತಮ್ಮ ವಿಷಯಮಂಡನೆಯ ಹರಹನ್ನು ಸಬಿತಾ ವಿಸ್ತರಿಸಿಕೊಂಡಿದ್ದಾರೆ. ಆದರೆ ಕನ್ನಡ ನಾಟಕ ಮತ್ತು ಸಿನಿಮಾಗಳು ಕಾಣದೇ ಇರುವುದು ಎದ್ದು ಕಾಣುವಂತಿದೆ. ಬರಿಗನ್ನಡಿಗರಿಗೆ ಜಾಗತಿಕ ಸಿನಿಮಾಗಳ ಉಲ್ಲೇಖ ಭಾರವಾದೀತೇ ಎನಿಸುತ್ತದೆ.

'ಹಮ್ಮಿನ ಸಿಂಹಾಸನದ ಪ್ರತಿನಿಧಿಗಳು ನಾವಲ್ಲ, ತಂಪು ನದಿತಟದ ಸಹಪಯಣಿಗರು ನಾವು' ಎನ್ನುವ ಸಬಿತಾರ ಬರಹದ ಶೈಲಿ ಮೇಜು ಕುಟ್ಟಿ ವಾದ ಗೆಲ್ಲುವ ಚರ್ಚಾಪಟುವಿನದಲ್ಲ. ಜತನದಿಂದ ಒಂದೊಂದೇ ಹೂವನ್ನೆತ್ತಿ ದಾರದಲ್ಲಿ ಕಟ್ಟುವ ಸಹನಶೀಲ ಹೂವಾಡಗಿತ್ತಿಯ ಮನಸ್ಸು ಅದು. ಸಂಯಮದ ವಿಶ್ಲೇಷಣೆ, ಒಳಗೇ ಹರಿಯುವ ವಿಡಂಬನೆಗಳ ಮೂಲಕ ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ದಾಖಲಿಸುವ ಅವರು, ವಚನಕಾರರು, ಮಾರ್ಕ್ಸ್, ಗಾಂಧಿ, ಅಂಬೇಡ್ಕರ್ ಚಿಂತನೆಗಳನ್ನು ಕರಗಿಸಿ ಮಂಡಿಸುತ್ತ ಪ್ರಜ್ಞಾ ಪರಿಧಿ ಹಿಗ್ಗಿಸುತ್ತಾರೆ. ಜೀವಪರ ಚಿಂತನೆಗಳೆಲ್ಲವನ್ನು ಅಪ್ಪಿಕೊಂಡ ಅವರ ಒಳಗೊಳ್ಳುವ ಮನಸ್ಸು ಸರ್ವಥಾ ಬಹುತ್ವವನ್ನು ಎತ್ತಿ ಹಿಡಿಯುತ್ತದೆ.

ಇದೇ ಸ್ತ್ರೀವಾದ. ಬಹುತ್ವ ಮತ್ತು ಒಳಗೊಳ್ಳುವಿಕೆ ಸ್ತ್ರೀವಾದದ ಪ್ರಧಾನ ಲಕ್ಷಣಗಳು. ಈ ಗುಣ ಪ್ರತಿ ಬರಹದಲ್ಲೂ ಬೆರಳಿಗೆ ತಾಗುವಂತಿದೆ. ಹೆಣ್ಣಿನ ಸಾಮಾಜಿಕ ಪ್ರಜ್ಞೆಯೆಂದರೆ ಹೀಗಿರುತ್ತದೆ ಎಂದು ತೋರಿಸುವ ಹೆಣ್ಣಳತೆಗೋಲಾಗಿ 'ಇದಿರು ನೋಟ'ವನ್ನು ರೂಪಿಸಿದೆ.

ಮೂಕ ಮಗುವಿನ ಬೇಕುಬೇಡಗಳ ಭಾಷೆಯನ್ನೂ ಅರಿಯಬಲ್ಲ ಸೂಕ್ಷ್ಮಜ್ಞತೆಯೇ ಹೆಣ್ಣು ಕಣ್ಣೋಟ. ಯುದ್ಧವನ್ನು, ಹಿಂಸೆಯನ್ನು ಹೆಣ್ಣು ಕಣ್ಣೋಟದಿಂದ ನೋಡಿರುವ ಸಬಿತಾ, 'ಸ್ನೇಹವೇ ಶೌರ್ಯ ಎನ್ನುವುದು ಹೆಣ್ಣುನಡೆಯ ದಾರಿ'ಯೆನ್ನುತ್ತಾರೆ. ತಾಯ್ತನವನ್ನು ಹಾಡಿ ಹೊಗಳುವ ಲೋಕ ಎಂದಾದರೂ ಯುದ್ಧ ಬೇಕೇ ಬೇಡವೇ ಎಂದು ಸೈನಿಕರನ್ನು ಹೆತ್ತ ತಾಯಂದಿರ ಬಳಿ ಕೇಳಿದೆಯೇ ಎಂದು ಪ್ರಶ್ನಿಸುತ್ತಾರೆ. ಅಕಸ್ಮಾತ್ ಕುಂತಿ ಸಾಮಾಜಿಕ ಮಾಧ್ಯಮದಲ್ಲಿ ಯುದ್ಧ ಬೇಡವೆಂಬ ಪೋಸ್ಟ್ ಹಾಕಿದ್ದರೆ ಬರುವ ಕಮೆಂಟಿಗೆ ಶಬ್ದಕೋಶಗಳೇ ನಾಚಿ ಮುಖ ಮುಚ್ಚಿಕೊಳ್ಳಬಹುದು ಎಂದು ವ್ಯಂಗ್ಯವಾಡುತ್ತಾರೆ. 'ಹೆಣ್ಣನ್ನು ಆಕ್ರಮಿಸಿಕೊಳ್ಳುವುದರ ದುರಂತ ಪರಿಣಾಮವೇ ರಾಮಾಯಣ: ನೆಲವನ್ನು ಆಕ್ರಮಿಸಿಕೊಳ್ಳುವುದರ ದುರಂತ ಪರಿಣಾಮವೇ ಮಹಾಭಾರತ' ಎಂದು ಮಹಾಕಾವ್ಯಕಾರಣವನ್ನು ಚುಟುಕಾಗಿ, ಹರಿತವಾಗಿ ಹೇಳಿಬಿಡುತ್ತಾರೆ.

'ಆಕ್ರಮಣವೇ ಶೌರ್ಯ ಎಂದು ಭಾವಿಸಿರುವ ಪುಟಿನನಂಥ ಪುಕ್ಕಲೆದೆಯವರಿಗೆಲ್ಲ ಹೆಣ್ಣುಮಾದರಿಯ ಶಿಕ್ಷಣ ದೊರೆಯಲಿ'; 'ಸರ್ವ ಅಧಿಕಾರಕ್ಕೂ ಇದಿರುಂಟು'; 'ಮನೋಮಂದಿರದೊಳಗೆ ಪ್ರೀತಿಮೂರ್ತಿಯ ಕಟೆಯದೇ ಹೊರಗೆ ಕಟ್ಟಿದ ಮಂದಿರ, ಮಹಲುಗಳಿಂದ ಯಾರಿಗೆ ಸುಖ?'; 'ಬೇರೆ ಶತ್ರುಗಳೇನು? ನಮ್ಮ ಜೀವನಶೈಲಿಯೇ ಶತ್ರು'; 'ಹೆಣ್ಣುಮಕ್ಕಳು ಕೊಡುವ ಶಿಕ್ಷೆ ದೂರ ತಳ್ಳುವುದಲ್ಲ, ಅಪ್ಪಿ ಸಂತೈಸುವುದು'; 'ಹೆಣ್ಣುಮಕ್ಕಳು ಬರೀ ಪ್ರಶ್ನೆ ಕೇಳಲ್ಲ, ಅವರು ಉತ್ತರದಿಂದ ಆರಂಭಿಸುತ್ತಾರೆ' – ಮುಂತಾದ ಸಾಲುಗಳು ಹೆಣ್ಣು ಕಣ್ಣೋಟವನ್ನು ಸಮರ್ಥವಾಗಿ ಪ್ರತಿನಿಧಿಸುತ್ತವೆ.

***

ಇವತ್ತಿಗೂ ಸ್ವಾತಂತ್ರ್ಯ ಮತ್ತು ಸಮಾನತೆ ಬೇಕೆಂದು ಕೇಳುವ ಸ್ತ್ರೀವಾದ ಹಲವರಿಗೆ ಇಷ್ಟವಾಗುವುದಿಲ್ಲ. 'ನೀವು ಸ್ತ್ರೀವಾದಿನಾ? ಆದ್ರೂ ಮದುವೆ ಆಗಿದೀರಾ? ಗಂಡನ ಜೊತೆಗೇ ಇದೀರಾ? ಇನ್ನೂ ಡೈವೋರ್ಸ್ ಆಗಿಲ್ವಾ? ನೀವೇ ಅಡಿಗೆ ಮಾಡ್ತೀರಾ?' ಮುಂತಾದ ಕುಹಕದ ಪ್ರಶ್ನೆಗಳು ಸ್ತ್ರೀವಾದಿಗಳನ್ನು ಎದುರಾಗುತ್ತವೆ. ತಪ್ಪು ಅರ್ಥೈಸುವಿಕೆ, ಹೀಗಳೆಯುವಿಕೆ, ಪುರುಷರ ಒಡನಾಟ ಕಳೆದುಕೊಳ್ಳುವ ಭಯದ ಕಾರಣದಿಂದ ಎಷ್ಟೋ ಪ್ರಭಾವಿ ಮಹಿಳೆಯರೂ ತಾವು ಸ್ತ್ರೀವಾದಿಯಲ್ಲವೆಂದು ಘೋಷಿಸಿಕೊಳ್ಳುತ್ತಾರೆ!


ಆತ್ಮಗೌರವ ಕುಂದಿದ ಹೆಣ್ಣು, ಉತ್ಪ್ರೇಕ್ಷಿತ ಆತ್ಮಗೌರವದ ಗಂಡು ಇಬ್ಬರೂ ಅಸುಖಿಗಳೇ ಆಗಿದ್ದಾರೆ. ಇದನ್ನು ಗುರುತಿಸುತ್ತಾ ಶೋಷಕರನ್ನೂ, ಶೋಷಿತರನ್ನೂ ಒಟ್ಟಿಗೇ ಮಾನವೀಕರಣಗೊಳಿಸುವ ಸವಾಲು ಹೆಣ್ಣುಗಳ ಮೇಲಿದೆ. ಇದಕ್ಕಾಗಿ ಅಕ್ಕ ಮನಿಶಾ ಗುಪ್ತೆ ಹೇಳುವಂತೆ ಮಹಿಳೆಯರಿಗೆ ದಿನಕ್ಕೆ 24 ಗಂಟೆ ಸಾಲುವುದಿಲ್ಲ. 48, 72 ಗಂಟೆಗಳು ಬೇಕಾಗುತ್ತವೆ. ಏನು ಮಾಡುವುದು? ಕೈಗೆ ಕೈ ಜೋಡಿಸುವುದು.

ಅದಕ್ಕಾಗಿ 'ಪೌರುಷದ ಮಾದರಿಯೆಂಬ ವಿನಾಶದ ಜಾರುಬಂಡಿ ಏರಿ ಕುಳಿತ ಎಲ್ಲ ಸ್ತ್ರೀಪುರುಷರು ಬಚಾವಾಗಬೇಕೆಂದರೆ ಮಹಾ ಇಳೆಯ ಮಾದರಿಗೆ ಮರಳಬೇಕು' ಎನ್ನುವ ಸಬಿತಾರಂತಹ ಆರೋಗ್ಯಕರ ಹೆಣ್ಣುಮನಸ್ಸುಗಳು ಜೀವರನ್ನೆಲ್ಲ ಬೆಸೆಯುವ ಆಶಯದೊಂದಿಗೆ ಬರೆಯುತ್ತಿರುವುದು; ಕೆಲವು ಪುರುಷ ಸಂಗಾತಿಗಳೂ ಇದರಲ್ಲಿ ಕೈಜೋಡಿಸಿರುವುದು ನೆಮ್ಮದಿಯ ಸಂಗತಿ.

ಮೀಸಲಾತಿಯ ತಲ್ಲಣಗಳಿಗೆ ಧ್ವನಿ

ಪ್ರೊ.ಜಿ.ಪರಮೇಶ್ವರಪ್ಪ

ಒಳನೋಟ



ಮೀಸಲಾತಿ ತಲ್ಲಣ
ಲೇ: ಪ್ರೊ. ಎಚ್. ಲಿಂಗಪ್ಪ
ಪ್ರ: ರಶ್ಮಿ ಪ್ರಕಾಶನ, ಚಿತ್ರದುರ್ಗ
ಸಂ: 9945998099
ಪು: 162 ₹120

ಪರಿಸರದ ತಲ್ಲಣಗಳು ಸಾಮಾನ್ಯರಿಗೆ ಅರ್ಥವಾಗುವುದಿಲ್ಲ. ಅದಕ್ಕೆ ವಿಶೇಷವಾದ ಕಾಣ್ಕೆ ಬೇಕು. ಹಾಗಾಗಿಯೇ ಹತ್ತನೇ ಶತಮಾನದ ಜೈನ ಕವಿಗಳು, ನಂತರ ಬಂದ ವಚನಕಾರರು ಹಾಗೂ ಕುವೆಂಪು ಅಂಥವರು ತಾವು ಬದುಕಿದ್ದ ಕಾಲದ ಅಸಮಾನತೆಯ ತಲ್ಲಣಗಳಿಂದ ಬೇಸತ್ತು ರೂಢಿಮೂಲವಾದ ಮೌಢ್ಯಗಳನ್ನು ಧಿಕ್ಕರಿಸಿ ಪರ್ಯಾಯ ಸಂಸ್ಕೃತಿಯನ್ನು ಕಟ್ಟಿ ಜನಸಾಮಾನ್ಯರಿಗೂ ಮುಟ್ಟಿಸಿದರು. ಅದೇ ರೀತಿಯ ತಲ್ಲಣಕ್ಕೆ ಒಳಗಾದ ಪ್ರೊ.ಎಚ್.ಲಿಂಗಪ್ಪ ಅವರು ಬರೆದ ಕೃತಿಯೇ 'ಮೀಸಲಾತಿಯ ತಲ್ಲಣಗಳು'. ಸ್ವಾತಂತ್ರ್ಯ ಬಂದು ಏಳೂವರೆ ದಶಕಗಳು ಸಂದಿದ್ದರೂ ದಮನಿತ ವರ್ಗಗಳಿಗೆ ಮೀಸಲಾತಿ ಸೌಲಭ್ಯ ಸಂಪೂರ್ಣವಾಗಿ ಸಿಕ್ಕಿಲ್ಲ ಎನ್ನುವ ತಲ್ಲಣದಿಂದ ಈ ಕೃತಿ ಬರೆದಿದ್ದಾರೆ.

ಲಿಂಗಪ್ಪ ಅವರ ಬಹುತೇಕ ಬರಹಗಳಲ್ಲಿ ಇಂತಹದ್ದೊಂದು ತಲ್ಲಣವನ್ನು ಕಾಣಬಹುದು. ದೇವರಾಜ ಅರಸು ಅವರಲ್ಲೂ ಇಂತಹದ್ದೊಂದು ತಲ್ಲಣವಿತ್ತು. ಅದೇ ಕಾರಣಕ್ಕೆ ಇರಬೇಕು, ಈ ಕೃತಿಯನ್ನು ಲೇಖಕರು ಅರಸು ಅವರಿಗೆ ಸಮರ್ಪಿಸಿದ್ದಾರೆ. ಲಿಂಗಪ್ಪ ಅವರು ಅನುಭವಿಸಿದ ನೋವಿನಗಾಥೆ ಇಲ್ಲಿ ಹರಳುಗಟ್ಟಿದೆ. ಸಾವಿರಾರು ವರ್ಷಗಳಿಂದ ಸಮಾಜದ ಮುಗ್ಧರಲ್ಲಿ ಜಾತಿ, ಮತ, ಧರ್ಮದ ವಿಷಬೀಜ ಬಿತ್ತಿ, ಅಸಮಾನತೆಯ ಕಂದರ ನಿರ್ಮಿಸಿ, ಅಸ್ಪೃಶ್ಯತೆಯ ಪಿಡುಗಿಗೆ ಕಾರಣವಾದ ಪುರೋಹಿತಶಾಹಿ ವ್ಯವಸ್ಥೆಯನ್ನು ಅವರು ಹಿಗ್ಗಾಮುಗ್ಗಾ ತರಾಟೆಗೆ ತೆಗೆದುಕೊಂಡಿದ್ದಾರೆ. ಯಾವ ರಾಜಕೀಯ ಪಕ್ಷವೂ ದಮನಿತರ ಪರವಾಗಿಲ್ಲ ಎಂದು ಖಂಡತುಂಡವಾಗಿ ಹೇಳುತ್ತಾರೆ. ಮೀಸಲಾತಿಯನ್ನು ಮುಂದುವರಿಸಿರುವುದು ದಲಿತರ ಓಟಿಗಾಗಿಯೇ ಹೊರತು ಅಂತಃಕರಣದಿಂದಲ್ಲ ಎಂಬ ಕಟುವಾಸ್ತವವನ್ನೂ ತೆರೆದಿಟ್ಟಿದ್ದಾರೆ.


ಡಾ. ಬಿ.ಆರ್. ಅಂಬೇಡ್ಕರ್ ಅವರು ಹುಟ್ಟಿದ ನಾಡು ಮಹಾರಾಷ್ಟ್ರ, ಮಹಾತ್ಮ ಗಾಂಧಿ ಜನಿಸಿದ ನಾಡು ಗುಜರಾತ್, ಬಸವಣ್ಣ-ಅರಸು ಜನಿಸಿದ ನಾಡು ಕರ್ನಾಟಕ – ಈ ಮೂರೂ ರಾಜ್ಯಗಳನ್ನು ಸಾಕ್ಷಿಯಾಗಿ ಇಟ್ಟುಕೊಂಡು ದಮನಿತರ ಬದುಕನ್ನು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಪರಿಪೂರ್ಣ ಮೀಸಲಾತಿ ಇನ್ನೂ ಜಾರಿಗೆ ಬಂದಿಲ್ಲ. ಹಾಗೆಯೇ ಸಂವಿಧಾನದ ಆಶಯಗಳೂ ಈಡೇರಿಲ್ಲ ಎಂಬುದನ್ನು ದಾಖಲಿಸಿದ್ದಾರೆ. ಮನುಸ್ಮೃತಿಯ ಆಶಯಗಳೇ ಎಲ್ಲೆಡೆ ಬಿಂಬಿತವಾಗುತ್ತಿವೆ ಎಂಬ ಸತ್ಯಕ್ಕೆ ಓದುಗರನ್ನು ಮುಖಾಮುಖಿ ಮಾಡಿದ್ದಾರೆ.

ಬ್ರಾಹ್ಮಣ್ಯದ ಮನಃಸ್ಥಿತಿ ದಲಿತರ ಮೇಲೆ ಹೇಗೆ ದಬ್ಬಾಳಿಕೆ ನಡೆಸಿದೆ ಎಂಬುದನ್ನು ಎಳೆ ಎಳೆಯಾಗಿ ಬಿಡಿಸಿಟ್ಟಿದ್ದಾರೆ ಲಿಂಗಪ್ಪ. ದಲಿತರ ಮೇಲೆ ನಡೆಯುವ ದಬ್ಬಾಳಿಕೆ, ಕೊಲೆ-ಸುಲಿಗೆ, ಅತ್ಯಾಚಾರಗಳ ದೊಡ್ಡ ಪಟ್ಟಿಯನ್ನೇ ಪ್ರಕಟಿಸಿದ್ದಾರೆ. ದೌರ್ಜನ್ಯ ತಡೆಗೆ ಏನೆಲ್ಲ ಕಾನೂನುಗಳು ಇದ್ದರೂ ಅವುಗಳು ಕಡಿಮೆಯಾಗುವ ಬದಲು ಹೆಚ್ಚುತ್ತಿರುವುದನ್ನು ಕಂಡು ಲೇಖಕರು ಮಮ್ಮಲ ಮರುಗಿದ್ದಾರೆ.

ಎಡ-ಬಲ ಭೇದವಿಲ್ಲದೆ ಮನಸ್ಸು ಲೇಖಕರದು. ಶೋಷಣೆಗೆ ಒಳಪಟ್ಟ ಹಿಂದುಳಿದ ವರ್ಗಗಳ ಎಲ್ಲರಿಗೂ ಮೀಸಲಾತಿ ಸಿಗಲಿ ಎನ್ನುವುದು ಅವರ ಅಪೇಕ್ಷೆ. ಈ ಕೃತಿಯಲ್ಲಿರುವ ವಿಷಯಗಳು ಹೆಚ್ಚು, ಹೆಚ್ಚು ಚರ್ಚೆಗೆ ಒಳಪಟ್ಟಷ್ಟೂ ದಲಿತ ಚಿಂತನೆಯಲ್ಲಿ ಹೊಸ ಹೂರಣ ಸೇರುವುದರಲ್ಲಿ ಸಂಶಯವಿಲ್ಲ.

ಮೊದಲ ಓದು

ಹಳ್ಳಿಯ ನೆನಪಿನಲ್ಲಿ ಮೂಡಿದ ಕನ್ನೆ



ಪುರಾಣ ಕನ್ನೆ
ನೀನು–ನಿಜ: ಕತೆ ಕನಸು ಕಲ್ಪನೆ ವಾಸ್ತವ ಪರಿಸರ
ಲೇ: ಕಾ ತ ಚಿಕ್ಕಣ್ಣ
ಪ್ರ: ರಶ್ಮಿ ಪುಸ್ತಕ, ಬೆಂಗಳೂರು
ಸಂ: 8073480682
ಪು: 184 ₹200

ಕಾಂಕ್ರಿಟ್ ಕಾಡಿನಲ್ಲಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಲ್ಲಿ ಕಾರ್ಯನಿರ್ವಹಿಸಿ ಮತ್ತೆ ಹಳ್ಳಿಯನ್ನು ನೆನಪಿಸಿಕೊಂಡು ಹೊರಟ ಕಾ.ತ.ಚಿಕ್ಕಣ್ಣ ಅವರ ಬರಹದಲ್ಲಿ ಮೂಡಿದ್ದು ಪುರಾಣ ಕನ್ನೆ.

'ಮುಂಜಾವು', 'ದಂಡೆ', 'ಮಳೆಬಯಲು' ಹೀಗೆ ಸಾಲು ಸಾಲು ಕೃತಿಗಳ ಕಪಾಟಿಗೆ ಮತ್ತೊಂದು ಸೇರ್ಪಡೆ ಇದು. 'ನೀನು–ನಿಜ: ಕತೆ ಕನಸು ಕಲ್ಪನೆ ವಾಸ್ತವ ಪರಿಸರ' ಎನ್ನುವ ಕೃತಿಯ ಶೀರ್ಷಿಕೆಯ ಅಡಿಬರಹ, ರಕ್ಷಾ ಪುಟದಲ್ಲಿರುವ ಕಲೆ ಹಲವು ಮಜಲುಗಳನ್ನು ತೆರೆದಿಡುತ್ತದೆ. 'ಜಾನುವಾರುಗಳೇ ನಮ್ಮ ಚಟುವಟಿಕೆಯ ಒಡನಾಡಿಗಳು. ಅಜ್ಜಿ, ಅವ್ವ, ದ್ಯಾವೀರಿ, ಕರಿಕಾಳಮ್ಮ...ಕತೆ, ಪುರಾಣ, ಒಡಪು ಪದಗಳನ್ನು ಹೇಳಿ ಎದೆ ತುಂಬುತ್ತಿದ್ದ ನಮ್ಮ ವಿಸ್ಮಯರೂಪಿಗಳು. ಈ ಬಗೆಯ ಆಟ, ಕೂಟ, ಚಟ, ಚಮತ್ಕಾರಗಳಿಗೆ ನನ್ನೂರು ಕಾಳಮ್ಮ ಕೊಪ್ಪಲು ಮುಕ್ತವಾದ ಅಂಗಳ' ಎನ್ನುತ್ತಾರೆ ಚಿಕ್ಕಣ್ಣ. ಇದುವೇ ಪುರಾಣ ಕನ್ನೆ ಬರವಣಿಗೆಗೂ ಪ್ರೇರಣೆ ಎಂದಿದ್ದಾರೆ.

ಇಲ್ಲಿ ಚಿಕ್ಕಣ್ಣ ಅವರ ಊರಿನ ನೆಲ–ಪರಿಸರದ ಪುರಾಣ, ಮಹಿಳೆಯರೇ ದೈವಗಳಾಗಿ ಆರಾಧನೆಗೊಳ್ಳುತ್ತಿರುವ ಕತೆಗಳು, ಜನಪದ ಕಾವ್ಯ, ಪುರಾಣಗಳ ಓದಿನ ಪ್ರಭಾವ ಸಾಂದ್ರಗೊಂಡಿದೆ. ಈ ಕಾರಣದಿಂದಾಗಿ 'ಒಂದು ರೀತಿಯಿಂದ, ಪುರಾಣ ಕನ್ನೆ ಚಿಕ್ಕಣ್ಣನವರ 'ನಿಶಬುದದೆಡೆಗೆ' ಕೃತಿಯ ಮುಂದುವರಿಕೆಯ ಹಾಗೆ ಕಾಣುತ್ತದೆ' ಎಂದು ಮುನ್ನುಡಿಯಲ್ಲಿ ಪುರುಷೋತ್ತಮ ಬಿಳಿಮಲೆಯವರು ಉಲ್ಲೇಖಿಸಿದ್ದಾರೆ. 'ಎರಡೂ ಕೃತಿಗಳ ಕೇಂದ್ರದಲ್ಲಿ ವೈವಿಧ್ಯಮಯ ಪುರಾಣ, ಐತಿಹ್ಯ, ನಂಬುಗೆ, ಕತೆ ಮತ್ತು ಆಚರಣೆಗಳನ್ನು ಒಡಲಲ್ಲಿ ಧರಿಸಿಕೊಂಡ ಕಾಳಮ್ಮನ ಕೊಪ್ಪಲು ಹಾಗೂ ಕಟ್ಟೆ ಕೊಪ್ಪಲುಗಳಿವೆ' ಎಂದಿದ್ದಾರೆ ಬಿಳಿಮಲೆ.

ಬಳಸಿದ ಗ್ರಾಮ್ಯ ಭಾಷೆ ಹಾಗೂ ಪದಗಳ ಕಾರಣದಿಂದ ಕಾದಂಬರಿಯ ಓದು ನಿಧಾನವಾಗುತ್ತದೆ.

'ದೆಂಗ'ದಲ್ಲಿ ಅಡಗಿರುವ ಸೂಕ್ಷ್ಮಗಳು



ದೆಂಗ(ತುಳು ಕಾದಾಂಬರಿ)
ಲೇ: ಅಕ್ಷಯ ಆರ್. ಶೆಟ್ಟಿ
ಪ್ರ: ಬಹುರೂಪಿ
ಸಂ: 7019182729
ಪು: 256 ₹300

ಕರಾವಳಿ ಭಾಗದಲ್ಲಿನ ಅಡುಗೆ ಮನೆಯಲ್ಲಿ ಅತ್ತ ನೆಲದಲ್ಲೂ ಅಲ್ಲ, ಇತ್ತ ಅಟ್ಟದಲ್ಲೂ ಅಲ್ಲ, ಕೈಗೆ ಎಟಕುವಷ್ಟು ಎತ್ತರದಲ್ಲಿ, ಸಾಮಾನ್ಯವಾಗಿ ತಲೆಯ ಮಟ್ಟಕ್ಕೆ ಮರದ ಹಲಗೆಯೊಂದನ್ನು ನೇತಾಡಿಸಿ ಅಥವಾ ಗೋಡೆಗೆ ಮರದ ರೀಪುಗಳನ್ನು ಹೊಡೆದು ಇಡುವುದಕ್ಕೆ 'ದೆಂಗ' ಎನ್ನುತ್ತಾರೆ. ಉರಿಸಿದ ಒಲೆಯ ಕಾವು ತಾಗಲೆಂದೇ ಅದನ್ನು ಒಲೆಯ ಮೇಲೆಯೇ ಇಡುತ್ತಾರೆ. ಸಾಮಾನ್ಯ ಭಾಷೆಯಲ್ಲಿ ಅಥವಾ ಆಧುನಿಕ ಯುಗದಲ್ಲಿ ಇದಕ್ಕೆ 'ರ್‍ಯಾಕ್' ಎನ್ನಬಹುದು.


ಹೀಗೆ ಇಡುವುದಕ್ಕೂ ಒಂದು ವೈಜ್ಞಾನಿಕ ಕಾರಣವಿತ್ತು. ಒಲೆಯ ಕಾವು ಈ ದೆಂಗದ ಮೇಲೆ ಇಡುತ್ತಿದ್ದ ದಿನಬಳಕೆ ಅಡುಗೆಯ ವಸ್ತುಗಳಿಗೆ ಬಾಳಿಕೆ ನೀಡುತ್ತಿದ್ದವು. 'ದೆಂಗ' ಎಂಬ ಪರಿಕಲ್ಪನೆಯಲ್ಲಿ, ಪಾತ್ರಗಳಿಗೆ ಜೀವ ತುಂಬುತ್ತಾ ಇಡೀ ಕೃತಿಯ ಜೀವಾಳವನ್ನು ಕಟ್ಟಿಕೊಟ್ಟಿದ್ದಾರೆ ಲೇಖಕಿ ಅಕ್ಷಯ.

ಸುದೀರ್ಘವಾದ ಮುನ್ನುಡಿ ಬರೆಯುತ್ತಾ ಈ ಜೀವಾಳವನ್ನು ತೆರೆದಿಡುವ ವಿವೇಕ ರೈ ಅವರು, 'ದೆಂಗ ಎಂದರೆ ಅಡಗಿಸಿಡುವುದು ಎನ್ನುವ ಅರ್ಥವೂ ಇದೆ. ದೆಂಗದಲ್ಲಿ ಇಟ್ಟ ವಸ್ತುಗಳು ಮಕ್ಕಳ ಕೈಗೆ ಸಿಗುವುದಿಲ್ಲ. ಅದನ್ನು ತೆಗೆದುಕೊಡಲು ಹಿರಿಯರೇ ಬರಬೇಕು. ನಮ್ಮ ಮನಸ್ಸು, ಮಿದುಳು ಎನ್ನುವುದೂ ಒಂದು ದೆಂಗವೇ. ಅದರಲ್ಲಿ ಏನಿದೆ ಎನ್ನುವುದು ನಮಗೆ ಗೊತ್ತಿಲ್ಲ. ಇದರೊಳಗೆ ನಮಗೆ ಅರಿವಿಲ್ಲದಂತೇ ಕೆಲವು ವಿಷಯಗಳು ಸೇರಿಕೊಳ್ಳುತ್ತವೆ. ಕೆಲವು ವಿಷಯಗಳನ್ನು ಹೊರಹಾಕಬೇಕು ಎಂದರೂ ಸಾಧ್ಯವಾಗುವುದಿಲ್ಲ. ಹೀಗಿದ್ದಾಗ ಏನು ಮಾಡುತ್ತೇವೆ ಎಂದರೆ, ಹೊಸ ವಿಷಯಗಳನ್ನು ಪೇರಿಸಿ, ಹಳೆಯ ವಿಚಾರಗಳನ್ನು ಮರೆಮಾಚುವಂತೆ ಮಾಡುತ್ತೇವೆ. ಇದೇ ರೀತಿಯ ಕಾದಂಬರಿಯನ್ನು ಅಕ್ಷಯ ಅವರು ತುಳುವಿನಲ್ಲಿ ಕೊಟ್ಟಿದ್ದಾರೆ' ಎನ್ನುತ್ತಾರೆ.

ಪ್ರಸ್ತುತ ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ, 'ನನ್ನ ಹಾದಿ', 'ಬದುಕು ಭಾವದ ತೆನೆ'... ಹೀಗೆ ಹಲವು ಕವನ ಸಂಕಲನಗಳನ್ನು ಬರೆದಿರುವ ಅಕ್ಷಯ ಅವರ ಮೊದಲ ತುಳು ಕಾದಂಬರಿ ಇದು. ಉಡುಪಿ ತುಳುಕೂಟದ ಪಣಿಯಾಡಿ ಪ್ರಶಸ್ತಿಯ ಗರಿಯೂ ಈ ಕೃತಿಗಿದೆ. ತುಳುನಾಡಿನ ಬದುಕು, ದೈವಾರಾಧನೆ, ಜಾನಪದ ಹಿನ್ನೆಲೆ, ಕೃಷಿ, ಪರಿಸರ ಹೀಗೆ ಹಲವು ವಿಷಯಗಳು ಬೀರಿದ ಪ್ರಭಾವವೇ ಈ ಕೃತಿಯ ವಸ್ತುವಿನ ಆಯ್ಕೆಗೆ ಕಾರಣ ಎಂಬುವುದು ಲೇಖಕಿಯ ಅಂಬೋಣ.

ತುಳುನಾಡಿನ ಸಂಸ್ಕೃತಿ, ಆಚರಣೆಗಳನ್ನು ಒಡಲಲ್ಲಿ ಇರಿಸಿ, ಆಳದಲ್ಲಿ ಹಲವು ಸೂಕ್ಷ್ಮಗಳನ್ನು ಕೃತಿ ಕಟ್ಟಿಕೊಟ್ಟಿದೆ. ಕನ್ನಡ ಲಿಪಿಯಲ್ಲಿ ತುಳುವನ್ನು ಸುದೀರ್ಘವಾಗಿ ಓದುವುದು ಕೊಂಚ ತ್ರಾಸದಾಯಕ. ಹೀಗಿದ್ದರೂ, ಭಾಷೆಯ ಸೆಳೆತ ಇದ್ದವರಿಗೆ ಇದು ಅಡ್ಡಿಯಾಗಲಾರದು.

ಅಲೆಮಾರಿ ಗ್ರಹಿಸಿದ ಜಪಾನ್ ಬದುಕು



ಅರಿಗಟೊ ಗೊಜಾಯಿಮಸ್
ಲೇ: ನಾಗತಿಹಳ್ಳಿ ಚಂದ್ರಶೇಖರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ ಬೆಂಗಳೂರು
ಸಂ: 9845878899
ಪು: 56 ₹60

ಶೀರ್ಷಿಕೆಯ ಮೂಲಕವೇ ಜಪಾನ್‌ಗೊಂದು ಕೃತಜ್ಞತೆಯ ನಮಸ್ಕಾರ ಹೇಳುತ್ತಲೇ ಜಪಾನ್ ಅನುಭವ ಕಥನಗಳನ್ನು ದಾಖಲಿಸಿದ್ದಾರೆ ನಾಗತಿಹಳ್ಳಿ ಚಂದ್ರಶೇಖರ. ದೇಶ ಸುತ್ತಲು ಲಾರಿ ಡ್ರೈವರ್ ಆಗುತ್ತೇನೆ ಎಂದು ಹೇಳಿದ್ದ ಕನವರಿಕೆಯಿಂದ ಹಿಡಿದು ವಿಮಾನ, ಜಪಾನ್‌ನ ಮೆಟ್ರೊ ರೈಲು ಹತ್ತುವವರೆಗಿನ ಸಣ್ಣ ಸಣ್ಣ ಮೆಟ್ಟಿಲುಗಳನ್ನೂ ನೆನಪಿಸಿಕೊಂಡಿದ್ದಾರೆ. ಜಪಾನ್‌ಗೆ ಹೋಗಬೇಕಾದರೆ ಖರ್ಚಿಗೆ ತಕ್ಕಷ್ಟು ಇರಲಿ ಎಂದು ಉರು ಹೊಡೆದುಕೊಂಡ ಜಪಾನಿ ಪದಗಳ ಪಟ್ಟಿಯನ್ನು ಮಾಡುತ್ತಾ ರಸಭರಿತ ವಿವರಣೆಯನ್ನು ನೀಡುತ್ತಾರೆ ಲೇಖಕರು. ಅಣು ಬಾಂಬ್ ದಾಳಿಯ ಕುರುಹು ಉಳಿಯದಂತೆ ಹಸಿರು ಹೊದ್ದು, ಕಟ್ಟಡಗಳು ಎದ್ದು ಬೆಳೆದ ಹಿರೋಶಿಮಾ ಮತ್ತು ನಾಗಾಸಾಕಿ ನಗರಗಳ ಕಥೆಯನ್ನು ನಿರೂಪಿಸುತ್ತಾ, ಪತ್ರಿಕೆಗಳಲ್ಲೋ, ಮಾಧ್ಯಮಗಳಲ್ಲೋ ಕೇಳಿದ ಉತ್ಪ್ರೇಕ್ಷಿತ ವಿವರಗಳಿಗಿಂತ ಕಣ್ಣಾರೆ ಕಂಡ ಅನುಭವ ವೇದ್ಯ ದರ್ಶನವೇ ಬೇರೆ ಎಂದು ಅಲೆಮಾರಿತನದ ಅಗತ್ಯವನ್ನೂ ಹೇಳಿದ್ದಾರೆ.

ಒಂದು, ಎರಡು ಪುಟಗಳ ಪುಟ್ಟ ಪುಟ್ಟ ಬರಹಗಳು ಪುಸ್ತಕವನ್ನು ಒಂದೇ ಗುಕ್ಕಿನಲ್ಲಿ ಓದಿಸಿಕೊಂಡು ಹೋಗುತ್ತವೆ. ಬೌದ್ಧ ಮಂದಿರದಲ್ಲಿ ಸಿಕ್ಕ ಕೊಳಲ ಗುರು, ಕೊಳಕ ಚಾಲಕ ಟಿಮ್ಮಾ, ಸಾರಿಗೆ ವ್ಯವಸ್ಥೆ, ಜಪಾನಿಯರ ಪ್ರಾಮಾಣಿಕತೆ ಮತ್ತು ಭಾರತೀಯರ ಪ್ರಾಮಾಣಿಕತೆಯ ತುಲನೆ ಒಂದು ಕ್ಷಣ ನಮ್ಮನ್ನೇ ಅವಲೋಕಿಸಿಕೊಳ್ಳುವಂತೆ ಮಾಡುತ್ತದೆ.

ತುಂಬಾ ವಿವರವಾಗಿರುವುದು ರೈತರ ಮನೆಯಲ್ಲಿ ಲೇಖಕರ ವಾಸ. ಇಂಗ್ಲಿಷ್ ಬಾರದ ಅಲ್ಲಿನ ಜನರ ಜೊತೆ ಲೇಖಕರು ಸಂವಾದ ನಡೆಸಿ ಅದನ್ನು ಅರ್ಥಮಾಡಿಕೊಂಡ ಪರಿ ಅಲ್ಲಲ್ಲಿ ನಗು ತರಿಸುತ್ತದೆ. ಆದರೆ, ಕೃಷಿ ಯಾಂತ್ರಿಕತೆಯ ವಿವರಗಳು ಮತ್ತು ಸಣ್ಣ ರೈತರೂ ಅದನ್ನು ಸಮರ್ಪಕವಾಗಿ ಬಳಸುವ ಪರಿ, ಸಾವಯವ ಪದ್ಧತಿ ಅನುಸರಿಸುವುದು ಇತ್ಯಾದಿ ಬೆರಗು ಮೂಡಿಸುತ್ತವೆ.

ಜಗತ್ತಿನ ಸಿನಿಪ್ರಿಯರ ಕಣ್ಮಣಿಗಳಲ್ಲಿ ಒಬ್ಬನಾದ ಅಕಿರ ಕುರಸೊವಾನಿಗೊಂದು ಗೌರವ ಸಲ್ಲಿಸಿದ್ದಾರೆ ನಾಗತಿಹಳ್ಳಿ. 'ಟೋಕಿಯೊ ಟ್ರಯಲ್'ನೊಂದಿಗೆ ಕೃತಿ ಅಂತ್ಯವಾಗುತ್ತದೆ.



ಅಬೂಬಕ್ಕರ್ ದಂಪತಿ ಬೆಳೆದ ಗಂಧಸಾಲೆ (ಹಸಿರಾಗಿರುವುದು), ಕಲಾಬಾತ್ (ಗಾಢ ಕಂದು ಕಪ್ಪು ಬಣ್ಣದಲ್ಲಿರುವುದು)

ಭತ್ತದ ಮೇಲೆ ಬತ್ತದ ಪ್ರೀತಿ

ಶರತ್ ಹೆಗ್ಡೆ

ಹಸಿರು ಕ್ರಾಂತಿಗೂ ಮುನ್ನ ದೇಶದಲ್ಲಿ ಅಸಂಖ್ಯ ಭತ್ತದ ತಳಿಗಳಿದ್ದವು. ಈಗ ಕೆಲವೇ ನೂರು ತಳಿಗಳು ಉಳಿದಿವೆಯಂತೆ. ಅಂತಹ ತಳಿಗಳನ್ನು ಸಂರಕ್ಷಿಸಲು ಪಣತೊಟ್ಟಿರುವ ಕೆಲವೇ ಜನರ ಪೈಕಿ ಕಾರ್ಕಳದ ಅಬೂಬಕ್ಕರ್– ಆಸ್ಮಾ ಬಾನು ದಂಪತಿ ಕೂಡಾ ಸೇರಿದ್ದಾರೆ. ಕೃಷಿ ಭೂಮಿಯೇ ಇಲ್ಲದವರು ದೇಶ ಸುತ್ತುತ್ತಾ ತಳಿ ಸಂರಕ್ಷಣೆ ಮಾಡಿ, ವ್ಯಾಪಕಗೊಳಿಸಿದ ಕತೆ ಇಲ್ಲಿದೆ.

‘ಇದು ಮನೆಯಲ್ಲೇ ಬೆಳೆದ ಭತ್ತದ ಅಕ್ಕಿ. ಬಳಸಿ ನೋಡಿ’ ಎಂದು ಅವರು ಒಂದಿಷ್ಟು ಅಕ್ಕಿ ಕೊಟ್ಟರು. ಇವರು ಆ ಅಕ್ಕಿಗೆ ಮನಸೋತು, ಆ ತಳಿಯನ್ನೇ ಹುಡುಕಿ ಮನೆಯಲ್ಲೇ ಬೆಳೆಸಿದರು. ಇದಕ್ಕಾಗಿಯೇ ಕಾರ್ಕಳದ ಫ್ಲ್ಯಾಟಿನ ಮಹಡಿಯಿಂದ ಮುರತ್ತಂಗಡಿಯ ಭೂಮಿಯ ಮನೆಗೆ ಇಳಿದರು.

ಹೀಗೆ ತಳಿ ಹುಡುಕಾಟದ ಪ್ರಯಾಣಕ್ಕೀಗ ಆರು ವರ್ಷ ತುಂಬಿದೆ. 600ಕ್ಕೂ ಹೆಚ್ಚು ಭತ್ತದ ತಳಿಗಳು ಇವರ ಮನೆಯ ಅಂಗಳದಲ್ಲಿವೆ. ಈ ದಂಪತಿ ಬೆಳಿಗ್ಗೆ ಮತ್ತು ಸಂಜೆ ಆ ಪುಟ್ಟ ಸಸಿಗಳ ಆರೈಕೆಯಲ್ಲೇ ತಮ್ಮನ್ನು ಮರೆತುಬಿಡುತ್ತಾರೆ. ಆಯ್ದ ತಳಿಗಳ ಅಕ್ಕಿ ಉಡುಪಿ ಕೃಷ್ಣನಿಗೂ ಅರ್ಪಣೆಯಾಗಿದೆ.

ಅಬೂಬಕ್ಕರ್, ಆಸ್ಮಾ ಬಾನು ದಂಪತಿಯ ಭತ್ತದ ತಳಿ ಸಂರಕ್ಷಣೆಯ ಕಥೆ ಇದು.

‘ಒಂದು ಕಾಳು ಸಿಕ್ಕಿದರೂ ಸಾಕು. ನಾವು ಅದನ್ನು ಸಸಿ ಮಾಡಿ ಬೆಳೆಸಿ ತೆನೆ ತೆಗೆದಿಟ್ಟು ಮತ್ತೊಂದಿಬ್ಬರಿಗೆ ಹಂಚುತ್ತೇವೆ. ಅವರೂ ಒಂದಿಷ್ಟು ಸಸಿಗಳನ್ನು ಬೆಳೆಸುತ್ತಾರೆ. ಅವರಲ್ಲಿಯೂ ಈ ತಳಿ ಇದ್ದಂತಾಯಿತಲ್ವಾ? ನೀವು ಕಂಪ್ಯೂಟರ್‌ನಲ್ಲಿ ಬ್ಯಾಕ್ ಅಪ್ ಅಂತ ಫೈಲ್‌ಗಳನ್ನು ಒಂದೆಡೆ ಇಡುತ್ತೀರಲ್ಲಾ, ಹಾಗೆಯೇ ಈ ಭತ್ತದ ತಳಿಗಳ ರಕ್ಷಣೆ. ಒಂದು ವೇಳೆ ನನ್ನಲ್ಲೂ ಒಂದು ಮಾದರಿ ಕಳೆದುಹೋದರೆ ಅವರಿಂದ ಮತ್ತೆ ಪಡೆದು ಸಸಿ ಬೆಳೆಸಬಹುದು’ ಎಂಬುದು ಅಬೂಬಕ್ಕರ್ ತರ್ಕ.

ಅಬೂಬಕ್ಕರ್ ಉಡುಪಿ ಜಿಲ್ಲೆ ಕಾರ್ಕಳದ ಸಾಗರ್ ಹೋಟೆಲ್‌ನಲ್ಲಿ ವ್ಯವಸ್ಥಾಪಕ. ಆಸ್ಮಾ ಬಾನು ಅಲ್ಲಿಯೇ ಪೆರ್ವಾಜೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿ. ಅದೆಷ್ಟೇ ಒತ್ತಡ ಇದ್ದರೂ ಭತ್ತದ ಮೇಲಿನ ಪ್ರೀತಿ ಬತ್ತದಷ್ಟು ಇದೆ.

ಇವರಿಗೆ ಕೃಷಿ ಭೂಮಿ ಇಲ್ಲ. ಈ ಸಸಿ ನೆಡುವ ಭೂಮಿ ಅದುವರೆಗೆ ಯಾವುದೇ ಕೃಷಿಗೆ ಒಡ್ಡಿಕೊಳ್ಳದ, ಗೊಬ್ಬರ, ಕೀಟನಾಶಕದ ಸೋಂಕೂ ಇಲ್ಲದ ನೆಲವಾಗಿರಬೇಕು. ಮುರತ್ತಂಗಡಿ ಸಮೀಪದ ಬಾರಾಡಿ ಎಂಬಲ್ಲಿ ವೆಂಕಟೇಶ ಮಯ್ಯ ಎಂಬ ಉದ್ಯಮಿಗೆ ಸೇರಿದ ಹಡಿಲು ಭೂಮಿಯಲ್ಲಿ ಈ ಭತ್ತದ ತಳಿಗಳನ್ನು ಬಿತ್ತಿ ಪ್ರಯೋಗಕ್ಕಿಳಿದರು. ಮೂರು ವರ್ಷ ಹಲವು ವೈಫಲ್ಯಗಳನ್ನು ಕಂಡರು.

‘ಇವೆಲ್ಲವೂ ನಮ್ಮ ಕಲಿಕೆ. ನಾವು ಎಲ್ಲಿ ತಪ್ಪು ಮಾಡುತ್ತೇವೆ ಎಂಬುದನ್ನು ತಿಳಿಯಲಿಕ್ಕೆಂದೇ ಇಷ್ಟು ಕಾಲ ಆಗಿ ಹೋಯಿತು. ಈಗ ಆರು ತಳಿಗಳನ್ನು ಪ್ರಾಯೋಗಿಕವಾಗಿ ಬೆಳೆದು ವಾರ್ಷಿಕ ಸರಾಸರಿ 25ರಿಂದ 30 ಕ್ವಿಂಟಲ್ ಫಸಲು ತೆಗೆಯುತ್ತಿದ್ದೇವೆ’ ಎಂದರು ಅಬೂಬಕ್ಕರ್ ಮತ್ತು ಆಸ್ಮಾ.

‘ನಮಗೆ ಕೃಷಿ ಬಗ್ಗೆ ಆಸಕ್ತಿಯೇನೋ ಇತ್ತು. ಆದರೆ ಹೇಗೆ ನಿರ್ವಹಿಸುವುದು ಎಂಬ ಸಮಸ್ಯೆಯೂ ಇತ್ತು. ಫ್ಲ್ಯಾಟಿನಲ್ಲಿ ವಾಸವಿದ್ದಾಗ, ಆಹಾರ ವಸ್ತುಗಳನ್ನು ಗಮನಿಸಿದ್ದೆವು. ಅಂಗಡಿಯಿಂದ ತರುವ ಅಕ್ಕಿಯಲ್ಲಿ ಏನೆಲ್ಲಾ ರಾಸಾಯನಿಕಗಳು ಬೆರೆತಿರುತ್ತವೆ ಎಂಬ ಸಂದೇಹ, ಅದರಿಂದಾಗುವ ಪರಿಣಾಮಗಳ ಬಗ್ಗೆ ಆತಂಕ ಇದ್ದೇ ಇತ್ತು. ದುಬಾರಿಯಾದರೂ ಸರಿ. ನಾವು ಉಣ್ಣುವ ಅಕ್ಕಿಯನ್ನು ನಾವೇ ಬೆಳೆಯಬೇಕು ಎಂದು ದೃಢವಾಗಿ ನಿಶ್ಚಯಿಸಿದೆವು. ಹಾಗೇ ಒಂದೊಂದೇ ತಳಿ ಬೆಳೆಯುತ್ತಾ ಇಲ್ಲಿಯವರೆಗೆ ಬಂದಿದ್ದೇವೆ’ ಎಂದರು ಆಸ್ಮಾ.

ಕರ್ನಾಟಕ, ಕೇರಳದ ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಅಪರೂಪದ ತಳಿಯ ಬೀಜಗಳನ್ನು ಕೊಟ್ಟಿದ್ದಾರೆ. ಬ್ರಹ್ಮಾವರ ಕೃಷಿ ಪಾಠಶಾಲೆಯ ವಿಜ್ಞಾನಿಗಳು ಮಾರ್ಗದರ್ಶನ ಮಾಡಿದ್ದಾರೆ. ಹಲವಾರು ಕೃಷಿ ಅಧ್ಯಯನಾಸಕ್ತರು, ವಿದ್ಯಾರ್ಥಿಗಳು ಇವರ ಮನೆಗೆ ಭೇಟಿ ನೀಡುತ್ತಿದ್ದಾರೆ. ಇವರ ಮನೆಯೇ ಒಂದು ತಳಿ ಪ್ರಯೋಗಶಾಲೆಯಂತಿದೆ.



ಸಂಗ್ರಹಿತ ಪ್ರಮುಖ ತಳಿಗಳು

ನಾಗಸಂಪಿಗೆ, ಸರಸ್ವತಿ, ಮೊಗದ ಸುಗಂಧ, ಮೈಸೂರು ಬೆಣ್ಣೆ, ಕಜೆ ಜಯ, ಬಿಳಿಜಯ, ಬಿಳಿ ಮುದುಗ, ರತ್ನ ಸಾಗರ, ಸಹ್ಯಾದ್ರಿ, ಚಂಪಕ, ರಾಜಮುಡಿ(ಬಿಳಿ), ರಾಜಮುಡಿ(ಕೆಂಪು), ಕಡಲಚಂಪ, ಕುಂಬಲೂರ ಸಲ್ಯೆ, ಗುಜಗುಂಡ, ಸಿಂಧೂರು ಮಧುಸಲ್ಯೆ, ರತ್ನಚೂರಿ, ಕಿಚ್‌ಡಿಸಾಂಬ, ದೆಹಲಿ ಬಾಸ್ಮತಿ, ಕಾಶ್ಮೀರಿ ಬಾಸ್ಮತಿ, ಜೀರಿಗೆ ಸಣ್ಣ, ರಾಮ್‌ಗಲ್ಲಿ, ಮಲ್ಲಿಗೆ, ದಪ್ಪಪಲ್ಯ, ಅಂದನೂರು ಸಣ್ಣ, ಮಾಲ್‌ಗುಡಿ ಸಣ್ಣ, ಕಾಳಝೀರ, ಮಾಪಿಳ್ಳೆಸಾಂಬ, ಗಿರಿಸಲ್ಯೆ, ಹೆಚ್‌ಎಂಟಿ, ಗಂಧಸಲೆ, ಡೆಹ್ರಾಡೂನ್ ಬಾಸ್ಮತಿ, ರಾಜಬೋಗ, ಸಿದ್ದಸಣ್ಣ, ರಬ್ಲೆಕ್, ಬಂಗಾರಸಣ್ಣ, ಕರಿಕಗ್ಗ, ಪುಟ್ಟುಭತ್ತ, ಡಾಂಬರ್‌ಸಲೆ, ಆಂಧ್ರಬಾಸ್ಮತಿ, ಚೆನ್ನಿಪೊನ್ನಿ, ಕರಿಬಾಸ್ಮತಿ, ಆನಂದಿನವರ, ಕಲಾಬಾತ್, ಕಾಗಿ ಸಲ್ಯೆ....ಹೀಗೆ ನೂರಾರು ಭತ್ತದ ತಳಿಗಳು ಇವರ ಬಳಿ ಇವೆ.





ಅಬೂಬಕ್ಕರ್ – ಆಸ್ಮಾ

ಕೃಷ್ಣನ ನೈವೇದ್ಯಕ್ಕೆ ಅಕ್ಕಿ: ಈ ದಂಪತಿಯ ಪ್ರಯೋಗಶಾಲೆಯಲ್ಲಿ ಬೆಳೆದ ಅಕ್ಕಿ ಉಡುಪಿ ಶ್ರೀಕೃಷ್ಣ ಮಠದಲ್ಲಿ ಕೃಷ್ಣನ ನೈವೇದ್ಯಕ್ಕೂ ಬಳಕೆಯಾಗಿತ್ತು. ಮೂರು ವರ್ಷಗಳ ಹಿಂದೆ ಸುಮಾರು 105 ತಳಿಗಳ ಅಕ್ಕಿಯನ್ನು ಒಂದೊಂದು ದಿನ ಬಳಸಿ ನೈವೇದ್ಯ ಅರ್ಪಿಸಲಾಗಿತ್ತು. ಈಗ ತೀರ್ಥಹಳ್ಳಿಯ ಎನ್‌ಜಿಒ ನೆರವಿನಿಂದ ಇವರ ಬಿತ್ತನೆ ಬೀಜಗಳನ್ನು ಪಡೆದು ರೈತರಿಗೆ ವಿತರಿಸಿ ದೊಡ್ಡ ಪ್ರಮಾಣದಲ್ಲಿ ಬೆಳೆದು ನೈವೇದ್ಯಕ್ಕೆ ಅಕ್ಕಿ ಒದಗಿಸುವ ಯೋಜನೆಯ ಸಿದ್ಧತೆ ನಡೆದಿದೆ.

ಕೀಟವಿಲ್ಲ, ಗೊಬ್ಬರದ ಹಂಗಿಲ್ಲ...: ‘ಬೆಳೆಗೆ ಒಮ್ಮೆ ಬಿಳಿ ನುಸಿ ಹಾವಳಿ ಕಾಣಿಸಿಕೊಂಡಿತ್ತು. ಆ ನುಸಿ ನಿಂತ ನೀರಿನಲ್ಲಿ ಮೊಟ್ಟೆ ಇಡುತ್ತದೆ. ನಾನು ಗದ್ದೆಯ ನೀರನ್ನು ಖಾಲಿ ಮಾಡಿಬಿಟ್ಟೆ. ನುಸಿಯ ಕಾಟ ತಾನಾಗಿಯೇ ನಿಂತಿತು. ಯಾವುದೇ ಕೀಟನಾಶಕ ಬಳಸಿಲ್ಲ. ಅದು ಬಿಟ್ಟರೆ ಯಾವ ರೋಗಬಾಧೆಯೂ ಬರಲಿಲ್ಲ’ ಎಂದರು ಅಬೂಬಕ್ಕರ್.

‘ಕೀಟ ಎಷ್ಟು ತಿಂದೀತು ಹೇಳಿ? ಅದರ ಪುಟ್ಟ ಹೊಟ್ಟೆಗೆ ಬೇಕಾದಷ್ಟು ಮಾತ್ರ ತಿನ್ನುತ್ತದೆ. ಮನುಷ್ಯನಷ್ಟು ದುರಾಸೆ ಕೀಟಕ್ಕಿದೆಯೇ ಹೇಳಿ. ಹಾಗಾಗಿ ಕೀಟದಿಂದ ದೊಡ್ಡ ಪ್ರಮಾಣದ ನಷ್ಟವಾಗುತ್ತದೆ ಎಂದು ಹೇಳಲಾರೆ. ಕೀಟ ನಿಯಂತ್ರಣಕ್ಕೆಂದು ರಾಸಾಯನಿಕ ಬಳಸುತ್ತೇವಲ್ಲಾ ಇದರಿಂದ ನಮಗೆ, ನಮ್ಮ ಜೀವಕ್ಕೇ ನಷ್ಟವಲ್ಲವೇ’ ಎಂದು ಪ್ರಶ್ನಿಸಿದರು ಅಬೂಬಕ್ಕರ್.

‘ಗೊಬ್ಬರವನ್ನೂ ಹಾಕುವುದಿಲ್ಲ. ನೋಡಿ, ಖಾಲಿ ಭೂಮಿಯಲ್ಲಿ ಸೊಂಪಾಗಿ ಹುಲ್ಲು ಬೆಳೆಯುತ್ತದೆ. ಹುಲ್ಲಿಗೆ ಗೊಬ್ಬರ ಹಾಕಿದವರು ಯಾರು? ಹಾಗೆಯೇ ನಮ್ಮದು ಸಾವಯವ ಅನ್ನುವುದಕ್ಕಿಂತಲೂ ಸಹಜ ಕೃಷಿ. ಎಷ್ಟು ಫಲ ಬರಬೇಕೋ ಅಷ್ಟೇ ಬಂದರೆ ಸಾಕು’ ಎಂದು ಸಂತೃಪ್ತಿ ವ್ಯಕ್ತಪಡಿಸಿದರು.

ಬೆಳೆಸುವುದು ಹೇಗೆ?: ಪುಟ್ಟ ಫುಡ್ ಕಂಟೈನರ್‌ಗಳಲ್ಲಿ ಕಪ್ಪು, ಕೆಂಪು ಮಣ್ಣು ತುಂಬಿ ಭತ್ತದ ಬೀಜಗಳನ್ನು ಅದರೊಳಗೆ ಊರುತ್ತಾರೆ. ದನದ ಸೆಗಣಿಯನ್ನೂ ಬೆರೆಸುತ್ತಾರೆ. ನಿರಂತರವಾಗಿ ನೀರುಣಿಸುತ್ತಾರೆ. ನಿಧಾನವಾಗಿ ಮೊಳಕೆಯೊಡೆದ ಸಸಿ ಸುಮಾರು ಒಂದೂವರೆ ಅಡಿ ಬೆಳೆಯುವವರೆಗೂ ಅತ್ಯಂತ ಕಾಳಜಿ ವಹಿಸಿ, ಮುಂದೆ ಅದನ್ನು ಗಟ್ಟಿ ನೆಲದಲ್ಲಿ ನಾಟಿ ಮಾಡುತ್ತಾರೆ. ಚೆನ್ನಾಗಿ ಬಲಿತ ಸಸಿ ಕ್ರಮೇಣ ತೆನೆ ಮೂಡಿಸುತ್ತದೆ. ಚೆನ್ನಾಗಿ ಕಾಯಿ ಕಟ್ಟಿದ ಬಳಿಕ ಕಾಳುಗಳನ್ನಷ್ಟೇ ತೆಗೆದು ಬೀಜಗಳನ್ನು ನಿಗದಿತ ತೇವಾಂಶದವರೆಗೆ ಒಣಗಿಸಿ ಬಳಿಕ ಕಂಟೈನರ್‌ಗಳಲ್ಲಿ ಅವುಗಳ ತಳಿ ನಮೂದಿಸಿ ಸಂಗ್ರಹಿಸಿಡುತ್ತಾರೆ.

ಮಾರ್ಗದರ್ಶಕರು: ಕಾಸರಗೋಡು ಸಮೀಪ ನೆಟ್ಟಣಿಗೆ ಗ್ರಾಮದ ಬೇಳೇರಿ ಸತ್ಯನಾರಾಯಣ, ಮಂಡ್ಯದ ಫನಿ ಸಾಬ್, ಬ್ರಹ್ಮಾವರ ಅಖಿಲ ಭಾರತ ಸಂಯೋಜಿತ ಅಕ್ಕಿ ಅಭಿವೃದ್ಧಿ ಯೋಜನೆಯ ಕಿರಿಯ ತಳಿ ತಜ್ಞೆ ಶ್ರೀದೇವಿ, ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಉಲ್ಲಾಸ್ ಮತ್ತು ಕೇರಳದ ಹಿತೈಷಿಗಳಿಂದ ಸಾಂಪ್ರದಾಯಿಕ ಬಿತ್ತನೆ ಬೀಜಗಳನ್ನು ಪಡೆದು ಸಂರಕ್ಷಿಸಿದ್ದಾರೆ. ಈಗ ಅವರ ಪ್ರಯಾಣ ತಮಿಳುನಾಡು ಮತ್ತು ಛತ್ತೀಸಗಡದತ್ತ ಸಾಗಿದೆ. ಉತ್ತರ ಭಾರತದ ತಳಿಗಳನ್ನು ಸಂಗ್ರಹಿಸುವ ಕೆಲಸ ಸಾಗಿದೆ.

ವಿಜ್ಞಾನಿಗಳು ಏನೆನ್ನುತ್ತಾರೆ?: ಬ್ರಹ್ಮಾವರದಲ್ಲಿರುವ ಅಖಿಲ ಭಾರತ ಸಂಯೋಜಿತ ಅಕ್ಕಿ ಅಭಿವೃದ್ಧಿ ಯೋಜನೆಯ ಕಿರಿಯ ತಳಿತಜ್ಞೆ ಶ್ರೀದೇವಿ ಹೇಳುವಂತೆ, ನಾವು ಅಬೂಬಕ್ಕರ್ ಅವರ ಬಿತ್ತನೆ ಕ್ಷೇತ್ರಕ್ಕೆ ಭೇಟಿ ನೀಡಿ, ಅವರು ಸಂರಕ್ಷಿಸಿದ ಪಾರಂಪರಿಕ ಬಿತ್ತನೆ ಬೀಜಗಳ ಮಾದರಿಯನ್ನು ಸಂಗ್ರಹಿಸಿದ್ದೇವೆ. ಅವುಗಳ ಪರೀಕ್ಷೆ ನಡೆದಿದೆ. ಇಂಥ ಹಲವಾರು ಮಾದರಿಗಳನ್ನು ಸಂಗ್ರಹಿಸಿ ಬಿತ್ತನೆ ಬೀಜಗಳನ್ನು ಆಯಾ ಪ್ರಾದೇಶಿಕ ವಿಶಿಷ್ಟ ತಳಿ ಎಂದು ಗುರುತಿಸುವ, ದಾಖಲೀಕರಣ ಕಾರ್ಯ ನಡೆದಿದೆ. ಇವರ ಬಳಿ ಆಯಾ ಅವಧಿ ಸಂಬಂಧಿಸಿದ ಮತ್ತು ಔಷಧೀಯ ಗುಣಗಳಿರುವ ಪಾರಂಪರಿಕ ತಳಿಗಳೂ ಇವೆ ಎಂದು ದಂಪತಿಯ ಪ್ರಯತ್ನವನ್ನು ಶ್ಲಾಘಿಸಿದರು.

ಶಿವಮೊಗ್ಗದ ಕೃಷಿ ಮತ್ತು ತೋಟಗಾರಿಕಾ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಉಲ್ಲಾಸ್ ಈ ದಂಪತಿಗೆ ಹಲವಾರು ಅಪರೂಪದ ತಳಿಯ ಬಿತ್ತನೆ ಬೀಜ ನೀಡಿದ್ದಾರೆ. ಅವರು ಹೇಳುವುದು ಹೀಗೆ: ‘ನಮ್ಮ ರಾಜ್ಯದಲ್ಲಿ ಈ ರೀತಿ ಪಾರಂಪರಿಕ ತಳಿಗಳನ್ನು ಸಂರಕ್ಷಿಸುವ ಆಸಕ್ತರ ದೊಡ್ಡ ಕಾರ್ಯಜಾಲವೇ ಇದೆ. ಈ ಸಂರಕ್ಷಣೆ ಕಾರ್ಯ ನಾವು ಪ್ರಯೋಗಾಲಯದಲ್ಲಿ ಮಾಡುವ ಕೆಲಸಕ್ಕಿಂತ ಭಿನ್ನವಾದದ್ದು. ತಳಿ ವೈವಿಧ್ಯ ಸಂರಕ್ಷಣೆ ಸವಾಲಿನದ್ದೂ ಹೌದು. ಒಮ್ಮೆ ಉತ್ಪಾದಿಸಿ ದೀರ್ಘ ಕಾಲ ಸಂಗ್ರಹಿಸಿಡುವಂತಿಲ್ಲ. ಪ್ರತಿ ವರ್ಷವೂ ಬೆಳೆಯಬೇಕು. ಇದರಲ್ಲಿ ಲಾಭ ಇಲ್ಲ. ಆದರೆ ಪಾರಂಪರಿಕ ತಳಿಯನ್ನು ಸಂರಕ್ಷಿಸುವುದು ಅಗತ್ಯವೂ ಹೌದು.

‘ಏಕರೂಪದ ತಳಿಯನ್ನೇ ಬೆಳೆದರೆ ಒಮ್ಮೆ ಒಂದು ರೋಗ ಬಾಧಿಸಿದರೆ ಎಲ್ಲವೂ ನಾಶವಾಗುವ ಅಪಾಯವಿದೆ. ಬಹುವಿಧದ ತಳಿಗಳನ್ನು ದೊಡ್ಡ ಪ್ರಮಾಣದಲ್ಲಿ ಬೆಳೆದರೆ ಒಂದು ನಾಶವಾದರೂ ಇನ್ನೊಂದು ಉಳಿಯುತ್ತದೆ. ಪಾರಂಪರಿಕ ತಳಿಗಳಿಗೆ ಪ್ರತಿರೋಧ ಶಕ್ತಿಯೂ ಚೆನ್ನಾಗಿಯೇ ಇರುತ್ತದೆ. ಇಂಥ ಸಂರಕ್ಷಣೆ ಆಗಲೇಬೇಕಾದ ಅಗತ್ಯವಿದೆ’ ಎಂದರು.

ಹಸಿರು ಕ್ರಾಂತಿಗೆ ಮುನ್ನ ದೇಶದಲ್ಲಿ ಲೆಕ್ಕವಿಲ್ಲದಷ್ಟು ಭತ್ತದ ತಳಿಗಳಿದ್ದವು. ಈಗ ಅವುಗಳ ಸಂಖ್ಯೆ ಕೆಲವೇ ನೂರಕ್ಕೆ ಇಳಿದಿದೆ. 20 ವರ್ಷಗಳ ಹಿಂದೆ ಸಾಗರ ತಾಲ್ಲೂಕಿನಲ್ಲೇ ಸುಮಾರು 60 ಬಗೆಯ ಭತ್ತದ ತಳಿಗಳಿದ್ದವು. ಈಗ ಅವುಗಳ ಸಂಖ್ಯೆ ಗಣನೀಯವಾಗಿ ಕುಸಿದಿದೆ. ಆಹಾರದ ಬೇಡಿಕೆಗೆ ತಕ್ಕಂತೆ ಸುಧಾರಿತ ತಳಿಗಳು ಬೇಕು ನಿಜ. ಹಾಗೆಂದು ಪಾರಂಪರಿಕ ತಳಿಗಳು ನಶಿಸಲು ಬಿಡಬಾರದು ಎಂದು ಹೇಳಿದರು.

ಅಬೂಬಕ್ಕರ್ ದಂಪತಿಯ ಮಕ್ಕಳಿಗೂ ಈ ಕೆಲಸದ ಮೇಲೆ ಅತೀವ ಪ್ರೀತಿ ಇದೆ. ಪುಟ್ಟ ಮಗಳು ಮರಿಯಂ ಅಫ್ನಾ ಸುಮಾರು ನೂರಕ್ಕೂ ಅಧಿಕ ತಳಿಗಳ ಹೆಸರುಗಳನ್ನು ಬಾಯಿಪಾಠ ಮಾಡಿಕೊಂಡಿದ್ದಾಳೆ. ಮಗ ಅಫ್ರಾನ್ ಕೂಡಾ ಸಸಿ ಸಂರಕ್ಷಣೆಯಲ್ಲಿ ಕೈ ಜೋಡಿಸಿದ್ದಾನೆ. ಪಿಯು ಓದುತ್ತಿರುವ ಅಫ್ರಾನ್ ಎಂಥ ವಿಷಕಾರಿ ಹಾವನ್ನೂ ಹಿಡಿಯಬಲ್ಲ. ಪಶ್ಚಿಮ ಘಟ್ಟದ ತಪ್ಪಲಿನಲ್ಲಿರುವ ಅಪರೂಪದ ಚಿಟ್ಟೆಗಳು, ಪ್ರಾಣಿಗಳು, ಸಸ್ಯಗಳನ್ನು ಗುರುತಿಸುತ್ತಾನೆ. ಅಲ್ಲಿಗೆ ಬರುವ ಸಂಶೋಧನಾಸಕ್ತರಿಗೆ ಅವುಗಳನ್ನು ಪರಿಚಯಿಸುತ್ತಾನೆ.

ಹೀಗೆ ಇಡೀ ಕುಟುಂಬ ಜೀವ ಜಗತ್ತು ಮತ್ತು ನೆಲದ ನಂಟನ್ನು ಗಟ್ಟಿಯಾಗಿ ಹಿಡಿದುಕೊಂಡಿದೆ. ❖

ಮುನ್ನೋಟ 23-10-2022 ರಿಂದ 29-10-2022

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಪ್ರತಿಭೆಗೆ ತಕ್ಕ ಅವಕಾಶಗಳು ಒದಗಿಬರುತ್ತವೆ. ವೈಯಕ್ತಿಕ ಕೆಲಸಗಳ ಬಗ್ಗೆ ಹೆಚ್ಚು ಗಮನಹರಿಸಿರಿ. ಕ್ರಯ ವಿಕ್ರಯ ಒಪ್ಪಂದದ ವ್ಯವಹಾರಗಳಿಂದ ಲಾಭ ಹೆಚ್ಚಾಗಿ ಬರುತ್ತದೆ. ಯಂತ್ರೋಪಕರಣಗಳನ್ನು ಬಳಸಿ ಮಾಡುವ ಕೆಲಸಗಳಲ್ಲಿ ಹೆಚ್ಚಿನ ಪ್ರಗತಿ ಇರುತ್ತದೆ. ಮೇಲಧಿಕಾರಿಗಳು ಸಹೋದ್ಯೋಗಿಗಳೊಡನೆ ಉತ್ತಮ ಹೊಂದಾಣಿಕೆ ಮಾಡಿಕೊಳ್ಳುವುದು ಅತ್ಯಗತ್ಯ. ಬಟ್ಟೆ ವ್ಯಾಪಾರಸ್ಥರಿಗೆ ಉತ್ತಮ ವ್ಯವಹಾರವಿರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವ್ಯವಹಾರಗಳಲ್ಲಿ ಬಂಧುಗಳ ನಡುವೆ ಭಿನ್ನಾಭಿಪ್ರಾಯವು ತಲೆದೋರುವ ಸಾಧ್ಯತೆ ಇದೆ. ಅನಾರೋಗ್ಯ ಸಮಸ್ಯೆ ಇದ್ದವರಿಗೆ ಸ್ವಲ್ಪ ಸುಧಾರಣೆ ಕಂಡುಬರುತ್ತದೆ. ಹೆಚ್ಚಿನ ಮೊತ್ತದ ವಸ್ತುಗಳನ್ನು ಖರೀದಿ ಮಾಡುವಾಗ ಎಚ್ಚರವಿರಲಿ. ಕೆಲವೊಂದು ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತದೆ. ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಗಳನ್ನು ಕಡಿಮೆ ಮಾಡಿಕೊಂಡು ಅಧ್ಯಯನದತ್ತ ಗಮನಹರಿಸುವುದು ಒಳ್ಳೆಯದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಕೃಷಿಕರಿಗೆ ಆದಾಯದಲ್ಲಿ ಸ್ವಲ್ಪ ಅನಿಶ್ಚಿತತೆ ಎದುರಾಗಬಹುದು. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ. ಮಧ್ಯಸ್ಥಿಕೆ ವಹಿಸುವುದು, ಜಾಮೀನು ಕೊಡುವುದು ಬಹಳ ದುಬಾರಿಯಾಗಬಹುದು. ವಿಶ್ವಾಸಪೂರ್ವಕ ಮಾತುಗಳಿಂದಾಗಿ ಎಲ್ಲರಲ್ಲೂ ಸ್ನೇಹ ಸಂಪಾದನೆ ಮಾಡುವಿರಿ. ಹೀಗಾಗಿ ಎಲ್ಲರ ಸಹಕಾರ ನಿಮಗೆ ದೊರೆತು ಕೆಲಸದಲ್ಲಿ ಯಶಸ್ಸನ್ನು ಕಾಣುವಿರಿ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಕೆಲವು ಮಹಿಳೆಯರಿಗೆ ಸ್ಥಾನಮಾನ ಲಭ್ಯವಾಗುತ್ತದೆ. ನಿಮ್ಮ ಲಾಭದ ಲೆಕ್ಕಾಚಾರಗಳು ಸ್ವಲ್ಪ ವ್ಯತ್ಯಾಸವಾಗಿ ಲಾಭ ಕಡಿಮೆಯಾಗಬಹುದು. ದೈನಂದಿನ ಕೆಲಸಗಳಲ್ಲಿ ಆಸಕ್ತಿ ಹೆಚ್ಚುತ್ತದೆ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಾಸವನ್ನು ಕಾಣಬಹುದು. ಕೆಲಸ ಮಾಡುವ ಸ್ಥಳದಲ್ಲಿ ನಿಮ್ಮ ಒಣಪ್ರತಿಷ್ಠೆಯಿಂದಾಗಿ ವಿರೋಧವನ್ನು ಎದುರಿಸಬೇಕಾಗಬಹುದು. ಸೂಕ್ಷ್ಮ ನೇಯ್ಗೆಯನ್ನು ಮಾಡುವ ನೇಕಾರರಿಗೆ ಕೈತುಂಬಾ ಕೆಲಸವಿರಲಿದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ವ್ಯಾಪಾರ-ವ್ಯವಹಾರದಲ್ಲಿ ಮಹತ್ವದ ಬೆಳವಣಿಗೆಗಳು ನಡೆದು ನಿಮಗೆ ವ್ಯಾಪಾರದಲ್ಲಿ ಸೂಕ್ತ ಸ್ಥಾನ ಸಿಕ್ಕು ಲಾಭ ಪಡೆಯುವಿರಿ. ಸಾಮಾಜಿಕ ಕ್ಷೇತ್ರದಲ್ಲಿರುವವರಿಗೆ ಕೀರ್ತಿ ಯಶಸ್ಸು ದೊರೆಯುತ್ತದೆ. ವೈಯಕ್ತಿಕ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಿರಿ. ಉದ್ಯೋಗದಲ್ಲಿ ನಿಮ್ಮ ವಿಚಾರದಲ್ಲಿ ಸಂತಸದ ಸುದ್ದಿಯೊಂದನ್ನು ಕೇಳುವಿರಿ. ಹಣದ ಒಳಹರಿವು ನಿಮ್ಮ ಅಗತ್ಯವನ್ನು ಪೂರೈಸುವಷ್ಟು ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವ್ಯವಹಾರದಲ್ಲಿ ಮುನ್ನಡೆಯನ್ನು ಸಾಧಿಸುವಿರಿ. ಕೆಲವೊಂದು ಕೆಲಸಗಳು ನಿಮಗೆ ಆಪಾದನೆಯನ್ನು ತರಬಹುದು. ಲೇವಾದೇವಿ ನಡೆಸುವವರಿಗೆ ಮಧ್ಯಮ ಫಲಿತಾಂಶ ಇರುತ್ತದೆ. ನೂತನ ವಾಹನ ಕೊಳ್ಳುವ ಯೋಗವಿದೆ. ದ್ರವ್ಯಾನುಕೂಲತೆ ನಿಮ್ಮ ನಿರೀಕ್ಷೆಯಂತೆ ಇರುತ್ತದೆ. ವ್ಯವಹಾರದಲ್ಲಿ ಬುದ್ಧಿವಂತಿಕೆಯಿಂದ ಸಾಕಷ್ಟು ಹಣ ಉಳಿಸುವಿರಿ. ಕಚೇರಿಯ ಆಂತರಿಕ ಸಮಸ್ಯೆಗಳಿಂದ ಮುಕ್ತಿಯನ್ನು ಹೊಂದುವಿರಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ನ್ಯಾಯಾಲಯದ ತೀರ್ಪುಗಳು ಮುಂದೂಡಿಕೆಯಾಗುವ ಸಾಧ್ಯತೆ ಇದೆ. ಸಹನೆಯಿಂದ ಇದ್ದರೆ ಒಳ್ಳೆಯ ಫಲಿತಾಂಶವನ್ನು ನಿರೀಕ್ಷಿಸಬಹುದು. ಕೃಷಿಕರಿಗೆ ಆದಾಯ ಹೆಚ್ಚುತ್ತದೆ. ಅವರ ಬೆಳೆಗಳಿಗೆ ಉತ್ತಮ ಬೆಲೆ ದೊರೆತು ಸಂತಸಪಡುವರು. ಬಂಧುಗಳೊಡನೆ ನಿಮ್ಮ ಸಂಬಂಧವನ್ನು ಸುಧಾರಿಸಿಕೊಳ್ಳುವುದು ನಿಮಗೆ ಒಳ್ಳೆಯದು. ನೀವು ಇಷ್ಟಪಟ್ಟ ನಿವೇಶನವನ್ನು ಈಗ ಕೊಳ್ಳಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಕುಟುಂಬ ಸದಸ್ಯರಲ್ಲಿ ವಾದವಿವಾದಗಳ ಸಾಧ್ಯತೆ ಇದೆ. ನ್ಯಾಯಾಲಯದ ವಿಷಯದಲ್ಲಿ ಉತ್ತಮ ವಕೀಲರನ್ನು ನೇಮಿಸಿಕೊಳ್ಳುವುದು ನಿಮಗೆ ಬಹಳ ಅನುಕೂಲ. ಶಸ್ತ್ರಚಿಕಿತ್ಸೆ ಮಾಡುವ ವೈದ್ಯರಿಗೆ ಉತ್ತಮ ಗಳಿಕೆಯ ಜೊತೆ ಹೆಸರು ಬರುವುದು. ಹೊಸ ರೀತಿಯ ವ್ಯವಹಾರದಲ್ಲಿ ನಿರೀಕ್ಷಿತ ವ್ಯಕ್ತಿಗಳಿಂದ ಸಹಕಾರ ದೊರೆಯುವುದು. ವಿವಾಹ ಸಂಬಂಧಗಳಲ್ಲಿದ್ದ ವ್ಯತ್ಯಾಸಗಳು ದೂರವಾಗುತ್ತವೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಉದ್ಯೋಗ ಕ್ಷೇತ್ರದಲ್ಲಿನ ಸಮಸ್ಯೆಗಳಿಗೆ ಪರಿಹಾರ ದೊರಕುವುದು. ಅಧಿಕಾರಿಗಳಿಂದ ಸೂಕ್ತ ಸಹಾಯ ದೊರೆತು ಸಂತೋಷವಾಗುವುದು. ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಹೆಚ್ಚಿನ ಆಸಕ್ತಿ ಮೂಡುವುದು. ನಿರೀಕ್ಷೆಯಂತೆ ಕೆಲವು ಕೆಲಸಗಳು ಕೈಗೂಡುವುದರಿಂದ ಮನಸ್ಸು ನಿರಾಳವಾಗುವುದು. ಕುಟುಂಬದಲ್ಲಿ ಒಮ್ಮತದ ಅಭಿಪ್ರಾಯ ಮೂಡಿ ಎಲ್ಲರಲ್ಲಿ ಒಗ್ಗಟ್ಟು ಮೂಡುವುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಆರ್ಥಿಕ ಸ್ಥಿತಿಯು ಚೇತರಿಕೆಯ ಹಾದಿಯಲ್ಲಿ ಇರುತ್ತದೆ. ನ್ಯಾಯಾಲಯದ ವ್ಯವಹಾರಗಳಲ್ಲಿ ನಿಮಗೆ ಯಶಸ್ಸು ಇರುತ್ತದೆ. ಹಿತೈಷಿಗಳಿಂದ ನಿಮ್ಮ ವ್ಯಾಪಾರ ವ್ಯವಹಾರಗಳಿಗೆ ಸಮಯೋಚಿತ ಸಹಾಯ ದೊರೆತು ಅದರಲ್ಲಿ ಉನ್ನತಿಯನ್ನು ಕಾಣಬಹುದು. ಅನವಶ್ಯಕ ವ್ಯವಹಾರಗಳಿಂದ ದೂರ ಇರುವುದು ಒಳ್ಳೆಯದು. ರಾಜಕೀಯ ವ್ಯಕ್ತಿಗಳಿಗೆ ಶುಭ ಸಮಾಚಾರಗಳು ದೊರೆಯುತ್ತವೆ.


ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ದಾಯಾದಿಗಳ ನಡುವೆ ಇದ್ದ ಕಲಹಗಳು ಕಡಿಮೆಯಾಗುವ ಸಾಧ್ಯತೆಗಳಿವೆ. ಉತ್ಸವ ಹಾಗೂ ಸಮಾರಂಭಗಳಲ್ಲಿ ಭಾಗವಹಿಸುವ ಅವಕಾಶಗಳಿವೆ. ಸಂತಾನ ಅಪೇಕ್ಷಿತರಿಗೆ ಶುಭ ಸಮಾಚಾರಗಳು ಸಿಗುತ್ತವೆ. ಪ್ರಿಯ ವ್ಯಕ್ತಿಗಳಿಂದ ಅಥವಾ ಮಕ್ಕಳಿಂದ ಶುಭ ಸಮಾಚಾರಗಳನ್ನು ಕೇಳುವಿರಿ. ಸರ್ಕಾರಿ ಕೆಲಸಗಳಲ್ಲಿ ಮುನ್ನಡೆ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಒಡಹುಟ್ಟಿದವರ ಸಮಸ್ಯೆಗಳು ಉಲ್ಬಣಿಸಬಹುದು. ಮಹಿಳೆಯರಿಗೆ ಉದ್ಯೋಗದಲ್ಲಿ ಬಡ್ತಿ ದೊರೆಯುವ ಸಾಧ್ಯತೆ ಇದೆ. ಅನವಶ್ಯಕ ಖರ್ಚುಗಳಿಂದ ಆರ್ಥಿಕ ಅಸಮತೋಲನ ಆಗಬಹುದು. ಉದ್ಯಮಿಗಳಿಗೆ ಋಣ ಭಾರದಿಂದ ಹೊರಬರಲು ಮಾರ್ಗ ದೊರೆಯುತ್ತದೆ. ಹಣಕಾಸು ಸಂಸ್ಥೆಗಳಿಗೆ ಹೆಚ್ಚಿನ ಪ್ರಗತಿ ಇರುತ್ತದೆ. ಗುತ್ತಿಗೆದಾರರಿಗೆ ಒಳ್ಳೆಯ ಗುತ್ತಿಗೆಗಳು ದೊರೆತು ಕೈತುಂಬಾ ಸಂಪಾದನೆ ಇರುತ್ತದೆ.

ಪದಬಂಧ 2761



ಮೇಲಿನಿಂದ ಕೆಳಕ್ಕೆ

1. ದೃಷ್ಟಿ ದೋಷಕ್ಕೆ ಬಳಸುವ ಚಷ್ಮಾ 4
2. ಪ್ರಜಾಪ್ರಭುತ್ವದಲ್ಲಿ ರಾಜಪಾಲರ ವಾಸಗೃಹ 5
3. ಜೊತೆಗೂಡಿ ಓದಿಕಲಿಯುವುದಕ್ಕೆ ಒಲವಿರುವವ 5
4. ಪೂರ್ಣ ನರರಲ್ಲದ ಗಂಧರ್ವ ಕುಲದ್ವಯ 5
7. ಒಂದು ಕಡೆ ಕಾಣೆಯಾಗಿ ಇನ್ನೊಂದು ಕಡೆ ಅಲೆದಾಡಿ ಸಂತೋಷಪಡುವವ 5
9. ಯುದ್ಧದ ಸಕಲ ಶಾಸ್ತ್ರ ತಂತ್ರ ವಿಶಾರದ 5
11. ದೇವಭಕ್ತನ ಗುಲಾಮರ ಗುಲಾಮ 5
13. ಹಳೆಯಕಾಲದ ವಿದೇಶಿ ಸುಂಕ ತೆರಿಗೆ ಜಗಲಿ 5
14. ಕನ್ನಡದ ಕಲಿಯೆಂಬ ಕೀರ್ತಿಗೆ ಭಾಜನನಾದ ಸುತ ಭರತಾಗ್ರಜ 5
17. ಮಸ್ತಿಷ್ಕಕ್ಕೆ ವಿಧಿಸುವ ಕಂದಾಯ 4

ಎಡದಿಂದ ಬಲಕ್ಕೆ

1. ಲಕ್ಷ್ಮೀ ಸ್ತೋತ್ರದಿಂದ ಆಗುವ ಸುವರ್ಣವೃಷ್ಟಿ 5
3. ತ್ರಿಜ್ಯದ ಎರಡಳತೆಯ ಒಡೆಯ ಗುರುವಾಗಿ ಪ್ರಸಿದ್ಧ 4
5. ಲೌಕಿಕ ವ್ಯವಹಾರಗಳಿಂದ ಉಂಟಾಗುವ ಕಾಯಿಲೆ 4
6. ಈ ಯುಗದ ಮನುಜ 5
8. ಬಹಳ ಶ್ರೇಷ್ಠವಾದ ಸಿಹಿಯೋಗರೆ 4
10. ಶ್ರೀಚಕ್ರದ ಒಂಬತ್ತು ಗುರುತಿನ ಪೂಜಾ ಪ್ರವೇಶ ಪ್ರದೇಶ 5
12. ಬಂದು ಕೆಲಸ ಮಾಡಿದ್ದಕ್ಕೆ ಅಸ್ತಿತ್ವ ದಾಖಲೆ ಮಾಡು 5
15. ಸಮುದ್ರವನ್ನು ಹರಿಹಾಯುವ ಹಡಗಿನ ಹೆಸರು 4
16. ಬಿಕರಿ ಮಾಡುತ ಬರುವ ವಾಯುಪುತ್ರ 5
18. ಬೇಡವೆಂದು ಅಸಡ್ಡೆ ಮಾಡಿ ತಳ್ಳಿಹಾಕುವಿಕೆ 4
19. ನಾಲ್ಕು ಜನ ಮೀಟಿಂಗ್ ಮಾಡುವ ಎತ್ತರದ ಸ್ಥಳ 4
20. ಇವ ಅಳಿಯನಲ್ಲ ......ಎಂಬುದು ಗಾದೆ ಮಾತು 5

ಪದಬಂಧ ಉತ್ತರ -2760

ಮೇಲಿಂದ ಕೆಳಕ್ಕೆ

1.ಪರಮಹಂಸ 2.ವಿಭೂತಿ 3.ಬಂಧ 4.ಸಾಮಾನ್ಯಜನ 6.ನೆಗಡಿ 8.ಮತಿಹೀನ 9.ತರ್ಜುಮೆ 11.ರವಿಸುತ 12.ಜಲಜ 14.ಹಿತವಚನ 16. ರವಿಶಂಕರ 18.ನಮಿಸು 19.ತ್ವರಿತ 22.ಮೇಧಾ


ಎಡದಿಂದ ಬಲಕ್ಕೆ

1.ಪದವಿ 4.ಸಾಕಾರ 5.ಭೂತಾರಾಧನೆ 7.ರಾಮಾ 8.ಮಹಾಪಂಡಿತ 10.ಸರಸ್ವತಿ 12.ಜನನಿ 13.ಮಹಿಮೆ 15.ಸುರನರ 17.ಜನಜನಿತ 21.ಸುಮೇರುಗಿರಿ 23.ಕವನ 24.ತಬರ

ಅಪರೂಪದ ವಿಶೇಷಾಂಕ

ಪ್ರತಿಕ್ರಿಯೆ

ಈ ಬಾರಿಯ ಪ್ರಜಾವಾಣಿ ದೀಪಾವಳಿ ವಿಶೇಷಾಂಕದ ಮುಖಪುಟದಲ್ಲಿ ಹೂವಿನ ಜೊತೆಗೆ ಸಂಘರ್ಷದ ಹತಾರಗಳು ಮೇಳೈಸಿ ಮಾಲೆಯಾಗಿ, ಅಂಕುಡೊಂಕಾದ ಕಷ್ಟಸಾಧ್ಯದ ತಿರುವುಗಳ ಚಿತ್ರವಾಗಿರುವುದು ಅರ್ಥಪೂರ್ಣವಾಗಿದೆ. ಓದುಗರ ವೇದಿಕೆಯಲ್ಲೂ ಕೋಮು ಸೌಹಾರ್ದದ ಸಂಬಂಧಗಳು ಇಣುಕಿವೆ. ಪ್ರತೀ ಲೇಖನದಲ್ಲಿ ಸೌಹಾರ್ದದ ಮಾತೇ ಇದೆ. ವರ್ತಮಾನದ ತಲ್ಲಣಗಳಿಗೆ ಸಾಮರಸ್ಯದ ಸಿಂಚನವಾಗಿದೆ. ನಾಡಿನ ಸಕಲರೂ ಓದಲೇಬೇಕಾದ ಸಂಚಿಕೆ ಇದಾಗಿದೆ.



ಈ ಸಂಚಿಕೆ ವರ್ತಮಾನದ ಬಿಂಬಕ್ಕೆ ಕನ್ನಡಿ ಹಿಡಿದಂತಿದೆ. ಭೇಷ್! ಅಕ್ಷರ ಮಾಧ್ಯಮದಲ್ಲಿ ಅರಿವು ಮೂಡಿಸುವ ಈ ಪ್ರಯತ್ನ ಶ್ಲಾಘನೀಯ. ಇದೊಂದು ಸಾಹಿತ್ಯದಿಂದ ಸಹಬಾಳ್ವೆ, ಸೌಹಾರ್ದದ ಸಣ್ಣ ಪ್ರಯತ್ನವಾಗಿರದೆ, ಮಹತ್ ಕಾರ್ಯವೇ ಆಗಿದೆ.

ನಗರ ಗುರುದೇವ್ ಭಂಡಾರ್ಕರ್

ಚೌಕಾಸಿ ಶಾಪಿಂಗ್!



1ನೇ ಪುಟದಿಂದ...

ಹೀಗೇ ಚೌಕಾಸಿಯ ವಿವಿಧ ತಂತ್ರಗಳನ್ನು ಕಲಿಯುತ್ತಾ ಇರುವಾಗ, ಒಮ್ಮೆ ಆರು ತಿಂಗಳ ಶಿಶುವನ್ನೆತ್ತಿಕೊಂಡು ಟರ್ಕಿಯ ಇಸ್ತಾಂಬುಲ್‌ನ ಗ್ರ್ಯಾಂಡ್ ಬಜಾರ್‌ಗೆ ಹೋಗಿದ್ದೆ. ಟರ್ಬನ್-ಸಿಹಿತಿಂಡಿ ಕೊಳ್ಳುತ್ತಾ, ಮಾತನಾಡುತ್ತಾ, ದೃಷ್ಟಿಗಾಗಿ ಹಾಕುವ ‘ನೀಲಿಕಣ್ಣು’ -blue eye– ಬೇಕೆಂದು ಚೌಕಾಸಿ ಆರಂಭಿಸಿದೆ. ಚಿಕ್ಕ ಅಂಗಡಿ, ನೀಲಿಕಂಗಳ, ಉದ್ದ ಮೂಗಿನ ಎತ್ತರದ ವೃದ್ಧ ಮಾಲೀಕ. ನಾನು ಚೌಕಾಸಿ ಮಾಡಿಯೇ ಮಾಡಿದೆ. ಆತ 10 ಟರ್ಕಿಷ್ ಲಿರಾ ಎಂದದ್ದಕ್ಕೆ ನಾನು ಎರಡೇ ಲಿರಾಕ್ಕೆ ಕೇಳಿದ್ದೆ. ಆತ 4ರ ಹತ್ತಿರ ಬಂದ. ನಾನು 3 ಕೊಡುತ್ತೇನೆ ಎಂದು ಹಟ ಮಾಡಿದೆ. ಆಮೇಲೆ ಆತ ಅಂದ – ‘ನೀನು ಚೆನ್ನಾಗಿ ಚೌಕಾಸಿ ಮಾಡ್ತೀಯಮ್ಮ, ನೋಡು ಬೇಕಾದರೆ ನಿನ್ನ ಮುದ್ದು ಮಗು ಕೊಟ್ಟರೆ, ನಾನು ಇಡೀ ಅಂಗಡಿಯನ್ನೇ ನಿನಗೆ ಕೊಟ್ಟು ಬಿಡ್ತೀನಿ. ಇಲ್ಲಾಂದರೆ 4 ಲಿರಾಕ್ಕೆ ಈ ನೀಲಿಕಣ್ಣು ಕೊಡ್ತೀನಿ’. ನಾನು 4 ಲಿರಾ ತೆಗೆದಿಟ್ಟು ‘ಇಡೀ ಅಂಗಡಿಯಲ್ಲ, ಟರ್ಕಿಯನ್ನೇ ಕೊಡ್ತೀರಿ ಅಂದ್ರೂ, ನನ್ನ ಮಗು ಕೊಡಕ್ಕಾಗಲ್ಲ’ ಎಂದು ಆತನ ಗ್ರಾಹಕರನ್ನು ಮಣಿಸುವ ಪ್ರತಿಭೆಗೆ ಬೆರಗಾಗಿ ಬೇಗ ಹೊರಬಂದೆ!

ಎಲ್ಲರಿಗೂ ಚೌಕಾಸಿ ಮಾಡುವುದು ಸುಲಭ ಸಾಧ್ಯವಲ್ಲ. ಮಾರಾಟಗಾರರೂ ನಿಮ್ಮಲ್ಲೊಬ್ಬ ‘ಯಶಸ್ವೀ ಚೌಕಾಸಿ ಮಾಡುವವ, ಅಪಮಾನ ಮಾಡದೆ/ ಅಪಮಾನಗೊಳ್ಳದೆ ತಮಾಷೆಯಾಗಿ ಮಾತನಾಡುವವ’ ಇದ್ದಾನೆ ಎಂಬುದನ್ನು ಗುರುತಿಸಿಬಿಡುತ್ತಾರೆ.


ಚೌಕಾಸಿ ಮಾಡುವುದರ ಹಿಂದೆಯೂ ಹಲವು ಮನೋವೈಜ್ಞಾನಿಕ ಅಂಶಗಳಿವೆ ಎಂದು ನನಗೆ ಅನ್ನಿಸುತ್ತದೆ. ‘ಆ ಕ್ಷಣ ಬೇಕು’ ಎಂಬ ಆಸೆಯನ್ನು ನಿಯಂತ್ರಿಸಿಕೊಳ್ಳಬೇಕು. ಶಾಪಿಂಗ್ ಮಾಡುವ ಕ್ಷಣದಲ್ಲಿ ಅನ್ನಿಸುವ ‘ಈ ಸೀರೆ /ಡ್ರೆಸ್/ಬಳೆ/ಸರ/ ಎಲೆಕ್ಟ್ರಾನಿಕ್ ವಸ್ತು/ಇತ್ಯಾದಿ ಸಿಗದಿದ್ದರೆ ತಡೆಯಲೇ ಸಾಧ್ಯವಿಲ್ಲ’ ಎಂಬ ಭಾವನೆಯನ್ನು ನಿಯಂತ್ರಿಸಿಕೊಳ್ಳಬೇಕು. ಮಕ್ಕಳಿಗೆ ಕಲಿಸಬೇಕೆಂದು ಮನೋವಿಜ್ಞಾನ ಹೇಳುವ delayed gratification (ನಿಧಾನವಾಗಿ ಆಸೆ ಪೂರೈಸುವುದು) ಅನ್ನು, ಶಾಪಿಂಗ್ ಮಾಡುವಾಗ ಸ್ವತಃ ಪಾಲಿಸಬೇಕು. ‘ಇನ್ನಷ್ಟು ಬೇಕು’ ಎನ್ನುವಾಗಲೇ ನಿಲ್ಲಿಸುವ ಕೌಶಲವನ್ನು ರೂಢಿಸಿಕೊಳ್ಳಬೇಕು. ಶಾಪಿಂಗ್ ಮಾಡುವ ಭರದಲ್ಲಿ ದುಡ್ಡು-ವಸ್ತು-ಮಕ್ಕಳು ಕಳೆಯಬಹುದಾದ ಸಾಧ್ಯತೆಗಳನ್ನು ನೆನಪಿಡಬೇಕು ಮತ್ತು ನಾಚಿಕೆ ಬಿಡಬೇಕು! ಅಂದರೆ ಚೌಕಾಸಿ ಮಾಡುತ್ತಿರುವವರ ಬಗ್ಗೆ ಇತರರು ಪತಿ/ ಪತ್ನಿ/ ಮಕ್ಕಳು/ ಸ್ನೇಹಿತರು ಅಂದುಕೊಳ್ಳುವ ‘ಇಷ್ಟು ಕಡಿಮೆಗೆ ಕೇಳುತ್ತಿದ್ದಾರೆ, ಮರ್ಯಾದೆ ಇಲ್ವೇ’ ಎಂಬ ಪ್ರಶ್ನೆಯನ್ನು ಎದುರಿಸಬೇಕು. ‘ಯಾವ ಮಾರಾಟಗಾರನೂ ತನಗೆ ಲಾಭವಿಲ್ಲ ಎಂದರೆ ಮಾರುವುದಿಲ್ಲ’ ಎಂಬ ಸತ್ಯವನ್ನು ಅರಿಯುವುದು ಈ ಸಮಯದಲ್ಲಿ ಬಹು ಉಪಯುಕ್ತ.


ಈಗಲೂ ಯಾವುದೇ ಕಾರಣಕ್ಕೆ ಪರವೂರು / ಪರದೇಶಕ್ಕೆ ಹೋಗಲಿ, ಅಲ್ಲಿನ ಮಾರುಕಟ್ಟೆಗಳ ಬಗ್ಗೆ ನಾನು ಮೊದಲೇ ಮಾಹಿತಿ ಕಲೆ ಹಾಕದೆ ಬಿಡುವುದಿಲ್ಲ. ಮಾರುಕಟ್ಟೆ ತೆರೆಯುವ ಸಮಯ, ಅಲ್ಲಿ ಸಿಗುವ ವಸ್ತುಗಳು ಇತ್ಯಾದಿಗಳನ್ನು ತಿಳಿದಿದ್ದರೆ ಸುಲಭವಾಗಿ ಶಾಪಿಂಗ್ ಅನುಭವ ಪಡೆಯಬಹುದು. ಗೋವಾದ ಅಲೆಮಾರಿ ಮಾರುಕಟ್ಟೆ (ಫ್ಲೀ ಮಾರ್ಕೆಟ್), ಮೆಲ್ಬೋರ್ನ್‌ನ ವಿಕ್ಟೋರಿಯಾ ಮಾರ್ಕೆಟ್, ಎಡಿನ್‌ಬರೋದ ಸಂಡೇ ಮಾರ್ಕೆಟ್, ಲಖನೌದ ಅಮೀನಾಬಾದ್, ಬೀಜಿಂಗ್‌ನ ಪರ್ಲ್ ಮಾರ್ಕೆಟ್, ಶಿಲ್ಲಾಂಗ್‌ನ ಮಾರ್ಕೆಟ್, ಜಪಾನ್‌ನ ಹ್ಯಕುಯನ್ ಶಾಪ್, ಲಂಡನ್ನಿನ ಪೌಂಡ್‌ಶಾಪ್ ಇವೆಲ್ಲವೂ ಹೋಗಿ ನೋಡಬೇಕಾದ ಸ್ಥಳಗಳೇ. ಇಂದಿಗೂ ಮುಂಬಯಿಯ ಫ್ಯಾಷನ್ ಸ್ಟ್ರೀಟ್ ನನ್ನ ನೆಚ್ಚಿನ ತಾಣಗಳಲ್ಲಿ ಒಂದು.

ಸಾಂಪ್ರದಾಯಿಕವಾದ ಮಾರುಕಟ್ಟೆಗಳು ಆಧುನಿಕ ಮಾಲ್‌ಗಳಿಗಿಂತ ಹೆಚ್ಚಾಗಿ ಸ್ಥಳೀಯ ಜನಜೀವನ-ಸಂಸ್ಕೃತಿ-ತಿಂಡಿ-ತಿನಿಸುಗಳನ್ನು ನಮಗೆ ಪರಿಚಯಿಸುತ್ತವೆ. ಶಾಪಿಂಗ್‌ನಲ್ಲಿ ನನ್ನ ಅನುಭವ ಪಕ್ವಗೊಳ್ಳುತ್ತಾ, ನಾನು ಕಲಿತಿರುವುದು ಬಹಳಷ್ಟು. ಬೇಡದಷ್ಟು-ಆಸೆಯಿಂದ ಖರೀದಿಸಿ ಆ ಮೇಲೆ ಪ್ಯಾಕ್ ಮಾಡುವ ಸಂಕಟ, ವಿಮಾನದಲ್ಲಿ ಹೆಚ್ಚು ದುಡ್ಡು ತೆತ್ತು ಲಗ್ಗೇಜ್ ಸಾಗಿಸಬೇಕಾದ ಕಷ್ಟಗಳಿಂದ ನಾನೀಗ ಸಾಕಷ್ಟು ದೂರ! ಆದರೆ, ಈಗಲೂ ನನಗೆ ವಿಶಿಷ್ಟ ಎನಿಸುವ, ನಮ್ಮೂರಿನಲ್ಲಿ ಸಿಗದ, ನಮ್ಮೂರಿನಲ್ಲಿ ಬಲು ದುಬಾರಿಯಾದ, ಹೋದ ಸ್ಥಳದಲ್ಲಿ ಅಗ್ಗಕ್ಕೆ ಸಿಗುವ ವಸ್ತು ನನ್ನ ಲಗೇಜ್ ಏರುತ್ತದೆ. ಕೊಳ್ಳುವ ಸಂತಸದಷ್ಟೇ ಚೌಕಾಸಿ ಮಾಡುವಾಗ ಮಾರಾಟಗಾರರ ಮಾತಿನ ಚುರುಕು-ನಗೆ ಚಟಾಕಿ, ಜಾಣ್ಮೆ ಮುದ ನೀಡುತ್ತವೆ. ನಾನು ಪ್ರವಾಸದಲ್ಲಿರುವಾಗ ನನ್ನವರನ್ನು ನೆನೆಸಿಕೊಂಡೆ ಎಂಬ ಗುರುತಿಗೆ ಮ್ಯಾಗ್ನೆಟ್‌ಗಳು, ಸ್ಮರಣಿಕೆಗಳನ್ನು ಕೊಳ್ಳುವುದನ್ನು ನಾನು ಮರೆಯುವುದಿಲ್ಲ. ‘ಶಾಪ್ಪಿಂಗಾ? ನಾವು ಬರೋದಿಲ್ಲ’ ಎಂದು ರಾಗವೆಳೆಯುವ ಗಂಡ-ಮಕ್ಕಳನ್ನು ಎಳೆದುಕೊಂಡಾದರೂ ‘ಮಾರುಕಟ್ಟೆಗಳು’ ಎಂಬ ಪವಿತ್ರ ಸ್ಥಳಗಳಿಗೆ ಹೋಗುವ ಸಾಹಸ ಮಾಡುತ್ತೇನೆ. ಇಲ್ಲ ಎಂದು ಹೇಳಲಾಗದೆ, ಬಲೆಗೆ ಬಿದ್ದು, ಹೆಚ್ಚು ದುಡ್ಡು ತೆರುವ ಫಜೀತಿಯಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂಬ ಪಾಠವನ್ನು ಪ್ರಾಯೋಗಿಕವಾಗಿ ಅವರಿಗೆ ಕಲಿಸುತ್ತೇನೆ! ಇದು ಜೀವನಕ್ಕೂ ಉಪಯುಕ್ತ ಪಾಠವೇ ಅಲ್ಲವೇ?! ❖

ಕಾಗದ 'ಖಾಲಿ'


ನಮ್ಮ ಸಂವಿಧಾನವನ್ನು ಕೈಯಿಂದ ತಯಾರಿಸಿದ ಕಾಗದದ ಮೇಲೆ ಬರೆಯಲಾಗಿದೆ ಗೊತ್ತೆ? ಹೋಗಲಿ, ಶ್ರೀಲಂಕಾ, ಪಾಕಿಸ್ತಾನ ಮತ್ತಿತರ ದೇಶಗಳಲ್ಲಿ ಕಾಗದದ ಕೊರತೆಯಿಂದ ಪರೀಕ್ಷೆ ರದ್ದಾಗಿರುವ ಮಜಕೂರವಾದರೂ ತಿಳಿದಿದೆಯೇ?





ಕೈಯಿಂದ ತಯಾರಿಸಿದ ಕಾಗದದಲ್ಲಿ ಸಂವಿಧಾನದ ಮೂಲಪ್ರತಿ. ಅದಕ್ಕೆ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರಿಂದ ಸಹಿ

ಚಿತ್ರ: ವಿಕಿಮೀಡಿಯಾ ಕಾಮನ್ಸ್



ಸುನೀಲ್ ಬಾರ್ಕೂರ್

ಸುದ್ದಿಗಳನ್ನು ಹೊತ್ತು ತರುವ ಪೇಪರ್‌ಗಳೇ ಇದೀಗ ಸುದ್ದಿಯಲ್ಲಿವೆ. ಆರ್ಥಿಕವಾಗಿ ದಿವಾಳಿಯಾಗಿರುವ ಶ್ರೀಲಂಕಾದಲ್ಲಿ ಕೆಲದಿನಗಳ ಹಿಂದೆ ಉತ್ತರ ಪತ್ರಿಕೆಗಳನ್ನು ಮುದ್ರಿಸಲು ಕಾಗದವಿಲ್ಲದೆ ಪರೀಕ್ಷೆಗಳನ್ನೇ ರದ್ದುಪಡಿಸಿದ್ದು ಸುದ್ದಿಯಾಗಿತ್ತು. ತದನಂತರ ಪಾಕಿಸ್ತಾನದಲ್ಲೂ ಇಂತಹುದೇ ಪರಿಸ್ಥಿತಿ ಉದ್ಭವವಾಗಿ ಪರೀಕ್ಷೆಗಳ ರದ್ದತಿಯ ಜೊತೆಗೆ ಕೆಲವು ಸುದ್ದಿ ಪತ್ರಿಕೆಗಳೂ ತಮ್ಮ ಮುದ್ರಣವನ್ನು ಸ್ಥಗಿತಗೊಳಿಸಿರುವ ಮಾಹಿತಿ ಬಂತು. ರಷ್ಯಾ-ಉಕ್ರೇನ್ ಯುದ್ಧದಿಂದ ಕಾಗದದ ಉತ್ಪಾದನೆಯ ಮೇಲೂ ಪರಿಣಾಮ ಬೀರಿದೆ. ಭಾರತವೂ ಇದರಿಂದ ಪ್ರತಿಕೂಲ ಪರಿಣಾಮ ಎದುರಿಸುವ ಸಾಧ್ಯತೆ ಇದೆ.

ನಮ್ಮಲ್ಲಿನ ಸದ್ಯದ ಪರಿಸ್ಥಿತಿಯನ್ನು ಅವಲೋಕಿಸಿದರೆ ವರ್ಷಕ್ಕೆ ಸುಮಾರು 120 ಲಕ್ಷ ಟನ್ ಕಾಗದ ನಮ್ಮಲ್ಲಿ ಉತ್ಪಾದನೆ ಆಗುತ್ತದೆ. ಕಾಗದದ ಜನ್ಮಸ್ಥಳ ಚೀನಾ. ಅದು ಕಾಗದದ ಉತ್ಪಾದನೆಯಲ್ಲಿ ಈಗಲೂ ಮುಂಚೂಣಿಯಲ್ಲಿದ್ದು, ರಷ್ಯಾ, ಅಮೆರಿಕ ಮತ್ತು ಇಂಡೋನೇಷ್ಯಾ ನಂತರದ ಸ್ಥಾನಗಳಲ್ಲಿವೆ. ಭಾರತದಲ್ಲಿ ಕಾಗದ ತಯಾರಿಕೆಗೆ ಮುಖ್ಯವಾಗಿ ಬಿದಿರು, ರದ್ದಿ ಪೇಪರ್, ಒಣ ಹುಲ್ಲು ಮತ್ತು ಭತ್ತದ ತೌಡಿನಂತಹ ಕೃಷಿತ್ಯಾಜ್ಯಗಳನ್ನು ಕಚ್ಚಾವಸ್ತುಗಳನ್ನಾಗಿ ಬಳಸಲಾಗುತ್ತದೆ. ಗುಜರಾತ್, ಉತ್ತರ ಪ್ರದೇಶ, ಮಹಾರಾಷ್ಟ್ರ ಮತ್ತು ತಮಿಳುನಾಡು ಹೆಚ್ಚಿನ ಪ್ರಮಾಣದ ಕಾಗದವನ್ನು ಉತ್ಪಾದನೆ ಮಾಡುತ್ತವೆ.

ಕೋವಿಡ್ ಸಮಯದಲ್ಲಿ ಉಂಟಾದ ಓದುಗರ ನಿರ್ವಾತವನ್ನು ತಡೆಯಲಾರದೆ ನಮ್ಮಲ್ಲಿನ ಅನೇಕ ಪತ್ರಿಕೆಗಳು ಕಣ್ಮುಚ್ಚಿದವು. ಪತ್ರಿಕೋದ್ಯಮದ ಅಖಾಡದ ಘಟಾನುಘಟಿ ಸಂಸ್ಥೆಗಳು ಸಹ ಪ್ರಸಾರದಲ್ಲಿ ಗಣನೀಯ ಕಡಿತವನ್ನು ಅನುಭವಿಸಿದವು. ಇದೇ ಸಮಯದಲ್ಲಿ ಆನ್‌ಲೈನ್ ಓದುಗರ ಸಂಖ್ಯೆ ಗಣನೀಯವಾಗಿ ಏರಿಕೆ ಕಂಡಿತು. ಎರಡು ವರ್ಷಗಳಲ್ಲಿ ಶಾಲಾ ಕಾಲೇಜುಗಳು ಸರಿಯಾಗಿ ಕಾರ್ಯ ನಿರ್ವಹಿಸದಿದ್ದ ಕಾರಣ ಕಾಗದದ ಬಳಕೆಯಲ್ಲಿ ಒಂದಿಷ್ಟು ಕುಸಿತವೂ ಆಯಿತು.

ನ್ಯೂಸ್ ಪ್ರಿಂಟ್ (ಖಾಲಿ ಕಾಗದ) ವಿಚಾರಕ್ಕೆ ಬಂದರೆ ಭಾರತದ ವಾರ್ಷಿಕ ಬಳಕೆ 220 ಲಕ್ಷ ಟನ್ನುಗಳು. ಇದರಲ್ಲಿ 150 ಲಕ್ಷ ಟನ್ ಹೊರದೇಶದಿಂದ ಆಮದಾಗುತ್ತದೆ. ಈ ಆಮದಿನಲ್ಲಿ ಹೆಚ್ಚಿನ ಪಾಲು ರಷ್ಯಾದ್ದು. ನಂತರದ ಸ್ಥಾನ ಕೆನಡಾದ್ದು. ಪೇಪರ್ ತಯಾರಿಕೆಗೆ ಬೇಕಾಗಿರುವ ಅತಿಅಗತ್ಯ ವಸ್ತುಗಳಾದ ಪೇಪರ್ ಪಲ್ಪ್, ಕಲ್ಲಿದ್ದಲು, ನೀರು ಮತ್ತು ವಿದ್ಯುತ್ತಿನಲ್ಲಿ ಮೊದಲೆರಡು ವಸ್ತುಗಳ ಧಾರಣೆ ಸಿಕ್ಕಾಪಟ್ಟೆ ಏರಿರುವ ಪರಿಣಾಮ ನ್ಯೂಸ್ ಪ್ರಿಂಟ್ ಬೆಲೆ ಕೆಲವೇ ತಿಂಗಳುಗಳಲ್ಲಿ ಹಲವು ಪಟ್ಟು ಹೆಚ್ಚಾಗಿದೆ. ಅದರಲ್ಲೂ ಕಳೆದ ವರ್ಷದಲ್ಲಿ ಸುಯೇಜ್ ಕಾಲುವೆಯಲ್ಲಿ ಕಂಟೇನರ್ ಸಿಕ್ಕಿಹಾಕಿಕೊಂಡ ಪ್ರಸಂಗ, ಪ್ರಸಕ್ತ ವರ್ಷದಾರಂಭಕ್ಕೆ ಕೆನಡಾದಲ್ಲಾದ ಲಾರಿ ಮುಷ್ಕರ, ಇನ್ನೂ ನಡೆಯುತ್ತಿರುವ ರಷ್ಯಾ-ಉಕ್ರೇನ್ ಯುದ್ಧ ಹೀಗೆ ಈ ಎಲ್ಲ ಅಂತರರಾಷ್ಟ್ರೀಯ ವಿದ್ಯಮಾನಗಳು ನ್ಯೂಸ್ ಪ್ರಿಂಟ್ ಪೂರೈಕೆಯ ಜಾಲವನ್ನು ಬಹುವಾಗಿ ಕಾಡಿದೆ.

ಈ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ತಮ್ಮ ನ್ಯೂಸ್ ಪ್ರಿಂಟ್ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವ ಪರಿಸ್ಥಿತಿಯಲ್ಲೂ ಭಾರತೀಯ ಕಾಗದದ ತಯಾರಕರು ಇಲ್ಲ. ಏಕೆಂದರೆ ಇದಕ್ಕೆ ಬೇಕಾದ ಕಚ್ಚಾ ಪದಾರ್ಥವಾದ ರದ್ದಿ ಪೇಪರ್ ಸಂಗ್ರಹಿಸುವ ವ್ಯವಸ್ಥಿತ ಜಾಲ ನಮ್ಮಲ್ಲಿಲ್ಲ. ಇನ್ನು ಪೇಪರ್ ಪಲ್ಪ್ ಆಮದು ಮಾಡಿಕೊಂಡು ತಯಾರಿಸಿದರೆ ಅದು ಆಮದು ಕಾಗದದ ದರದ ಹತ್ತಿರವೇ ಇರಲಿದೆ. ಆದರೂ ದೇಸಿ ಮತ್ತು ವಿದೇಶಿ ಮೂಲಗಳನ್ನು ಸಂಭಾಳಿಸಿಕೊಂಡು ಈ ಎಲ್ಲ ಸವಾಲುಗಳನ್ನು ಮೆಟ್ಟಿ ನಿಲ್ಲುವ ಛಾತಿಯನ್ನು ಭಾರತೀಯ ಕಾಗದ ತಯಾರಕರು ಮತ್ತು ಪ್ರಕಾಶಕರು ತೋರಿಸಿದ್ದಾರೆ. ಇಷ್ಟಾದರೂ ಪ್ಯಾಕಿಂಗ್ ಕಾಗದದ ಬೇಡಿಕೆ ಏರುತ್ತ ಹೋಗಿ ನ್ಯೂಸ್ ಪ್ರಿಂಟ್ ತಯಾರಿಕೆಯನ್ನು ಸಂಪೂರ್ಣವಾಗಿ ನುಂಗಿಹಾಕುವ ಸಾಧ್ಯತೆ ಕಾಡುತ್ತಿರುವುದು ಖರೆ.

ಹೆಚ್ಚಿನ ಪಕ್ಷ ಅರಣ್ಯೋತ್ಪನ್ನಗಳನ್ನೇ ಕಚ್ಚಾ ಪದಾರ್ಥವಾಗಿ ಬಳಸುವುದರಿಂದ ಪೇಪರ್ ತಯಾರಿಕೆಯೆಂದರೆ ಮರಗಳ, ಹಸಿರಿನ ನಾಶವೆಂಬ ಅಭಿಪ್ರಾಯ ನಮ್ಮಲ್ಲಿದೆ. ಆದರೆ ಇದಕ್ಕೂ ಅಪವಾದವಿರುವುದು ಹಲವರಿಗೆ ಗೊತ್ತಿರಲಿಕ್ಕಿಲ್ಲ. ಭಾರತದಲ್ಲಿ ಈ ಅಪ್ಪಟ ದೇಸಿ ತಂತ್ರಜ್ಞಾನವನ್ನು ಪರಿಚಯಿಸಿ ಬೆಳೆಸಿದ ಖ್ಯಾತಿ ಪುಣೆ ವಿಜ್ಞಾನಿ ಕೆ.ಬಿ. ಜೋಶಿಯವರದ್ದು. ಬಟ್ಟೆಮಿಲ್ಲುಗಳಲ್ಲಿ ತ್ಯಾಜ್ಯವಾಗಿ ಎಸೆಯಲ್ಪಡುವ ಹತ್ತಿಹಾಸುಗಳ ಜೊತೆಗೆ ಔಷಧೀಯ ಕಾರ್ಖಾನೆಗಳಲ್ಲಿ ಉತ್ಪಾದನೆಯಾಗುವ ಹತ್ತಿಯ ತ್ಯಾಜ್ಯವನ್ನೂ ಬಳಸಿ ತಯಾರಿಸುವ ಈ ಕಾಗದದ ತಯಾರಿಕೆಯ ಹಿಂದೆ ಭಾರತದ ಸ್ವಾತಂತ್ರ್ಯ ಹೋರಾಟದ ಕಿಚ್ಚಿದೆ.

ಅದು 1930ರ ಸಮಯ. ಮಹಾತ್ಮ ಗಾಂಧಿಯವರು ಕರೆಕೊಟ್ಟ ಸ್ವದೇಶಿ ಆಂದೋಲನದ ಕರೆಯಿಂದ ಸ್ಫೂರ್ತಿಗೊಂಡ ಡಾ. ಜೋಶಿಯವರು ಸ್ಥಳೀಯ ಮಾನವ ಸಂಪನ್ಮೂಲವನ್ನೇ ಬಳಸಿ ಹತ್ತಿಯ ತ್ಯಾಜ್ಯದಿಂದ ಕಾಗದವನ್ನು ತಯಾರಿಸುವತ್ತ ಸಂಶೋಧನೆಯನ್ನು ನಡೆಸಿ ಅದರ ಕೆಲವು ಮಾದರಿಗಳನ್ನು ಗಾಂಧೀಜಿಯವರಿಗೆ ತೋರಿಸಿ ಒಪ್ಪಿಗೆ ಪಡೆದರು. ಇದರ ಪರಿಣಾಮ 1940ರ ಆಗಸ್ಟ್ 1ರಂದು ಪುಣೆಯ ಶಿವಾಜಿನಗರದ ಕೃಷಿ ಕಾಲೇಜಿನ ಆವರಣದಲ್ಲಿ ಹ್ಯಾಂಡ್ ಮೇಡ್ ಪೇಪರ್ ಇನ್‌ಸ್ಟಿಟ್ಯೂಟ್ ಅಸ್ತಿತ್ವಕ್ಕೆ ಬಂತು.

ಯಾವುದೇ ಯಂತ್ರಗಳಿಲ್ಲದೇ ಪರಿಸರ ಪೂರಕ ತಂತ್ರಜ್ಞಾನವನ್ನು ಉಪಯೋಗಿಸಿ ಹತ್ತಿಯ ತ್ಯಾಜ್ಯವನ್ನು ಬಳಸಿ ಕಾಗದ ತಯಾರಿಸುವ ತಂತ್ರಜ್ಞಾನದ ಭಾರತದ ಪ್ರಪ್ರಥಮ ಕಾಗದದ ಕಾರ್ಖಾನೆಯಿದು. 82 ವಸಂತಗಳನ್ನು ಪೂರೈಸುತ್ತಿರುವ ಈ ಕಾರ್ಖಾನೆ ಅಂದಿನಿಂದ ಇಂದಿನವರೆಗೂ ಹತ್ತಿಯ ತ್ಯಾಜ್ಯವನ್ನಷ್ಟೇ ಬಳಸಿ ಕಾಗದ ತಯಾರಿಸುತ್ತ ಬಂದಿದೆ. ಇಷ್ಟು ದೂರದ ಪಯಣದಲ್ಲಿ ಕಾಗದ ತಯಾರಿಕೆಯ ಕೊನೆಯ ಹಂತದಲ್ಲಿ ಬಳಸುವ ಪ್ರೆಸ್ಸಿಂಗ್‌ನಂತಹ ಒಂದೆರಡು ಕಾರ್ಯದಲ್ಲಿ ಮಾತ್ರ ಯಂತ್ರಗಳನ್ನು ಅಳವಡಿಸಿಕೊಂಡು ಮೂಲ ಆಶಯದಂತೆ ಇಂದಿಗೂ ನಡೆಯುತ್ತಾ ಬಂದಿರುವುದು ವಿಶೇಷ.

ಹ್ಯಾಂಡ್ ಮೇಡ್ ಪೇಪರ್ ಇನ್‌ಸ್ಟಿಟ್ಯೂಟ್‌ನಲ್ಲಿ ತಯಾರಾಗುವ ಕಾಗದ ಹವಾಮಾನದ ಪರಿಣಾಮದಿಂದ ಅದರ ಬಿಳಿಯ ಬಣ್ಣ ಮಾಸಿದರೂ ಸಾಂಪ್ರದಾಯಿಕ ಕಾಗದಕ್ಕಿಂತಲೂ ಹೆಚ್ಚು ಅಂದರೆ ಸುಮಾರು ನೂರು ವರ್ಷಗಳಷ್ಟು ಕಾಲ ಬಾಳ್ವಿಕೆ ಬರುವುದೆಂದು ತಯಾರಕರು ಹೇಳುತ್ತಾರೆ. ಆದರೆ ಹೆಚ್ಚಿನ ಮಾನವ ಸಂಪನ್ಮೂಲ ತಯಾರಿಕೆಯಲ್ಲಿ ತೊಡಗಿಸಿಕೊಂಡಿರುವ ಕಾರಣ ಬೆಲೆ ಮಾತ್ರ ಮಾರುಕಟ್ಟೆಯಲ್ಲಿ ಸಿಗುವ ಕಾಗದಕ್ಕಿಂತ ಮೂರು ಪಟ್ಟು ಹೆಚ್ಚು. ಕಾಗದದ ಲ್ಯಾಂಟೀನು, ಲೆಟರ್ ಹೆಡ್, ಗ್ರೀಟಿಂಗ್ ಕಾರ್ಡಿನಂತಹ ವಸ್ತುಗಳನ್ನು ಈ ಕಾಗದದಿಂದ ತಯಾರಿಸಿ ಮಾರುಕಟ್ಟೆಗೆ ನೀಡಲಾಗುತ್ತಿದೆ.

ಪ್ರಯೋಗಾಲಯಗಳಲ್ಲಿ ಬಳಸಲಾಗುವ ಹರ್ಬೇರಿಯಮ್ ಕಾಗದವನ್ನೂ ಇದೇ ಸಂಸ್ಥೆ ತಯಾರಿಸುತ್ತದೆ. ಅಂದಹಾಗೆ ಭಾರತದಲ್ಲಿ ಹರ್ಬೇರಿಯಮ್ ಕಾಗದವನ್ನು ತಯಾರಿಸುವ ಏಕೈಕ ಸಂಸ್ಥೆ ಎಂಬ ಹೆಗ್ಗಳಿಕೆ ಕೂಡ ಈ ಕಂಪನಿಯದ್ದು. ಅಷ್ಟೇ ಏಕೆ, ಭಾರತದ ಸಂವಿಧಾನದ ಮೂಲಪ್ರತಿಯನ್ನು ಬರೆದದ್ದು ಕೂಡ ಹ್ಯಾಂಡ್ ಮೇಡ್ ಪೇಪರ್ ಫ್ಯಾಕ್ಟರಿ ಆಫ್ ಇಂಡಿಯಾದ ಕುಶಲಕರ್ಮಿಗಳು ತಮ್ಮ ಕೈಯಾರೇ ತಯಾರಿಸಿಕೊಟ್ಟ ಕಾಗದದಲ್ಲೇ. ಆ ಮೂಲಪ್ರತಿ ಇದೀಗ ದೆಹಲಿಯ ಪಾರ್ಲಿಮೆಂಟ್ ಲೈಬ್ರರಿಯಲ್ಲಿ ಭದ್ರವಾಗಿದೆ.

ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಯಶವಂತರಾವ್ ಚೌಹಾಣ್ ತಮ್ಮ ಲೆಟರ್ ಹೆಡ್ ಆಗಿ ಇಲ್ಲಿನ ಕಾಗದವನ್ನೇ ಬಳಸುತ್ತಿದ್ದರು. ಈ ಸಂಸ್ಥೆಯ ಹಿರಿಮೆಯನ್ನು ಅರಿತಿದ್ದ ಭಾರತದ ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರು ತಮ್ಮ ಪುತ್ರ ರಾಜೀವ್ ಮತ್ತು ಸೋನಿಯಾರ ಮದುವೆ ಆರತಕ್ಷತೆಯ ಆಮಂತ್ರಣ ಪತ್ರಿಕೆಗೂ ಈ ಕಾಗದವನ್ನೇ ಬಳಸಿದ್ದರು. ಸ್ವದೇಶಿ ಆಂದೋಲನದ ನೆನಪಿನ ಪಳೆಯುಳಿಕೆಯಂತಿರುವ ಈ ಸಂಸ್ಥೆಯ ಸ್ಥಾಪಕರ ನೆನಪಿಗೆ ಸರ್ಕಾರವು ಕಂಪನಿಯು ಸ್ಥಿತವಾಗಿರುವ ಪುಣೆಯ ಶಿವಾಜಿನಗರದ ಆ ರಸ್ತೆಗೆ ಕೆ.ಬಿ. ಜೋಶಿ ರಸ್ತೆಯೆಂದು ನಾಮಕರಣ ಮಾಡಿದೆ. ವಿಪರ್ಯಾಸವೆಂದರೆ ಆ ರಸ್ತೆಯಲ್ಲಿ ನಿತ್ಯವೂ ಓಡಾಡುವ ಬಹಳಷ್ಟು ಜನರಿಗೆ ಅವರ ಬಗ್ಗೆ ಗೊತ್ತಿಲ್ಲ. ಹೇಳಿ ಕೇಳಿ ಸ್ವದೇಶಿಯಲ್ಲವೇ?

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಶ್ಗ ಚಕ್ಕುಕೇಶ್ರುಷ್ಣ ಕಥೆಯ | ನೈಜ ಚಾರ್ಲಿಯ ಕಥೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಇತ್ತೀಚೆಗೆ ತೆರೆ ಕಂಡ 'ಚಾರ್ಲಿ' ಚಿತ್ರ ನೋಡಿದ್ದೀರಲ್ಲಾ. ಅಂಥದ್ದೇ ನಾಯಿಯೊಂದರ ನೈಜ ಕತೆಯಿದು. ಶಾಲೆಯ ಅಂಗಳದಲ್ಲಿ ಬೀದಿ ನಾಯಿಯೊಂದು ಗಾಯಗೊಂಡು ಬಿದ್ದಿತ್ತು. ಅದನ್ನು ನೋಡಿದ ಟೀಚರ್ ಎತ್ತಿಕೊಂಡು ಔಷಧಿ ಹಚ್ಚಿ, ಆರೈಕೆ ಮಾಡಿದರು.





ರಜಾದಿನಗಳಲ್ಲಿ ನಾಯಿಗೆ ಆಹಾರ ಹಾಕಲು ಸುಲ್ತಾನ್ ಎಂಬ ವಿದ್ಯಾರ್ಥಿಯ ಮನೆಯಲ್ಲಿ ಬಿಟ್ಟರು. ಆದರೆ ಸುಲ್ತಾನನ ಮನೆಯಲ್ಲಿ ಸಾಕಿದ್ದ ಬಾಕ್ಸರ್ ನಾಯಿ ಶಾಲೆಯ ನಾಯಿಯನ್ನು ಕಚ್ಚಿತು. ಎರಡು ನಾಯಿಗಳ ಕಚ್ಚಾಟವನ್ನು ಮಕ್ಕಳು ಭಯದಿಂದ ನೋಡುತ್ತಿದ್ದರು.



ಕಚ್ಚಾಟದಲ್ಲಿ ಶಾಲೆಯ ನಾಯಿ ಗಾಯಗೊಂಡು ಸುಲ್ತಾನನ ಮನೆಯ ಮುಂದೆ ರಕ್ತ ಸುರಿಸುತ್ತಾ ಬಿದ್ದುಬಿಟ್ಟಿತು. ನಾಯಿ ಸತ್ತೇ ಹೋಯಿತು ಎಂದು ಶಾಲೆಯ ಟೀಚರ್, ವಿದ್ಯಾರ್ಥಿಗಳು ದುಃಖಿಸಿದರು. ನಾಯಿಯ ಮೃತದೇಹವನ್ನು ಬೇಲಿಯಾಚೆಗೆ ಇಟ್ಟರು.



ಆದರೆ, ಸತ್ತೇ ಹೋಯಿತೆಂದು ಭಾವಿಸಲಾಗಿದ್ದ ನಾಯಿ ನಿಧಾನಕ್ಕೆ ಕಣ್ತೆರೆಯಿತು. ಟೀಚರ್, ಮಕ್ಕಳಿಗೆ ಖುಷಿಯೋ ಖುಷಿ. ಮತ್ತೆ ಆರೈಕೆ ಮಾಡಿದರು. ನಾಯಿ ಚೇತರಿಸಿಕೊಂಡಿತು. ಆ ನಾಯಿಗೆ 'ಚಾರ್ಲಿ' ಎಂದು ಹೆಸರಿಟ್ಟರು. ಈಗ 'ಚಾರ್ಲಿ' ಶಾಲೆ ಕಾಯುತ್ತಿದೆ. ನೀತಿ: ಪ್ರೀತಿಗೆ ಎಲ್ಲರೂ ತಲೆಬಾಗುತ್ತಾರೆ

ಗಣಿತದಲ್ಲಿ ಗರ್ದಿ ಗಮ್ಮತ್ತು

ಮಾಡಿ ನೋಡಿ ಈ ಮೋಡಿ

ನಿಮ್ಮ ಮಿತ್ರನಿಗೆ ಯಾವುದಾದರೊಂದು ಸಂಖ್ಯೆ ಬರೆದುಕೊಳ್ಳುವಂತೆ ತಿಳಿಸಿ. ಅದನ್ನು 9ರಿಂದ ಗುಣಿಸಲಿ. ಬಂದ ಉತ್ತರದಲ್ಲಿ 9ನ್ನು ಬಿಟ್ಟು ಯಾವುದಾದರೂ ಒಂದು ಅಂಕಿಯನ್ನು ಕಾಟು ಹೊಡೆಯುವಂತೆ ಹೇಳಿ. ಉಳಿದ ಅಂಕಿಗಳನ್ನು ಕೇಳಿ ತಿಳಿದುಕೊಳ್ಳಿ. ಈಗ ಅವನು ಕಾಟು ಹೊಡೆದ ಅಂಕಿ ಯಾವುದೆಂದು ಸುಲಭವಾಗಿ ಹೇಳಿಬಿಡಬಹುದು. ಅದು ಹೇಗೆ? ನಿಮ್ಮ ಮಿತ್ರ ಕಾಟು ಹೊಡೆದು ಉಳಿದ ಅಂಕಿಗಳನ್ನು ಹೇಳುತ್ತಿದ್ದಂತೆ ಅವುಗಳನ್ನೆಲ್ಲ ಮನಸ್ಸಿನಲ್ಲಿ ಕೂಡಿಸುತ್ತಾ ಹೋಗಿರಿ. ಕೂಡಿಸಿ ಬಂದ ಸಂಖ್ಯೆಯನ್ನು ಮತ್ತೆ ಕೂಡಿಸಿ ಹೀಗೆ ಏಕಾಂಕವಾಗುವವರೆಗೂ ಕೂಡಿಸುತ್ತಾ ಹೋದಾಗ ಒಂದು ಅಂಕಿ ಸಿಗುತ್ತದೆ (ಸೂಚ್ಯಂಕ). ಆ ಅಂಕಿಯನ್ನು 9ರಲ್ಲಿ ಕಳೆಯಿರಿ. ಉಳಿಯುವ ಅಂಕಿಯೇ ನಿಮ್ಮ ಮಿತ್ರ ಕಾಟು ಹೊಡೆದ ಅಂಕಿಯಾಗಿರುತ್ತದೆ.

ಉದಾ :-

$$985 \times 9 = 8865$$

(6ನ್ನು ಕಾಟು ಹೊಡೆಯಿರಿ)

ಈಗ

$$8+8+5=21$$

$$2+1=3$$

$$9-3=6$$

(3ನ್ನು 9ರಲ್ಲಿ ಕಳೆದಾಗ)

ಅವನು ಕಾಟು ಹೊಡೆದ ಅಂಕಿಯು 6 ಅಲ್ಲವೇ? ಇನ್ನಷ್ಟು ಉದಾಹರಣೆಗಳನ್ನು ಮಾಡಿ ರೂಢಿಸಿಕೊಂಡು ನಿಮ್ಮ ಮಿತ್ರನಿಗೆ ಈ ಜಾದು ಮಾಡಿ ತೋರಿಸಿ.

ಟ್ವೆಂಟಿ-20 ಮ್ಯಾಚ್

ಜಿಲ್ಲೆಗಳಿಗೂ ತಾಲ್ಲೂಕುಗಳಿಗೂ ಹೊಂದಿಸಿ	
1. ಬೆಂಗಳೂರು ನಗರ	A ಮಳವಳ್ಳಿ
2. ಚಿಕ್ಕಬಳ್ಳಾಪುರ	B ಲಿಂಗಸುಗೂರು
3. ದಾವಣಗೆರೆ	C ಮುಳಬಾಗಿಲು
4. ಕೋಲಾರ	D ಭಾಲ್ಕಿ
5. ರಾಮನಗರ	E ಕಾರ್ಕಳ
6. ಶಿವಮೊಗ್ಗ	F ಕುಷ್ಟಗಿ
7. ತುಮಕೂರು	G ಹೊಸಪೇಟೆ
8. ಬಾಗಲಕೋಟೆ	H ಶಿಡ್ಲಘಟ್ಟ
9. ಬೆಳಗಾವಿ	I ಬ್ಯಾಡಗಿ
10.ವಿಜಯಪುರ	J ಹರಿಹರ
11. ಧಾರವಾಡ	K ಮುದ್ದೇಬಿಹಾಳ
12. ಗದಗ	L ಚನ್ನಪಟ್ಟಣ
13. ಹಾವೇರಿ	M ಆನೇಕಲ್
14. ಉತ್ತರ ಕನ್ನಡ	N ಶಿಕಾರಿಪುರ
15. ಬಳ್ಳಾರಿ	O ಮುಂಡರಗಿ
16. ಬೀದರ	P ಬೀಳಗಿ
17. ಕೊಪ್ಪಳ	Q ಗುಬ್ಬಿ
18. ರಾಯಚೂರು	R ನವಲಗುಂದ
19. ಮಂಡ್ಯ	S ಅಥಣಿ
20. ಉಡುಪಿ	T ಕಾರವಾರ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಮೂಲಾಕ್ಷರಗಳನ್ನು ಬಳಸಿಕೊಂಡು ಪಕ್ಕದಲ್ಲಿರುವ ಸುಳಿವು ಆಧರಿಸಿ ಎರಡು ಅಕ್ಷರಗಳ ಹೊಸ ಪದ ರಚಿಸಿ

	ಮ	ಡ	ಸುಳಿವು
1			ಮೇಘ
2			ತುರುಬು
3			ಸಾಯು
4			ಹೀಟು
5			ಜಾದೂ

ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಉತ್ತರಿಸಿದ ಮಕ್ಕಳ ಹೆಸರು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ



ಅದಲು ಬದಲು ಕಂಚಿ ಕದಲು

ಇಲ್ಲಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಬೇರೊಂದು ಪದ ಮಾಡಿ

1. ರಾಜಮರ =
2. ಹಾಲಿನಗಡಿಗೆ =
3. ಮರದಡಿ =
4. ರಬ್ಬಿನಕದ =



ಪದ ಪರಿಚಯ ಪರೀಕ್ಷೆ

ನಿಮಗೆ 'ಲಕ' ಎಂಬ ಎರಡು ಅಕ್ಷರಗಳಿಂದ ಕೊನೆಗೊಳ್ಳುವ ಮೂರು ಅಕ್ಷರಗಳ ಎಷ್ಟು ಪದಗಳು ಗೊತ್ತಿವೆ? ಪಟ್ಟಿ ಮಾಡಿ.

1 – ಲಕ 2 – ಲಕ 3 –ಲಕ 4–ಲಕ 5 –ಲಕ 6 –ಲಕ 7 –ಲಕ 8– ಲಕ

ತಿಳಿಸಾರು

ಮೊದಲು ಪ್ರಶ್ನೆ ಮಾಡುವ ವಾಕ್ಯದ ಕೊನೆಗೆ ಇಡಿ ಪದ questo ಎಂದು ನಮೂದಿಸುತ್ತಿದ್ದರು. ನಂತರ ಸಂಕ್ಷಿಪ್ತಗೊಳಿಸಿ 90 ಎರಡೇ ಅಕ್ಷರ ಬಳಸಲು ಪ್ರಾರಂಭಿಸಿದರು. ನಂತರ 9 0 ಹೀಗೆ ಬರೆದರು. ತದನಂತರ ? ಹೀಗೆ ಈ ಚಿಹ್ನೆ ರೂಪಾಂತರವಾಯಿತಂತೆ.






ಕಳೆದ ಸಂಚಿಕೆಯ ಸರಿ ಉತ್ತರಗಳು

ಟ್ವೆಂಟಿ – 20 ಮ್ಯಾಚ್
1– G 2– E 3– J 4– I 5–P 6– O 7– S 8– M 9– R 10– T 11– L 12– H 13– C 14– B 15–A 16–D 17–Q 18–F 19–K 20–N


ಜಾಣಪದ ಆಟ
1) ತೋಡೆ 2) ತುಡಿ 3) ತಾಡು 4) ತಂಡ 5) ತಡೆ

ಅಕ್ಷರ ಆಟ: 1) ತವರು 2) ಸವರು 3) ಇವರು 4) ಅವರು 5) ಬೆವರು 6) ಐವರು 7) ಮೂವರು 8) ದೇವರು


ಅದಲು ಬದಲು:
1) ಪಾಚ ಕವಟಿ 2) ಪಟ್ಟು ಹಿಡಿ 3) ನೀರು ಪಾಲು 4) ಮಹಾಗುರು



ಶ್ರೇಯಾ ಪಿ.ಟಿ. ಬೆಂಗಳೂರು



ಅಭಿಮನ್ಯು ನಾಯಕರ ಗಜೇಂದ್ರಗಡ (ಗದಗ)



ವರ್ಷಾ ಕೆ.ವಿ., ಮೂರಸಂದ್ರ (ಚಿಕ್ಕಬಳ್ಳಾಪುರ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in